1021 Rare

1021 Rare b

ಶೀ: - [illegible]

[illegible]

ಲೇ: ಶಿವರಾಮಕಾರಂತ

ಶೀ. ಸಂ: ೦೭ 1927



ಆಬುವಿಂದ ಬರಾಮಕ್ಕೆ



ಬೆಲೆ.

ಎರಡು ರೂಪಾಯಿ

.NO. S

ಆಬೂವಿಂದ ಬರಾಮಕ್ಕೆ

ಶಿವರಾಮ ಕಾರಂತ

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬

AKSHARA GRANTHALAYA
ACC.NO. S021927

S 021927

915.4
KAR a

Printed at Harsha Printery, Puttur. S. K. 9. 1950/1,000.

ಮುನ್ನುಡಿ

ಸಂಚಾರ ಮಾನವನ ಅನುಭವಗಳನ್ನು ವಿಶಾಲಿಸುವ ಸಾಧನಗಳ ಲ್ಲೊಂದು. ಉದ್ದೇಶರಹಿತ ಸಂಚಾರದಿಂದ ಒಬ್ಬನ ಅನುಭವ ವಿಶಾಲಿಸದೆ ಹೋಗಬಹುದು. ಆದರೆ ನಾನಾ ವಿಧದ ನಾಡು, ಜನಗಳ ಸಂಪರ್ಕಗಳು ಸಾಮಾನ್ಯವಾಗಿ ನಮ್ಮ ಜೀವನಕ್ಕೆ ಹೆಚ್ಚಿನ ಕಳೆಯನ್ನು ಕೊಡುತ್ತವೆ. ಭರತ ಖಂಡವು ವಿಶಾಲವಾದ ದೇಶ. ಪ್ರವಾಸಿಯಾದವನಿಗೆ ನೂರಾರು ವಿಧದ ಸೊಗಸುಗಳನ್ನು ಉಣಿಸಬಹುದಾದ ನಾಡು. ಅದರಲ್ಲಿಯೂ ಇಲ್ಲಿ ನಿಸರ್ಗ, ಮತ್ತು ವಾಸ್ತು ಕೃತಿಗಳ ಸೊಬಗುಗಳನ್ನು ನೋಡಲು ಬಯಸುವವನಿಗೆ ಇನ್ನಿಲ್ಲದ ಅವಕಾಶವಿದೆ.

ನಾನು ಮಾಡಿದ ಸಂಚಾರ ಇಂದೊಂದೇ ಅಲ್ಲ; ಇದು ಕೊನೆಯದೂ ಅಲ್ಲ. ಆದರೆ ನನ್ನ ಅನುಭವಗಳನ್ನು ಒಂದೇ ಕಡೆ ಕೊಡುವ ಪ್ರಯತ್ನ ಮಾಡಿದ್ದು ಇದು ಮೊದಲು. ನಮ್ಮಲ್ಲಿ ಪ್ರವಾಸಲೇಖಗಳು (Travelogues)ಕಡಿಮೆ. ಅಂಥ ಒಂದು ಬರಹದ ಪ್ರಯತ್ನ ಇಲ್ಲಿ ಮಾಡಿದ್ದಾಗಿದೆ.

ಈ ನಮ್ಮ ಆಬು–ಬರಾಮ ಪ್ರವಾಸಗಳು ಸುಖಕರವಾಗುವಂತೆ ಅಲ್ಲಲ್ಲಿ ನಮ್ಮನ್ನು ಸ್ವಾಗತಿಸಿ ಸಂತೋಷಕೊಟ್ಟ ನನ್ನ ಮಿತ್ರರಿಗೂ, ಪ್ರವಾಸ ದಲ್ಲಿ ಜತೆಗಾರನಾಗಿ ನನ್ನ ಹಾಸ್ಯಕ್ಕೆ ತುತ್ತಾಗಿ ಅದರ ಸವಿಯನ್ನು ಹೆಚ್ಚಿಸಿದ ಶ್ರೀಪತಿಗೂ ನಾನು ಋಣಿ.

ಇತಿ,

25 – 9 – 50
ಪುತ್ತೂರು

ಶಿವರಾಮ ಕಾರಂತ.

ಪರಿವಿಡಿ

ಚಿತ್ರಗಳ ಪರಿವಿಡಿ



ತಾಜ ಮಹಲು.

Ansco Colour

K. S. Karanth.

ಆಬೂವಿಂದ ಬರಾಮುಕ್ಕೆ

೧. ಆಬೂ ಯಾತ್ರೆ

ಮಾರ್ಚ್ ತಿಂಗಳ ಇಪ್ಪತ್ತನಾಲ್ಕರ ದಿನ ರಾತ್ರೆ ಮುಂಬಾಯಿಯಿಂದ ನಾವು ಪ್ರವಾಸ ಹೊರಟೆವು. ಸೂರ್ಯ ನೆಟ್ಟಗೆ ಬಾನಲ್ಲಿ ನಮ್ಮ ನೆತ್ತಿಯ ಮೇಲೇರುವ ದಿನಗಳಲ್ಲವೇ ಅವು? ಕಡು ಬೇಸಿಗೆ ಆ ದಿನದಿಂದಲೇ ಪ್ರಾರಂಭವಾಗಬೇಕು. ಉತ್ತರ ಹಿಂದುಸ್ತಾನ, ಆ ವೇಳೆಯಿಂದ ಇನ್ನೂ ಮೂರು ನಾಲ್ಕು ತಿಂಗಳ ಕಾಲ, ಉರಿವ ಕುಲುಮೆಯಾಗುತ್ತದೆಂದು ನಮ್ಮ ಸ್ನೇಹಿತರು ಆಶೀರ್ವದಿಸಿದ್ದರು. ಆದರೆ ಸುದೈವಕ್ಕೆ ಮುಂಬಾಯಿಯ ಹವೆ ಚೆನ್ನಾಗಿಯೇ ಇತ್ತು. ನಾನು ರಾತ್ರಿಯ ಎಂಟೂವರೆ ಘಂಟೆಯೊಳಗೆ ಮುಂಬಯಿ ಸೆಂಟ್ರಲ್ ಸ್ಟೇಶನಿಗೆ ಶ್ರೀಪತಿಯನ್ನು ಕೂಡಿಕೊಂಡು ಬಂದೆ. ನಮ್ಮ ರೈಲು ಪ್ರವಾಸವನ್ನೆಲ್ಲ ಎರಡನೆಯ ತರಗತಿಯಲ್ಲೆ ಮಾಡಬೇಕೆಂದು ನಿರ್ಧರಿಸಿದ್ದೆವು. ಆಬೂ ರೋಡ್ ಸ್ಟೇಶನಿಗೆ ಮುಂಬಾಯಿಯಿಂದ ಹದಿನೆಂಟು ತಾಸಿನ ಹಾದಿ. ರೈಲು ಬಂಡಿಯನ್ನೇರಿ ಸುಖವಾಗಿ ಹಾಸಿಗೆ ಬಿಡಿಸಿದೆವು. ನಮ್ಮ ಮಟ್ಟಿನ ಸುಖಕ್ಕೆ ಎರಡನೇ ತರಗತಿಯಲ್ಲಿ ಕೊರತೆ ಇದ್ದಿಲ್ಲ. ಅನಾದಿ ಕಾಲದಲ್ಲಿ ರೈಲು ಬಂಡಿಗೆ ತೊಡಿಸಿದ್ದ ಇಲೆಕ್ಟ್ರಿಕ್ ಪಂಕಗಳು ನಾವು ಬಂಡಿ ಏರಿದ ಗಳಿಗೆಯಿಂದ ತಿರುಗುತ್ತಲೇ ಇದ್ದುವು; ಗಾಳಿಯೂ ಬೀಸುತ್ತಿತ್ತು. ಆದರೆ ಬಂಡಿಯೊಳಗೆ, ನಮ್ಮ ತಲೆಯ ಮೇಲೆ ವಿಮಾನದ ಹಾರಾಟದಂತೆ ಧ್ವನಿ ಮಾಡುವ ಪಂಕದ ಸದ್ದು ಮಾತ್ರ ಸಹನೀಯವಲ್ಲದ್ದು. ನಮ್ಮ ಜತೆಗೆ ಇನ್ನಿಬ್ಬರು ಪ್ರವಾಸಿಗಳಿದ್ದರು. ಒಬ್ಬ ಮಿತ್ರ, ಉಳಿದ ನಾವು ಮೂವರು ಹೊರಬಹುದಾದಷ್ಟುಸಾಮಾನುಗಳನ್ನು ಒಬ್ಬನೇ ತಂದಿದ್ದ. ಸೆಕೆಂಡ್ ಕ್ಲಾಸ್ ಪ್ರವಾಸಿಗಳಿಗೆ ಅದೇನೋ ಒಂದು ಹೆಮ್ಮೆ—ತಾವು ಕುಳಿತುಕೊಳ್ಳುವುದು ಸೋಫಾದಲ್ಲಾದರೂ, ರೈಲು ಬಂಡಿ ಸಾಗುವುದು, ತಮ್ಮ ಗೂಡ್ಸು ಸಾಗಿಸು

ವುದಕ್ಕೆ–ಎಂಬುವ ಅರಿವು ಅವರದ್ದು. ಅದರಿಂದ ನಮಗೇನೋ ಹೆಚ್ಚಿನ ತೊಂದರೆಯಾಗಿಲ್ಲ ನಿಜ. ಆದರೆ ಉಳಿದ ನಾವು ಮೂವರೂ, ಅವನಂತೆಯೆ ಸಾಮಾನು ತಂದಿದ್ದರೆ, ಬಂಡಿ ಎಲ್ಲಾ ಸಾಮಾನಿಗೇ ಆಗುತ್ತಿತ್ತೋ ಏನೋ.

ಬಂಡಿ ಹತ್ತುವ ಮೊದಲು, ಆಚೀಚಿನ ಮೂರನೆಯ ತರಗತಿಯ ಬಂಡಿಗಳನ್ನು ನೋಡಿದರೆ ಮಾತ್ರ, ಎಂಥವನ ಎದೆಯೂ ಕರಗಬೇಕು. ಮೂರನೆಯ ತರಗತಿಯ ಪ್ರಯಾಣಿಕರ ಪ್ರವಾಸ ಸುಖ, ಸೌಕರ್ಯ ಹೆಚ್ಚು ತ್ತಲಿದೆ ಅನ್ನುತ್ತಾರೆ ರೈಲಿನವರು. ನಿಜ; ಹಾಗೇನೋ ಇರಬೇಕು. ನಾವು ಕಂಡಾಗ ಅವುಗಳೊಳಗೆ ಪ್ರವಾಸಿಗಳು ಕಪಿಗಳಂತೆ ಡಬ್ಬಿಯ ಮೂಲೆ ಮೂಲೆಗೂ ತಗಲಿ, ತೂಗಿ, ತುಂಬಿ ಒದ್ದಾಡುತ್ತಿದ್ದರು. ಅವರು ಹೇಗೆ ಉಸಿ ರಾಡುತ್ತಾರೋ, ಬಂಡಿಯಿಂದ ಇಳಿಯುತ್ತಾರೋ, ನನಗಂತೂ ತಿಳಿಯದ ಮಾತು. ಪ್ರಾಯಶ: ಮೊದಲು, ಜನ ಬಂಡಿಯೊಳಗೆ ಉಸಿರುಕಟ್ಟಿ ಸಾಯು ತ್ತಿದ್ದರೆ, ಈಗ ಬಂಡಿ ಇಳಿಯುವವರೆಗೆ ಬದುಕಿ, ಆ ಮೇಲೆ ಸಾಯುತ್ತಾರೆ– ಎಂದು ಕಾಣುತ್ತದೆ. ಅದೇನೆ ಇತ್ತೀಚೆಗೆ ರೈಲು ಪ್ರವಾಸದಲ್ಲಿ ನಡೆದ ಸುಧಾ ರಣೆ. ಆ ತೆರನ ಪ್ರವಾಸ ಅನುಭವಿಸುವುದು ಕಷ್ಟ. ಆದ್ದರಿಂದಲೇ ಎರಡ ನೆಯ ತರಗತಿಯಲ್ಲಿ ಪ್ರವಾಸ ಮಾಡುವ ಪ್ರಾಣಿ, ತನ್ನ ಮನಸ್ಸನ್ನು ಕಠಿಣ ಮಾಡಿಕೊಂಡು ಸ್ವಸುಖ ಎಣಿಸಬೇಕಾಗುತ್ತದೆ. ನಾವಾದರೂ ಆ ಸ್ವಾರ್ಥ ಬೆಳೆಸಿಕೊಳ್ಳಬೇಕಾಯಿತು.

ರಾತ್ರಿಯೆಲ್ಲಾ ಬಂಡಿ ಸಂಚರಿಸುತ್ತಲೇ ಇತ್ತು. ಬೆಳಿಗಿನ ಆರೂವರೆ ಘಂಟೆಗೆ ಅಹಮ್ಮದಾಬಾದು ನಿಲ್ದಾಣವನ್ನು ಅದು ಸೇರಿತು. ಅಲ್ಲಿಯ ತನಕ ರೈಲು ಹಾದಿ ಬ್ರೋಡ್‌ಗೇಜಿನದು. ಅನಂತರ ಮಿಟರ್‌ಗೇಜಿನದು. ಹಾಗಾಗಿ ನಾವು ಬೇರೆ ಬಂಡಿಯನ್ನೇರಿ ಕುಳಿತೆವು. ನಮ್ಮ ಜತೆಯ ಒಬ್ಬ ಪ್ರವಾಸಿ ಇಳಿದು ಹೋದ. ಬದಲು ಸಕುಟುಂಬಿಯಾದ ಒಬ್ಬ ಮಾರ್ವಾಡಿ ಮಿತ್ರ ನಮ್ಮ ಕೊಠಡಿಯನ್ನು ಹೊಸತಾಗಿ ಸೇರಿದ. ಅದರಿಂದ—ನಮ್ಮ ಜನಕ್ಕೆ ಸಂಸಾರ ಸುಖದ ಪರಿಚಯವಾಗತೊಡಗಿತು. ಮಾರ್ವಾಡಿಗೆ ಸುಮಾರು ಐವತ್ತು ವಯಸ್ಸಿರಬಹುದು. ಎರಡನೇ ತರಗತಿಯ ಡಬ್ಬಿ ಹತ್ತುವ ಗಡಿಬಿಡಿ ಯಲ್ಲೋ ಅಥವಾ ಅದಕ್ಕೂ ಮೊದಲೋ, ಉಟ್ಟ ಅರಿವೆಗೆ ಸಾಬೂನು ತಗ ಲಿಸುವುದನ್ನು ಮರೆತೇಬಿಟ್ಟಿದ್ದ. ಅವನ ಪಂಚೆಯ ಬಣ್ಣ, ವಾಸನೆ ಎರಡೂ ಪ್ರೇಕ್ಷಣೀಯವಾಗಿತ್ತು. ಎಳೆಯ ಹೆಂಡತಿ ಅವನಿಗೆ. ಆಕೆಯ ಕೈಯ

A. B. Raghavendra

ಲ್ಲೊಂದು ಎರಡು ವರ್ಷದ ಚಿಕ್ಕ ಮಗು. ಮಗು ಮುದ್ದಾಗಿಯೇ ಇತ್ತು. ಆ ಹೆಂಗಸಿನ ಮುಖದಲ್ಲಿ ಎಳೆಯ ಕಣ್ಣುಗಳೇ ಕಾಣುತ್ತಿದ್ದುವು. ಕನ್ನಡ ಪತ್ತೇದಾರಿ ಕಥೆಗಳಂತೆ, ನಾನು ಪರಿಶೋಧಿಸಿ ಹೇಳುವುದಾದರೆ, ಆಕೆಗೆ ಪ್ರಾಯಶಃ ಇಪ್ಪತ್ತನಾಲ್ಕು ವರ್ಷ ಆಗಿರಬೇಕು. ಆದರೆ ಅವಳನ್ನು ನೋಡುವುದು ಕಷ್ಟ. ಅವಳ ತಲೆಯೇ ಅವಳ ಶರೀರದ್ದಲ್ಲ–ಎಂಬ ಅನುಮಾನವುಂಟಾಗುತ್ತಲೇ ಇತ್ತು. ಮೈಯಸುತ್ತಲೂ ಮಾಂಸಖಂಡಗಳು ಈಗ ಬೀಳುತ್ತಾವೋ ಇನ್ನೊಂದು ಗಳಿಗೆಗೆ ಉದುರಿಬೀಳುತ್ತಾವೋ– ಎಂಬ ಸಂದೇಹಜೀವನ ಮಾಡಿಕೊಂಡಿದ್ದುವು. ಮುಂದೆ ನಮಗವರ ಸಂಸಾರಜೀವನ ಕಾಣದೊರಕಿತು. ಅಂದರೆ ಇಷ್ಟೆ–ಎರಡನೇ ಶರಗತಿಯ ಹಾಸಿಗೆ, ನೆಲ, ಇವೆಲ್ಲ ಮಗುವಿನ ಶೌಚಗಳಿಂದ ಬಾಧಿತವಾಗತೊಡಗಿದುವು. ಕೂತುಕೊಳ್ಳಲಿಕ್ಕೆ ಜಾಗ ಸಾಲದಾದರೂ ಹಾಸುಗೆ ಸುರುಳಿ ಇರಿಸಲು ಆಸನಗಳನ್ನು ಉಪಯೋಗಿಸಿದರು. ಮಾರ್ವಾಡಿ ಮಾತ್ರ ನಿಶ್ಚಿಂತನಾಗಿ ಅಲ್ಲಲ್ಲಿ ರೈಲು ನಿಲ್ದಾಣಗಳಲ್ಲಿ ಬರುವ ಕಜ್ಜಾತಿಂಡಿಗಳನ್ನು ಕೊಂಡು ತಿನ್ನುತ್ತಲೇ ಇದ್ದ. ಹೆಂಡತಿ ಅಷ್ಟು ಬೆಳೆದದ್ದು ಸಾಕೆಂದು, ಅವಳಿಗೆ ತಿಂಡಿಕೊಡಲು ಹೋಗಲೇ ಇಲ್ಲ. ಮಗು ದಣಿವು ನಿದ್ದೆಗಳ ಎಡೆಯಲ್ಲಿ ಕೆಳಗಿನ ಸೀಟಿಂದ ಮೇಲಿನ ಸೀಟಿಗೆ, ಮೇಲಿನ ಹಾಸಿಗೆಯಿಂದ ಕೆಳಗಿನ ಹಾಸಿಗೆಗೆ, ಹೋಗುತ್ತಲೇ ಇತ್ತು. ಗೆಳೆಯ ಶ್ರೀಪತಿ ಈ ನೋಟ ನೋಡಲಾರದೆ, ಮುಖಕ್ಕೆ ಪುಸ್ತಕ ಹಿಡಿದು ಓದತೊಡಗಿದ. ಜತೆಯ ಸಿಖ್ ಪ್ರವಾಸಿ ಕುಳಿತಲ್ಲಿಯೇ ಸಮಾಧಿವಶನಾದ. ನಾನು ಕುಳಿತ ಸೀಟಿನ ಒಂದು ಕಡೆ ಗೋಡೆ, ಇನ್ನೊಂದು ಕಡೆ ಮಾರ್ವಾಡಿ ದಂಪತಿಗಳು, ಅವರ ಮಗು; ಆಚೆ ತಿರುಗಿದರೆ ಅವರ ಬೆಡ್ಡಿಂಗಿನ ಗೋಡೆ. ಹಾಗಾಗಿ ನನ್ನ ಮೈಯನ್ನು ತಿರುಗಿಸಲಾರದೆ ಕತ್ತು ತಿರುಗಿಸಿ, ರೈಲು ಕಿಟಕಿಯ ಹೊರಗೆ ಕತ್ತು ಹಾಕಿ ನೋಡುತ್ತಾ ಕುಳಿತೆ. ಕಾಥಿಯಾವಾಡದ ಬಯಲು ಭೂಮಿಯನ್ನು ರೈಲು ತುಳಿದು ಸಾಗುತ್ತಲೇ ಇತ್ತು. ಒಂದೇ ಮಟ್ಟದ ಬಯಲು ಪ್ರದೇಶ ರೈಲಿನ ಇಕ್ಕಡೆಯಲ್ಲಿಯೂ ಹಾಸಿತ್ತು. ಸಸ್ಯಹೀನವಾದ ಪ್ರದೇಶವದು. ಕೆಲವೊಂದು ಕಳ್ಳಿಯ ಗಿಡಗಳು, ಜಾಲಿಯ ಗಿಡಗಳು, ನೆಲ ಎಷ್ಟು ದೂರ ಹಾಸಿತ್ತೋ, ಅಷ್ಟು ದೂರಕ್ಕೂ ಕಾಣಿಸುತ್ತಿದ್ದುವು. ಹಳ್ಳಿಯ ಹೆಂಗಸರು, ಗಂಡಸರು ತಮ್ಮ ದೇಶಿಯ ಉಡುಗೆಯಲ್ಲಿ ಸಂಚರಿಸುವುದು ಕಾಣುತಿತ್ತು. ಆ ಪ್ರದೇಶದಲ್ಲಿ ಮನಸೆಳೆಯುವ ಪಶು ಪಕ್ಷಿಗಳೆಂದರೆ ಎರ

ಡೇನೆ–ಅಸಹ್ಯವಾಗಿ ಕಾಣಿಸುವ ಒಂಟೆಗಳು. ಬಣ್ಣದಿಂದ ಅಸೂಯೆ ಹುಟ್ಟಿಸುವ ನವಿಲುಗಳು. ಪ್ರತಿ ಊರಿನ ತಿಪ್ಪೆಯ ರಾಶಿ, ಹೊಲಗದ್ದೆಗಳಲ್ಲೂ ಗಂಡು ಹೆಣ್ಣು ನವಿಲುಗಳು ನಲಿದಾಡುತ್ತಿದ್ದುವು. ನಾವು ಹೋದ ಕಾಲದಲ್ಲಿ ಗಂಡು ಹೆಣ್ಣು ನವಿಲುಗಳಲ್ಲಿ ಕ್ರಾಂತಿ ಸಂಭವಿಸಿರಬೇಕು. ಗಂಡು ಹೆಣ್ಣುಗಳು ಬೇರೆ ಬೇರೆ ಗುಂಪಾಗಿರುತ್ತಿದ್ದುವು.

ಹೀಗೆ ಮೂರುನಾಲ್ಕು ತಾಸುಗಳ ತನಕ ಬೋಳು ನೆಲ, ಬರಿಯ ದೃಶ್ಯ ನೋಡಿ ಹೋಗುವಾಗಲೆಲ್ಲ, ನವಿಲುಗಳಷ್ಟೇ ನನ್ನ ಮನ ಸೆಳೆವ ಚಿತ್ರವಾಗಿತ್ತು. ಮುಂದೆ ನೆಲದ ಮಟ್ಟ, ಏರದೆ ಹೋದರೂ, ಹೂದಳೆದ ಮುತ್ತುಗದ ಮರಗಳು ಇಳಿಯ ದಿಗಂತದ ಮುಂದೆ ಉರಿಯುವ ಬಣವೆಗಳ ಬೆಂಕಿಯಂತೆ ಕಾಣಿಸತೊಡಗಿದುವು. ಗಾವುದ ಗಾವುದ ಸರಿದರೂ ಮುತ್ತುಗದ ಹೂಗಳ ಸೊಂಪೇ ಸೊಂಪು. ಮುತ್ತುಗ ನಮ್ಮ ಊರಿನಲ್ಲಿ ಜನವರಿ ತಿಂಗಳಿನಲ್ಲಿ ಹೂಬಿಡುತ್ತದೆ. ಮೈಸೂರು ಪ್ರಾಂತದಲ್ಲಿ ಫೆಬ್ರವರಿಯಲ್ಲಿ ಹೂಬಿಡುತ್ತದೆ. ಸೌರಾಷ್ಟ್ರದಲ್ಲಿ ಅದು ವಸಂತ ಕಾಲದಲ್ಲಿ ಹೂಬಿಡುವುದೆಂದು ಕಾಣುತ್ತದೆ!

ಕನ್ನಡಜಿಲ್ಲೆಯ ಗುಡ್ಡ, ಬೆಟ್ಟ, ನೆಲ, ಜಲ, ಸಸ್ಯಗಳನ್ನು ನೋಡಿದವರಿಗೆ ಕಾಥಿಯಾವಾಡವು ಸಹ ಮರುಭೂಮಿಯಾಗಿಯೇ ಕಾಣಿಸಬಹುದು. ಮುಂದೆ ತೊಡಗಿದುದಂತು ರಜಪುತಾನದ ಮರುಭೂಮಿಯೇ. ಮೈಲು ಮೈಲುಗಳ ಉದ್ದಕ್ಕೂ ಹಾಸಿದ ಮರುಳುಗಾಡದು; ಕುರುಚಲು ಗಿಡಗಳೂ ಸಹ ಕಡಿಮೆ; ಮುತ್ತುಗದ ಮರಗಳೂ ಇರಲಿಲ್ಲ. ತುಸುವೇ ಎತ್ತರದ ಕಡಲಿನ ಅಲೆಗಳಂತೆ ಉರುಳಿ, ಹಬ್ಬಿ ದೂರವರಿದು, ಬಾನಿನ ಅಂಚಿನೊಡನೆ ಬೆರೆತುಕೊಳ್ಳುವ ಉಸುಕಿನ ಸಮುದ್ರವದು. ಅಲ್ಲಲ್ಲಿ ಒಂದು ಜಾತಿಯ ಒರಟು ಹುಲ್ಲುಗಳ ಹೊದೆ ಮಾತ್ರ ಬೆಳೆದಿರುವುದು ಕಾಣುತಿತ್ತು. ಅಲ್ಲಿನ ಮನೆಗಳೇನೋ ಈ ಹುಲ್ಲಿನ ಛಾವಣಿಗಳಿಂದ ಹೊದೆಯಿಸಿದ್ದು, ನಮ್ಮೂರಿನ ಹಳ್ಳಿಯ ಮಾಡುಗಳಂತೆ ಕಾಣಿಸುವ ಮಾಡುಗಳುಳ್ಳವು. ಒಂದೇ ಬಗೆಯ ನೋಟವನ್ನು ನೋಡಿ, ನೋಡಿ ಕಣ್ಣು ಬತ್ತುತಿತ್ತು. ಬಿಸಿಲು ಬಿಳಿಯ ಮರಳಿನ ಮೇಲೆ ಕುಣಿಯುವಾಗ ಕಣ್ಣಿಗೆ ಹಿತವಿಲ್ಲ. ಆದರೂ ಸಮನಾದ ಸೆಕೆಗಾಲ ಅಲ್ಲಿಯೂ ತೊಡಗಿಲ್ಲ. ಅಂತೂ ನಮ್ಮ ಬಂಡಿ ಪಾಲನ್‌ಪುರ ಸೇರುವಾಗ ೧೨ ಘಂಟೆಯಾಯಿತು. ನಾವು ಬಂಡಿಯಲ್ಲೇ ಆಹಾರ ತರಿಸಿ, ಊಟ

ಮಾಡಿದೆವು. ನಮ್ಮ ಮಾರ್ವಾಡಿ ಮಿತ್ರ ಏನೇನೋ ತರಕಾರಿಗಳನ್ನು ಕೊಂಡು ಧ್ವಂಸಮಾಡಿದ. ಒಂದೂವರೆ ಘಂಟೆಯಾಯಿತು. ಆಬೂ ರೋಡ್ ನಿಲ್ದಾಣವನ್ನು ಸೇರುವಾಗ ನಮಗೆ ಸಾಕಷ್ಟು ದಣಿವಾಗಿತ್ತು. ನಿಲ್ದಾಣದಿಂದ ಹೊರಕ್ಕೆ ಬಂದೆವು. ಆಬೂ ಬೆಟ್ಟಕ್ಕೆ ಹೋಗುವ ಬಸ್ಸುಗಳು ಕಾದು ನಿಂತಿದ್ದುವು.

ಆಬೂ ಹನ್ನೊಂದನೆಯ ಶತಮಾನದ ಜೈನ ದೇವಾಲಯಗಳಿಗೆ ಹೆಸರಾದ ಊರು. 'ದಿಲ್ ವಾಡಾ' ಎಂದು ಈ ದೇವಾಲಯಗಳನ್ನು ಕರೆಯುತ್ತಾರೆ—ಊರವರು. ಜೈನರ ಈ ಯಾತ್ರಾಸ್ಥಳಕ್ಕೆ ದಿನದಿನವೂ ನೂರಾರು ಯಾತ್ರಾರ್ಥಿಗಳು ಬಂದು ಹೋಗುತ್ತಾರೆ. ಹೆಚ್ಚಿನ ಪ್ರವಾಸಿಗಳೆಲ್ಲ ರಜಪುತಾನದ ಜನರು. ಕೆಲವರು ಗುಜರಾತಿನವರು. ರಜಪುತಾನದ ಗಂಡು ಹೆಣ್ಣುಗಳ ಉಡಿಗೆತೊಡಿಗೆಗಳಲ್ಲಿ ಮೊಗಲ್ ಮಾದರಿಯ ಬಗೆ, ಹೊಲಿಗೆ ಇನ್ನೂ ಉಳಿದಿವೆ. ಕೈನೂಲಿನ ಬಿಳಿಯಾದ ದಪ್ಪನೂಲಿನ ಸುರುವಾಲು, ನೆರಿಗೆಯುಳ್ಳ ಕಸೆಯಂಗಿ, ಅಗಲ ಚಪ್ಪಟೆಯಾದ ದೊಡ್ಡ ಮುಂಡಾಸು, ಕೈಯಲ್ಲಿ ದಪ್ಪಗಾದ ಒಂದು ದೊಣ್ಣೆ, ಅಲ್ಲಿನ ಗಂಡಸರಿಗೆ. ಅವರು ಮೈಯಲ್ಲಿ ದೃಢಕಾಯರು. ಇಂಥಾ ಸೆಕೆಗಾಲದಲ್ಲಿಯೂ ಅವರ ಮೀಸೆಯ ಸೊಂಪು ಹೇಳಿತೀರದು. ಅವರ ಸ್ತ್ರೀಯರು ಗುಜರಾಥಿನವರಂತೆ ಉಡಿಗೆ ತೊಡುವ ಪದ್ಧತಿ. ತಲೆಯ ಮೇಲಿನ ಸೆರಗನ್ನು ಮುಖಕ್ಕೆ ಎಳೆದುಕೊಂಡು, ಅದರ ಒಂದು ಚುಂಗನ್ನು ಬಾಯಲ್ಲಿ ಕಚ್ಚಿಕೊಂಡೇ ಇರಬೇಕು ಯಾವತ್ತೂ. ಎಷ್ಟೋ ಬಾರಿ ಅವರ ಮುಖ ನೋಡಿದರೆ, ನಾವೇ ಕತ್ತು ತಿರುಗಿಸಬೇಕಾಗುತ್ತದೆ. ಹೀಗಿದ್ದರೂ ಲೋಕ ತಮ್ಮನ್ನೇ ದೃಷ್ಟಿಸೀತು—ಎಂಬ ಭಯ ಅವರಿಗೆ!

ರೈಲು ಆಫೀಸಿನ ಮುಂಗಡೆಯೇ ಬಸ್ಸಿನ ಆಫೀಸಿದೆ. ಅಲ್ಲಿ ಟಿಕೇಟು ಕೊಳ್ಳಬೇಕು. ಮೊದಲನೆಯ ನಾಲ್ಕು ಬಸ್ಸುಗಳು ತುಂಬಿ ಐದನೆಯ ಬಸ್ಸು ನಮಗೆ ಉಳಿದಿತ್ತು. ಎರಡನೆಯ ತರಗತಿಯಲ್ಲಿ ಬಂದ ನಾವು, ಮೂರನೆಯ ತರಗತಿಯಲ್ಲಿ ಕುಳಿತುಕೊಳ್ಳಬೇಕಾಯಿತು ಈ–ಬಸ್ಸಿನಲ್ಲಿ. ಒಂದೇ ಬಸ್ಸಿನ ಮುಂದಿನ ಸೀಟು ಒಂದನೇ ತರಗತಿ. ನಡುವಣ ಸೀಟು ಎರಡನೇ ತರಗತಿಯದು. ಹಿಂಭಾಗವೇ ಮೂರನೆಯ ತರಗತಿಯದು. ಮೂರು ತರಗತಿಯವರಿಗೂ ದಾರಿಯ ಧೂಳು ಸಮನಾಗಿ ಸಿಗುತಿತ್ತು. ನಾವು ಅಲ್ಲಿಂದ ಮಧ್ಯಾಹ್ನ

೨॥ಘಂಟೆಯ ಬಿಸಿಲಿನಲ್ಲಿ ಹೊರಡಬೇಕಾಗಿತ್ತು. ಬಸ್ಸು ಹೊರಡುವ ಮುಂಚೆ ಟಿಕೇಟು ತೆಗೆದು ನೋಡಿದೆ. ಕೊಟ್ಟ ೧ರೂ. ೧೦ಆಣೆಯಲ್ಲಿ ೧೦ಆಣೆ ಬಸ್ಸಿಗೆ, ಒಂದು ರೂಪಾಯಿ ಆಬೂ ಮುನ್ಸಿಪಾಲಿಟಿಯವರು ನಮ್ಮ ಮೇಲೆ ಹೊರಿಸಿದ ತಲೆತೆರಿಗೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆಯೂ ಈ ತಲೆಗಂದಾಯವನ್ನು ಮುನ್ಸಿಪಾಲಿಟಿ ಹೊರಿಸುತ್ತಲೇ ಇದೆ. ಹಿಂದುಸ್ಥಾನದ ಪ್ರಜೆಗೆ ಭಾರತದಲ್ಲಿ ಎಲ್ಲೆಲ್ಲೂ ಸಂಚಾರದ ಸ್ವಾತಂತ್ರ್ಯವಿದೆ—ಎಂಬುದಕ್ಕೆ ಇದು ಸಾಕ್ಷಿ! ಪ್ರವಾಸಕ್ಕೆ ಬಂದ ಯಾತ್ರಿಕ, ಮುನ್ಸಿಪಾಲಿಟಿಯ ಮೇಲೆ ದಾವೆಹೂಡಿ, ಈ ಕಾಯಿದೆ ತೆಗೆದು ಹಾಕುವ ಕಾಲ ಎಂದು ಬಂದೀತು? ಹಳೆಯ ಕಾಲದ ಶಿರೋಹಿ ಸಂಸ್ಥಾನದ ಈ ಕಾಯಿದೆ, ಈಗಿನ ಸಂಸ್ಥಾನದಲ್ಲೂ ಉಳಿದು ಬಂದಿದೆ. ಆಬೂ ಮುನ್ಸಿಪಾಲಿಟಿ ಈ ಒಂದು ಸುಲಿಗೆಯಿಂದಲೇ ಜೀವನ ಸಾಗಿಸುತ್ತದೆ—ಎಂದು ಕಾಣುತ್ತದೆ. ಆಬೂ ನಗರವನ್ನು ಬಿಟ್ಟು ಹೊರಕ್ಕೆ ಬಂದೊಡನೆಯೆ, ಚೆನ್ನಾಗಿ ಡಾಮರು ಬಳಿದ ರಸ್ತೆ ಸಿಗುತ್ತದೆ. ಹೆಚ್ಚು ಕಡಿಮೆ ಅಲ್ಲಿಂದಲೇ ಹತ್ತೊಂಬತ್ತು ಮೈಲು ಬೆಟ್ಟದ ಹಾದಿ ಆಬೂವಿಗೆ. ಆಬೂ, ರಜಪುತಾನದ ಉದಕಮಂಡಲವಿದ್ದಂತೆ. ವಕ್ರವಕ್ರವಾಗಿ ಏರುತ್ತ ಹೋಗುವ ಹಾದಿಯೊಂದು ಕಗ್ಗಲ್ಲಿನ ಬೆಟ್ಟಗಳ ಮೈಗೆ ಅಂಟಿಕೊಂಡು ಮುಂದುವರಿಯುತ್ತದೆ. ಮರುಭೂಮಿಯ ಬೋಳು ನೋಟಕ್ಕೂ ಅದಕ್ಕೂ ಅಪೂರ್ವವಾದ ತಾರತಮ್ಯ. ಬಲು ಎತ್ತರದ ಶಿಲೆ ತುಂಬಿದ ಬೆಟ್ಟಗಳ ಎಡೆಯಲ್ಲಿ, ಒಣಗಿ ಎಲೆ ಉದುರಿಸಿಕೊಂಡ ಗಿಡಮರಗಳು ಇದ್ದೂ ಇಲ್ಲದಂತೆ ಕಾಣಿಸುತ್ತವೆ. ಆ ಬೆಟ್ಟಗಳಿಂದ ಜನ ಅಲ್ಲಲ್ಲಿ ಬೆತ್ತದ ಬೀಳಲುಗಳನ್ನು ಹೊತ್ತುಕೊಂಡು ಬರುವುದು ಕಾಣುತ್ತಿತ್ತು. ಬೆಟ್ಟಗಳು ಮುಗಿಲನ್ನು ಚುಂಬಿಸುವಷ್ಟು ಎತ್ತರವಾಗಿವೆ. ಮೇಲೇರಿದಂತೆ ಇಲ್ಲಿನ ಹವೆ ಶೀತವಾಗಿ ಬರುತ್ತದೆ. ಈ ಬೆಟ್ಟಗಳಲ್ಲಿ ಸಿಂಹಗಳಿವೆ ಅನ್ನುತ್ತಾರೆ. ನಮಗೆ ಹೆಚ್ಚಿನ ಜೀವಕೋಟಿ ಯಾವುದೂ ಕಾಣಸಿಗಲಿಲ್ಲ. ಹಿಂದೆ ಬರುವಾಗ ನಡುದಾರಿಯ ನೀರ ಬುಗ್ಗೆಯೊಂದರ ಬಳಿಯಲ್ಲಿ ಬಸ್ಸು ನಿಂತಾಗ ಬಸ್ಸಿನ ಬಳಿಗೆ ನೂರಾರು ಮುಸುವಗಳು ಬಂದು ತಿಂಡಿ ಬೇಡಿಕೊಂಡು ಹೋದುವು. ನಾವು ಮೇಲಕ್ಕೆ ಏರುವಾಗ ನಡುಘಟ್ಟದಲ್ಲಿ ಬಸ್ಸು ಒಮ್ಮೆ ನಿಂತಿತು. ಅಲ್ಲೊಂದು ಅಂಜನೇಯನ ಗುಡಿ. ಬಸ್‌ಡ್ರೈವರ ಬಂಡಿ ನಿಲ್ಲಿಸಿ, ಕೆಳಕ್ಕಿಳಿದು, ಅಂಜನೇಯನಿಗೆ ಸೇವೆ ಸಲ್ಲಿಸಿದ. ಅಲ್ಲಿಯ ಆಂಜನೇಯನ ಮುಖ ಕೋತಿಯ ಮುಖ

ದಂತಲ್ಲ. ಮುಖ ಬೇತಾಳನದ್ದು; ಮೈ ಮಂಗದ್ದು. ಭಕ್ತರು ಒಂದೊಂದು ಚಿನ್ನ ಇಲ್ಲವೆ ಬೆಳ್ಳಿ ಬಣ್ಣದ ತಗಡನ್ನು ಅವನ ಮೈಗೆ ಅಂಟಿಸಿಹೋಗುತ್ತಾರೆ. ನಮ್ಮ ಜನರು ಅವನ ಮೈಗೆ ಸಿಂಧೂರ ಅಂಟಿಸಿದಂತೆ! ನಾವೇನೂ ಕಾಣಿಕೆ ಕೊಡಲು ಹೋಗಲಿಲ್ಲ. ಆದರೂ ನಮ್ಮ ಡ್ರೈವರ ಒಂದು ದೊನ್ನೆ ತುಂಬಾ ಪೇಡದ ಪುಡಿಯನ್ನು ದೇವರಿಗೊಪ್ಪಿಸಿಕೊಂಡು, ಎಲ್ಲಾ ಪ್ರಯಾಣಿಕರಿಗೆ ನಾಲಿಗೆ ಚಪಲವೇರುವಷ್ಟು ತಿನ್ನಿಸಿದ. ನಾವು ಯಾತ್ರಿಕರಾಗಿ ತಲಾ ಒಂದರ ಒಂದು ರೂಪಾಯಿ ಸುಂಕಕೊಟ್ಟದ್ದಕ್ಕೆ ಇಷ್ಟಾದರೂ ಪ್ರತಿಫಲ ಬೇಡವೇ? ಬಾಯಾರಿದ ನಾವು ಕಾಲಾಣೆ ಕೊಟ್ಟು ಒಂದೊಂದು ಲೋಟಾ ನೀರು ಕೊಂಡು ಕುಡಿದೆವು.

'ಆಬೂ'ವಿಗೆ ಬರಿಯ ಒಂದೂವರೆ ಘಂಟೆಯ ಮೋಟರು ಹಾದಿ. ದಾರಿ ಡಾಮರುಹಾಕಿದ ಒಳ್ಳೆಯ ರಸ್ತೆ. ಬಸ್ಸು ಚೆನ್ನಾಗಿ ಓಡುತ್ತಿತ್ತು. ನನಗೆ ಪಯಣದಿಂದೇನು ಆಯಾಸವಾಗಲಿಲ್ಲ. ಆದರೆ ದಕ್ಷಿಣ ಹಿಂದುಸ್ತಾನದ ನಾವಿಬ್ಬರೂ ಸ್ವಭಾವತ: ಕಾಫಿ ರಾಕ್ಷಸರು. ಆ ದಿನವೂ ಬೆಳಗಿನಿಂದ ಕಾಫಿ ಕುಡಿದಿರಲಿಲ್ಲ. ಅದರಿಂದಾಗಿ ನನಗೆ ತಲೆನೋವು ತೊಡಗಿತ್ತು. ನಾನು ತಲೆ ನೋವಾಯಿತೆಂದುದಕ್ಕೆ, ನನ್ನ ಮಿತ್ರನೂ 'ತನಗೂ ಹಾಗೆ'ಅನ್ನತೊಡಗಿದ. ಆಬೂವಿನಲ್ಲಿ ಬಸ್ಸಿಂದ ಇಳಿಯುವಾಗ ನಮ್ಮ ಧ್ಯಾನ ಕಾಫಿಯ ಕಡೆಗೇನೇ ಇತ್ತು. ಆದರೆ ಅದು ಚಹಾಪಾನದ ದೇಶ. ಕಾಫಿಯ ಆಸೆ ಬಿಟ್ಟೇ ನಿಂತಿದ್ದೆವು. ಎದುರಿಗೊಂದು ಗುಡಿಸಲು ಕಾಣಿಸಿತು. ಗುಡಿಸಲಿಗೆ ಅದರಷ್ಟೇ ದೊಡ್ಡದೊಂದು ಬೋರ್ಡು. 'ಮದ್ರಾಸು ಹೊಟೇಲು' ಎಂದು ಬೋರ್ಡು ಅಂಟಿಸಿತ್ತು. ನೋಡಿ ಒಮ್ಮೆಗೆ ಧಾವಿಸಹೋದೆವು. ಹಿಂದೀಯಲ್ಲಿ ಭಾಷಣ ತೊಡಗಿದೆವು; ಇಂಗ್ಲಿಷಿನಿಂದ ಮುಂದುವರಿಸಿದೆವು. 'ನಿಮ್ಮೂರಾವುದೆಂ'ದು ಕೇಳಿದೆವು. 'ನಾನು ಮಂಗಳೂರಿನವನು, ಇವರು ಬೆಂಗಳೂರಿನವರು' ಎಂದೆವು. ನಂಟುತನ ಪ್ರಾರಂಭಿಸಿತು. ಆತ 'ತಾನೂ ಬೆಂಗಳೂರಿನಲ್ಲಿದ್ದೆ' ಎಂದು ಕನ್ನಡ ಮಾತನಾಡಲು ತೊಡಗಿದ. ಇಷ್ಟೆಲ್ಲ ನಂಟುತನ ತೊಡಗಿದ್ದು 'ಕಾಫಿ ಮಾಡಿ ಕೊಡುತ್ತೀಯಾ?'ಎಂದು ಕೇಳುವುದಕ್ಕೆ ಪೀಠಿಕೆಯಾಗಿತ್ತು. 'ಹಾಲು ಇಲ್ಲದಿದ್ದರೂ ಚಿಂತೆಯಿಲ್ಲ, ಪಾದರಸದಷ್ಟು ದಪ್ಪದ ಕಾಫಿಬೇಕು' ಎಂದುದಕ್ಕೆ ಆತ ಪ್ರಸನ್ನನಾಗಿ, ಅಂಥದೇ ಕಾಫಿಯನ್ನು ಮಾಡಿಕೊಟ್ಟ. ಕಾಫಿಯು ಹುಡಿ ಪಾತ್ರೆಯ ಕೆಳಗೂ ಮೇಲೂ ತೇಲುತ್ತಲೇ ಇತ್ತು. ಜತೆಗೆ

ಉಪ್ಪು ಕಡಿಮೆಯಾದ ಉಪ್ಪಿಟ್ಟನ್ನೂ ಮಾಡಿಕೊಟ್ಟ. ಕಾಫಿಯನ್ನು ಎಂದು ಕುಡಿದೆವೋ, ಅಂದೇ ಕೊಂಬು ಬಂದ ಜಿಂಕೆಗಳಂತೆ ಆದೆವು ನಾವು. ಆಗ ಜ್ಞಾನವೂ ಉದಯಿಸಿತು ನಮಗೆ. 'ನಾವು ಆಬು ಬೆಟ್ಟ ನೋಡಲಿಕ್ಕೆ ಬಂದಿದ್ದೇವೆ'—ಎಂಬ ಜ್ಞಾನ. ಅದಕ್ಕಿಂತ ಮೊದಲೇ ಯಾರಾದರೂ ನಮ್ಮನ್ನು —'ದಿಲ್‌ವಾಡಾ ನೋಡುತ್ತೀರೋ, ಬದಲು ಕಾಫಿ ಕುಡಿಯುತ್ತೀರೋ'— ಎಂದು ಕೇಳುತ್ತಿದ್ದರೆ ಖಂಡಿತವಾಗಿಯೂ 'ಕಾಫಿ'ಗೆ ಓಟು ಹಾಕುತಿದ್ದೆವು. ಕಾಫಿ ಸೇವಕರ ಗತಿಯೇ ಹೀಗಾದ ಮೇಲೆ, ಪ್ರೊಹಿಬಿಷನ್ ಜನಗಳ ಗತಿಯೇನು? ಪ್ರಾಯಶಃ ಲೋಕಕ್ಕೆ—ತಮಗೆ ಜೀರ್ಣಿಸಿದ ಆಹಾರ ಉಳಿದವರಿಗೆ ಕೆಟ್ಟದ್ದು—ಎಂದು ತೋರುತ್ತಿರುವಂತೆ ಕಾಣುತ್ತದೆ.

ಮದ್ರಾಸ್ ಹೊಟೇಲಿನ ಮೆನೆಜರ್‌ನಿಗೆ, ಹಿಂದಕ್ಕೆ ಮರಳುವ ಬಸ್ಸಿನಲ್ಲಿ ನಮಗೆ ಸೀಟು ಕಾದಿರಿಸಲು ಹೇಳಿ, ದೇವಾಲಯವನ್ನು ನೋಡಲು ಹೊರಟೆವು. ಅವನ ಕೃಪೆ ಅಲ್ಲದಿದ್ದರೆ, ಆ ದಿನ ಆಬೂ ಬೆಟ್ಟದ ಚಳಿಯನ್ನು ರಾತ್ರಿ ಅಲ್ಲಿದ್ದು ಅನುಭವಿಸಬೇಕಿತ್ತು.

ಕಾಫಿ ಕುಡಿದೆವೋ ಇಲ್ಲವೋ—ಆಬುವಿನ ಬಣ್ಣವೇ ಬದಲಿಸಿತು. ಅಲ್ಲಿನ ಈಚಲು ಮರಗಳು ತೆಂಗಿನ ಮರಗಳ ಸೌಂದರ್ಯವನ್ನು ತೊಟ್ಟವು. ಬಂಡೆತುಂಬಿದ ಬೆಟ್ಟಗಳು ಕಾಳಿದಾಸನ ಕಾವ್ಯಗಳನ್ನು ನೆನಪಿಗೆ ತಂದುವು. ಬೆಟ್ಟಗಳ ಎಡೆಯಲ್ಲಿ ಅಲ್ಲಲ್ಲಿ ರಾಜಪುತಾನದ ದೊರೆಗಳು ಕಟ್ಟಿಸಿದ ಶೈಲಿಹೀನ ಬಂಗಲೆಗಳು, ಅಳಕಾವತಿಯ ಅರಮನೆಗಳಾಗಿ ತೋರಿದುವು. ನಿಜ —ಆ ರಜಪುತಾನದ ಮರುಭೂಮಿಯಲ್ಲಿ ಸಂಚರಿಸಿದವನಿಗೆ, ಆಬೂ ಬೆಟ್ಟ ನಿಜಕ್ಕೂ ಅಮರಾವತಿಯೇ! ತಂಪಾದ ಹವೆ. ಸುತ್ತಿಸುಳಿವ ಡಾಮರು ಹಾದಿ. ಬಿದಿರು, ಮಾವು, ಈಚಲು ಮರಗಳ ಸಮೃದ್ಧಿ; ಅಲ್ಲಲ್ಲಿ ನೀರಿನ ಕಿರುಪ್ರವಾಹಗಳು; ಅಂಗೈ ಗಾತ್ರದ ಗೋಧಿಯ ಹೊಲಗಳು—ಇವೆಲ್ಲವೂ ಸೇರಿ ಆಕರ್ಷಣೀಯವಾಗಿದ್ದುವು. ಬೆಟ್ಟದ ಮಗ್ಗುಲಿನ ಮನೆಗಳು ಅಂಥ ಆವರಣದಲ್ಲಿ ಸುಂದರವಾಗಿ ಕಾಣುತ್ತಿದ್ದುವು. ನಾವು ದೇವಾಲಯ ನೋಡುವ ಸಲುವಾಗಿ ಓಟಹೂಡಿದೆವು. ನಾನು ಮುಂದಕ್ಕೆ; ನನ್ನ ಎಳೆಯ ಮಿತ್ರ ತನ್ನ ಅಗಾಧ ಶರೀರವನ್ನು ಹೊತ್ತುಕೊಂಡು ನನ್ನ ಹಿಂದಕ್ಕಿದ್ದ; ಇಬ್ಬರೂ ಧಾವಿಸುತ್ತ ಸಾಗಿದೆವು. ಸಾಗುವ ದಾರಿಯಲ್ಲಿ ಸುತ್ತಿಸುತ್ತಿ, ಊರು ಬಿಟ್ಟು ಉನ್ನತವಾದ ಬೆಟ್ಟಗಳ ಎಡೆಯ ಕಣಿವೆಯೊಂದರಲ್ಲಿ ಮುಂದುವರಿದೆವು.

ಬಾನಲ್ಲಿ ಮುಗಿಲು ಅರ್ಧಮರ್ಧ ಕವಿದಿದ್ದುದರಿಂದ ಆಗಾಗ ಬಿಸಿಲು—ನೆರಳುಗಳು ಹಾಳೆಗಳಾಗಿ, ಹುಂಡುಗಳಾಗಿ ಬೀಳುತ್ತಾ, ಕಣಿವೆ, ಬೆಟ್ಟಗಳನ್ನೆಲ್ಲ ಒಮ್ಮೊಮ್ಮೆ ಮಿನುಗಿಸುತ್ತಿದ್ದುವು; ಒಮ್ಮೊಮ್ಮೆ ಬಣ್ಣ ಕುಂದಿಸುತ್ತಿದ್ದುವು. ಮೆಲುವಾಗಿ ತಂಗಾಳಿ ಬೀಸುತ್ತಲೇ ಇತ್ತು. ನಾನು ಹದಿನಾರು ವರ್ಷಗಳ ಹಿಂದೊಮ್ಮೆ ಈ ಪ್ರದೇಶಕ್ಕೆ ಬಂದವನು. ಆದರೆ ದಾರಿಯ ಚಿತ್ರ, ಬೆಟ್ಟದಚಿತ್ರ—ಪ್ರತಿಯೊಂದೂ ನನ್ನ ಸ್ಮೃತಿಪಥದಿಂದ ಅಳಿದು ಹೋಗಿತ್ತು. ತಿರುಗಿ ಈ ನಿಸರ್ಗ ದೃಶ್ಯ ಹೊಸತೇ ಎಂಬ ಹರ್ಷವನ್ನುಂಟುಮಾಡಿತು. ತುಸು ಮುಂದುವರಿದ ಮೇಲೆ, ದೂರದಲ್ಲಿ ದಿಲ್‌ವಾಡಾ ದೇವಾಲಯದ ಶಿಖರ ಕಾಣಿಸತೊಡಗಿತು. ಎರಡೆರಡು ಕೆಮರಾಗಳನ್ನು ಹೊತ್ತು, ಹೊರಟವರು ನಾವು. ಚಲಚ್ಚಿತ್ರದ ಕೆಮರಾ ಒಂದು; ಸ್ಥಿತಚಿತ್ರದ ಕೆಮರಾ ಇನ್ನೊಂದು. ಚಿತ್ರತೆಗೆಯಲು ಹೊರಟವರಿಗೆ ಮೇಲಿನ ಸೂರ್ಯ—ಅಲ್ಲ, ಅವನನ್ನು ಮರೆಯಿಸುವ ಮುಗಿಲು, ಪಾಪಿಯಂತೆ ಕಾಣಿಸುತ್ತದೆ. ಚಿತ್ರ ತೆಗೆಯಲು ಬಿಸಿಲುಬೇಕು. ಬಿಸಿಲು ಬಂತೆಂದು ಕೆಮೆರಾ ಹಿಡಿದುನಿಂತರೆ, ಅಷ್ಟರಲ್ಲೇ ಮುಗಿಲು ಬಂದುಬಿಡುತ್ತಿತ್ತು. ಆಗ ನಿಸರ್ಗದ ರೂಪವೇ ಬದಲಾಗುತ್ತದೆ. ಹೀಗಾಗಿ ಅಂಥ ಬೆಳಕಿನೊಡನೆ ನಾವು ಚದುರಂಗದಾಟ ಆಡಬೇಕಾಯಿತು.

ದೇವಾಲಯವನ್ನು ಸಮೀಪಿಸಿದೆವು. ತೀರ ಹತ್ತಿರ ಹೋದರೆ ಇದು ದೇವಾಲಯ ಎಂಬ ಅರಿವೇ ಆಗುವುದಿಲ್ಲ. ಅದು ಬರಿಯ ಹಳ್ಳಿಯ ಗುರಿಕಾರನೊಬ್ಬನ ಮನೆಗೆ ಹೋಗುವ ಹಾದಿಯಂತೆ ಕಾಣಿಸುತ್ತಿತ್ತು. ಹೆಚ್ಚಿನ ಜನಸಮೂಹ ಇರಲಿಲ್ಲ. ಗುಡಿಯ ದ್ವಾರದ ಬಳಿ ಬಿಲ್ಲೆ, ಸಮರೂಪಗಳನ್ನು ತೊಟ್ಟ ಒಬ್ಬಿಬ್ಬರು ಜವಾನರು ಮಾತ್ರ ಕುಳಿತಿದ್ದರು. ಹೋಗಿ ಮೊದಲು ನಮ್ಮ ಪಾದರಕ್ಷೆ ಕಳಚಿ ಇರಿಸಿದೆವು. ದರವಾನನೊಬ್ಬ—ನಮ್ಮ ಹಿಂದಕೆ ಹೊರಟ. ಕೀಲಿಯ ಕೈಯನ್ನು ಹಿಡಿದುಕೊಂಡು ನಮ್ಮ ಹಿಂದಕ್ಕೆ ಹೊರಟು ಬಂದ. ಅವನನ್ನು ಕಂಡು ನಾವು ಪ್ರಸನ್ನರಾದೆವು. ಸಂಜೆಯ ಹೊತ್ತಿಗೆ ಗುಡಿಯ ಕದವನ್ನಿಕ್ಕುತ್ತಾರೆಂದು ನಮಗೇನು ಗೊತ್ತು? ಅವನ ಕರುಣೆಯಿಂದಲೇ ಜಿನತೀರ್ಥಂಕರರ ದರ್ಶನ ಆ ದಿನ ನಮಗಾದುದು.

ಗುಡಿಗೆ ಹೋಗಲು ಸಾಮಾನ್ಯವಾದೊಂದು ದ್ವಾರ; ಅದರೆದುರು ತುಂಬಾ ಇಕ್ಕಟ್ಟಾಗಿದ್ದ ಅಂಗಣ. ಅಲಂಕಾರ ರಹಿತವಾದ ಗೋಡೆಗಳು; ಬರುವುದಕ್ಕಂತು ದೂಳು ತುಂಬಿದ ಕಿರಿಯ ದಾರಿ—ಇವೆಲ್ಲವೂ ಸೇರಿ,

ಪೂರ್ವಕಲ್ಪನೆಯಿಲ್ಲದ ಭಕ್ತನಿಗಾಗಲಿ, ರಸಿಕನಿಗಾಗಲಿ, ಯಾವ ಉತ್ಸಾಹವನ್ನೂ ಆಸೆಯನ್ನೂ ಆಬುವಿನ ವಿಷಯದಲ್ಲಿ ಹುಟ್ಟಿಸದೆ ಹೋಗಬಹುದು. ಆದರೆ ಮುಖ್ಯ ಬಾಗಿಲು ತೆರೆದು, ನಾಲ್ಕು ಹೆಜ್ಜೆ ಮುಂದಕ್ಕಿರಿಸಿದೆವೆಂದರೆ ಮುಂದಿರುವ ಲೋಕವೇ ಬೇರೆ. ಮರ್ತ್ಯ ಲೋಕದಿಂದ ನಿಮಿಷ ಮಾತ್ರದಲ್ಲಿ ಸ್ವರ್ಗಕ್ಕೇರುತ್ತೇವೆ ನಾವು. ಶಾಂತವಾದ ಆವರಣ; ನಾಲ್ಕು ಸುತ್ತಲೂ ಚೌಕಿಯ ಮನೆಯ ಚಾವಡಿಗಳಂತೆ ರಚಿತವಾದ ಸಭಾಸದನದ ನಡುವೆ ಒಂದು ಅಂಗಣ. ಅಂಗಣವನ್ನೆಲ್ಲ ತುಂಬಿಕೊಂಡಂತೆ ಕಾಣುವ ಜಿನಾಲಯ. ಅದರ ಮುಂದಿನ ನವರಂಗ. ಜಿನಾಲಯವೇ ಗುಡಿಯ ಗರ್ಭಗೃಹ. ಅದರ ಎದುರಿಗೇನೇ ಹಲವು ಸ್ತಂಭರಾಜಿಗಳಿಂದ ರಂಜಿತವಾಗಿರುವ ನವರಂಗವಿದೆ. ಇಲ್ಲಿಯ ಯಾವತ್ತು ವಾಸ್ತು ರಚನೆ ಹಾಲುಗಲ್ಲಿನಿಂದ ನಿರ್ಮಿತವಾದದ್ದು. ಮಿದುವಾದಂತಹ ದಂತ ಕಾಂತಿಯಿಂದ, ಅಬ್ಬರವಿಲ್ಲದೆ, ಬೆಡಗಿಲ್ಲದೆ ಸೌಂದರ್ಯ ಸೂಸುವ ರಚನೆಯದು. ಬಣ್ಣಬೆಡಗುಗಳೊಂದೂ ಕಾಣಿಸದ ಸ್ಥಳ. ಇಂಥ ವಾಸ್ತು ರಚನೆಯಲ್ಲಿ ಕಾಣಬೇಕಾದದ್ದು, ಕಾಣಬಹುದಾದ್ದು, ಆಂತರಿಕ ಶೋಭೆಯನ್ನೇ ಹೊರತು—ಬಾಹ್ಯ ಶೋಭೆಯನ್ನಲ್ಲ. ಹತ್ತು ಗಜ ದೂರ ನಿಂತು ಒಟ್ಟು ನೋಟವನ್ನು ನೋಡುವ ಅವಕಾಶ ಇಲ್ಲಿ ಇಲ್ಲ. ತೀರ ಸಮೀಪ ನಿಂತು ಒಂದೊಂದನ್ನೇ ಇಣಿಕಿನೋಡಬಹುದಾದ ವಸ್ತು ಪ್ರದರ್ಶನಾಲಯದಂತೆ ಇಲ್ಲಿನ ರಚನೆಯಿದೆ. ನವರಂಗದಲ್ಲಿ ಕಾಣಿಸುವ ಯಾವತ್ತು ಸ್ತಂಭರಾಜಿಗಳು, ಸ್ತಂಭಗಳಿಂದ ಸ್ತಂಭಗಳಿಗೆ ಹೊಂದಿ ತೂಗುವ ವಿಚಿತ್ರವಾದ ತೋರಣಗಳು, ಸ್ತಂಭಗಳ ಮೇಲೆ ಕವುಚಿರಿಸಿದಂತಿರುವ ಮುಚ್ಚಿಗೆ, ಇವೆಲ್ಲವೂ ಅಂಗುಲ ಅಂಗುಲಕ್ಕೂ ಲಲಿತ ಸೊಬಗನ್ನು ಬೀರುವ ಉತ್ಕೀರ್ಣ ಶಿಲ್ಪದಿಂದ ತುಂಬಿವೆ. ಒಂದೊಂದು ಕಂಬವೂ ಒಂದೊಂದು ಬಗೆಯ ಕೆತ್ತನೆಯಿಂದ ತುಂಬಿದ್ದು, ರುವಾರಿಯ ಉಳಿ—ಬೆಳುಗಲ್ಲನ್ನು ಬೆಣ್ಣೆ ಕೊರೆಯುವಷ್ಟು ಧೈರ್ಯ,ಚಮತ್ಕೃತಿಗಳಿಂದ, ಲಾಲಿತ್ಯದಿಂದ ನಿರ್ಮಿಸಿದ ಕೆಲಸ. ಈ ಒಂದೊಂದು ಕಂಬವನ್ನು ನೋಡುವಾಗಲೂ, ಸುಂದರಿಯರಾದ ಬೆಳದಿಂಗಳು ಮೈಯ ಹಲವು ಅಪ್ಸರೆಯರೇ ಇಲ್ಲಿ ಸೇರಿ ಗುಂಪಾಗಿ, ನೆರೆದು ವಿವಿಧ ಭಂಗಿಗಳಲ್ಲಿ ನೃತ್ಯವೆಸಗುವುದಕ್ಕೆ ನಿಂತಿದ್ದಾರೋ ಎಂಬ ಭ್ರಮೆಯಾಗುತ್ತದೆ. ಅವರು ನೀಡಿದ ತೋಳುಗಳೇ ಇಲ್ಲಿನ ಶಿಲಾ ತೋರಣಗಳು. ನವರಂಗದ ಮುಚ್ಚಿಗೆಯಂತು,ಈ ನೃತ್ಯ ಕನ್ನೆಯರ ಮೈಗೆ, ಬಿಸಿಲು ಸೋಂಕದಂತೆ ಮಾ

ಡುವ-ಒಂದು ಹಿರಿಯ ಬೆಳ್ಗಿಡೆ. ಆ ಕೊಡೆಯ ಒಳಭಾಗವನ್ನು ಇಣಿಕಿ ನೋಡಬೇಕಾದರೆ, ಹಾಲುಗಲ್ಲಿನ ನೆಲದಮೇಲೆ ಮಲಗಿಕೊಂಡು ಮೇಲ್ಮೊಗವಾಗಿ ನೋಡಬೇಕು. ಅಕ್ಕಸಾಲಿಯು ಚಿನ್ನಬೆಳ್ಳಿಗಳಲ್ಲಿ ಮಾಡಲಾರದ ಕೆತ್ತನೆ, ಈ ಮೇಲಿನ ಮುಚ್ಚಿಗೆಗಳಲ್ಲಿ ಕಾಣಬಹುದು. ಹಿಂದೂ ಶಿಲ್ಪಶೈಲಿಯ ಅನಂತವಾದ ರೂಪ, ಪ್ರತಿರೂಪಗಳು (Pattern) ವಿವಿಧ ಮಟ್ಟಗಳಲ್ಲಿ ಎದ್ದು ಕಾಣುವಂತಿರುವ ಮಂಡಲಾಕಾರದ ರಚನೆಯಿದು. ನಾಲ್ಕು ಸುತ್ತಿನ ಪರಿಧಿಯಿಂದ, ಕೆಲವು ರೇಖೆಗಳು ನಾನಾಬಗೆಯಿಂದ ನಲಿದು ಬಂದು, ಕ್ರೀಡಿಸಿ, ತಮ್ಮ ಪೂರ್ವ ಕ್ರೀಡೆಯ ದಾರ್ಢ್ಯವನ್ನು ಅಳಿಸದಂತೆ, ಉಳಿಸಿಕೊಂಡು, ಕೊನೆಗೆ ಕೇಂದ್ರದಲ್ಲಿ ಕೂಡಿ, ಹೂಮೊಗ್ಗೆಯಂತೆ ಕೆಳಮೊಗವಾಗಿ ಕಲಶದಾಕೃತಿಯಲ್ಲಿ ಕೊನೆಗೊಳ್ಳುತ್ತವೆ. ಈ ಮುಚ್ಚಿಗೆಯಂತೆಯೆ ಇರುವ ಮುಚ್ಚಿಗೆಗಳೆಷ್ಟಿವೆ ಬಲ್ಲಿರಾ? ನಾಲ್ಕುಸುತ್ತಲಿನ ಚಾವಡಿಯಲ್ಲಿ ಪ್ರತಿಯೊಂದು ಅಂಗಣದಲ್ಲೂ, ಮೇಲ್ಮೊಗವಾಗಿ ನೋಡಿದರೆ, ಇಂತಹ ಸುಮಾರು ನಾಲ್ವತ್ತರಷ್ಟು ಮುಚ್ಚಿಗೆಗಳು ಈ ಒಂದೇ ಗುಡಿಯಲ್ಲಿವೆ. ನಡುವಣ ನವರಂಗದ ಮುಚ್ಚಿಗೆ ಸುಮಾರು ೨೦×೨೦ ಅಡಿ ವಿಶಾಲವಾದದ್ದು. ಚಾವಡಿಯ ವಿವಿಧ ಅಂಕಣಗಳು ಸುಮಾರು ೧೦×೧೦ ಅಡಿ ಗಾತ್ರವಾಗಿದ್ದು ರೂಪ, ಪ್ರತಿರೂಪಗಳ ಕೆತ್ತನೆಯ ವೈಖರಿಯನ್ನು ಕಾಣಬಹುದು. ಕೆಲವುಗಳಲ್ಲಿ ಪುರುಷಾಮೃಗ, ನಾಗಕನ್ನಿಕೆಯರಂತಹ ರೂಪಗಳನ್ನು— ಅಲಂಕಾರಗಳಲ್ಲಿ ಬಳಸಿಕೊಂಡು, ಕೆತ್ತಿ, ಪ್ರತಿರೂಪ ನಿರ್ಮಿಸಿದ್ದಾರೆ. ಹೀಗೆ-ರೇಖೆಗಳಿಂದಲೇ ನಿರ್ಮಿತವಾದ ಪ್ರತಿರೂಪಗಳಿರಲಿ, ಪ್ರಾಣಿಪುಷ್ಪಗಳನ್ನು ಬಳಸಿಕೊಂಡ ಪ್ರತಿರೂಪಗಳಿರಲಿ,-ಎಲ್ಲವೂ ಅಪೂರ್ವವಾದ ಲಾವಣ್ಯದಿಂದ ಕೂಡಿದ್ದು, ಮನ ಮೋಹಿಸುತ್ತವೆ.

ಮಾತು ಬಣ್ಣಿಸದ ಬೆಡಗು, ಈ ವಾಸ್ತು ಮಂದಿರದ ಆಂತರಿಕ ಶೋಭೆ. ಒಂದನ್ನು ಕಂಡರೆ ಇನ್ನೊಂದರ ಮರವೆಯಾಗುತ್ತದೆ. ಎಲ್ಲವನ್ನು ಕಂಡಮೇಲೆ ಮನಸ್ಸು, ಇಷ್ಟೊಂದು ರೇಖಾವಿಲಾಸ ವೈಖರಿಗಳನ್ನು ಸ್ಮರಣೆಗೆ ತಂದುಕೊಳ್ಳಲಾರದೆ ಹೋಗಬಹುದಾದರೂ, ಅವುಗಳ ಒಟ್ಟು ಪರಿಣಾಮವನ್ನು ಎಂದೂ ಮರೆಯುವಂತಿಲ್ಲ. ಯಾವುದೋ ಒಂದು ಅಪೂರ್ವ ಲೋಕವನ್ನು ಹೊಕ್ಕು ಹೊರಟಂತೆ ಆಗುತ್ತದೆ ನಮಗೆ. ತಾರಾಮಂಡಲದಲ್ಲಿ ಲಾಸ್ಯವಾಡಿದಂತೆ, ಬಿರಿದ ಹೂಗಳಿಂದ ತುಂಬಿದ ಮಲ್ಲಿಗೆಯ ಚಪ್ಪರದಲ್ಲಿ ನಲಿದಾಡಿ

ದಂತೆ, ಏನೇನೋ ಸವಿಗನಸುಗಳನ್ನು ಅವು ಹುಟ್ಟಿಸುತ್ತವೆ. ಆ ಕನಸಿನಲ್ಲಿ ರಾಜಸ ತಾಮಸಗಳ ಪರಿಣಾಮವಿಲ್ಲ. ಶಾಂತಿ ತೃಪ್ತಿಗಳ ಸುಳಿವೇ ಪರಮಾವಧಿ. ಇಲ್ಲಿ ಪಂಡರು, ದಿಂಡರು—ಇವರುಗಳ ಹಾವಳಿಯನ್ನು ನಾವು ಹೋದಾಗ ಕಾಣದಿದ್ದುದರಿಂದ–ಮನಸ್ಸಿಗೆ ಜಿಗುಪ್ಸೆ ತರುವ, ಅನ್ಯ ವಿಚಾರಗಳಿಂದ ಬಾಧಿತರಾಗುವ ಯಾವ ಪ್ರಸಂಗವೂ ಉಂಟಾಗಲಿಲ್ಲ. ನಾವು ವಾಙ್ಮೂಢರಾಗಿ, ದಿಙ್ಮೂಢರಾಗಿ, ಇಲ್ಲಿ ನಿಂತು ವಿಶ್ವಕರ್ಮನ ವೈಖರಿಯನ್ನು ಪ್ರಥಮ ಬಾರಿಗೆ ನೋಡುವ ಹಸುಗೂಸುಗಳಂತಾಗುತ್ತೇವೆ.

ಹಿಂದೊಮ್ಮೆ ನಾನು ಇಲ್ಲಿಗೆ ಬಂದಿದ್ದೆ–ಎಂದೆನಷ್ಟೆ. ಬಂದಿದ್ದರೇನು? ಈ ಸವಿಯುಣಿಸು–ಲಭ್ಯವಿದ್ದಲ್ಲಿ, ಕಣ್ಣಿದ್ದಲ್ಲಿ ದಿನದಿನವೂ ಉಂಡು ತೃಪ್ತಿಪಡಲಾರದಂಥ ಸೊಗಸು. ನಮ್ಮ ಜತೆಗೆ ಬಂದ ದರವಾನ 'ಇನ್ನೊಂದು ದೇವಾಲಯಕ್ಕೆ ಹೋಗೋಣ'–ಅಂದ. ನನ್ನ ಮನಸ್ಸು ಅದಕ್ಕಾಗಿ ಉತ್ಸಾಹ ತಾಳಲಿಲ್ಲ. ಹಿಂದೊಮ್ಮೆ ಹೋಗಿದ್ದೆ. ಅಲ್ಲಿ ಹೆಚ್ಚಿನ ಚೆಲುವಿಲ್ಲ–ಎಂಬುದೇ ನನ್ನ ನೆನಪು. ಆದರೂ ನನ್ನ ಗೆಳೆಯನ ಸಲುವಾಗಿ ಹೊರಬಿದ್ದೆ. ಬರಿಯ ಹತ್ತುಗಜ ದೂರದಲ್ಲಿ ಕಿರಿದಾದ ಹತ್ತು ಪಾವಟಿಗೆಗಳನ್ನೇರಿ ಇನ್ನೊಂದು ಸ್ಥಳವನ್ನು ಹೊಕ್ಕೆವು. ಒಳಗೆ ಹೊಗ್ಗುತ್ತಲೇ–ನನ್ನ ಅಜ್ಞಾನ ನನಗೇ ತೋರಿತು: ನಾನು ಹಿಂದೆ ಅಲ್ಲಿಗೆ ಬಂದಿರಲೇ ಇಲ್ಲ. ಹಿಂದೆ ಕಂಡ ಗುಡಿಯೇ ಬೇರೆ. ಇದು ಬೇರೆಯೇ. ಇದು ಈಗಷ್ಟೆಯೇ ನಾವು ಕಂಡು ಬಂದ ಗುಡಿಗೆ ಸರಿಸಮಾನವಾದ ಇನ್ನೊಂದು ಮಂದಿರ,ಜಿನಾಲಯ. ಇದೂ ಹಾಳುಗಲ್ಲಿನದೇ. ಇಲ್ಲೂ ನಾಲ್ಕು ಸುತ್ತ ಚಾವಡಿಗಳಿವೆ; ನಡುವೆ ಜಿನಾಲಯ; ಜಿನಾಲಯದ ಎದುರಿಗೆ ನವರಂಗವಿದೆ. ಇಲ್ಲಿನ ಸ್ತಂಭಗಳು, ಮುಚ್ಚಿಗೆಗಳು, ಗರ್ಭಗುಡಿ ಇವೆಲ್ಲವೂ ಆ ಇನ್ನೊಂದು ಗುಡಿಯಷ್ಟೇ ಸೊಗಸಿನವು. ಒಂದು ಸವಿಗನಸಿನಿಂದ ಇನ್ನೊಂದು ಸವಿಗನಸನ್ನು ಅಷ್ಟು ಕ್ಷಿಪ್ರದಲ್ಲಿಯೇ ಅನುಭವಿಸುವ ಲಭ್ಯ ನಮಗೆ ದೊರಕಿತು. ಎಳೆಯ ಮಕ್ಕಳಂತೆ ಬೆಪ್ಪುಗಟ್ಟಿ, ಅತ್ತಿತ್ತ ನೋಡುತ್ತ ತಿರುಗಿದೆವು. ಮುಚ್ಚಿಗೆಗಳನ್ನು ಕತ್ತೆತ್ತಿ ಕಂಡೆವು. ಒಂದರಿಂದ ಇನ್ನೊಂದು ಬೇರೆಯೇ ಆಗಿ ಕಾಣಿಸುವ ಸ್ತಂಭರಾಜಿಯ ಸೊಗಸನ್ನು ನಿರುಕಿಸಿದೆವು. ಒಂದೆರಡು ಕಡೆ ವಿಕೃತಿಗೊಂಡ ಗೊಂಬೆಗಳನ್ನೂ ನೋಡಿದೆವು. ಇದೇನು—ಮುಸಲ್ಮಾನರು ಅನಾದಿಕಾಲದಲ್ಲಿ ಹೊಕ್ಕು ಹೊರಟ ಹಾಳುಗುಡಿಯಲ್ಲ. ವಿಗ್ರಹ ಬೇಧನೆಗೆ ಘಜನಿ ಮಹಮ್ಮದನಾಗಲೀ ಅವನ

ಶಿಷ್ಯರೇ ಆಗಲಿ ಬೇಕಾಗಿಲ್ಲ. ಅರಸಿಕರಾದ ನಮ್ಮ ಜನರೂ ಅಂಥ ಕೆಲಸ ಮಾಡಬಲ್ಲರು—ಎಂಬುದಕ್ಕೆ ಇಲ್ಲಿನ ಕೆಲವೊಂದು ಮುರುಕು ಕೆತ್ತನೆಗಳೇ ಸಾಕ್ಷಿ. ಇವುಗಳನ್ನು ಕಂಡಾಗ, ನನಗೆ ಹಳೆಬೀಡು ಬೇಲೂರುಗಳಲ್ಲಿಯೂ ಹಾಗಿರುವ ನೆನಪಾಯಿತು. ಅಲ್ಲಿಯೂ ಹೊರಗಿನ ಗೋಡೆಗಳಲ್ಲಿ ನೂರಾರು ಪ್ರತಿಮೆಗಳಿವೆ. ಎಷ್ಟೋ ಪ್ರತಿಮೆಗಳ ಕೈಕಾಲುಗಳು ಮುರಿದುಹೋಗಿವೆ. ಕೆಲವೊಂದು ಗೊಂಬೆಗಳ ಮೇಲೆ ಹಚ್ಚ ಹೊಸತಾಗಿ ಗೀರು, ಬಿರುಕುಗಳನ್ನು ಮೂಡಿದ್ದನ್ನು ಕಂಡಿದ್ದೇನೆ. ಸಂಸ್ಕೃತಿಹೀನರಾದ ನಮ್ಮ ಜನಗಳಿಂದಲೇ ಆ ಕೆಲಸವಾದದ್ದು. ದೇವಾಲಯವೆಂಬ ಭಕ್ತಿಸಹ ಜನರಕೈಯನ್ನು ನೀಚ ಕೆಲಸಗಳಿಂದ ತಡೆ ಹಿಡಿಯುವುದಿಲ್ಲ. ಅದನ್ನು ನೆನೆಯುವಾಗ ತ್ಯಾಗ ರಾಜರು "ಗಾನವಿಹೀನನಿಗೆ ಮೋಕ್ಷವೆಲ್ಲಿಯದು?" ಎಂದ ಮಾತು ನೆನಪಿಗೆ ಬರುತ್ತದೆ. ಸೌಂದರ್ಯವನ್ನು ಸವಿಯಲಾರದ ಶುಂಠ ಸ್ವರ್ಗಕ್ಕೆ ತಕ್ಕವ ನಲ್ಲ! ಅವರಿ ಇಂಥ ಜನ, ತಾವು ಆಸ್ವಾದಿಸುವುದಿಲ್ಲ, ಮಾತ್ರವಲ್ಲ, ಸುಂದರ ವಸ್ತುಗಳ ನೋಟ ಸಹಿಸಲಾರದೆ–ಅವನ್ನು ಭಂಗಗೊಳಿಸುತ್ತಾರಲ್ಲ ಎಂಬು ದನ್ನು ನೋಡಿದರೆ, ಅಂಥವರ ಸಲುವಾಗಿಯಾದರೂ ಒಂದು ನರಕ ಇದ್ದೇ ಇರಬೇಕು ಅನಿಸುತ್ತದೆ.

ಬೆಂಗಾಡಿನಿಂದ ಈ ಅಮರೋದ್ಯಾನಕ್ಕೆ ಬಂದ ನಾವು ನಮ್ಮ ಕೈಗಡಿ ಯಾರ ನೋಡಿದೆವು; ಸ್ವಪ್ನ ಭಂಗಿತರಾದೆವು. ನಿಜ—ಅಲ್ಲಿಯೇ ಒಂದು ದಿನ ನಿಲ್ಲಬಹುದಿತ್ತು. ನಮ್ಮನ್ನು ಹೊರಡಲು ಬಲವಂತ ಪಡಿಸುವವರೂ ಯಾರಿಲ್ಲ. ಗುಡಿಯ ದರವಾನನಿಗೆ ಇನ್ನೊಂದು ರೂಪಾಯಿ ಹೆಚ್ಚಿಗೆ ಕೊಟ್ಟರೆ ಇನ್ನೂ ಒಂದು ಗಳಿಗೆ ಕಾಲ, ಆತ ನಮಗಾಗಿ ಕಾದು ನಿಂತಾನು. ಆದರೆ ಪ್ರವಾಸಿಗಳಾದ ನಾವು ಅಲ್ಲಿಯೆ ಎಷ್ಟು ಕಾಲ ನಿಲ್ಲಬಹುದು? ಹಸಿವಾ ದಾಗಲೇ ಬಂದು ಉಣ್ಣುವ ಸವಿ, ಎಷ್ಟು ಸವಿಯಾಗಿದ್ದರೂ ಉಣ್ಣುತ್ತಲೇ ಇರುವ ದೀರ್ಘಭೋಜನಕ್ಕೆ ಬರಲಾರದು. ಕಂಡುದರ ವಿವರವನ್ನು ಮರೆ ಯಿಸಿ, ಚಿರವಾದ ಕಾಣುವ ಬಯಕೆಯನ್ನು ಕೆಣಕಿಸುವ ಅಬೂ ದೇವಾಲ ಯಗಳು, ಚಿತ್ರ, ಶಿಲ್ಪಕಲಾ ರಸಿಕನಿಗೆ ಯಾವಜ್ಜೀವ ಕರೆಗಳೆನ್ನಬೇಕು. ದೇವಾಲಯದಿಂದ ಹೊರಕ್ಕೆ ಬಂದೆವು. ಮೂರನೆಯ ದೇವಾಲಯವೊಂ ದನ್ನು ಅದರ ಹೊರಬಾಗಿಲೊಳಗಿಂದಲೇ ಇಣಿಕಿ ನೋಡಿ, ಹಾದಿ ಸಾಮು ಹೋದೆವು.

ಆಗ ಸಂಜೆಯಾಗುತ್ತಾ ಬಂದಿತ್ತು. ಮೋಡ ದಟ್ಟಣಿಸಿತ್ತು. ತಂಪಿನ ಹವೆ ತುಂಬಿತ್ತು. ಹಾದಿಯುದ್ದವನ್ನು ತುಳಿಯುತ್ತ, ತೇರು ಬಿಟ್ಟು ಮನೆಗೆ ಮರಳುವ ಮಕ್ಕಳಂತೆ, ನಡೆದು ಬಸ್ಸು ನಿಲ್ದಾಣಕ್ಕೆ ಬಂದೆವು. ತಂತಮ್ಮ ಊರಿಗೆ ಮರಳುವ ಯಾತ್ರಿಕರು ಬಸ್ಸಿನಲ್ಲಿ ತುಂಬಿಕೊಂಡಿದ್ದರು. ನಾವೂ ಹೊರಡುವ ತಯಾರಿ ನಡೆಸಿದೆವು. ನಮ್ಮ ಸಾಮಾನುಗಳನ್ನು ಮದ್ರಾಸ್ ಹೊಟೇಲಿನ ಮೆನನ್‌ನ ಅಂಗಡಿಯಲ್ಲಿ ಇರಿಸಿದ್ದೆವು. ಆತ ನಮಗಾಗಿ ಟಿಕೇಟುಗಳನ್ನು ಹೇಳಿ ಇರಿಸಿದ್ದ. ನಮ್ಮ ಮುಂದಿನ ಕೆಲಸವೆಂದರೆ, ಕೈಯಲ್ಲಿದ್ದ ಒಂದಾದರೂ ಹಕ್ಕಿಯನ್ನು ಕಾಯುವುದು. 'ಹೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದು ಹಕ್ಕಿ ಲೇಸೆ'ಂಬ ಇಂಗ್ಲಿಷ್ ಗಾದೆಯು ನೆನಪಾಗದೇ? ಈ ಚಹಾ ಸೀಮೆಯಲ್ಲಿ, ಕಾಫಿಕೊಡುವ ಮೆನನ್ ಇರುವಾಗ ಆ ಅವಕಾಶ ಬಿಡಬಾರದೆಂದೆನಿಸಿತು. ನಾನು ಥಾಲಿಗಟ್ಟಲೆ ಕಾಫಿ ಕುಡಿಯುವವನಾದರೆ, ನನ್ನ ಮಿತ್ರ ಶ್ರೀಪತಿ ಗೆಲನ್‌ಗಟ್ಟಲೆಯಿಂದ ಕುಡಿಯಬಲ್ಲವ. ಆದರೆ ಅವನದು ವಿಲಕ್ಷಣ ಅಭ್ಯಾಸ. ತಿನ್ನುವ ಪ್ರತಿ ತುತ್ತಿಗೂ ಮೊದಲು ಒಂದೊಂದು ಬಾಲ್ದಿ ನೀರನ್ನು ಕುಡಿಯಬೇಕು. ಆತ ಆತ್ಮಹತ್ಯ ಮಾಡಿಕೊಳ್ಳ ಬಹುದಾದಷ್ಟು ಆಳವುಳ್ಳ ಬಟ್ಟಲಿನಲ್ಲಿ, ಎರಡೆರಡು ಬಟ್ಟಲು ನೀರನ್ನು ತರಿಸಿಕೊಂಡು ಕುಡಿದ. ಅದರ ಮೇಲೆ ಒಂದು ಕಪ್ಪು ಕಾಫಿಯನ್ನು ಸುರುವಿದ. ಅದರ ಎಡೆಯಲ್ಲಿ ಒಂದೊಂದು ಮಸಾಲೆ ದೋಸೆಯೂ ತೇಲಿ ಹೋಯಿತು. "ಇನ್ನು ನನಗೆ ಊಟವಿಲ್ಲದಿದ್ದರೂ ಚಿಂತೆಯಿಲ್ಲ" ಎಂದು ಆತ ನುಡಿದಾಗಲೇ ನಾನು ನಕ್ಕೆ. ಆತ ಬಲು ಮಿತಾಹಾರಿ ಎಂದು ನನಗೆ ಗೊತ್ತು. ಬರಿಯ ಡಜನ್ ಚಪಾತಿ,ಅಚ್ಚೇರು ಅನ್ನದಿಂದಲೇ ಅವನಿಗೆ ಸಾಕು. ಅಂತು ಮೆನನ್‌ನ ಕೈಮೇಲೆ ಎರಡೂ ಮುಕ್ಕಾಲು ರೂಪಾಯಿ ದಕ್ಷಿಣೆಯನ್ನಿರಿಸಿ, ಅವನಿಗೆ ನಿಜವಾಗಿಯೂ ಹೃತ್‌ಪೂರ್ವಕ ವಂದನೆಗಳನ್ನು ಸಲ್ಲಿಸಿ 'ನಿನ್ನಂತಹರು, ಪ್ರತಿಯೊಂದು ಮರುಳುಗಾಡಿನಲ್ಲಿಯೂ ಕಾಣಸಿಗಲಿ' ಎಂದು ಹರಸಿ, ಆ ಊರನ್ನು ಬಿಟ್ಟೆವು. ಮೋಟರು ಕಂಪೆನಿಯವರು ಈಗಲೂ ನಮ್ಮನ್ನು ಮೂರನೆಯ ತರಗತಿಯ ಪ್ರಯಾಣಿಕರನ್ನಾಗಿಯೇ ಮಾಡಿದ್ದರು. ನಾನಾ ಬಗೆಯ ಜನಗಳೊಡನೆ, ಸಾಲದುದಕ್ಕೆ ಕಿರಿಚಾಡುವ ಆರೆಂಟು ಮಕ್ಕಳ ಸಂಸಾರದೊಡನೆ, ನಮ್ಮ ಬಂಡಿ ಬೆಟ್ಟ ಇಳಿಯಿತು. ನಾಲ್ಕಾರು ಮೈಲು ಮುಂದುವರಿದು ಒಂದು ಕಡೆ ಹೋಗಿ ನಿಂತರು. ನಾವೆಲ್ಲರೂ ಕೆಳಕ್ಕೆ

ಇಳಿದೆವು. ಬಂಡಿಯ ಬಳಿಗೆ ಯಾರು ಬಂದರೆಂದು ಬಲ್ಲಿರಾ? ನಮ್ಮ ಹಿರಿಯ ಪಿತೃಗಳ ತಂಡವೇ ಬಂದಿತು. ಉದ್ದಬಾಲದ ಕರಿ ಮುಸುಡಿನ ಮುಸುವಗಳ ಹಿಂಡೇ ಹಿಂಡು! ಆ ಮುಸುವಗಳು ಪ್ರಯಾಣಿಕರನ್ನು ಬೇಡಿ, ಕಾಡಿ, ಅವರಿಂದ ತಿಂಡಿ ಇಸಕೊಂಡು ಮಗ್ಗುಲ ಗುಡ್ಡವನ್ನೇರಿದುವು. ಅನಂತರವೇ ಬಂಡಿ ಹೊರಟದ್ದು. ಸಂಜೆಯ ಪಯಣ ಸುಖವಾಗಿತ್ತು. ಆಬೂ ನಗರ ಸೇರುತ್ತಲೇ ಬಿರುಗಾಳಿಗೆ ಪ್ರಾರಂಭ. ಅಲ್ಲಿನ ಮುನ್ಸಿಪಾಲಿಟಿಯ ಧೂಳೆಲ್ಲ ನಮ್ಮ ತಲೆಯ ಮೇಲೆ. ನಾವು ತ್ವರೆಯಿಂದ ಹೋಗಿ, ವೈಟಿಂಗ್ ರೂಮಿನಲ್ಲಿ ವಿರಮಿಸಿದೆವು. ಧೂಳು ತುಂಬಿದ ಗಾಳಿ ಹೊರಕ್ಕೆ ಬೀಳುತ್ತಲೇ ಇತ್ತು. ಥಾರ್ ಮರುಭೂಮಿಯಲ್ಲಿ ಬೇಸಗೆಯಲ್ಲಿ ಇದು ನಿತ್ಯ ನೋಟ. ಬೀಸುತ್ತಿದ್ದ ಗಾಳಿ ತಂಪಾಗಿರುವ ಬದಲು ಬಿಸಿಯಾಗಿತ್ತು. ಬಾನು ಮುಗಿಲಿನಿಂದ ಕವಿದಿತ್ತು. ಸುದೈವಕ್ಕೆ ಗುಡುಗಲಾರಂಭಿಸಿತು; ನಾಲ್ಕು ಹನಿ ಮಳೆಯೂ ಬೀಳಲಾರಂಭಿಸಿತು. ಪ್ರಕ್ಷುಬ್ಧವಾದ ಹವೆ ಒಮ್ಮೆಗೇ ಶೀತಲವಾಗಿ, ಸಹನೀಯವಾಯಿತು. ನಾವು ಆ ದಿನವೆಲ್ಲ ಸ್ನಾನ ಮಾಡಿರಲಿಲ್ಲ. ಆದರೇನು? ಹೊರಗೆ ಬೆವರಿನ ಸ್ನಾನವಾಗಿತ್ತು. ಒಳಗೆ ಕಾಫಿಯ ಅಭಿಷೇಕವಾಗಿತ್ತು. ವೈಟಿಂಗ್ ರೂಮಿನಲ್ಲಿ ಬಚ್ಚಲಿಗೆ ಹೋಗಿ ಮುಖ ತೊಳೆದುಕೊಂಡರೆ,ನಮ್ಮ ಸಂಚಿತ ಕರ್ಮವೆಲ್ಲ ಧಾರಾಕಾರವಾಗಿ ಮೈ- ಮುಖಗಳಿಂದ ಹರಿಯತೊಡಗಿತು. ಕೆಸರು ಗದ್ದೆಯನ್ನು ಉತ್ತು ಬಂದ ರೈತನ ಮೇಲೂ ಅಷ್ಟು ಕೊಳೆ ತುಂಬಿರಲಾರದು. ಅಷ್ಟೊಂದು ಧೂಳು, ಬೆವರಿಗೆ ಅಂಟಿ ನಮ್ಮ ಮುಖ ಮೈಗಳ ಮೇಲೆ ಗಾರೆಯಾಗಿ ಕಲೆತಿತ್ತು.

ಇನ್ನು ಮಂಚಗಳಲ್ಲಿ ವಿರಮಿಸೋಣ—ಎಂದು ನಾನು ಯೋಚನೆ ಮಾಡುತ್ತಿರುವಾಗಲೇ, ಚಂಚಲ ಜೀವಿಯಾದ ನನ್ನ ಮಿತ್ರ,ಕೊಠಡಿಯಿಂದ ಹೊರಬಿದ್ದ. ಹನಿ ಮಳೆಯಲ್ಲಿ—ರೈಲ್ವೆ ಪ್ಲಾಟ್‌ಫಾರ್ಮಿನಲ್ಲಿ ಶತಪಥ ಮಾಡತೊಡಗಿದ. ನನಗನಿಸಿತು—ಶ್ರೀಪತಿಯನ್ನು ಅವನ ಭೀಷ್ಮ ಪ್ರತಿಜ್ಞೆ ಕಾಡುತ್ತಿರಬೇಕೆಂದು. 'ಇನ್ನು ಊಟ ಬೇಡ' ಎಂದಿದ್ದನಲ್ಲ ಆ ಸಂಜೆ! ಆ ಪ್ರತಿಜ್ಞೆಯನ್ನು ಕಾಯುವ ಕಷ್ಟ ಅವನದ್ದು! ಪಾಪದ ಪ್ರಾಣಿಯ ಗೋಳನ್ನು ನೋಡಲಾರದೆ, ಅಲ್ಲಿನ ರೆಸ್ಟೋರಂಟಿಗೆ ಹೋದೆ. ಅಲ್ಲಿ ಆಹಾರದ ಸೌಕರ್ಯ ಏನಿದೆ—ಎಂಬುದನ್ನು ವಿಚಾರಿಸಿಕೊಂಡು ಬಂದೆ. ಅಲ್ಲಿನ ಊಟದ ರುಚಿ ನೋಡುವ ಧೈರ್ಯ ನನಗಿಲ್ಲ. ಆದುದರಿಂದ ನನಗಾಗಿ ಒಂದಿಷ್ಟು ಹಾಲು

ಮತ್ತು ಬ್ರೆಡ್ಡು ತರಿಸಿಕೊಂಡೆ. ನನ್ನ ಮಿತ್ರನಿಗಾಗಿ ಊಟ ಹೇಳಿದೆ. ಆತ ಉದಾಸೀನನಾಗಿಯೇ ಊಟಕ್ಕೆ ಕುಳಿತ. ಸರಿ—ಚಪಾತಿ ಸಂಹಾರಕ್ಕೆ ತೊಡಗಿದ. ಏನೇನೋ ಗುಜರಾತಿ ಪದಾರ್ಥಗಳು ಬಂದುವು. ಬೇಕೋ ಬೇಡವೋ ಎಂಬ ಅನುಮಾನದಿಂದಲೇ ಅವುಗಳನ್ನೆಲ್ಲ ಮುಗಿಸಿ, ಸಾಕಷ್ಟು ರೊಟ್ಟಿಗಳ ಮೇಲೆ ಅನ್ನ—ಮೊಸರುಗಳನ್ನು ಹಾಕಿಸಿಕೊಂಡು, ನಿಧಾನವಾಗಿ ಆತ್ಮತೃಪ್ತಿಯನ್ನು ವ್ಯಕ್ತಪಡಿಸುತ್ತ ಎದ್ದುನಿಂತ. ಇನ್ನು ಬೆಳಗಿನ ತನಕ ಆತ ಉಪವಾಸವಿರಬಹುದೆಂಬ ಧೈರ್ಯ ನನಗಾಯಿತು. ನಾವು ಕೊಠಡಿಗೆ ಮರಳಿದೆವು. ಅಜ್ಮೀರಕ್ಕೆ ಹೋಗುವ ರೈಲು ಹನ್ನೊಂದು ಘಂಟೆ ರಾತ್ರಿಗೆ ಬರಬೇಕು. ಸಮಯ ವ್ಯರ್ಥಮಾಡಬಾರದೆಂದು ಇಬ್ಬರೂ ಮಲಗಿಕೊಂಡೆವು. ಬಂಡಿ ಬರುವ ವೇಳೆಗೆ,ನಾನು ನನ್ನ ಗೆಳೆಯನನ್ನು ಎಚ್ಚರಿಸಿದೆ. ಎಚ್ಚರಿಸುವ ಈ ಕೆಲಸ ಸುಲಭವಾಗಲಿಲ್ಲ. ನಿದ್ರೆ ಅವನ ಮಾಂಸಖಂಡದೊಳಗಿನಿಂದ ಹಾಯ್ದು ಎಲುಬಿಗೇನೇ ಅಂಟಿತ್ತು. ಬೆರಳಿನಿಂದ ಅವನನ್ನು ಚುಚ್ಚಿ, ತಿವಿದು, ಅವನನ್ನು ಎಚ್ಚರಿಸುವುದರೊಳಗಾಗಿ ಬಂದ ಬಂಡಿಯು ಹೊರಡದಿದ್ದುದೇ ಆಶ್ಚರ್ಯ!

ಸ್ಪೆಶಲ್ ಮತ್ತು ಆರ್ಡಿನರಿ ಎರಡು ತರಗತಿಯ ರೈಲು ಡಬ್ಬಿಗಳೂ ಜನರಿಂದ ತುಂಬಿದ್ದುವು. ಆದರೆ ರೈಲು ನೌಕರರ ಕೃಪೆಯಿಂದ, ದೂರ ಪ್ರಯಾಣದ ಡಬ್ಬಿಯಲ್ಲಿ ನಮಗೆ ಮಲಗಲಿಕ್ಕೆ ಇಂಬು ದೊರಕಿತು. ಹೋಗಿ ಮಲಗಿಕೊಂಡೆವು. ಬೆಳಗಾಗುವಾಗ ಅಜ್ಮೀರವನ್ನು ಸೇರಿದೆವು. ಅಜ್ಮೀರದ ಊರು ಹಿಂದೀ ಹಾಸ್ಯದ ಮಾತೊಂದನ್ನು ನೆನಪಿಗೆ ತಂದಿತು. ಒಬ್ಬ ಸೇವಕ ಇನ್ನೊಬ್ಬನೊಡನೆ ತಮ್ಮ ಶೇಠರು ಅಜ್ಮೀರಕ್ಕೆ ಹೋದ ಸುದ್ದಿ ಹೇಳಿದನಂತೆ. "ಸೇಟ್ ಅಜ್ಮೇರ್ ಗಯೇ" ಎಂಬುದಕ್ಕೆ ಆತ "ಸೇಟ್ ಆಜ್ ಮರ್ಗಯೇ"—ಎಂದು ಅರ್ಥಮಾಡಿಕೊಂಡು ಅತ್ತನಂತೆ! ಆದರೆ ನಾವು ಖಂಡಿತವಾಗಿಯೂ ಆ ಬೆಳಗ್ಗೆ ಸಾಯದೆಯೆ ಸಜೀವರಾಗಿ ಅಜ್ಮೀರವನ್ನು ಸೇರಿದೆವು.

೨. ಅಜ್ಮೀರ, ಪುಷ್ಕರಗಳಲ್ಲಿ

ನಮ್ಮ ಪಾಲಿಗೆ ಪ್ರಸನ್ನವಾದ ಹವೆ ದೊರಕಿತು. ರೈಲಿನಿಂದಿಳಿದು ಟಾಂಗವೊಂದನ್ನೇರಿ, ರೈಲ್ವೆ ಕಾಲನಿಯ ಕಡೆಗೆ ಹೊರಟೆವು. ನಾವು ಹೋಗ ಬೇಕಾಗಿದ್ದುದು–ಮಿತ್ರರಾದ 'ಕೊಪ್ಪರ'–ಎಂಬವರಲ್ಲಿಗೆ. ಅವರು ಕನ್ನಡಿ ಗರು. ಸದ್ಯ ರೈಲ್ವೆ ನೌಕರಿಯಲ್ಲಿದ್ದು, ಅಜ್ಮೀರದಲ್ಲಿಯೆ ವಾಸವಾಗಿದ್ದಾರೆ. ಅಜ್ಮೀರ— ಬಿ. ಬಿ. ಸಿ. ಐ. ರೈಲ್ವೆ ಕಾಮಗಾರಿಗಳಿರುವ ಊರು. ಅಲ್ಲಿನ ರೈಲ್ವೆ ಕಾಲನಿ ಎಂದರೆ ಬಹಳ ವಿಶಾಲವಾದುದು. ಬೆಳಿಗಿನ ಹೊತ್ತಿಗೆ ಕಾಲನಿಯಲ್ಲಿ ಜನಸಂಚಾರ ಕಡಿಮೆ. ನಮಗೆ ಬೇಕಾದ ಮನೆ ಎಲ್ಲಿದೆ ಎಂದು ಕೇಳುವುದಕ್ಕೂ ತುಂಬ ಪ್ರಯಾಸ. ಒಬ್ಬಿಬ್ಬರನ್ನು ಕೇಳಿ, ಬಂದು ಗೇಟಿನ ಎದುರಿಗೆ ಹೋಗಿ ನಿಂತು ನೋಡಿದೆವು. ಗೇಟಿನ ಎದುರಿನ ಬಿಲ್ಲೆ ಕನ್ನಡದ 'ಕೊಪ್ಪರ'ರ ಬದಲು ವಿದೇಶೀಯ 'ಕೂಪರ'ರ ಹೆಸರಿನದಾಗಿತ್ತು. ಅಲ್ಲಿಂದ ಬಳಸಿ, ಕೇಳಿಕೊಂಡು ಕೊಪ್ಪರರ ಮನೆಗೆ ಹೋದೆವು. ನಾವು ಹೋದ ದಿನ ಸಂಜೆ ಕೊಪ್ಪರರ ನಾಮಕರಣ ಅವರ ಗೇಟಿಗೆ ಬಿದ್ದಿತಷ್ಟೆ. ವಿಶಾಲವಾದ ಹಿತ್ತಿಲು, ಸಾಕಷ್ಟು ದೊಡ್ಡದಾದ ಮನೆ, ಹಿಂದುಗಡೆ ತುಸು ದೂರದಲ್ಲಿಯೇ ಎತ್ತರವಾದ ಬೆಟ್ಟದ ಸಾಲು, ತಂಪಾದ ಹವೆ – ಎಲ್ಲವೂ ಕೂಡಿ ನಮ್ಮನ್ನು ಆಕರ್ಷಿಸಿದುವು. ಮನೆಗೆ ಹೋಗಿ ಅನುಮಾನದಿಂದಲೇ ಕದ ತಟ್ಟಿದೆವು. ಶ್ರೀಮತಿ ಕೊಪ್ಪರರು ಬಾಗಿಲು ತೆರೆದ ಮೇಲೆ, ಆ ದಿನದ ರೊಟ್ಟಿಯು ಭದ್ರ ವಾಯಿತೆಂದೆಣಿಸಿಕೊಂಡೆವು. ಆ ದಿನ ಸಂಜೆ ಬರುತ್ತೇವೆಂದ ನಾವು ಮುಂ ಜಾನೆಯೇ ಬಂದು ಅವರನ್ನು ಬೆರಗುಗೊಳಿಸಿದೆವು. ನಮ್ಮ ಗೆಳೆಯರ ಪರಿ ಚಯ ನಿಮಗೂ ಮಾಡಿಸಿಕೊಡದಿದ್ದರೆ ತಪ್ಪಾದೀತು. ಮಿತ್ರರಾದ ಕೊಪ್ಪ ರರು ಹೇಗೆ ಆ ಹೆಸರು ಗಳಿಸಿದರೋ ನನಗಂತೂ ತಿಳಿಯದು. ಅವರ ಬಣ್ಣ ತಾಮ್ರದ್ದಲ್ಲ; ತುಸು ಕಂದು ಬಣ್ಣ. ತಾಮ್ರಧ್ವಜನಂತೆ ನೀಳವಾದ ಶರೀರ. ನಡೆನುಡಿಯಲ್ಲಿ ಚುರುಕು; ಮಾತಿನಲ್ಲಿ ಸರಳತೆ, ಗೆಳೆಯರಲ್ಲಿ ಆತ್ಮೀಯ ಭಾವಗಳು ಆಡಂಬರವಿಲ್ಲದೆ ಪ್ರಕಟವಾಗುವ ಶೀಲ ಅವರದು. ರಾತ್ರಿಯ ಪಾಯಿಜಾಮಾ ಹಾಕಿಕೊಂಡಾಗ ಅವರು ಇನ್ನೂ ಒಂದಡಿ ಜಾಸ್ತಿ ಎತ್ತರ ವಾಗಿ ಕಾಣಿಸುತ್ತಾರೆ. ಈ ಉದ್ದವಾದ ಮುಂಡಿಯನ್ನು ನೋಡಿದರೆ, ನನಗೆ

ಏಕೋ ಸಂಕೋಚ. ಅವರು ಕುಳಿತಿದ್ದರೇನೇ ನೆಮ್ಮದಿ. ಇಲ್ಲದೆ ಹೋದರೆ–ಗಗನ ಚುಂಬಿಗಳಾದ ಅವರ ದೃಷ್ಟಿ, ನನ್ನ ತಲೆಯ ಮೇಲೆ ಎರಗುತ್ತದೆ–ಹೊರತು, ಕಣ್ಣಿಗೆ ಕಣ್ಣು ತಾಗುವ ನೋಟ ಹುಟ್ಟುವುದಿಲ್ಲ. ಶ್ರೀಮತಿ ಕೊಪ್ಪರರವರು ಹದನಾದ (ಅಂದರೆ ನಮ್ಮಂತಹ ಕುಳ್ಳರ ಕಣ್ಣಿಗೆ) ಶರೀರವುಳ್ಳವರು. ಮೈ ಬಣ್ಣ ಎಣ್ಣೆಗಪ್ಪು, ಚುರುಕಿನ ನಡಿಗೆ, ಸುಲಕ್ಷಣವಾದ ಮುಖ. ಅದೆಲ್ಲ ಸರಿಯೆ. ಮನೆಗೆ ನಾನು ಮುಖ ಹಾಕಿದೊಡನೆಯೇ "ಮನೆಯವರನ್ನು ಕರೆತರಲಿಲ್ಲವೇ?" ಎಂದು ಅವರು ಕೇಳಬೇಕೇ? "ಹೂಂ, ಹೋಗಲಿ. ಮುಂದಿನ ವರುಷ ಟಪ್ಪಾಲಿನಲ್ಲಿ ಬರುತ್ತಾರೆ" ಎಂದೆ ನಾನು. ನಾವು ಹೋದೊಡನೆಯೇ ಚಹಾ, ಉಪ್ಪಿಟ್ಟುಗಳು ಸಿದ್ಧವಾದುವು. ಅದನ್ನು ಅರಗಿಸುವ ಗಳಿಗೆಯಲ್ಲೇ, ಅವರ ಮೂವರು ಮಕ್ಕಳು ಬೆಳಗಾಯಿತೆಂದು ಕೇಳಿ,ಎಚ್ಚರಗೊಂಡು, ನಮ್ಮನ್ನು ಕೂಡಿದರು. ನಾವು ಇದ್ದ ಎರಡು ದಿವಸ ಕಾಲ ಬಲು ಕಾಲದ ಗೆಳೆಯರಂತೆ ಅಲ್ಲಿ ಸಮಯವನ್ನು ಕಳೆದೆವು. ಹವೆ ಹಾಗೆಯೇ ಉಳಿದರೆ, ಬಿಟ್ಟಿ ಊಟ, ಉಪಚಾರ ಮಾಡುವವರಿದ್ದರೆ, ನನ್ನ ಕೈ ನೋಡಿ ಯಾರಾದರೂ '೨೦೦ ವರ್ಷ ನೀನು ಬದುಕುತ್ತೀಯಾ' ಎಂದು ಧೈರ್ಯ ಕೊಟ್ಟರೆ, ಅಜ್ಮೀರದಲ್ಲಿ ಒಂದು ತಿಂಗಳಾದರೂ ಇರಬೇಕೆಂಬ ಆಸೆ ನನಗೆ. ಮೊದಲಿನ ಎರಡು ಸಂಗತಿಗಳಲ್ಲಿ ನನಗೆ ವಿಶ್ವಾಸವಿದೆ. ಮೂರನೆಯ ವಿಚಾರದಲ್ಲಿ ಬ್ರಹ್ಮನನ್ನು ಕೇಳುವುದಕ್ಕೂ ಧೈರ್ಯವಿಲ್ಲ. ನನ್ನಂತೆಯೇ ಎಲ್ಲರೂ ಮಾಡಿಬಿಟ್ಟರೆ ರೇಶನ್ ಕಾರ್ಡಿನ ಅಕ್ಕಿ ೮ ಔನ್ಸುಗಳಿಂದ ಒಂದು ಔನ್ಸಿಗೆ ಇಳಿದರೆ ಏನು ಗತಿ!

ಮೊದಲ ದಿನ ಬೆಳಿಗ್ಗೆ ಸ್ನಾನ, (ಧ್ಯಾನ,ತಪಸ್ಸು ಮೊದಲಾದುವನ್ನು) ಮುಗಿಸಿ ಗೆಳೆಯರ ಜತೆಯಲ್ಲಿ ಅವರ ಅಟ್ಟವನ್ನು ಏರಿದೆವು. ದೂರದಲ್ಲಿ ವಿಸ್ತಾರವಾದ ಬೆಟ್ಟದ ಸಾಲು ಕಾಣಿಸುತಿತ್ತು. ಅದರ ಮೈಗೆ ಚಾಚಿಕೊಂಡು ಎರಡು ಮೂರು ಮೈಲಿನಷ್ಟು ಉದ್ದಕ್ಕೆ, ತುಂಬ ಜನವಸತಿಯುಳ್ಳ ಅಜ್ಮೀರ ಪಟ್ಟಣದ ಭವ್ಯ ನೋಟ ಕಾಣುತಿತ್ತು. ಈ ನಗರ ನಮ್ಮ ಅನೇಕ ಇತರ ಪಟ್ಟಣಗಳಂತೆ ದೂರದಿಂದ ನೋಡುವುದಕ್ಕೇನೆ ಚಂದ. ರೈಲ್ವೆ ಕಾಲನಿಯಲ್ಲಿ–ದೊಡ್ಡ ದೊಡ್ಡ ಹಿತ್ತಿಲು ಮನೆಗಳಲ್ಲಿ ವಾಸಿಸುವವರಿಗೆ, ಆ ಸುಖ ತಿಳಿಯಲಾರದು. ಪೇಟೆಗೆ ಹೋದರೆ ತುಂಬಾ ಇಕ್ಕಟ್ಟಾದ ಜಾಗ; ಜನ ವಸತಿ ಹೆಚ್ಚು; ಕೊಳಚೆ ಇನ್ನಷ್ಟು ಹೆಚ್ಚು. ಸೆಕೆಗಾಲ ಬಂದರಂತೂ ಹೇಳಿ

ತೀರದ ಗೋಳು. ನಮ್ಮ ಕಾಲನಿಯ ಬಳಿಯ ಆವರಣ ಹಾಗಿರಲಿಲ್ಲ. ಡಾಮರು ರಸ್ತೆಗಳು, ವಿಶಾಲವಾದ ಹಿತ್ತಲು ಮನೆಗಳು, ಜನಸಂಚಾರವೂ ಕಡಿಮೆ.

ಆ ದಿನ ಬೆಳಿಗ್ಗೆ ಸಂಚಾರಕ್ಕೆ ಹೊರಟ ನಾವು, ಮೊದಲಿಗೆ ಹೋದದ್ದು ರಾಜಕುಮಾರರುಗಳ ಕಾಲೇಜನ್ನು ನೋಡಲಿಕ್ಕೆ. ಕಾಲೇಜು, ಭವ್ಯವಾದ ಕಟ್ಟಡ. ರಜಪುತ್ರಾನ, ಮೊಗಲ್, ಯುರೋಪುಗಳ ಶೈಲಿಗಳ ಮಿಶ್ರಣದ ವಾಸ್ತು ರಚನೆ. ಹಿಂದೆ ನಮ್ಮ ನಿರಂಕುಶ ರಾಜ, ಮಹಾರಾಜರುಗಳೆಲ್ಲರು ಶಿಕ್ಷಣ ಹೊಂದುತ್ತಿದ್ದ ಸ್ಥಳ ಅದು. ನಾವು ಹೋದಾಗಲೂ ಒಂದು ಹಾಸ್ಟೆಲಿನಲ್ಲಿ ನೂರಾರು ರಾಜರುಗಳ ಮರಿ, ಮೊಟ್ಟೆಗಳು ಕಾಣಸಿಕ್ಕಿದುವು. ಸುರುವಾಲು, ನಿಲುವಂಗಿ, ಬಣ್ಣದ ಪೇಟಾಗಳಿಂದ ಎಳೆಯರೂ, ಯುವಕರೂ ಅಲಂಕೃತರಾಗಿ ದಂತವೈದ್ಯನೊಬ್ಬನ ಬರವನ್ನು ಅಂಗಣದಲ್ಲಿ ನಿಂತು ಕಾಯುತ್ತಿದ್ದರು. ಸಾಲದುದಕ್ಕೆ—ಜೋಧಪುರದ ಮಹಾರಾಜರ ಬಂಧು ನಮಗೆ ಭೇಟಿಯಾದ. 'ಏಕೆ ಈ ಹುಡುಗರು ಇಲ್ಲಿ ಕಲೆತಿದ್ದಾರೆ?' ಎಂದು ಕೇಳಿದೆವು ಅವನನ್ನು. 'ದಂತ ಪರೀಕ್ಷೆಗಾಗಿ' ಎಂಬ ಉತ್ತರ ಬಂದಿತು. ವಲ್ಲಭಭಾಯಿ ಪಟೇಲರ ಕೃಪೆಯಲ್ಲದಿದ್ದರೆ ಆ ತರುಣನೊಡನೆ ನಾವು ಅಷ್ಟು ಸುಲಭದಲ್ಲಿ ಮಾತನಾಡಲಿಕ್ಕಿತ್ತೇ? ಹಾಗೆಯೇ ನೋಟ ನೋಡುತ್ತ ಅಲೆದಾಡಿದೆವು. ಕೆಲವೊಂದು ಮಹಾರಾಜರುಗಳು ಕಟ್ಟಿದ ಚೆನ್ನಾದ ಹಾಸ್ಟೆಲು ಕಟ್ಟಡಗಳನ್ನು ನೋಡುತ್ತ ಲೋಕಾಭಿರಾಮವಾಗಿ ವಿಹರಿಸಿದೆವು. ಸಂಚಾರದ ಕಥೆ ಹೇಳುವಾಗ ನಮ್ಮ ಶ್ರೀಪತಿಯ ವಿಚಾರ ಹೇಳಲೇ ಬೇಕು. ಈ ಮಹಾನುಭಾವ ಒಂದೊಂದು ಗಳಿಗೆಗೆ ಒಂದೊಂದು ವೇಷ ತೊಟ್ಟು ಹೊರಡುವವ. ರಾಜರುಗಳ ಕಾಲೇಜಿಗೆ ಹೋಗುವೆವೆಂದು ಆತಗೆ ಗೊತ್ತಿದ್ದರೆ, ಆತನೂ ಮಹಾರಾಜನ ಉಡಿಗೆಯಲ್ಲಿ ಬರುತ್ತಿದ್ದನೋ ಏನೋ. ಅದು ತಿಳಿಯದಿದ್ದುದರಿಂದ 'ಇಲ್ಲೀ ಅಲ್ಲವೇ?' ಎಂದು, ಅಡ್ಡ ಪಂಚೆಯನ್ನೂ ಶೇಶ್ಮೆ ಷರಾಯಿಯನ್ನು ತೊಟ್ಟು ಬಂದಿದ್ದ. ಆತಗೆ ಬರಿದೆ ನಿಂತಿರಲು ಇಷ್ಟವಿರುತ್ತಿರಲಿಲ್ಲ. ಎಷ್ಟು ತಿರುಗಿದರೂ ತೃಪ್ತಿಯೂ ಇಲ್ಲ; ಬೇಸರವೂ ಇಲ್ಲ. ನಡು ನಡುವೆ ನೀರಡಿಕೆಯಾಗಿ ಅವನ ಪಯಣ ನಿಲ್ಲಬೇಕೇ ಹೊರತು, ಬೇರೆ ಕಾರಣದಿಂದ ಅವನ ಸಂಚಾರ ಲಾಲಸೆಗೆ ಚ್ಯುತಿ ಇಲ್ಲ.

ಆ ದಿನ ಆದಿತ್ಯವಾರವಾಗಿತ್ತು. ನಮ್ಮ ಮಿತ್ರ ಕೊಪ್ಪರಿಗೂ ರಜೆ

ಯಿತ್ತು. ಊಟ ಮಾಡಿದೆವು. ಅರಿವಿದ್ದೋ ಇಲ್ಲದೋ ಇಬ್ಬರಿಬ್ಬರ ಗ್ರಾಸ ತುಂಬಿಸಿಕೊಂಡು ಮಲಗಿಕೊಂಡೆವು. ಆ ಸಂಜೆ ಪುಷ್ಕರ ಸರಸ್ಸನ್ನು ನೋಡ ಬೇಕೆಂದು ನಿರ್ಣಯಿಸಿದ್ದುದರಿಂದ,ಬಿಸಿಲಿನಲ್ಲೇ ಎದ್ದು ಹೊರಟೆವು. ಬೇರೆ ಇನ್ನಿಬ್ಬರು ಗೆಳೆಯರನ್ನು ಕೂಡಿಕೊಂಡು, ಒಳದಾರಿಯಿಂದ ರೈಲ್ವೆ ನಿಲ್ದಾ ಣಕ್ಕೆ ಹೋದೆವು. ಈ ಒಳದಾರಿಗಳೆಲ್ಲ ಕೊಳೆ ದಾರಿಗಳೇ. ಅಲ್ಲಿಗೆ ಹೋದ ಮೇಲೆ, ಹಾಗೂ ಹೀಗೂ ಒಂದು ಬಸ್ಸು ಹತ್ತಿ ಕುಳಿತರೆ, ಅದು ಹೊರಡು ವುದಕ್ಕೇ ಒಂದು ತಾಸು ಹಿಡಿಯಬೇಕೇ? ಎಂಟು ಮೈಲು ದೂರದಲ್ಲಿದೆ— ಪುಷ್ಕರ. ಅದು ದೊಡ್ಡ ಯಾತ್ರಾಸ್ಥಳ. ಅಲ್ಲೇನು ಸ್ನಾನಮಾಡುವ ಯೋ ಚನೆ ನಮಗೆ ಇದ್ದಿರಲಿಲ್ಲ. ಆದರೂ—ನೋಡಿದ ಪುಣ್ಯ ನಮಗೆ ಬರಲಿ— ಎಂದು ಹೋದೆವು. ಸುಮಾರು ನಾಲ್ಕು ಘಂಟೆಗೆ ಬಸ್ಸು ಹೊರಟಿತು. ಬೆಟ್ಟದ ದಾರಿಯನ್ನು ಸಾಗಿ ಪುಷ್ಕರಕ್ಕೆ ನಮ್ಮನ್ನು ಕೊಂಡೊಯ್ದಿತು. ಎಲ್ಲ ಕ್ಷೇತ್ರಗಳಂತೆ ಪುಷ್ಕರ ಕ್ಷೇತ್ರದಲ್ಲೂ ಹಿಂದುಸ್ತಾನದ ಯಾವತ್ತು ಪ್ರಾಂತ ಗಳ ಯಾತ್ರಿಗಳನ್ನು ಕಾಣಬಹುದು. ಅಲ್ಲಿನ ಮುಖ್ಯ ನೋಟವೆಂದರೆ ನಾಲ್ಕು ಸುತ್ತಲೂ ಬೆಟ್ಟಗಳಿಂದ ಆವೃತವಾದ ಸುಂದರ ಸರಸ್ಸು ಒಂದು. ಸುಮಾರು ಮುಕ್ಕಾಲು ಮೈಲಿನಷ್ಟು ಉದ್ದವಾಗಿದೆ. ಆ ಸರೋವರದ ಬಳಿಗೆ ಹೋಗಿ ಅದರ ಸೋಪಾನ ಘಟ್ಟಗಳನ್ನು ಜಿಗಿದು, ನಡೆದು, ದಾಟಿ, ದಣಿದು ಅಲ್ಲಲ್ಲಿ ಕುಳಿತೆವು. ಅದೊಂದು ಕಾಲದಲ್ಲಿ ಈ ಸರಸ್ಸಿನಲ್ಲಿ ತುಂಬ ಮೊಸಳೆಗಳಿದ್ದು ವಂತೆ. ಈಗ ಅವನ್ನೆಲ್ಲ ಎಲ್ಲಿಗೋ ಸಾಗಿಸಿಬಿಟ್ಟಿದ್ದಾರೆ. ಮಾರವಾಡಿಗಳ ದೇಶವದು; ಮೊಸಳೆ ಅವರಿಗೆ ಅಷ್ಟೊಂದು ಆಶ್ಚರ್ಯದ ಸಂಗತಿಯಲ್ಲ. ದೇಶದ ವ್ಯಾಪಾರೀ ಮೊಸಳೆಗಳು ಕಾಳಸಂತೆಯಲ್ಲಿ ನುಂಗುವ ಹಣವನ್ನು ನೆನೆದು, ಪುಷ್ಕರದ ಮೊಸಳೆಗಳಿಗೆ ನಾಚಿಗೆಯಾಗಿ, ತಾವೇ ಊರುಬಿಟ್ಟು ಹೋಗಿರಲೂ ಬಹುದು.

ಸರಸ್ಸಿನ ನಾಲ್ಕು ಸುತ್ತಲೂ ಸೋಪಾನ ರಾಜಿಗಳಿವೆ. ಅಲ್ಲಲ್ಲಿ ಸುಂ ದರವಾದ ಸೌಧ, ಮಂಟಪಗಳಿವೆ. ಆ ಮಂಟಪಗಳು ಅವುಗಳ ಹಿಂದಿನ ಬೆಟ್ಟದ ಸಾಲುಗಳು, ಬಾನಲ್ಲಿ ಕುಣಿವ ಮುಗಿಲುಗಳು—ನೀರಲ್ಲಿ ಪ್ರತಿಬಿಂಬಿ ಸುವಾಗ ಅಪೂರ್ವವಾದ ಚೆಲುವು ಕಾಣಿಸುತ್ತದೆ. ನೋಟ ನೋಡಿದ್ದಾ ಯಿತು. ಕೆರೆಯ ದಂಡೆಯಲ್ಲೇ ಕುಳಿತು ಫೊಟೋ ತೆಗೆಯುವುದಕ್ಕಾಗಿ ಬಿಸಿ ಲಿಗೆ ಕಾದು ಸಮಯವೂ ಹೋಯಿತು. ಎಡೆಯಲ್ಲಿ ಶೇಂಗಾ, ಹುರಿಕಡಲೆ

ಗಳ ಧ್ವಂಸದ ಕಾರ್ಯವೂ ಸಾಗಿತು. ಅನಂತರ ಅಲ್ಲೇ ಸಮೀಪದಲ್ಲಿರುವ "ಬ್ರಹ್ಮ" ದೇವಾಲಯಕ್ಕೆ ಹೋದೆವು. ಲೋಕವನ್ನು ಸೃಷ್ಟಿಸಿದವನೆನ್ನುವ ಬ್ರಹ್ಮನ ಹೆಸರಿನಲ್ಲಿ ಪೂಜೆ ಸಲ್ಲಿಸುವ ದೇವಾಲಯಗಳು ದೇಶದಲ್ಲಿರುವುದೇ ಬರಿಯ ಒಂದೋ ಎರಡೋ. ಅವುಗಳಲ್ಲಿ ಪುಷ್ಕರದ್ದೊಂದು. ದೇವಾಲಯ ಸಾಮಾನ್ಯವಾದುದು. ಅಲ್ಲಿರುವ ಬ್ರಹ್ಮನ ನಾಲ್ಮೊಗದ ವಿಗ್ರಹ ಇನ್ನೂ ಸಾಮಾನ್ಯವಾದುದು. ಯಾವ ಕಲೆಯೂ, ಕಳೆಯೂ ಆ ಮುಖಗಳಲ್ಲಿ ಕಾಣಿಸುತ್ತಿರಲಿಲ್ಲ. ಪ್ರಾಯಶಃ ಬ್ರಾಹ್ಮಣರು ತನಗೆ ಚೆನ್ನಾಗಿ ಪೂಜೆಮಾಡುವುದನ್ನು ಬಿಟ್ಟು ಯಾವಾವ ದೇವರಿಗೆ ಹರಕೆ ಸಲ್ಲಿಸುತ್ತಾರೆಂದು, ಆತ ಪೆಚ್ಚು ಮೋರೆ ಹಾಕಿ ಅಲ್ಲಿ ಕುಳಿತಿದ್ದಾನೆಂದು ಕಾಣುತ್ತದೆ. ನಿಜಕ್ಕೂ ಅವನ ಮುಸುಡು,ಪೆನ್ಶನು ಪಡೆದಿರುವ ಈಗಣ ರಾಜರುಗಳ ಮುಖಕ್ಕಿಂತ ನಿರಾಶಾದಾಯವಾಗಿ ಕಾಣಿಸುತಿತ್ತು.

ಈ ದೇವಾಲಯದ ಗರ್ಭಗುಡಿಯ ಮುಂದೆ Up-to-date ಸಾಧು ಒಬ್ಬ ಕುಳಿತಿದ್ದ. ಗಡ್ಡಮೀಸೆ ಚೆನ್ನಾಗಿ ತೀಡಿಕೊಂಡು, ತಲೆ ಚೆನ್ನಾಗಿ ಬಾಚಿಕೊಂಡು, ಗಂಭೀರವಾಗಿ ಮಂಡಿಯೂರಿ 'ಬಾ ನೊಳವೆ, ಬಾ ನೊಳವೆ' ಎಂದು ಭಕ್ತ ನೊಣಗಳನ್ನು ಕಾದು ಕುಳಿತಿದ್ದ. ನಾವೋ–ಶುದ್ಧ ಶುಂಠರು. ನಮಗೆ ಭಕ್ತಿಯ ತೃಷೆಯೂ ಇರಲಿಲ್ಲ. ಹೊಟ್ಟೆಯ ಹಸಿವೂ ಇರಲಿಲ್ಲ. ಉದಾಸೀನರಾಗಿ, ಅವನ ಮುಂದೆ ಅಡ್ಡಾಡುತ್ತ, ಗುಡಿಯ ಹಿಂಗಡೆ ಹೋಗಿ ನಿಂತೆವು. ಅಲ್ಲಿಂದ ಮರುಭೂಮಿ ತೊಡಗುತ್ತದೆ ಅನ್ನುತ್ತಾರೆ. ಬಹುದೂರದ ತನಕ ಉಸುಬಿನ ರಾಶಿ ಗುಡ್ಡಗುಡ್ಡವಾಗಿ ಬಿದ್ದಿತ್ತು. ಅಪೂರ್ವಕ್ಕೆ ಒಬ್ಬೊಬ್ಬ ಒಂಟೆಯ ಸವಾರ ಆ ದಾರಿಯಾಗಿ ಬರುತ್ತಿದ್ದ. ಅಲ್ಲಿ ನಮ್ಮ ಮನ ಒಲಿಸಿದುದು ಇನ್ನಾವುದೂ ಇಲ್ಲ. ಅಲ್ಲೆ ಬಳಿಯಲ್ಲಿ ಮರದ ತಂಪಿಗೆ ನಾಲ್ಕಾರು ಗಂಡು ನವಿಲುಗಳು ವಿರಮಿಸುತಿದ್ದವು. ಅವುಗಳು ನನ್ನ ಕೆಮರಕ್ಕೆ ದೂರವಾಗಿದ್ದುದನ್ನು ಕಂಡು ಹತ್ತಿರಕ್ಕೆ ಅವನ್ನು ಅಟ್ಟುತ್ತೇನೆಂದು ನಮ್ಮ ಶ್ರೀಪತಿ ಮೆಲ್ಲನೆ ಕೆಳಕ್ಕಿಳಿದ. ಏನು ಕಂಡಿತೋ ಅವಕ್ಕೆ! ಅವು ಅಲ್ಲಿಂದ ಧಾವಿಸಿಯೇ ಬಿಟ್ಟವು. ನಾಯನ್ನು ನೋಡಿ ಕೋಳಿಯಾದರೂ ಒಂದು ಕ್ಷಣ ನಿಂತೀತು. ಶ್ರೀಪತಿಯನ್ನು ನೋಡಿದ ನವಿಲುಗಳು ಅರೆ ಕ್ಷಣವೂ ನಿಲ್ಲಲಿಲ್ಲ. ಗಡಿಯಾರ ನೋಡಿದೆವು, ಸಂಜೆಯಾಗಿತ್ತು. ಬಸ್ಸು ಹಿಡಿಯುವುದಕ್ಕೆಂದು ಊರು ಕಳೆದು ತಿರುಗಿ ಬಸ್ಸಿನ ನಿಲ್ದಾಣಕ್ಕೆ ಬಂದೆವು.

ಅಜ್ಮೀರಕ್ಕೆ ಮರಳುವ ನೂರಿನ್ನೂರು ಜನಕ್ಕೆ, ಅಲ್ಲಿ ಬಂದಿದ್ದ ಬಸ್ಸುಗಳು—ಒಂದೋ ಎರಡೋ. 'ಇನ್ನೂ ಬಂದೀತು; ಇನ್ನೂ ಬಂದೀತು' ಎಂದು ಕಾದು ಕುಳಿತೆವು. ಸಮಯ ಹಾಳಾಗಬಾರದೆಂದು—ಬೋಗರಿ, ನೆಲಗಡಲೆ ಕೊಂಡುಕೊಂಡೆವು. ಅವನ್ನು ನಮ್ಮಷ್ಟಕ್ಕೆ ತಿನ್ನುವುದಕ್ಕುಂಟೇ? ಆ ಊರಿನ ಜನವಸತಿಗಿಂತಲೂ ಹೆಚ್ಚಿಗೆ ಜಮಾಯಿಸಿದವು—ಉದ್ದ ಬಾಲದ ಮುಸುವಗಳು. ಅವುಗಳ ಚೇಷ್ಟೆಗಳನ್ನೆಲ್ಲ ನೋಡುತ್ತ, ನಮ್ಮ ಬಾಲ್ಯ ಸ್ಮರಣೆಯನ್ನು ಮಾಡಿಕೊಳ್ಳುವಾಗ ಒಂದು ತಾಸೇ ಕಳೆಯಿತು. ಹೊತ್ತು ಕಂತಿತು. ಬೇರೆ ಬಸ್ಸುಗಳು ಬರುವ ಭರವಸೆ ಉಳಿಯಲಿಲ್ಲ. ಒಬ್ಬರ ಮುಖವನ್ನೊಬ್ಬರು ಕಂಡರು. 'ನಡೆದೇ ಹೋಗೋಣ' ಎಂದರು. ಆದರೆ ಕಾಲು ಮಾತ್ರ ಇದ್ದಲ್ಲೇ. ಕಡೆಗೂ ನಾವು ನಡೆದೇ ಹೋಗಬೇಕಾಯಿತು. ಒಂದು ಕಡೆ ದಣಿವು; ಇನ್ನೊಂದು ಕಡೆ ನೀರಡಿಕೆ. ಅದರಲ್ಲೂ ಬಸ್ಸು ದೊರೆಯಲಿಲ್ಲ—ಎಂದು ಯಾರದೋ ಮೇಲಿನ ಸೇಡು! ಹೋಗುವ ಹಾದಿಯೇನೋ ಚೆನ್ನಾಗಿತ್ತು. ಉದ್ದಕ್ಕೂ ಬೆಟ್ಟಗಳಿವೆ. ಸಾಲು ಮರಗಳಿವೆ. ರಜಪುತಾನದ ಆ ಬೆಟ್ಟಗಳ ಜಾತಿಯೇ ಬೇರೆ. ಹುಲ್ಲು, ಹಸುರಿಲ್ಲದ ಪೊದೆ, ಕಗ್ಗಾಡುಗಳಿಂದ ತುಂಬಿದ ಬೆಟ್ಟ ಸಂಜೆಗೆ ಮನೋಹರವಾಗಿಯೇ ಕಾಣಿಸುತ್ತದೆ. ನಡೆಯಲಾರದ ನಮಗೆ, ಆ ರಮಣೀಯ ಸೌಂದರ್ಯ ಆವೊತ್ತಿನ ಪಾಲಿಗೆ ಮರಣೀಯವಾಗಿಯೇ ಕಾಣಿಸಿತು. ಹೊರಡುವಾಗ ಮೊದಲು ಮೈಲಿಗೆ ಎಂಟು ಫರ್ಲಾಂಗುಗಳೆಂದು ಕಾಣಿಸಿದ ದೂರ, ನಾಲ್ಕನೆಯ ಮೈಲು ಸಾಗುತ್ತಲೇ ಮೈಲಿಗೆ ಹದಿನಾರು ಫರ್ಲಾಂಗು ಆಗಿ ಕಾಣಿಸತೊಡಗಿತು. ಬೆಟ್ಟದ ಏರು ಬರುತ್ತಲೇ ದಣಿವೂ ಹೆಚ್ಚಿತು. ಶ್ರೀಪತಿರಾಯನ ಹೊಸ ಮೆಟ್ಟುಗಳು ಅವನ ಕಾಲನ್ನು ಚೆನ್ನಾಗಿ ಕಚ್ಚಿದ್ದುವು. ಆತ ಅಹಿಂಸಾವಾದಿಯಂತೆ ತಿರುಗಿ ಅವನ್ನು ಕಚ್ಚಲೂ ಇಲ್ಲ, ಕೈಯಲ್ಲಿ ಹಿಡಿಯಲೂ ಇಲ್ಲ. ಬೆಟ್ಟ ಏರಿ ತುಸು ವಿಶ್ರಾಂತಿ ಪಡೆಯುವಾಗ ಅವನ ಪಾದಗಳೆಲ್ಲ ಬೆಂದು ಬಾಸುಂಡೆಗಳಾಗಿದ್ದುವು. ಇನ್ನೂ ನಾಲ್ಕು ಮೈಲು ದೂರ ನಡೆಯಬೇಕು, ನಾವೇ—ಎಂದು ತೋರುತ್ತಲೇ, ಪುಷ್ಕರವನ್ನು ಕ್ಷೇತ್ರವನ್ನಾಗಿ ಮಾಡಿದ ನಮ್ಮ ಹಿರಿಯರನ್ನು ಶಪಿಸಿ ಆ ಬೆಟ್ಟ ಇಳಿದೆವು. ಎದುರಿಗೆ ಬಸ್ಸೊಂದು ಕಾಣಿಸಿದ್ದೇ ತಡ; ಕೀಲಿ ಮುಗಿದ ಮಕ್ಕಳ ಆಟದ ರೈಲಿನಂತೆ, ನಮ್ಮೆಲ್ಲರ ಕಾಲುಗಳು ಸಂಪು ಹೂಡಿದವು. ಉದಾರಿಯಾದ ಆ ಮೋಟರಿನ ಡ್ರೈವರ ೨೦ ಜನರನ್ನು

ತುಂಬುವ ಆ ಬಸ್ಸಿನಲ್ಲಿ ಉಂಮಂದಿಯನ್ನು ತುಂಬಿಸಿಕೊಂಡು ನಮ್ಮನ್ನು ನಗರಕ್ಕೆ ಮುಟ್ಟಿಸಿದ. ಹಾಗೂ ಹೀಗೂ ೯ ಘಂಟೆಗೆ ನಮ್ಮ ಮನೆಯನ್ನು ಸೇರಿದೆವು. ಆ ಮೇಲೆ ಒಬ್ಬೊಬ್ಬರೇ ಅಂದುಕೊಂಡೆವು. "ಬಿಸಿಲು ಇಲ್ಲದೆ ಹೋಗಿದ್ದರೆ, ದಣಿವು ಆಗದೆ ಹೋಗಿದ್ದರೆ, ಬೆಟ್ಟ ನಡುವೆ ಬಾರದೆ ಹೋಗಿದ್ದರೆ, (ಪ್ರಾಯಶಃ ದೂರವೂ ಇಲ್ಲದಿದ್ದರೆ) ಇನ್ನೂ ನಾಲ್ಕು ಹರದಾರಿ ನಡೆಯ ಬಹುದಿತ್ತು"–ಎಂದು. ಶ್ರೀಮತಿ ಕೊಪ್ಪರರು ದಣಿದ ಈ ಬಡಪಾಯಿಗಳನ್ನು ಕಂಡು, ಆ ವೇಳೆಯಲ್ಲೂ ಚಾ ಮಾಡಿಕೊಟ್ಟರು. ತುಸು ಹೊತ್ತಿನಲ್ಲಿ ನಮಗೂ ನಮ್ಮ ಗೆಳೆಯರಿಗೂ ಔತಣವನ್ನೂ ಕೊಟ್ಟರು. ಊಟದ ಪೂರ್ವಾರ್ಧದಲ್ಲಷ್ಟೆ ನಮಗೆ ಎಚ್ಚರವಿತ್ತು. ಉಳಿದ ಅರ್ಧದ ವಿಚಾರದಲ್ಲಿ ಸಮಾಧಿ ಅವಸ್ಥೆಯೇ ಬಂದಿತು ಅನ್ನಬೇಕು. ರಾತ್ರಿಯೆಲ್ಲಾ ಘೋರ ನಿದ್ರೆ.

ಮರುದಿನ ಕೊಪ್ಪರರನ್ನು ಬಿಟ್ಟು, ನಾನೂ ಶ್ರೀಪತಿ ಇಬ್ಬರೇನೆ ನಗರ ಸೌಂದರ್ಯವನ್ನು ನೋಡಲು ಹೊರಟೆವು. ಅಜ್ಮೀರ ನಗರದಲ್ಲಿ ಹೆಸರಾದ ಜೈನ ದೇವಾಲಯವೊಂದಿದೆಯಂತೆ. ಅದಕ್ಕಿಂತಲೂ ಹೆಸರಾದ ಮುಸಲ್ಮಾನ 'ದರ್ಗ' ಇದೆ. ಮೊದಲು ನಾವು ಹೋದದ್ದು ದರ್ಗಕ್ಕೆ. ಕೇವಲ ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ. ಯಾರೋ ಒಬ್ಬ ತೋರಿಸಿದ ದಾರಿ ಹಿಡಿದು ಹೊರಟೆವು. ಅದೊಂದು ಗಲ್ಲಿ. ಆ ಗಲ್ಲಿಗೆ ಆಯವಿಲ್ಲ, ಆಕಾರವಿಲ್ಲ, ಅಂದವಿಲ್ಲ, ಶುಚಿ ಇಲ್ಲ. ಕೊನೆಯೂ ಇದ್ದಂತೆ ಕಾಣಿಸಲಿಲ್ಲ. ಸುತ್ತಿ, ಸುತ್ತಿ, ಬಳಸಿ, ಬಳಸಿ, ದರ್ಗದ ಮುಂದೆ ಹೋಗಿ ನಿಂತೆವು. ಅದರ ಬಾಗಿಲನ್ನು ದಾಟಿದೆವು. ಎದುರಿಗೇನೆ ಎರಡು ಮಹಾ ಒಲೆಗಳೂ ಅವುಗಳ ಮೇಲೆ ಇರಿಸಿದ್ದ ಭಾರಿ ಕಡಾಯಿಗಳೂ ಕಾಣಿಸಿದುವು. ಒಂದೊಂದು ಪಾತ್ರೆಯಲ್ಲಿ ಅಟ್ಟ ಅನ್ನ ನಾಲ್ಕಾರು ಸಾವಿರ ಮಂದಿಗೆ ಸಾಕಾದೀತು. ನಿಜಕ್ಕೂ ಉರುಸಿನ ವೇಳೆ ಅದರ ಹತ್ತಾರು ಪಾಲು ಜನ ಪರಿಷೆ ಸೇರುತ್ತಾರಂತೆ. ಅಲ್ಲಿಂದ ಮುಂದು ವರಿದರೆ,ವಿಶಾಲವಾದ ಅಂಗಣ, ನಡುವೆ ಯಾವುದೋ ಮುಸಲ್ಮಾನ ಸಂತನ ಸಮಾಧಿ ಕಾಣಸಿಗುತ್ತದೆ. ಅಲ್ಲಲ್ಲಿ ಮರದ ಕೆಳಗೆ, ಚಾವಡಿಯ ಮೇಲೆ, ವಿರಮಿಸುವ ಮುಸಲ್ಮಾನ ಕುಟುಂಬಗಳು. ಹಿಂದುಗಡೆ ಮಸೀದಿಯಿದೆ; ಚಂದ್ರಕಾಂತ ಶಿಲೆಯ ರಚನೆ. ಮುಂದಿನ ಸಮಾಧಿಯೂ ಚಂದ್ರಕಾಂತ ಶಿಲೆಯದೇ. ನೋಟಕ್ಕೆ ಮಾತ್ರ ತುಂಬಾ ಆಡಚಣೆ. ಬರಿಯ ಒಂದೆರಡು ವರ್ಷಗಳಿಗೆ ಹಿಂದೆ ನಾವು ಅಲ್ಲಿಗೆ ಬಂದಿದ್ದರೆ, ನಾನೂ ಶ್ರೀಪತಿಯೂ ಪುನಃ

ಊರಿಗೆ ಮರಳುತ್ತಿದ್ದೆವೋ ಇಲ್ಲವೋ—ಎಂಬ ಅರಿವು ನಮಗಲ್ಲಿ ಹುಟ್ಟುವದೇ ಹೋಗಲಿಲ್ಲ.

ದರ್ಗಾದಿಂದ ಹೊರಬಿದ್ದು, ನಮ್ಮ ಗೆಳೆಯರು ಹೊಗಳಿದ 'ಅಣ್ಣಾ ಸಾಗರ' ನೋಡಲು ಹೊರಟೆವು. ಮಳೆ ಬಿದ್ದಾಗ ಆ ವಿಶಾಲವಾದ ಕೆರೆಯು ತುಂಬುತ್ತದಂತೆ. ಸುತ್ತಲಿನ ಬೆಟ್ಟಗಳ ಎಡೆಯಲ್ಲಿ—ಆಗ ಅದಕ್ಕೊಂದು ರಮಣೀಯತೆ ಬರಲೇ ಬೇಕು. ನಾವು ಮಾಡಿದ ಪುಣ್ಯ ಕಡಿಮೆಯಾಗಿದ್ದುದರಿಂದಲೋ ಏನೋ, ಅದು 'ತವರ್ಮ್ಮ' ಸಾಗರವೂ ಆಗಿರಲಿಲ್ಲ. ಒಂದು ಹನಿ ನೀರಾದರೂ ಬೇಡವೇ? ಕೆರೆಯ ತಳವನ್ನು ಉತ್ತು, ಅಲ್ಲಲ್ಲಿ ಸ್ವಲ್ಪ ಕೃಷಿ ಏನೋ ಸಾಗಿತ್ತು. ಸಾಗರದ ಬದಲು ನಮಗೆ ಅಲ್ಲಿ ಕಾಣಸಿಕ್ಕಿದ್ದು ಕೆಸರು ತುಂಬಿದ ಬಟ್ಟ ಬಯಲು. ನೀರು ತುಂಬಿದ್ದರೆ, ಇದು ಸಾಗರವಾದರೆ—ಚೆನ್ನಾಗಿ ಕಾಣಿಸಲೇ ಬೇಕು—ಎಂದು ಒಪ್ಪಿಕೊಂಡು, ಅಲ್ಲಿಂದ ಹೊರಟೆವು.

ಮುಂದೆ ಹೋದೆವು—ಜೈನ ದೇವಾಲಯ ನೋಡಲಿಕ್ಕೆ. ಈ ಊರಿನ ದೇವಾಲಯವಿರುವುದು ಪೇಟೆಯ ಇಕ್ಕಟ್ಟಿನಲ್ಲಿ. ಅದರ ಬಾಹ್ಯ ವಾಸ್ತು ರೂಪ ಅಚ್ಚುಕಟ್ಟಾಗಿದೆ. ಅದು ಕೆಂಪು ಶಿಲೆಗಳ ರಚನೆ; ರಜಪುತಾನದ ಶೈಲಿಯದು. ಆದರೆ ದೂರದಲ್ಲಿ ನಿಂತು ಅದರ ಒಟ್ಟು ನೋಟವನ್ನು ಕಾಣಬಹುದಾದ ಸ್ಥಳವೇ ಸಿಗುವುದಿಲ್ಲ. ಮಂದಿರದ ಒಳಭಾಗವನ್ನು ಹೊಕ್ಕೆವು. ಆದರೆ ಜೈನೇತರರಿಗೆ ಒಳಗೆ ಪ್ರವೇಶವಿಲ್ಲವಂತೆ. ಹೀಗಾಗಿ, ಹಿಂಭಾಗದಿಂದ ಗುಡಿಯ ಅಟ್ಟವನ್ನೇರಿದೆವು. ಆ ಅಟ್ಟ ಜನರ ಮನ ಸೆಳೆಯುವ ಸ್ಥಳವಂತೆ. ನಾಲ್ಕು ಸುತ್ತಲೂ ಗಾಜಿನ ಬಾಗಿಲುಗಳಿವೆ. ಅವುಗಳಿಂದ ಒಳಕ್ಕೆ ನಾವು ಇಣಿಕಿ ನೋಡಬೇಕು. ಆಗ ಮಕ್ಕಳ ಆಟದ ಮನೆಯಂತೆ ಕಾಣುವ ಒಂದು ವಿಚಿತ್ರ ನೋಟವು ಕಾಣಸಿಗುತ್ತದೆ. ಪುರಾಣ ಕಾಲದ ಅಯೋಧ್ಯಾಪುರ, ಲಂಕಾಪುರಿ; ಕೋಟೆ ಕೊತ್ತಲ, ಜನಗಳು, ಅಶ್ವಾರೋಹಿಗಳು, ರಥಿಕರು—ಇವರ ಗೊಂಬೆಗಳನ್ನು ಹಿತ್ತಾಳಿ ಕಂಚುಗಳಿಂದ ಮಾಡಿ ಪ್ರದರ್ಶಿಸಿದ್ದಾರೆ. ಎಳೆಯ ಮಕ್ಕಳಿಗೆ ಅದು ಸಂತೋಷ ಕೊಡಬಹುದಷ್ಟೆ. ಕಲೆಯ ಚೆಲುವೇನೂ ಅಲ್ಲಿರಲಿಲ್ಲ. ಈ ಗಾಜಿನ ಕೊಠಡಿಯ ಒಳಗಡೆಯ ಗೋಡೆಗೆ, ಬಣ್ಣದ ಕಾಜುಗಳನ್ನೆಲ್ಲ ನಟ್ಟಿದ್ದಾರೆ. ಅದರಲ್ಲೂ ಚೆಲುವಿರಲಿಲ್ಲ. ಡಾಂಭಿಕತೆಯಷ್ಟೆ ಕಾಣುತ್ತದೆ. ಇವನ್ನೆಲ್ಲ ನೋಡಿಕೊಂಡು, ತಿರುಗಾಟದಿಂದ ದಣಿದು ನಾವು ಮನೆಗೆ ಮರಳಿದೆವು.

ಅಜ್ಮೇರದಲ್ಲಿ ನೋಡುವುದನ್ನೆಲ್ಲ ನೋಡಿಯಾಯಿತು–ಎಂಬುದರಿಂದ ಆ ಸಂಜೆ ತಿರುಗಿ ಪೇಟೆಯ ಕಡೆಗೆ ಹೋಗಲಿಲ್ಲ. ರೈಲ್ವೆ ಕಾಲನಿಯ ಸುತ್ತಲಿನ ಹಾದಿಯನ್ನು ಸುತ್ತಿದೆವು. ಅದು ಪ್ರಾತರ್ ವಿಹಾರಕ್ಕೆ ತೀರ ಸುಂದರವಾದ ಪ್ರದೇಶ. ಅನಂತರ ಕಳೆದ ಹೆಚ್ಚಿನ ಸಮಯವೆಲ್ಲ ಹರಟೆ ಮಾತುಕತೆಗಳಲ್ಲೇನೆ. ಮರುದಿನ ಬೆಳಿಗ್ಗೆ ನಮ್ಮ ಮುಂದಿನ ಪಯಣ. ಜಯಪುರಕ್ಕೆ ಹೋಗುವವರು ನಾವು. ಐದು ಘಂಟೆಗೇನೆ ಕೊಪ್ಪರ ದಂಪತಿಗಳು ಎದ್ದು, ಉಪಾಹಾರದಿಂದ ನಮ್ಮನ್ನು ಸತ್ಕರಿಸಿ ಬೀಳ್ಕೊಟ್ಟರು. ನಾವು ಅಜ್ಮೇರವನ್ನು ಬಿಡುವಾಗ ನಮ್ಮ ಮನದಲ್ಲಿ ಉಳಿದ ಮೂರು ಶಬ್ದಗಳು 'ರ'ಕಾರಾಂತವಾಗಿದ್ದುವು. ಆ ಊರಿನ ನೆಲಗಳಲ್ಲಿ ಕಾಣಿಸಿದ ಸುಂದರ 'ಮಯ್ಯೂರ' ದಣಿಸಿದರೂ ದಣಿವಿಗೆ ತಕ್ಕ ತೃಪ್ತಿ ಕೊಟ್ಟ 'ಪುಷ್ಕರ', ನಮ್ಮನ್ನು ಆದರ ಪ್ರೀತಿಗಳಿಂದ ಕಂಡ 'ಕೊಪ್ಪರ' ಇವೇ ಆ ಮೂರು.

೩. ಬೆಡಗಿನ ಜಯಪುರ

ಜಯಪುರ ನನ್ನ ಪಾಲಿಗೇನೂ ಹೊಸತಲ್ಲ. ಹದಿನೈದು ವರ್ಷಗಳ ಹಿಂದೊಮ್ಮೆ ಹೋಗಿದ್ದೆ. ಆಗ ತೀರ ಸಮೀಪದ ಅಂಬೇರವನ್ನು ನೋಡಿರಲಿಲ್ಲ. ಇನ್ನೊಮ್ಮೆ ನಾಲ್ಕು ವರ್ಷಗಳ ಹಿಂದೆ P. E. N. ಪರಿಷತ್ತಿಗೆ ಹೋಗಿದ್ದೆ. ಕಳೆದ ವರ್ಷ ಕಾಂಗ್ರೆಸ್ಸಿನ ಸಬಂಧದಲ್ಲಿ ಜರಗಿದ ಸರ್ವೋದಯ ಸಮ್ಮೇಳನಕ್ಕೆ ಹೋಗಬೇಕಿತ್ತು. ಮುಂಬಯಿಯ ತನಕ ಹೋಗಿ, ಅಲ್ಲಿಂದ ಮುಂದೆ ಟಿಕೇಟು ದೊರಕದೆ, ಮರಳಿ ಬಂದೆ. ಆ ಹಟ ಸಾಧಿಸುವುದಕ್ಕಾಗಿ ಮೂರನೆಯ ಬಾರಿ ಹೋದಂತಾಯಿತು–ಈಗ. ನಾನೂ ಶ್ರೀಪತಿಯೂ ರೈಲಿನಿಂದ ಇಳಿಯುವಾಗ, ಬೆಳಗಿನ ಹನ್ನೊಂದು ಘಂಟೆಯ ಬಿಸಿಲು ಬಡಿಯುತ್ತಿತ್ತು. ಆದರೂ ಹವೆ ಸಹನೀಯವಾಗಿತ್ತು. ನನ್ನ ಮಿತ್ರರಾದ ರೈಗಳು ನಿಲ್ದಾಣಕ್ಕೆಬಂದು ನಮಗಾಗಿ ಕಾದಿದ್ದರು. ಊರ ಹೊರಗಿನ ಅವರ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ಅವರಿರುವ ಕಾರ್ಖಾನೆಯ ಹೊರಗಡೆ ನಾಲ್ಕುಸುತ್ತಲೂ ಉಸುಬು ಹರಡಿದ್ದ ಮರುಭೂಮಿಯಲ್ಲಿ ಅವರ ಮನೆಯಿತ್ತು. ಅಲ್ಲಿ ಮಧ್ಯಾಹ್ನ ಸ್ನಾನಕ್ಕೆ ನೀರು ಕಾಯಿಸಬೇಕಾಗಿಲ್ಲ. ಉಸುಕಿನ ಕಾವಿನಿಂದ ನಲ್ಲಿಯ ನೀರು ಕಾದೇ ಬರುತ್ತಿತ್ತು. ನಾನೇನೋ ಬಿಸಿನೀರು ಸ್ನಾನಮಾಡುವವನು. ನನಗೆ ಆದದ್ದು ಶ್ರೀಪತಿಗೆ ಆಗದು. ಬಿಸಿನೀರು ಮಿಂದರೆ ಕೊಬ್ಬು ಕರಗುತ್ತದೆಂದು ಶ್ರೀಪತಿ ತಣ್ಣೀರು ಮೀಯುತಿದ್ದ. ಹೀಗಾಗಿ ಇದ್ದ ನೀರನ್ನು ಆರಿಸಿ, ಅವನಿಗೆ ತಣ್ಣೀರಿನ ಸ್ನಾನವಾಯಿತು. ನನಗಂತೂ ಬಿಸಿನೀರಿನ ಸ್ನಾನ. ಅಲ್ಲದೆ ನೋಡಿ–ನಾವು ಹೋಗಿ ಇಳಿದದ್ದು ಶುಭದಿನದಲ್ಲಿ. ಅಂದು ರಾಮನವಮಿಯಂತೆ. ಹೀಗಾಗಿ ಪಾಯಸದ ಊಟ ನಮಗೆ ಅನಾಯಾಸವಾಗಿ ದೊರಕಿತು. ಊಟಮಾಡಿ, ಒಂದೆರಡು ತಾಸು ಪರಂಧಾಮವನ್ನೈದಿದೆವು. ನಮ್ಮ ಮೊದಲ ಕಾರ್ಯಕ್ರಮವೆಂದರೆ, ಮರುದಿನಕ್ಕೆ ಡಿಲ್ಲಿಗೆ ಟಿಕೇಟ್ ರಿಸರ್ವ್ ಮಾಡುವುದು. ಅನಂತರ ಅಂಬೇರಕ್ಕೆ ಹೋಗುವುದು. ಊರ ಹೊರಗಿರುವ ನಮ್ಮ ಮಿತ್ರ ರೈಗಳಿಗೆ, ಅಂಬೇರಕ್ಕೂ ಜಯಪುರಕ್ಕೂ ನಡುವೆ ಸಿಟಿಬಸ್ ನಡೆಯುತಿತ್ತೆಂದು, ಗೊತ್ತೇ ಇರಲಿಲ್ಲ. ಹೀಗಾಗಿ ನಾವು ಟಾಂಗಾ ಗೊತ್ತುಮಾಡಿಕೊಂಡು, ನಗ

ರದ ಮಧ್ಯದಿಂದ ಹಾದು ಹೋದೆವು. ಜಯಪುರದ ಮುಖ್ಯ ಬೀದಿಗಳು ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟು ಮಾಡಿದಂಥವು. ಒಂದು ಶತಮಾನದ ಹಿಂದೆಯೇ ಆ ಬೀದಿಗಳು ನಿರ್ಮಾಣವಾಗಿದ್ದರೂ, ಬಲು ಅಗಲವಾದ ಬೀದಿಗಳವು. ನೇರಾದುವುಗಳು. ಬಹು ದೂರದಿಂದ ಕಾಣಿಸುವ ಅಂಗಡಿ–ಮನೆಗಳ ದೇಶೀಯ ವಾಸ್ತು ರಚನೆ ಚೆನ್ನಾಗಿ ಶೋಭಿಸುತ್ತದೆ. ಇಲ್ಲಿನ ಒಂದೊಂದು ಮನೆಯೂ ಒಂದೊಂದು ಶೈಲಿಯದೂ ಒಂದೊಂದೂ ದೇಶದ್ದೂ ಆಗಿ ಕಾಣಿಸುವುದಿಲ್ಲ. ಆದುದರಿಂದಲೇ ನನಗೆ ಅದರ ಮೇಲೆ ಮೋಹ. ಮೈಸೂರಿನ ಮಿರ್ಜಾ ಸಾಹೇಬರು ಅಲ್ಲಿಗೆ ದಿವಾನರಾಗಿ ಬಂದಾಗಲೇ ಅಂಗಡಿಗಳ ಮುಂದೆ ಬಿಸಿಲಿಗೆ ತೂಗುತಿದ್ದ ಗೋಣಿ ಚಪ್ಪರಗಳನ್ನೆಲ್ಲ ಕಿತ್ತು ತೆಗೆಯಿಸಿ, ಅವರಿಂದಲೇ ಮನೆಗೊಪ್ಪುವ ಕಲ್ಲಿನ ಮಂಟಪಗಳನ್ನು ಹಾಕಿಸಿದ್ದರು. ಹೀಗಾಗಿ ಬೀದಿಯ ಸೌಂದರ್ಯ ಇನ್ನಷ್ಟು ಹೆಚ್ಚಿತ್ತು. ಆದರೆ ಈಗ ನಿರಾಶ್ರಿತರುಗಳ ಹಿಂಡು, ದಾರಿಯ ಇಕ್ಕಡೆಗಳಲ್ಲೂ, ಅಂದಚಂದವಿಲ್ಲದ ಡಬ್ಬಿ ಅಂಗಡಿಗಳನ್ನು ಮಂಡಿಸ ತೊಡಗಿದುದರಿಂದ, ಈ ಸೊಬಗು ಎಷ್ಟೋ ಕೆಟ್ಟಿದೆ.

ಇಲ್ಲಿನ ಮುಖ್ಯ ಬೀದಿಗಳು ಸಂಧಿಸುವಲ್ಲಿ, ಸುಂದರವಾದ ಚೌಕಗಳಿವೆ. ಕೆಲವೊಂದು ಕಡೆ ಭವ್ಯವಾದ ಮಹಾದ್ವಾರಗಳಿವೆ. ಅಲ್ಲದೆ ಜಯಪುರ ಬಣ್ಣಗಾರರ ತವರೂರು. ಬಣ್ಣಹಾಕುವ ಕುಶಲಿಗರು ಆ ಊರಿನಲ್ಲಿ ತುಂಬಾ ಇದ್ದಾರೆ. ಬಣ್ಣದಲ್ಲಿ ಮೋಹವಿರುವ ಜನರೂ ಬಹಳ ಇದ್ದಾರೆ. ಗಿಡಮರಗಳಿಲ್ಲದ ಸ್ಥಳದಲ್ಲಿ ವಾಸಿಸುವ ಜನರಿಗೆ, ಕಣ್ಣಿನ ತಣಿವು ಹೇಗೆ ಬರಬೇಕು? ಹಾಗೆಂದೋ ಏನೋ–ಇಲ್ಲಿನ ಜನರು–ಮಾರ್ವಾಡಿ ಹೆಂಗಸರು, ಮುಸಲ್ಮಾನ ಹೆಂಗಸರು, ರಂಗುರಂಗಿನ ಲಂಗ, ಪಾಯಿಜಾಮಾ, ಸೀರೆ, ರವಕೆ, ಮೇಲುದೆ, ತೊಡುವ ಅಭ್ಯಾಸದವರು. ಅದರಲ್ಲೂ ಕೆಂಪು, ಕಿತ್ತಳೆ, ಹಳದಿ ಎಂದರೆ ಅವರಿಗೆ ಪ್ರಾಣ. ನಿತ್ಯವೂ ಹೋಳಿಯ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ. ಗಂಡಸರೂ ರಂಗುದಾಯರೆ. ಅವರ ಪಂಚೆ ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳದಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು. ಸುತ್ತು ಸುತ್ತಿನ ಅವರ ದೇಶೀಯ ಮುಂಡಾಸವನ್ನು ಚೆನ್ನಾಗಿ ಬಿಗಿದುಕೊಂಡಲ್ಲಿ ಬಲು ಗಂಭೀರವಾಗಿ ಕಾಣಿಸುತ್ತದೆ. ಜೋಧಪುರದ ಸುರುವಾಲು, ನಿಲು

ವಂಗಿ, ರಜಪೂತ ರುಮಾಲೆ-ಮೂರೂ ಸೇರಿ ಹಿಂದೀ ಗಂಡುಡುಗೆಗಳಲ್ಲೇ ಭವ್ಯವಾದ ಉಡುಗೆಯಾಗುತ್ತದೆಂದು ನನಗನಿಸುತ್ತದೆ. ಇಂಥ ಉಡುಗೆ ಉಡುವ ಜನವೃಂದದ ಎಡೆಯಲ್ಲಿ, ಈಗ ಸಿಂಧಿಯರೂ ಸೇರಿದ್ದಾರೆ. ಸಿಂಧೀ ಹೆಂಗಸರು ವರ್ಣಪ್ರಿಯರೇ. ಬಣ್ಣಬಣ್ಣದ ಸೆಟಿನ್ ಶರಾಯಿ, ಪಾಯಿಜಾಮ ತೊಟ್ಟು, ಮೇಲುದೆ ಹಾಕಿ, ಈ ಜನಗಳೊಡನೆ ಅಲೆದಾಡುವಾಗ ಅವರದ್ದೂ ಒಂದು ಶೋಭೆಯೇ. ಇಲ್ಲಿನ ಸ್ತ್ರೀಯರನ್ನು ಕಾಣುವಾಗ ಅವರ ಬೆಳ್ಳಗಿನ ಬಣ್ಣ,ಹೊಳಪಿನ ಕಣ್ಣುಗಳು-ತುಂಬಾ ಆಕರ್ಷಣೀಯವಾಗಿ ಕಾಣಿಸುತ್ತವೆ. ಆದರೆ ಮಾಡುವುದೇನು? ತಮ್ಮ ರೂಪಲಾವಣ್ಯವನ್ನು ೨೦, ೨೫ ಪ್ರಾಯದ ಮೇಲೆ ಉಳಿಸಿಕೊಳ್ಳುವ ಮನೋವೃತ್ತಿ ಅಲ್ಲಿನ ಸ್ತ್ರೀಯರಿಗಿಲ್ಲವೆಂದು ಕಾಣುತ್ತದೆ. ಇಂಥ ಬರಗಾಲದ ದಿನಗಳಲ್ಲೂ, ಸಕ್ಕರೆಯ ಅಭಾವದ ದಿನಗಳಲ್ಲೂ ಎಲ್ಲಿಲ್ಲದ ಸಕ್ಕರೆ ತುಪ್ಪಗಳ ತಿಂಡಿಯನ್ನು ತಿಂದು, ಹಿಪೊಪೊಟೇಮಸ್ ಆಕೃತಿ ತಾಳುತ್ತಾರಲ್ಲ! ಹಾಗಿರಲು ಅವರ ರೂಪಕ್ಕಾಗಿ ಮೋಹಿಸಿ ಮದುವೆಯಾಗುವವರ ಪಾಡೇನೋ—ಪರಮಾತ್ಮನೇ ಬಲ್ಲ. ರಜಪುತಾನದ ಕೀರ್ತಿಯನ್ನೆಲ್ಲ 'ಟಾಡ್ಸ್ ಎನಲ್ಸ್'ನಲ್ಲಿ ಬಹಳವಾಗಿ ಹೇಳಿದೆ. ಅವರ ಸ್ತ್ರೀಯರು ಪಾತಿವೃತ್ಯಕ್ಕಾಗಿ ಚಿತೆ ಏರಿದ ಕತೆ, ಗಂಡಸರು ಕಾಮಿನಿಯರಿಗಾಗಿ ಕಾದಾಡಿದ ಕತೆ, ಅರಸರು ದಾಯಾದಿ ಮತ್ಸರದಿಂದ ನಿತ್ಯ ಕಚ್ಚಾಡಿದ ಕತೆ—ಎಲ್ಲವೂ ವೀರ ವಿಕ್ರಮದ ಕತೆಗಳೇ. ಅವರ ಅತಿ ಶೌರ್ಯವನ್ನು ನೆನೆಯುವಾಗ, ಅದೇನೆ ಘೋರಿ ಮಹಮ್ಮದನನ್ನು ನಮ್ಮ ನಾಡಿಗೆ ಕರೆತಂದುದು ಎಂಬುದನ್ನು ಮಾತ್ರ, ನೆನೆದುಕೊಂಡರೆ ದುಃಖ ಬರುತ್ತದೆ.

ಈ ರಜಪುತಾನದ ಮರುಭೂಮಿಯಲ್ಲಿ—ಎಷ್ಟೊಂದು ಅರಸು ಕುಲಗಳಿವೆ. ರಾಜರುಗಳೆಷ್ಟು! ರಾಣಾರುಗಳೆಷ್ಟು! ಠಾಕೂರರೆಷ್ಟು! ಇವರನ್ನೆಲ್ಲ ಮೂಲೆ ಗುಂಪಾಗಿಸಿ ನಾಡನ್ನು ಒಂದುಗೂಡಿಸಿದ ವಲ್ಲಭಭಾಯಿ ಪಟೇಲರ ಶೌರ್ಯವನ್ನು ಭಾರತ ದೇಶ ಮರೆಯುವಂತೆಯೇ ಇಲ್ಲ. ಅಂಬೇರಕ್ಕೆ ಹೊರಟ ನಾನು 'ಆರ್ಯ ಕೀರ್ತಿ'ಯಪಾಠ ಹೇಳುತ್ತ ಕುಳಿತೆನಲ್ಲವೇ?

ನಾವು ನಗರವನ್ನು ಕಳೆದು, ಸುಂದರವಾದ ರಸ್ತೆಯಲ್ಲಿ ಹಾದು, ಉನ್ನತವಾದ ಬೆಟ್ಟಗಳಿಗೆ ಅಭಿಮುಖವಾಗಿ ಹೊರಟೆವು. ಇನ್ನೊಂದು ನಾಲ್ಕು ಮೈಲಿಗೆ ಅಂಬೇರದ ಬೆಟ್ಟ ಸಿಗುತ್ತದೆ. ಅಂಬೇರ—ಜಯಪುರದ ಪೂರ್ವ ರಾಜಧಾನಿ. ಹಳೆಯ ಕೋಟೆ ಅರಮನೆಗಳೆಲ್ಲ ಅಲ್ಲಿವೆ. ಜಯಪುರ

ಕ್ಕಿಂತಲೂ, ಹಿರಿಯ ಆಕರ್ಷಣೆ ಅದು. ಸಂಜೆ–ಮುಂಜಾನೆಗಳಲ್ಲಿ ಅಲ್ಲಿಯ ಗುಡ್ಡ, ಬೆಟ್ಟ, ಕಣಿವೆಗಳು ಅಪೂರ್ವ ಮೋಹಕತೆಯನ್ನು ತಾಳುತ್ತವೆ. ಹಿಂದೆ ನಾನು ಅಲ್ಲಿಗೆ ಹೋದಾಗ, ಅಲ್ಲಿ ಜನ ವಸತಿ ಇದ್ದಿರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದುವು. ಈಗ ಹಾಗಿಲ್ಲ. ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆಮಾಡಿಕೊಂಡಿವೆ. ಅಂಬೇರದ ಬುಡದಲ್ಲಿ–ಒಂದು ಪುಟ್ಟ ಸರೋವರವಿದೆ. 'ಸರೋವರ' ದೊಡ್ಡ ಹೆಸರು– ಕೆರೆ. ಕೆರೆಯ ನೋಟವು ತಂಪಾದ ನೋಟ. ಸುತ್ತಲಿನ ಮರಗಳಲ್ಲಿ ಆಗಷ್ಟೆ ಎಳೆ ಹಸುರು ತಳಿರುಗಳು ಚಿಗುರಿದ್ದು, ಮರಗಳು ಹಚ್ಚನೆ ಕಾಣಿಸುತಿದ್ದುವು. ಅದರ ಮಗ್ಗುಲಿನಿಂದ ಮುಂದುವರಿದರೆ, ಒಂದು ಸುಂದರ ಉದ್ಯಾನ ಕಾಣಸಿಗುತ್ತದೆ. ಅಲ್ಲಲ್ಲಿ, ಆಳವಿಲ್ಲದ ಈ ಕೊಳವನ್ನು ಚಿತ್ರವಿಚಿತ್ರವಾಗಿ ವಿಭಾಗಿಸಿ, ನೀರು ತುಂಬಿದಾಗ ಸುಂದರವಾಗಿ ಕಾಣಿಸುವಂತೆ ಮಾಡಿದ್ದಾರೆ. ಉದ್ಯಾನದ ಬಳಿಯಲ್ಲೇ ಹಳೆಯ ಕಾಲದ ಕೆಂಪು ಕಲ್ಲಿನ ಕೆಲವೊಂದು ಸುಂದರ ಪ್ರತಿಮೆಗಳಿವೆ. ಪ್ರಾಚೀನ ರಜಪೂತ ಕೆತ್ತನೆಯಲ್ಲಿ ಸರಳತೆ, ವೈಖರಿ, ಭವ್ಯತೆಗಳೆಲ್ಲ ಕಾಣಿಸುತ್ತವೆ. ಉದ್ಯಾನವನ್ನು ಹಾಯ್ದು, ದೊಡ್ಡ ಬಾಗಿಲೊಂದನ್ನು ದಾಟಿ, ಕೋಟೆಯ ದಾರಿಯನ್ನು ಏರಿ ಹೋಗಬೇಕು. ಏರುತ್ತ ಹೋದಂತೆ, ಕೆಳಗಿನ ನೋಟ ರಮಣೀಯವಾಗುತ್ತ ಹೋಗುವುದು. ನಾವು ಅವಸರವಾಗಿ ಕೋಟೆಯನ್ನು ಸೇರಿದೆವು. ಕೋಟೆಯ ಒಳಗೆ ಅರಮನೆ. ಅರಮನೆಗೆ ಸಂಬಂಧಿಸಿದ ಸಭಾಂಗಣಗಳು, ದೇವಾಲಯ– ಮೊದಲಾದುವುಗಳನ್ನು ಅಲ್ಲಿನ ಎರಡು ಮೂರು ಅಂತಸ್ತುಗಳಲ್ಲಿ ರಚಿಸಿದ್ದಾರೆ. ಮೊದಲನೆಯ ಅಂತಸ್ತಿನಲ್ಲೇ ದೇವಾಲಯವಿದೆ. ಈ ಪುಟ್ಟ ಮಂದಿರವು ಚಿತ್ರ ಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆ. ಗೋಡೆಗಳೆಲ್ಲವೂ ಹಾಲುಗಲ್ಲಿನವು. ನೆಲವೂ ಅದರದ್ದೇ. ಸ್ತಂಭಗಳೂ ಅವುಗಳದ್ದೇ. ಚಿಕ್ಕದಾಗಿದ್ದರೂ ಶಾಂತವಾಗಿ ಕಾಣಿಸುವ ಮಂದಿರ ಇದು. ಗುಡಿಯ ವಿಗ್ರಹ ಮಾತ್ರ ಆಕಾರದಿಂದಲೂ, ಅಲಂಕಾರಗಳಿಂದಲೂ ಅಷ್ಟೊಂದು ಶೋಭಿಸದು. ಅಲ್ಲಿಯ ಪೂಜಾರಿಯೂ ಹಾಗೇನೆ. ದಕ್ಷಿಣ ಹಿಂದುಸ್ಥಾನದ ಪೂಜಾರಿಗಳಂತೆ ಬಿಳಿ ಪಂಚೆಯುಟ್ಟು ಶುಭ್ರವಸನಧಾರಿಯಾಗಿ ಕಾಣುವ ಬದಲು, ಕಾವಿ ಬಟ್ಟೆ, ಕೆಂಪು ಟೋಪಿ, ಅಂಗಿ ಹಾಕಿಕೊಂಡು–ದೊಂಬಿದಾಸರಂತೆ ಕಾಣಿಸುತ್ತಿದ್ದ.

ಇಲ್ಲಿಯ ಗುಡಿಯನ್ನು ನೋಡಿ, ಮೇಲಿನ ಅಂಗಳವನ್ನೇರಿ ಹೋದರೆ ದೊಡ್ಡದೊಂದು ಸಭಾಂಗಣ ಬರುತ್ತದೆ. ಇದು ವಿಶಾಲವಾದ ಹಾಲುಗಲ್ಲಿನ ರಚನೆ. ಅದರ ಛಾವಣಿ, ರಜಪುತಾನದ ಶೈಲಿಯ ಕಮಾನಗಳು,ಕಂಬಗಳು– ತುಂಬ ಲಲಿತವಾಗಿ ಪರಸ್ಪರ ಹೊಂದಿಕೊಂಡು, ಈ ರಚನೆಗೆ ಚೆಲುವನ್ನು ಕೊಡುತ್ತವೆ. ಎದುರಿನ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಇಲ್ಲಿಂದ ಮೂರನೆಯ ಅಂತಸ್ತಿಗೆ ಹೋದರೆ ರಾಜರುಗಳ ಅಂತಃಪುರ ಬರುತ್ತದೆ. ಅಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಶಿಲೆಯಲ್ಲಿ ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾಪುಷ್ಪ ಗಳ ಚಿತ್ರಾವಳಿಗಳೂ ಇವೆ. ಇನ್ನೊಂದೆರಡು ಚಾವಡಿಗಳು—ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರ ವಿಚಿತ್ರ ಪ್ರತಿರೂಪ ಗಳನ್ನು ನಿರ್ಮಿಸಿ ಅಲಂಕರಿಸಿದ ಕಂಬ, ಮುಚ್ಚಿಗೆಗಳುಳ್ಳ ರಚನೆ. ಕತ್ತಲಿ ನಲ್ಲಿ ದೀವಿಗೆ ಹೊತ್ತಿಸಿದಾಗ ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು, ಈ ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. ಮೊಗಲ್ ಅರ ಮನೆಗಳಲ್ಲೂ ಇಂಥವೇ ಕೃತಿಗಳನ್ನು ನಾವು ಕಾಣಬಹುದು. ಈ ಚಾವಡಿ ಗಳಿಂದ ಹೊರಗಿನ ನೋಟ ನೋಡಬಹುದಾದ ಸುಂದರವಾದ ಕಿಟಿಕಿ ಬಾಗಿಲುಗಳಿವೆ.

ಅರಮನೆಯ ಮೊದಲನೆಯ ಮಟ್ಟದಲ್ಲಿ ಇನ್ನೊಂದು ಅಂತಃಪುರ ವಿದೆ. ಅಲ್ಲೂ ಹಾಲುಗಲ್ಲಿನ ಚಾವಡಿಗಳಿವೆ; ನೀರಿನ ಕಾರಂಜಿಗಳಿವೆ; ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರ ಕಾಲುವೆಗಳಿವೆ. ಇವೆಲ್ಲ ರಜಪೂತ ಅರಸುಗಳ ರಸಿಕ ಜೀವನವನ್ನು ಸೂಚಿಸುತ್ತವೆ. ಇವುಗಳನ್ನೆಲ್ಲ ನಾನು ಹಿಂದೆ ನೋಡಿದವನೇ. ಆದರೆ ಆವರಣದ ಹಿಂದುಗಡೆ ಇರುವ ತಗ್ಗಿನ ಕಣಿ ವೆಗೆ ಇಳಿದಾಗ ಅಲ್ಲಿ ಮೀರಾಬಾಯಿಯ ದೇವಾಲಯವಿದೆ–ಎಂಬುದು ನನಗೆ ಆ ತನಕ ಗೊತ್ತೇ ಇರಲಿಲ್ಲ.

ತುಂಬ ಇಕ್ಕಟ್ಟಿನ ಬೆಟ್ಟದ ಸಂದಿನ ಕಣಿವೆಯದು. ಇಳುಕಲು ಹೆಚ್ಚು. ಈಗಂತೂ ಗಿಡಮರಗಳು ಬೆಳೆದು ಕಾಡಿನಂತಾಗಿದೆ. ಆದರೆ ಹಿಂದೊಂದು ಕಾಲದಲ್ಲಿ ಈ ಬೆಟ್ಟದ ಅಂಚಿನಲ್ಲೆಲ್ಲ ನೂರಾರು ಮನೆಮಾರುಗಳು ತುಂಬಿ ಕೊಂಡಿದ್ದುವು. ಇಂದು ಆ ಸೌಧಗಳೆಲ್ಲ ಪುಡಿಪುಡಿಯಾಗಿ, ಸುತ್ತಲಿನ ನೆಲ ದೊಡನೆ ಬೆರೆತು, ಹುಟ್ಟಡಗಿ ಹೋಗಿವೆ. ಈ ಕಣಿವೆಯ ತಳದಲ್ಲೇ ಕಾಣಿಸು

ತ್ತದೆ-ಮೀರಾಬಾಯಿಯ ದೇವಾಲಯ. ಆಕೆ ಗಿರಿಧರನಾಗರನನ್ನು ಪೂಜಿಸಿದ ಸ್ಥಳ 'ಖಜುರಾಹೋ' ದೇವಾಲಯಗಳ ಸ್ಮೃತಿಯನ್ನು ತಂದುಕೊಡುತ್ತದೆ. ರಜಪೂತ ದೇವಾಲಯಗಳ ಶೈಲಿಗಿಂತ ಇದು ಭಿನ್ನವಾದುದು. ಕೆಳಗಿಳಿದು ಹೋಗಿ,ಗುಡಿಯನ್ನು ನೋಡಿದರೆ,ಅದರ ಸೊಬಗು ನಮಗೆ ಚೆನ್ನಾಗಿ ಕಾಣು ತ್ತದೆ. ನಕ್ಷತ್ರಾಕೃತಿಯ ನೆಲೆಗಟ್ಟಿನ ಮೇಲೆ ಈ ಮಂದಿರ ನಿಂತಿದೆ. ನಕ್ಷತ್ರಾ ಕೃತಿಯನ್ನು ತುಂಬಿಕೊಂಡು ಗರ್ಭಗೃಹ, ನವರಂಗಗಳಿವೆ. ಅದರ ಎದು ರಿಗೆ ಹೊಂದಿಕೊಂಡು ಪುಟ್ಟ ಮುಖಮಂಟಪವೊಂದಿದೆ. ಇವುಗಳೇ ಏರಿ, ಬೆಳೆದು, ಶಿಖರ ಶಿಖರಗಳಾಗಿ ದೇವಾಲಯದ ಉನ್ನತ ಶಿಖರವಾಗುತ್ತದೆ. ಗಿರಿಶೈಲಗಳ ಎಡೆಯಲ್ಲಿ, ಇದೂ ಒಂದು ಗಿರಿಯ ಮರಿ–ಎಂಬ ಹೊಂದಿಕೆ ಅದಕ್ಕೂ ಅದರ ಆವರಣಕ್ಕೂ ಕಾಣಿಸುತ್ತದೆ. ಗುಡಿಯ ಆವರಣವನ್ನು ನೋಡಿ, ಅಲ್ಲಿ ಸ್ವಚ್ಛಂದವಾಗಿ ಅಲೆದಾಡುವ ನವಿಲುಗಳನ್ನು ಕಂಡು ಹಿಗ್ಗಿ, ನಮ್ಮ ಟಾಂಗಾ ನಿಲ್ಲಿಸಿದಲ್ಲಿಗೆ ಮರಳಿ ಬಂದೆವು. ನಮ್ಮ ಜೀವ ತುಂಬ ದಣಿದಿತ್ತು. ನಮ್ಮೆಲ್ಲರಿಗೂ ಬಾಯಾರಿಕೆ ಏರಿ ಹೋಗಿತ್ತು. ನಾವು ಬಂದ ವರೇ, ಹಾದಿಯ ಮಗ್ಗುಲಿನ ಒಂದು ಅಂಗಡಿಯ ಮುಂದೆ ಕುಳಿತು, ಬಣ್ಣ ಬಣ್ಣದ ಸೋಡಾ, ಲೆಮನೇಡ್ ಕುಡಿದೆವು. ಉಡುಗೆಯಲ್ಲೆ ಅಷ್ಟಷ್ಟು ಬಣ್ಣ ತುಂಬಿಸಿ ತಿರುಗುವ ಈ ಜನ, ತಾವು ಮಾರುವ ಸೋಡಾ, ಲೆಮನ್‌ಗಳಿಗೂ ಕಡುಸಿನ ರಂಗನ್ನೇ ತುಂಬಿಸಿದ್ದಾರೆ. ಕಂಡರೆ, ಇದು ಶಾಯಿಯೋ, ಪಾನೀ ಯವೋ– ಎಂಬ ಭ್ರಮೆ ಬರಬೇಕು. ನಮ್ಮ ಪಾಲಿಗೆ ದೊರೆತ, ಕುಡಿಯ ಬಹುದಾದ ಪಾನೀಯ ಅದೊಂದೇನೆ. ಅದನ್ನೂ ಕೊಟ್ಟುದು ಯಾವುದ ರಲ್ಲಿ? ಗೆಲನ್ ಟಾಂಕಿಗಳಂತೆ ಕಾಣುವ ಗಾಜಿನ ಬಟ್ಟಲುಗಳಲ್ಲಿ. ನಮ್ಮ ಶ್ರೀಪತಿಯ ಅಳತೆಯಲ್ಲೇ ಈ ಗಾಜನ್ನು ನಿರ್ಮಿಸಿದ್ದಾರಲ್ಲಾ ಎಂದು ಅನಿ ಸಿತು–ನಮಗೆ.

ಸರಿ–ಮನೆಗೆ ಹೊರಟೆವು ಮರಳಿ. ಸಂಜೆಯ ವೇಳೆ, ಊರ ಮಹಿಳೆ ಯರು,ಬೆಟ್ಟ ಏರಿ ಹವಾ ನುಂಗುತಿದ್ದರು. ಸಿಂಧೀ ಹುಡುಗ ಹುಡುಗಿಯರು ಬೀದಿಗಳಲ್ಲೆಲ್ಲ ದಾಂಧಲೆ ಎಬ್ಬಿಸುತಿದ್ದರು. ನಮ್ಮ ಕೆಮೆರಾವನ್ನು ನೋಡಿ 'ಫೊಟೋ ನಿಕಾಲೋ?' ಎಂದರು. ನಮ್ಮ ಕೆಮೆರಾದಲ್ಲಿ ಅವರ ಚಿತ್ರ ಬಂದಿಲ್ಲವಾದರೂ, ಅವರ ಮುದ್ದಾದ ತುಂಟ ಮುಖಗಳು ನನ್ನ ಮನದಲ್ಲಿ ಮೂಡಿ ನಿಂತಿವೆ.

ಗೋಧೂಳಿಯ ಸಮಯ. ಬಂಡಿಯ ಕುದುರೆ ಮೆಲ್ಲಗೆ ನಮ್ಮ ಮಾನವೀ ಹೊರೆಯನ್ನು ಎಳೆದು ಸಾಗುತ್ತಲಿತ್ತು. ಆಗ ನಮ್ಮ ದೃಷ್ಟಿ ಸೆಳೆದದ್ದು– ಉನ್ನತವಾದೊಂದು ತಾಳೆಯ ಮರ. ಅದಕ್ಕೆ ನೂರು ವರ್ಷ ವಾದರೂ ಪ್ರಾಯ ಸಂದಿರಬೇಕು. ಬರಿಯ ಈಚಲು, ಖರ್ಜೂರದ ಮರ ಗಳಿರುವ ಈ ದೇಶದಲ್ಲಿ ನಮ್ಮೂರ ತಾಳೆಯ ಮರ (ಹನೆ) ವನ್ನು ಯಾರು ತಂದು ನಟ್ಟರೋ ನನಗಂತೂ ತಿಳಿಯದು. ಇಲ್ಲಿಂದ ಮುಂದೆ ತುಂಬ ಹೊಲಗಳು ಕಾಣಸಿಗುತ್ತವೆ. ಹೊಲಗಳಲ್ಲೆಲ್ಲ ಕೋಳಿ ಕಾಗೆಗಳಿಗಿಂತ ಅಗ್ಗ ವಾಗಿ ಕಾಣಿಸುವ ನವಿಲುಗಳ ಹಿಂಡು. ನಿಜ— ನವಿಲುಗಳ ರಾಜ್ಯದಲ್ಲಿ ಬಣ್ಣದ ಕಣ್ಣು ಹುಟ್ಟಲು, ರಜಪುತಾನದ ಸ್ತ್ರೀಯರಿಗೆ ಬೇರೆ ಪ್ರೇರಣೆ ಬೇಕಿಲ್ಲ. ನವಿಲಿನ ಬಣ್ಣ ಕಲಿತರು; ಆದರೆ ಬಹು ಮಂದಿಗೆ ನವಿಲಿನ ಬಳು ಕಾಟ ಬಾರದಲ್ಲ–ಎಂಬುದೇ ನನಗೆ ವ್ಯಥೆ. ಹಿಂದೊಮ್ಮೆ ಆ ದಾರಿಯಾಗಿ ನಾನು ಬರುತಿದ್ದಾಗ ಹಳ್ಳಿಯ ಹೆಂಗಸರು ಹಾದಿಯುದ್ದಕ್ಕೂ ಹಾಡಿಕೊಂಡು ಹೋಗುತ್ತಿರುವುದನ್ನು ಕೇಳಿದ್ದೆ. ಈ ಬಾರಿ ಆ ನೋಟ ದೊರೆಯಲಿಲ್ಲ. ನಾವು ತಿರುಗಿ ಪೇಟೆಯನ್ನು ಹಾದು ನಮ್ಮ ಮಿತ್ರರ ಮನೆಯನ್ನು ಸೇರಿದೆವು.

ಮರುದಿನ ಬೆಳಿಗ್ಗೆ ಇನ್ನೊಮ್ಮೆ ನಗರವನ್ನು ನೋಡಹೋದೆವು. ಮುಖ್ಯ ಚೌಕಿಗೆ ಬಂದು, ಊರಜನರ ಬೆಡಗನ್ನು ಕಾಣಲು ನಿಂತೆವು. ಬೀದಿ ಗಳಲ್ಲೆಲ್ಲ ಟಾಂಗಗಳೂ, ಕುದುರೆಗಳೂ, ಒಂಟೆಗಳೂ ಸಮಾನ ಹಕ್ಕಿನಿಂದ ಅಲೆದಾಡುವ ನೋಟ ಪ್ರೇಕ್ಷಣೀಯವಾಗಿತ್ತು. ಬೀದಿಯ ಒಂದು ಕಡೆ 'ಹವಾ ಮಹಲ್' ಇದೆ. ಹವಾ ಮಹಲು ಜಯಪುರ ಅರಮನೆಯ ಒಂದು ಮುಖದ ಹೆಸರು. ದೇಶಿಯ ವಾಸ್ತು ಶೈಲಿಯ ವೈಖರಿ ಎದ್ದು ಕಾಣುವ ನೋಟ ಅದು. ಅರಮನೆಯ ಒಳಕ್ಕೇನೋ ನಾವು ಹೋಗಲಿಲ್ಲ. ಹಿಂದೆ ಬಂದಾಗ P. E. N. ಸದಸ್ಯರಿಗೆ ಜಯಪುರ ಮಹಾರಾಜರು ತಮ್ಮ ಉದ್ಯಾ ನದಲ್ಲಿ ಒಂದು ಔತಣ ಕೊಟ್ಟಿದ್ದರು; ಈಗಲೂ ಒಂದು ಔತಣ ದೊರ ಕುವ ಹಾಗೆ ಮಾಡಬಹುದಿತ್ತೋ ಏನೋ. ಅಂಥ ಪ್ರಸಂಗವಿಲ್ಲದುದರಿಂದ ಅಲ್ಲಿಗೆ ಸಮೀಪವಾಗಿರುವ 'ಜಂತ್ರ ಮಂತ್ರ' ನೋಡಲು ಹೋದೆವು.

'ಜಂತ್ರ ಮಂತ್ರ' ಎಂಬುದು ಹಳೆಯ ಕಾಲದ ಖಗೋಲ ವೈಜ್ಞಾ ನಿಕ ಪರಿಶೀಲನಾಲಯ. ಡಿಲ್ಲಿಯಲ್ಲಿಯೂ ಇಂಥ ಒಂದು ಜಂತ್ರ ಮಂತ್ರ ವಿದೆ. ಅದನ್ನು ನೋಡಿದ್ದ ನನಗೆ, ಇದನ್ನು ನೋಡಲು ಅಷ್ಟೊಂದು ಉತ್ಸಾ

ಹಿರಿದಿರಲಿಲ್ಲ. ಆದರೆ ಇಲ್ಲಿನ ಆವರಣವನ್ನು ಹೊಕ್ಕು ನೋಡಿದ ಮೇಲೆ—ಅದಕ್ಕಿಂತ ಇದು ಹಿರಿಯದೆಂದೆನಿಸಿತು. ೪೦೦–೫೦೦ ವರ್ಷಗಳ ಪೂರ್ವದಲ್ಲಿ, ನಮ್ಮ ಖಗೋಳಜ್ಞರು ಗ್ರಹ, ಸೂರ್ಯಚಂದ್ರ, ತಾರಾ ಮಂಡಲಗಳನ್ನು ಅಳೆದು, ಪರಿಶೀಲಿಸಿ ನೋಡುವ ಸಲುವಾಗಿ ಇಲ್ಲಿ ವಿಚಿತ್ರವಾದ ಸಾಧನಗಳನ್ನು ನಟ್ಟಿದ್ದಾರೆ. ಇಂಥ ಹತ್ತೆಂಟು ವಿವಿಧ ಸಾಧನಗಳ ವಿಚಿತ್ರ ರಚನೆಗಳಿವೆ. ಗಳಿಗೆ ನೋಡುವುದಕ್ಕೆ, ಪ್ರತಿಯೊಂದು ತಿಂಗಳುಗಳಲ್ಲೂ ಸೂರ್ಯ ನಕ್ಷತ್ರಗಳ ಗತಿ ಪರಿಶೀಲಿಸುವುದಕ್ಕೆ, ಏನೇನೋ ಏರ್ಪಾಟುಗಳಿವೆ. ನನಗೆ ಖಗೋಲ ಜ್ಞಾನ ಸಾಲದು. ಆದರೆ ಕಲಾದೃಷ್ಟಿಯಿಂದ ನೋಡುವಾಗ, ಈ ಎಲ್ಲ ರಚನೆಗಳು 'futuristic style'ನ ವಾಸ್ತು ರಚನೆಗಳಂತೆ ಕಾಣಿಸುತ್ತಿದ್ದುವು. ಅನೇಕ ಬಗೆಯ ವರ್ತುಲ ರೇಖೆಗಳು, ಲಂಬ ರೇಖೆಗಳು, ಕರ್ಣ ರೇಖೆಗಳು ಒಂದಕ್ಕೊಂದು ಹೊಂದಿ ಮೇಳವಿಸಿ ಬಗೆಬಗೆಯಲ್ಲಿ ನೆಳಲು ಬೆಳಕುಗಳನ್ನು ಕೆಡೆಯುವಂತೆ, ಬಾನೆದುರಿಗೆ ವಿಚಿತ್ರ ಶೋಭೆಯನ್ನು ತೋರುವಂತೆ, ರಚಿತವಾಗಿದ್ದುವು. ಪ್ರತಿಯೊಂದು ಸಾಧನದ ಮೇಲೂ ಅವುಗಳ ಉಪಯೋಗ,ಕಾಲವನ್ನುಅಳೆಯುವ ರೀತಿ ಮೊದಲಾದುವನ್ನುಕೊಟ್ಟಿದೆ. ದೂರದರ್ಶಿಯ ಸಹಾಯವಿಲ್ಲದೆ ಬರಿಗಣ್ಣಿನಿಂದಲೇಖಗೋಲದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು—ಗಣಿತಕ್ಕೂ,ಸೂಕ್ಷ್ಮ ಪರಿಶೀಲನೆಗೂ ನಮ್ಮಹಿರಿಯರು ಸಲ್ಲಿಸಿದಕಾಣಿಕೆ. ಬರಿಯ ಕುತೂಹಲಕ್ಕಾಗಿ ನೋಡಿದರೂ ತಾಸೆರಡು ತಾಸುಗಳನ್ನು ಈ ಸ್ಥಳದಲ್ಲಿ ಕ್ಷಣದಂತೆ ಕಳೆಯಬಹುದು. ಇದನ್ನು ಕಂಡು ನನಗೆ ಸೂರ್ಯಚಂದ್ರರನ್ನು ಗೌರವಿಸುವ ಮನಸ್ಸು ಬಂದಿತು. ನಾವೆಷ್ಟು ಗೌರವಿಸಿದರೇನು? ಸೂರ್ಯ, ನಡು ಬಾನಲ್ಲಿ ನಿಂತು ನಮ್ಮ ತಲೆಯನ್ನೇ ಕೊರೆಯುತ್ತಿದ್ದನಾದುದರಿಂದ, ಇನ್ನಿತರ ಸ್ಥಳಗಳನ್ನು ನೋಡುವ ಹಂಬಲ ಮರೆತು, ಮನೆಗೇ ಓಡಿ ಬಂದೆವು. ಆ ದಿನವಂತೂ ನನ್ನ ಅಂತರ್ರಾಷ್ಟ್ರೀಯ ಪರಿಸ್ಥಿತಿಯೇ ಕೆಟ್ಟು ಹೋಗಿತ್ತು. ಅಂದರೆ ಹಿಂದಣ ಊರಲ್ಲಿ ತಿಂದ ತಿನಸಿನ ಫಲವಾಗಿ ಹೊಟ್ಟೆ ಕಡಿಯುತ್ತಲೇ ಇತ್ತು. ಮನೆಗೆ ಬಂದು ಮಲಗಿಕೊಂಡರೆ ಸಾಕೆನಿಸಿತ್ತು.

ಆ ದಿನ ಮಧ್ಯಾಹ್ನ ಬಿಸಿಲು ಇಳಿದ ಮೇಲೆ, ಇನ್ನೊಮ್ಮೆ ಸಂಚಾರಕ್ಕೆ ಹೊರಡುವ ಆಸೆ ನಮ್ಮದು. ಜಯಪುರದಲ್ಲಿನ ಜಾನಪದ ನೃತ್ಯ ನೋಡಬೇಕೆಂಬ ಹಂಬಲ ನನ್ನದಿತ್ತು. ಹಾಗಾಗಿ, ಮುಂಚಿತವಾಗಿಯೇ ನನ್ನ ಮಿತ್ರ

ರಿಗೆ ನನ್ನ ಅಪೇಕ್ಷೆ ತಿಳಿಸಿದ್ದೆ. ಅವರು ತಮ್ಮ ಗೆಳೆಯರಿಗೆ ಹೇಳಿಸಿ ಆ ಏರ್ಪಾಟು ಮಾಡಿಸಿದರು. ಸಂಜೆಯಾಗುತ್ತಲೇ ಅಲ್ಲಿನ ಚೀಫ್ ಎಂಜಿನಿಯರ್ ಗೋಪೀ ನಾಥರಾಯರ ಮನೆಗೆ ಹೋದೆವು. ಅವರು ಮೈಸೂರಿನವರು. ಸದ್ಯ ಜಯಪುರದಲ್ಲೇ ಉದ್ಯೋಗ ಮಾಡಿಕೊಂಡು, ಸ್ವಂತ ಮನೆ ಕಟ್ಟಿಸಿ ವಾಸ ವಾಗಿದ್ದಾರೆ. ಅವರ ಸುಂದರವಾದ ಬಂಗಲೆಯ ಎದುರಿಗೆ ಹಚ್ಚ ಹಸುರಿನ ಬಯಲಿನ ತುಣುಕಿದೆ. ಅಲ್ಲೇ ನೃತ್ಯಕಾರ್ಯಕ್ರಮ. ಊರಿನ ಜನ ಸಾಮಾ ನ್ಯರ ನೃತ್ಯವದು. ಇಬ್ಬರು ಯೌವನಸ್ಥರು ಮಾರವಾಡಿ ಸ್ತ್ರೀಯರ ಉಡಿಗೆ ಉಟ್ಟಿದ್ದರು. ಮೂತಿ ಏನೂ ಸುಲಕ್ಷಣವಾಗಿರಲಿಲ್ಲ. ಅದು ತಿಳಿದೋ ಏನೋ, ಮಾರ್ವಾಡಿ ಹೆಂಗುಸರಂತೆ ತಲೆಗೆ ಸೆರಗು ಹಾಕಿಕೊಂಡು ಮುಖ ತೋರಿಸದೆ ಕುಣಿಯತೊಡಗಿದರು. ಹಿಮ್ಮೇಳಕ್ಕೆ ಡೋಲು, ತಮ್ಮಟೆಗಳಿ ದ್ದುವು. ಮುಂಭಾಗದಲ್ಲಿ ಸ್ತ್ರೀವೇಷದ ನರ್ತಕರು ಲಾಸ್ಯವೆಸಗಿದರು. ಅವರ ಕಾಲಿನ ನಡಿಗೆಯಲ್ಲೂ, ಕೈಗಳ ಚಲನೆಯಲ್ಲೂ ಜಾಣ್ಮೆ, ಚೆಲುವೆರಡೂ ಇತ್ತು. ಈ ಮೋಹಿನಿಯರನ್ನು ವರಿಸಲು ಇಬ್ಬರು ಭೈರಾಗಿ ವೇಷದ ಜನ ಗಳು ಸಿದ್ಧರಾಗಿದ್ದರು. ಹೀಗಾಗಿ ಒಂದು ತಾಸಿನತನಕ ಭಯಂಕರ ಶೃಂಗಾರ ನೃತ್ಯ ಸಾಗಿತು. ಅವರ ಜತೆಗೆ ಮೂರು ನಾಲ್ಕು ಹುಡುಗರು ನಿತ್ಯ ಉಡಿಗೆ ಯಲ್ಲಿ ಕುಣಿದಾಡಿದರು. ಆ ನೋಟವನ್ನು ನೋಡುವುದಕ್ಕೆ ಪುರವಣಿಗರೂ ಬಂದು ಕಲೆತರು. ನಮಗಾಗಿ ತಮ್ಮ ಕಂಟ್ರಾಕ್ಟರರೊಬ್ಬರನ್ನು ಹಿಡಿದು, ಒಂದೇ ದಿನದ ಏರ್ಪಾಟಿನಿಂದ ಈ ಕಾರ್ಯಕ್ರಮವನ್ನು ಏರ್ಪಡಿಸಿದ ನಮ್ಮ ಮಿತ್ರರಿಗೆ ನಾನು ತುಂಬಾ ಋಣಿ. ಕೆಲಸ ಮುಗಿದ ಮೇಲೆ, ಗೋಪೀ ನಾಥರ ಆದರಾತಿಥ್ಯವಿತ್ತು. ಅವರು ಮೈಸೂರು ಬಿಟ್ಟುಬಂದಿದ್ದರೂ ಮೈಸೂ ರಿನ ಕಾಫಿ ಬಿಟ್ಟು ಬಂದಿರಲಿಲ್ಲ. ಕಾಫಿಯ ವಿಚಾರದಲ್ಲಿ ನನಗಾಗಲೀ, ನನ್ನ ಮಿತ್ರ ಶ್ರೀಪತಿಗಾಗಲೀ ಅದರ ಹೆಸರು ಕೇಳಿಯೇ ಕಿವಿ ನೆಟ್ಟಗಾಗು ತಿತ್ತು. ಹರಟೆ ಕೊಚ್ಚುತ್ತ ಸವಿಯಾದ ಕಡು ಕಾಫಿ ಕುಡಿದು, ಅರ್ಧ ಮತ್ತರಾಗಿ ನಾವು ಮನೆಗೆ ಮರಳಿದೆವು. ಮುಂದೆಲ್ಲ ಅವಸರವೇ. ಅವಸ ರದ ಊಟ; ಅವಸರದ ಓಟ. ನಾವು ಧಾವಿಸಿ ಬರುವುದರೊಳಗಾಗಿ ದಿಲ್ಲಿಗೆ ಹೋಗುವ ರೈಲು ಬಂದು ನಿಂತಿತ್ತು. ನಿಲ್ದಾಣದಲ್ಲಿ ಬಂದು ಹೋಗುವ ಪಯಣಿಗರ ಸಂಖ್ಯೆ ಅಸಂಖ್ಯಾತ. ಸೀಟು ಕಾದಿರಿಸಿದ್ದುದರಿಂದ, ಒಂದು ಡಬ್ಬೆ ಅಲ್ಲಿಂದಲೇ ಜೋಡಿಸುವುದರಿಂದ, ನಮಗೇನೂ ತೊಡಕಾಗಲಿಲ್ಲ.

ಮಿತ್ರ ರೈಗಳ ಸತ್ಕಾರಕ್ಕೆ ವಂದನೆ ಸಲ್ಲಿಸಿ, ಬಂಡಿಯನ್ನೇರಿ ಮೇಲಂತಸ್ತಿನಲ್ಲಿ ಹಾಸಿಗೆ ಬಿಡಿಸಿದೆವು. ನಮಗೆ ಬೆಳಗಾದದ್ದೇ ದೇಹಲಿಯ ಸಮೀಪದಲ್ಲಿ.

೪. ದಿಲ್ಲಿಯಲ್ಲಿ

ಭಾರತೀಯನಾದವನಿಗೆ ದಿಲ್ಲಿ ನಗರ ಮರೆಯಲಾರದೊಂದು ಪಟ್ಟಣ. ಕಹಿ ಸಿಹಿಯಾದ ಪ್ರಾಚೀನ ಸ್ಮರಣೆಗಳನ್ನೆಲ್ಲ ಉಕ್ಕಿಸುವ ನಗರವದು. ಮಹಾಭಾರತದ ಕಾಲದಿಂದಲೂ ಹೆಸರಾಗಿಬಂದಿರುವ ಪಟ್ಟಣ; ಅದು ಅನೇಕ ಸಾಮ್ರಾಜ್ಯ, ಸಾಮ್ರಾಟರುಗಳ ತೊಟ್ಟಿಲೂ ಆಗಿತ್ತು; ಶ್ಮಶಾನವೂ ಆಗಿತ್ತು. ಪಾಂಡವರ ಹಸ್ತಿನಾವತಿ, ಇಂದ್ರಪ್ರಸ್ಥ–ಅದೇನೆ. ಖಿಲ್ಜಿ ಮನೆತನದ ಅರಸುಗಳು ಆಳಿದ ರಾಜಧಾನಿ ಅದೇನೆ. ತೊಗ್ಲಕ್ ಬಾದಷಹನ ವಿಚಿತ್ರ ರಾಜ್ಯಭಾರ ನಡೆದದ್ದು ಅಲ್ಲಿಂದಲೇ. ಮೊಗಲ್ ಬಾದಷಹರುಗಳ ವೈಭವ ಮೆರೆದದ್ದು ಅಲ್ಲೇನೆ. ಬ್ರಿಟಿಷರು ರಾಜಸತ್ತಿಗೆಯನ್ನು ಮೆರೆಯಿಸಿದ್ದು ಅಲ್ಲಿಯೆ. ಈಗ ಸ್ವತಂತ್ರ ಭಾರತದ ರಾಜಧಾನಿಯೂ ಅದೇನೆ. ಶತಮಾನ ಶತಮಾನಗಳ ವೈಭವ, ಲಕ್ಷೋಪಲಕ್ಷ ಜನಗಳ ಜೀವಹತ್ಯ ಆ ಒಂದು ನಗರಕ್ಕಾಗಿಯೇ ನಡೆಯಿತು. ಅಲ್ಲಿನ ನೆಲಕ್ಕಾಗಿ ಬಸವಳಿದವರೆಷ್ಟು! ಬೆವರು ಸುರಿಸಿದವರೆಷ್ಟು! ನೆತ್ತರು ಕಾರಿದವರೆಷ್ಟು. ಅಂತೆಯೇ ಆ ರಾಜಧಾನಿಗಾಗಿ ತಮ್ಮ ಜೀವನದ ಸವಿ, ಸೊಗಸುಗಳನ್ನೆಲ್ಲ ಧಾರೆಯೆರೆದವರ ಸಂಖ್ಯೆಯೂ ಅಪಾರವಾಗಿದೆ. ಭಾರತೀಯರ ಪಾಲಿಗೆ ದಿಲ್ಲಿ ಚಿರಸ್ಮರಣೀಯವಾದ ನಗರ. ಅಲ್ಲಿಗೆ ಹೋಗುವ ಪ್ರವಾಸಿಯ ಮನದಲ್ಲಿ, ನೂರಾರು ಭಾವಾವೇಶಗಳನ್ನು ಮೊಳೆಯಿಸಿ, ನಲಿಸುವ ಪಟ್ಟಣ. ಸವಿಗನಸುಗಳನ್ನು ಹೊತ್ತೇ ಎಲ್ಲರೂ ಆ ನಗರಕ್ಕೆ ಧಾವಿಸುತ್ತಾರೆ. ನಾವೂ ಹಾಗೇನೇ ಹೋದವರು.

ವಿಶಾಲವಾದ ಬಯಲು ಭೂಮಿಯಲ್ಲಿ ಎಷ್ಟು ಬೆಳೆದರೂ ಬೆಳೆಯಬಹುದಾದ ಪಟ್ಟಣ ಅದು. ಈಗಲಂತೂ ತುಂಬಾ ಬೆಳೆದುಬಿಟ್ಟಿದೆ. ನಾನು ಹಿಂದೆ ಹೋದದ್ದು ಹದಿನೈದು ವರ್ಷಗಳ ಪೂರ್ವದಲ್ಲಿ. ಅಷ್ಟೊಂದು ವರ್ಷಗಳಲ್ಲಿ ಎಷ್ಟೆಲ್ಲ ಬದಲಾವಣೆಗಳಾಗಲಾರವು? ದಿಲ್ಲಿಯ ಹೊರವಲಯದ ನಿಲ್ದಾಣವೊಂದರಲ್ಲಿ ನಮ್ಮ ಬಂಡಿ ಬಂದು ನಿಂತಿತು; ಆಗ ಬೆಳಗಾಗಿತ್ತು. ಕಿಟಕಿಯಿಂದ ಹೊರಕ್ಕೆ ನೋಡುವಾಗಲೇ, ಹಲವು ಉನ್ನತ ವೃಕ್ಷಗಳ ಮೇಲೆ ರಣಹದ್ದುಗಳು ಕುಳಿತು ಮುಂದಿನ ದಿನದ ಆಹಾರ ನಿರೀಕ್ಷಣೆ ಮಾಡುತ್ತಿದ್ದುದು ಕಾಣಿಸಿತು. ಆ ನಿಲ್ದಾಣದಿಂದ ಬಂಡಿ ದಿಲ್ಲಿಯ ಜಂಕ್ಷನ್ ಮುಟ್ಟು

ವುದಕ್ಕೆ ಇನ್ನೂ ಆರೆಂಟು ಮೈಲು ದೂರವಿತ್ತು. ವಿಶಾಲವಾದ ರೈಲ್ವೆ ಅಂಗಣ ಅಲ್ಲಿಯ ತನಕವೂ ಹಾಸಿತ್ತು. ಅದನ್ನು ನೋಡುತ್ತ ಹೋಗುವ ನೋಟ ಮಾತ್ರ ಜಿಗುಪ್ಸೆ ತಂದೊಡ್ಡಿತು. ರಾಜಧಾನಿಯ ನಾಗರಿಕ ಜನವರ್ಗ, ಹೆಣ್ಣು ಗಂಡೆನ್ನದೆ ತಂಬಿಗೆ ಲೋಟಾಗಳನ್ನು ಹಿಡಿದು, ರೈಲ್ವೆ ಅಂಗಣವನ್ನೇ ಶೌಚ ಕೂಪವಾಗಿ ಮಾಡುತ್ತಿದ್ದ ನೋಟ ಅಸಹ್ಯವನ್ನು ತಂದುಬಿಟ್ಟಿತು. ನಮ್ಮ ರಾಜಧಾನಿಯ ನಾಗರಿಕತೆ ಇಷ್ಟೆಯೇ—ಎಂಬ ಬೇಸರ ತಂದಿತು. 'ಪ್ರಥಮ ಚುಂಬನಂ ದಂತ ಭಗ್ನಂ.'

ನಮ್ಮ ಬಂಡಿ ಜಂಕ್ಷನ್ ಸೇರಿ, ನಾವು ಕಿಟಿಕಿಯಿಂದ ಇಣುಕುವುದರೊಳಗಾಗಿ ಗೆಳೆಯರಾದ ಪಾಟೀಲರು ನಮಗೆ ಕಾಣಿಸಿದರು. ಎಚ್. ಎಸ್. ಪಾಟೀಲರು ಕನ್ನಡಿಗರಿಗೆ ಲೇಖಕರಾಗಿ ಪರಿಚಿತರಾಗಿದ್ದಾರೆ. ಸಾಮಾನ್ಯ ಎತ್ತರದ ಆಳು. ಉತ್ಸಾಹಿ ಮುಖವಾದರೂ ದಿಲ್ಲಿಯ ಮುಗಿಲು ಅವರ ಮುಖದಲ್ಲಿ ಕವಿದಂತಿತ್ತು. ನಮಗಾಗಿಯೇ ನಗು ಮುಖ ತೋರಿದಂತಿತ್ತು. ದೂರದ ಕನ್ನಡಿಗರಾದ ನಮ್ಮ ಆಗಮನವೇ ಅವರ ಮುಖವನ್ನು ಅರಳಿಸಿರಬೇಕು. ತ್ವರೆಯಿಂದ ಸಾಮಾನು ಹೊರಿಸಿಕೊಂಡು, ಅವರೊಡನೆ ಹೊರಕ್ಕೆ ಬಂದೆವು. ಆ ಅವಸರದಲ್ಲಿ ಇನ್ನೊಬ್ಬ ಮಿತ್ರಗೆ ಕಾಗದ ಬರೆದುದೂ, ಅವರು ನಮಗಾಗಿ ಬಂದು ಕಾದಿರಬಹುದಾದುದೂ—ಎಲ್ಲವೂ ನಮಗೆ ಮರವೆಯಾಗಿತ್ತು. ಹೋಗಿ ಒಂದು ಟಾಂಗವನ್ನೇರಿದೆವು. ಅದು ಹೊರಟೇ ಬಿಟ್ಟಿತು. ಪಾಟೀಲರು ಸ್ಯಾಕಲು ಏರಿಕೊಂಡು ನಮ್ಮನ್ನು ಹಿಂಬಾಲಿಸಿದರು. ನಾಲ್ಕೈದು ಮೈಲು ದೂರ, ನಮ್ಮ ಬಂಡಿಯು ಜನರ ನೂಕುನುಗ್ಗಲಿನಲ್ಲಿ, ಮುಂದೆ ಸಾಗಿತು. ಇದು ಹಳೆಯ ದಿಲ್ಲಿ. ಹಿಂದಿಗಿಂತಲೂ ಇಂದು ತುಂಬಾ ಹೊಲಸಾಗಿ ಕಾಣುತಿತ್ತು. ಬೀದಿಯಂಚುಗಳೆಲ್ಲ ನಿರಾಶ್ರಿತರ ಗುಡಿ ಗುಡಾರ, ಅಂಗಡಿಗಳಿಂದ ತುಂಬಿದ್ದುವು. ಒಂದೇ ಒಂದು ಗಾಳಿಗೆ, ಒಂದೇ ಒಂದು ಮಳೆಗೆ ನಿಲ್ಲಲಾರದ ಆ ಜೋಪಡಿಗಳು, ದೇಶದ ದಾರಿದ್ರ್ಯವನ್ನು ಕಣ್ಣಿಗೆ ತರುತಿದ್ದುವು.

ನಾವು ಹೋಗಿ ಇಳಿದದ್ದು ದಿಲ್ಲಿ ಯುನಿವರ್ಸಿಟಿಯ ಲಾಯು ಬಂದರಲ್ಲಿ. ಅಲ್ಲಿ ಜನವಸತಿ ಹೆಚ್ಚಿಲ್ಲ. ವಿಶಾಲವಾದೊಂದು ಬಯಲು; ನಡುವೆ ಯುನಿವರ್ಸಿಟಿಯ ಕಟ್ಟಡದ ಸಮೀಪ ಕೆಲವೇ ಮನೆಗಳು. ಹಿಂದೆ ಮಿಲಿಟರಿ ಬೆರಕ್ ಆಗಿದ್ದ ತಾವು ಒಂದನ್ನು, ಪಾಟೀಲರು ತಮ್ಮ ಮನೆಯಾಗಿಸಿ

ಕೊಂಡಿದ್ದರು. ಮನೆಯಲ್ಲಿ ಸ್ಥಳವೇನೋ ವಿಶಾಲವಾಗಿತ್ತು. ಆದರೆ ಮನೆ ಮಾತ್ರ ಬ್ರಹ್ಮಚಾರಿಯ ಕೊಟಡಿಯಂತಿತ್ತು. ಪಾಟೀಲರು ತಮ್ಮ ಕುಟುಂಬ ವನ್ನು ಊರಿಗೆ ಕಳುಹಿಸಿ ಒಬ್ಬಂಟಿಗರಾಗಿದ್ದರು. ಹೋದ ನಾವು, ಅವರ ಅವ್ಯವಸ್ಥೆ ಸಾಲದೆಂಬಂತೆ, ನಮ್ಮ ಹಾಸಿಗೆ, ಸರಕುಗಳನ್ನು ಊರೆಲ್ಲ ಹರಡಿ ಕುಳಿತೆವು. ಮುಖಮಜ್ಜನವಾದಮೇಲೆ ಯುನಿವರ್ಸಿಟಿಯ ಕೆಂಟೀನಿಗೆ ಹೋಗಿ ಉಪಹಾರ ಮುಗಿಸಿ ಬಂದೆವು. ಅನಂತರ ಸ್ನಾನ, ಉಭಯ ಕುಶ ಲೋಪರಿ ಹರಟೆಗಳು ನಡೆದವು. ಮಧ್ಯಾಹ್ನ ಅವರ ಹಾಸ್ಟೆಲಿನಲ್ಲೇ ಊಟ ಮುಗಿಸಿದೆವು. ಆ ಭೋಜನ ಮಾತ್ರ ಅವರ್ಣನೀಯವಾಗಿತ್ತು. ಬೇಕಷ್ಟು ಚಪಾತಿ, ಅಗಳೆಣಿಸುವಷ್ಟು ಅನ್ನ, ಯಾವುದೋ ಸೊಪ್ಪನ್ನರೆದು ಮಾಡಿದ, ಯಾವ ರುಚಿಯೂ ಇಲ್ಲದ ಚಟ್ನಿ; ಮೇಲೆ ಕಂದು ಬಣ್ಣದ, ನಾಮಕರಣ ಅತೀತವಾದ ಒಂದು ಪದಾರ್ಥ. ಕಂದು ಬಣ್ಣದ ನೀರಿನಲ್ಲಿ ಬೇಕಷ್ಟು ಆಲು ಗಡ್ಡೆಗಳನ್ನು ಬೇಯಿಸಿ ತೇಲಿಸಿದ್ದರು. ಅದಕ್ಕೆ ಸವಿ ಕಡಿಮೆಯಾದಲ್ಲಿ ಬಳಿಯಲ್ಲೇ ಉಪ್ಪಿನ ಪುಡಿ, ಮೆಣಸಿನಕಾಯಿ ಪುಡಿಗಳನ್ನಿರಿಸಿದ್ದರು. ಈ ಪದಾರ್ಥದ ಸವಿಯೇನಿರಬಹುದೆಂದು ನಿರ್ಧರಿಸುವುದಕ್ಕೇ ನಮಗೆ ಬಹು ಹೊತ್ತು ಹಿಡಿಯಿತು. ಉಪ್ಪು ಹುಳಿ, ಕಾರ, ಸಿಹಿ—ಯಾವುದೂ ಅಲ್ಲದ ರುಚಿ ಅದಕ್ಕೆ. ಸುತ್ತು ಕುಳಿತಿದ್ದ ಹಾಸ್ಟೆಲಿನ ವಿದ್ಯಾರ್ಥಿಗಳು ಹರಟೆ ಕೊಚ್ಚುತ್ತ, ಕೇವಲ ತಪೋಬಲದಿಂದಲೇ ಆ ಆಹಾರವನ್ನು ನುಂಗುತ್ತಿದ್ದರು. ನಮ್ಮ ಶ್ರೀಪತಿಯ ಮೋರೆಯಂತೂ ಅಷ್ಟದಿಸೆಗಳನ್ನೂ ಅರಸಿತು. ಆದರೆ ಅಷ್ಟೇನೆ— ಅಲ್ಲಿದ್ದದ್ದು. ಅದನ್ನೇ ಮುಗಿಸಿ ಮೇಲಕ್ಕೆದ್ದೆವು. ಆಚೀಚಿನ ಹುಡುಗರ ಗದ್ದಲ ನೋಡುವಾಗ 'ಈ ಜನ ಇನ್ನೂ ಈ ಆಹಾರವನ್ನು ತಿಂದು ಬದುಕಿ ದ್ದಾರೆ. ಅವರ ಮೋರೆಯ ಮೇಲೆ ಎಷ್ಟು ನಗು ಕುಣಿದಾಡುತ್ತದೆ! ಏನೋ ಸುಪ್ತ ಚೇತನಶಕ್ತಿ ಅವರು ಕೊಟ್ಟ ಆಲೂ ಪದಾರ್ಥದಲ್ಲಿ ಅಡಗಿರಬೇಕು' ಎಂದು ಊಹಿಸಿದೆವು. ನಮ್ಮ ಪಾಟೀಲರ ಮೋರೆಯೂ ಕಳೆಗುಂದಿತ್ತು. ಆದರೇನು? ನಾವು ಪಾಟೀಲರ ಕೊಟಡಿಗೆ ಬರುವಾಗ, ನಮ್ಮ ಪುತ್ತೂರಿನ ಗೆಳೆಯ ವ್ಯಾಸರಾಯ, ಜತೆಗೊಬ್ಬ ಮಿತ್ರರನ್ನು ಕರೆದುಕೊಂಡು ಬಂದು ನಮಗಾಗಿ ಕಾದು ಕುಳಿತಿದ್ದ. ವ್ಯಾಸರಾಯ ಕಡಬದ ಹುಡುಗ. ನಮ್ಮ ಹಳೆಯ ಮಕ್ಕಳ ಕೂಟಗಳಲ್ಲಿ ತುಂಬಾ ಲಾಗ ಹಾಕಿದ, ತೆಳ್ಳಗಿನ ವ್ಯಕ್ತಿ. ಈಗಲೋ—ಶ್ರೀಪತಿಯಂತೆ ಬಾತು ಬಾಸುಂಡೆಯಾಗಿದ್ದಾನೆ. ನಗುಮುಖದ

ಆತ, ಕರೆತಂದ ಗೆಳೆಯರನ್ನು ತೋರಿಸಿ, 'ಇವರು ನಮ್ಮೂರಿನವರು,ಸುಬ್ರಾಯರು. ಕನೋಟ್ ಸರ್ಕಸಿನಲ್ಲಿ 'ಮದ್ರಾಸ್ ಹೊಟೇಲಿ'ದೆಯಲ್ಲ. ಅದರ ಪ್ರೊಪ್ರ್ಯಾಟರ್' ಎಂದ. ಪಂಜಾಬಿ ಊಟಮಾಡಿದ ನಮಗೆ ಮದ್ರಾಸು ಹೊಟೇಲಿನ ಹೆಸರು ಕೇಳಿದೊಡನೆಯೇ ಕೈಮೇಲೆ ಸ್ವರ್ಗ ಕಳಚಿ ಬಿದ್ದ ಹಾಗಾಯಿತು. ಪಾಟೀಲರು ನಮ್ಮನ್ನು–ನಿಷ್ಕರುಣಿಗಳು–ಎಂದು ತಿಳಿದರೂ ಚಿಂತೆಯಿಲ್ಲ. ಇನ್ನು ಮುಂದೆ ನಮಗೆ ಹಾಸ್ಟೇಲಿನ ಋಣ ಮುಗಿಯಿತು–ಎಂದು ನಿರ್ಧರಿಸಿಕೊಂಡೆವು. ಊಟ ಮುಗಿಸಿ ಬಂದ ನಾವು, ಉಸಿರಿಗೂ ಬಿಡುವು ಕೊಡದೆ, ಈ ಮಿತ್ರರೊಡನೆ ಹೊಸದಿಲ್ಲಿಗೆ ಹೊರಟೇ ಬಿಟ್ಟೆವು.

ಮದ್ರಾಸ್ ಹೊಟೇಲು ಕಳೆದ ಹದಿನೈದು ವರ್ಷಗಳಿಂದ ನಡೆದು ಬಂದದ್ದು. ಅನ್ನಬ್ರಹ್ಮರಾದ ದಕ್ಷಿಣ ಹಿಂದುಸ್ತಾನದ ಜನಕ್ಕೆ, ಅದೊಂದೇ ಅನ್ನದಾತ. ಅದು ಕಾಫಿ ಮನೆಯೂ ಹೌದು. ಅಲ್ಲಿಗೆ ಹೋದರೋ—ಹೊಟೇಲಿನ ಮೆನೇಜರ್ ನಮ್ಮೂರ ಹುಡುಗ. ಅಂದರೆ ತಾಜಾ 'ಕೋಟ' ದವ; ನಮ್ಮ ನೆರೆಮನೆಯವ; ಶ್ರೀಪತಿಯ ಬಂಧು. ಅಂದ ಮೇಲೆ ನಮ್ಮ ಮುಂದಿನ ಅನ್ನದ ಋಣವೆಲ್ಲ ಅಲ್ಲೇ ಪರಿಹಾರವಾಗತಕ್ಕದ್ದೆಂದು ನೀವು ಸುಲಭವಾಗಿ ಎಣಿಸಬಹುದು. ಹೋದ ಮುಹೂರ್ತಕ್ಕೆ ಸಮನಾಗಿ ದೋಸೆ, ಕಾಫಿಗಳು ಬಂದುವು. ಆ ರಾತ್ರಿಯ ಊಟವೂ ನಮಗೆ ಅಲ್ಲೇನೆ. ರಾತ್ರಿ ಮಾತ್ರ ಯುನಿವರ್ಸಿಟಿಗೆ ಹೋಗಿ, ಗದ್ದಲವಿಲ್ಲದ ಪಾಟೀಲರ ಮನೆಯಲ್ಲಿ ಗೊರಕೆ ಹೊಡೆಯುವ ಪರಿಪಾಠವನ್ನಿರಿಸಿಕೊಂಡೆವು. ಆ ಹೊಟೇಲು ಎಂದು ಸಿಕ್ಕಿತೋ–ಆನೆಗೆ ಬಾಳೆ ಸಿಕ್ಕಿದಂತಾಯಿತು–ನಮ್ಮ ಶ್ರೀಪತಿಗೆ. ಬೆಂಗಳೂರಿನ ಹೊಟೇಲುಗಳಲ್ಲಿ ಇಡ್ಲಿ, ದೋಸೆ ವಜಾ ಮಾಡಿದ್ದರಲ್ಲ: ಆದರೇನು? ಹೊಸ ದಿಲ್ಲಿ ಅಂದರೆ ರಾಷ್ಟ್ರೀಯ ರಾಜಧಾನಿಯಲ್ಲೇ ಕುಳಿತು, ಮೈಸೂರು ಸರಕಾರವನ್ನು ಅಣಕಿಸಿ, ಬೇಕಷ್ಟು ಇಡ್ಲಿದೋಸೆ ಸಂಹರಿಸಬಹುದಾದ ಆ ಸುಸಂಧಿ ಬಂದರೆ ಯಾರು ತಾನೆ ಹಿಗ್ಗಲಾರರು?

ಆ ಮಧ್ಯಾಹ್ನ ಹೊಟೇಲಿನಲ್ಲಿ ಉಪಹಾರ ಮುಗಿಸಿ, ಪಾಟೀಲ್, ವ್ಯಾಸ, ಶ್ರೀಪತಿ ಮತ್ತು ನಾನು ನಾಲ್ವರೂ ದೂರವನ್ನೆಲ್ಲ ಟಾಂಗದಲ್ಲಿಯೂ, ಸಮೀಪದ ಸ್ಥಳಗಳನ್ನೆಲ್ಲ ಕಾಲುನಡೆಯಲ್ಲೂ ಸಂಚರಿಸಿದೆವು. ಪಾರ್ಲಿಮೆಂಟ್ ಮಂದಿರದ ಸುತ್ತ, ಸೆಕ್ರೆಟೇರಿಯಟ್ ಕಟ್ಟಡ, ರಾಜೇಂದ್ರ ಪ್ರಸಾದರ ಅರಮನೆಯ ಹೊರ ಪಟಾಂಗಣ—ಇವುಗಳನ್ನೆಲ್ಲ ನೋಡಿಕೊಂಡು

ಬಂದೆವು. ಲಂಡನಿನ ಹೆಸರಾಂತ ವಾಸ್ತು ಶಿಲ್ಪಿಯೊಬ್ಬನ ಈ ನಿರ್ಮಾಣಗಳು ನನಗಂತೂ ಚೆನ್ನಾಗಿ ಕಾಣಿಸಿದುವು. ಭವ್ಯವಾಗಿ ಎದ್ದು ಕಾಣಿಸುವ ಗುಂಬಜ್‌ಗಳುಳ್ಳ ಸೆಕ್ರೆಟೇರಿಯಟ್ ಕಟ್ಟಡವಾಗಲೀ, ನಮ್ಮ ಅಧ್ಯಕ್ಷರ ನಿವಾಸವಾಗಲೀ, ವಾಸ್ತು ಶಿಲ್ಪದಲ್ಲಿ ವಿದೇಶಿಯವಾಗಿ ಕಂಡರೂ, ಮೋಹಕತೆಯಲ್ಲಿ ಕಡಿಮೆಯಾಗಿರಲಿಲ್ಲ.

ನವ ದೇಹಲಿ—ಆಗಿಗೂ, ಈಗಿಗೂ ತುಂಬ ಅಂತರವುಳ್ಳದ್ದಾಗಿದೆ. ಅದರ ಅನೇಕಾನೇಕ ವರ್ತುಲಗಳು, ಹಾದಿ ಬೀದಿಗಳು ಅಗಲವಾದುವು. ಇಕ್ಕೆಡೆಗಳಲ್ಲಿಯೂ ಸಾಲು ಮರಗಳುಳ್ಳವು. ಹಿಂದೆ ನಾನು ಬಂದಾಗ ಈ ಈ ಸಾಲು ಮರಗಳೆಲ್ಲ ಎಳೆಯ ಗಿಡಗಳಾಗಿದ್ದುವು. ಪಕ್ಕದಲ್ಲಿನ ಮನೆಗಳು ಸಾಲುಸಾಲಾಗಿ ಕಣ್ಣಿಗೆ ಕಾಣಿಸುವಂತಿದ್ದವು. ಈಗ ಗಿಡಗಳೆಲ್ಲ ಬಲಿತು ಮರಗಳಾಗಿವೆ. ದಾರಿಯುದ್ದಕ್ಕೂ ನೆರಳನ್ನು ಕೆಡೆಯುತ್ತಿವೆ. ಆಗಿನ ಜನ ಸಂಚಾರಕ್ಕೂ, ಈಗಿನ ಜನ ಸಂಚಾರಕ್ಕೂ ಎಷ್ಟೋ ವ್ಯತ್ಯಾಸವಿದೆ. ಸಂಜೆ ಇಕ್ಕಡೆಯ ದಾರಿಯೆಲ್ಲ ಸ್ಯಾಕಲು ಸವಾರರಿಂದಲೂ, ಹವೆಗಾಗಿ ಸಂಚರಿಸುವ ಹಳೆಯ ಮತ್ತು ಹೊಸ ದಂಪತಿಗಳಿಂದಲೂ—ತಮ್ಮ ರೂಪಕ್ಕೆ ತಾವೇ ಮನಸೋತ ತರುಣ ತರುಣಿಯರಿಂದಲೂ ತುಂಬಿ ಹೋಗುತ್ತವೆ. ನಾವೂ ಅಂಥವರೆಡೆಯಲ್ಲಿ ಗೊತ್ತುಗುರಿಯಿಲ್ಲವೆ ಅಲೆದಾಡಿ, ಅಲೆದಾಡಿ ಸೆಕ್ರೆಟೇರಿಯಟ್ ಮುಂದಿನ ವಿಶಾಲವಾದ ಬಯಲು ಭೂಮಿಗೆ ಬಂದು ಸೇರಿದೆವು. ಕಿಂಗ್ಸ್‌ಗೇಟ್—ಮಹಾದ್ವಾರದ ಬಳಿ ಕುಳಿತು, ಸಿಗರೇಟ್ ಧ್ವಂಸಮಾಡ ತೊಡಗಿದೆವು. ಸಂಜೆ ಕಳೆದ ಮೇಲೆ ಮದ್ರಾಸು ಹೊಟೇಲಿಗೆ ಹೋಗಿ, ಚೊಕ್ಕ ಭೋಜನ ಮುಗಿಸಿಕೊಂಡು, ಪಾಟೀಲರ ನಿವಾಸಕ್ಕೆ ತೆರಳಿದೆವು.

ಮರುದಿನ ಬೆಳಿಗ್ಗೆ ಎದ್ದೊಡನೆಯೇ ಮದ್ರಾಸು ಹೊಟೇಲಿಗೇನೆ ಹೋಗುವ ಲವಲವಿಕೆ ನಮಗೆ. ಆದರೆ ಗೆಳೆಯ ಪಾಟೀಲರವರ ಸತ್ಕಾರ ಮರೆಯುವುದಕ್ಕಾಗುತ್ತದೆಯೇ? ಅವರ ಜತೆಯಲ್ಲೇ ಹಾಸ್ಟೆಲಿಗೆ ಹೋಗಿ ಚಹಾ ಪಾನ ಮುಗಿಸಿಬಂದೆವು. ಅನಂತರ ನಮ್ಮ ಸ್ನಾನ ಮುಗಿಸಿ, ಪಾಟೀಲರನ್ನು ಕಟ್ಟಿಕೊಂಡು ಇನ್ನೊಮ್ಮೆ ಸಂಚಾರಕ್ಕೆ ಹೊರಟೆವು. ಮೊದಲ ನಿರೀಕ್ಷಣೆ—ದಿಲ್ಲಿಯ ಜುಮ್ಮಾ ಮಸೀದಿಯದು. ಜುಮ್ಮಾ ಮಸೀದಿಯ ಎದುರಿನ ಮಂಟಪ ಗೋಪುರಗಳು ಬಹುದೂರದಿಂದಲೇ ಕಾಣಿಸುತ್ತವೆ. ಹಲವು ಸೋಪಾನಗಳನ್ನು ತುಳಿದು, ಮೇಲಕ್ಕೇರಿದೆವೆಂದರೆ, ಕೆಂಪಾದ ಉಸುಬು

ಗಲ್ಲಿನ್ನು ಹಾಸಿದ ಅಂಗಳ ಬರುತ್ತವೆ. ಅದನ್ನು ದಾಟಿ ಮುಂದಕ್ಕೆ ಸರಿದರೆ ಒಂಪೆರಡು ಎಕ್ರೆ ವಿಸ್ತೀರ್ಣವಾದ ಇನ್ನೊಂದು ದೊಡ್ಡ ಅಂಗಣ; ನಾಲ್ಕು ಸುತ್ತ ಲೂ ಸುಂದರವಾದ ಚಾವಡಿಗಳು. ಪ್ರವೇಶಿಸುವವರ ಮುಖಕ್ಕೆ ಎದುರಾಗಿ ಮಸೀದಿಯ ಸಭಾಂಗಣ ಕಾಣಿಸುತ್ತದೆ. ನೆಲವನ್ನೆಲ್ಲ ಕೆಂಪುಗಲ್ಲಿನಿಂದ ಹಾಸಿ ದ್ದಾರೆ. ಒಮ್ಮೆಗೇ ಲಕ್ಷದಷ್ಟು ಮಂದಿ ಮಂಡಿಯೂರಿ ಪ್ರಾರ್ಥನೆ ಮಾಡು ವಷ್ಟು ವಿಶಾಲವಾದ ಅಂಗಣವದು. ಅಂಗಳಕ್ಕಿದಿರಾಗಿರುವುದೇ ಮಸೀದಿ. ಸಾರ್ಸನಿಕ್ ವಾಸ್ತುಶೈಲಿಯ ಕಮಾನು, ಸ್ತಂಭರಾಜಿಗಳುಳ್ಳ ಹಿರಿಯ ಚಾವಡಿ ಯದು. ಅದರ ಮೇಲೆ ಹಾಲುಗಲ್ಲಿನಿಂದ ರಚಿತವಾದ ಮೂರು ಭವ್ಯ ಗುಂಬಜ್‌ಗಳ ಸಾಲಿವೆ. ಕೆಳಗಡೆ ಚಾವಡಿಯಲ್ಲಿ ಸದ್ದಿಲ್ಲದ ಆವರಣ. ಕೆಲ ವರು ಹೊರನಾಡಿನ ಮುಸಲ್ಮಾನ ಯಾತ್ರಿಕರು ಅಲ್ಲಿ ಕುಳಿತು, ಭಕ್ತಿಯಿಂದ ಖುರಾನ್ ಪಠಣ ಮಾಡುತ್ತಿದ್ದರು. ನಾವು ಅಂಗಣದ ಮೂಲೆ ಮೂಲೆಗೂ ಹೋಗಿ, ಅಲ್ಲಿನ ನೋಟಗಳನ್ನೆಲ್ಲ ಕಂಡು ಹೊರಕ್ಕೆ ಬಂದೆವು.

ಅನತಿ ದೂರದಲ್ಲೇ ಕಾಣಿಸುತ್ತದೆ—ಹೆಸರಾದ ಕೆಂಪು ಕೋಟೆ. ಮೊಗಲ್ ಅರಸರು ಕಟ್ಟಿಸಿದ ಹಲವಾರು ಅರಮನೆಗಳು ಆ ಕೋಟೆಯೊಳ ಗಿವೆ. 'ದಿವಾನಿ ಖಾಸ್' 'ದಿವಾನಿ ಆಮ್'—ಮೊದಲಾದ ಸಭಾಂಗಣಗಳು, ಅಂತಃಪುರಗಳು, ಸ್ನಾನ ಗೃಹಗಳು, ಉದ್ಯಾನಗಳು ಅಲ್ಲಿವೆ. ಅವನ್ನು ನೋ ಡುವುದಕ್ಕೆಂದು ನಾವು ಮೂವರೂ ಕೆಮೆರಾ ಹಿಡಿದು ಹೊರಟೆವು. ಕೆಂಪು ಕೋಟೆಯ ದಿಡ್ಡಿ ಬಾಗಿಲನ್ನು ದಾಟಿ, ಆಚೀಚಿನ ವ್ಯಾಪಾರಿಗಳ ಕಡೆಗೆ ಕಿವಿ ಯೊಡ್ಡದೆ, ನೆಟ್ಟಗೆ ಮುಂದುವರಿದು 'ದಿವಾನಿ ಆಮ್' ಚಾವಡಿಯನ್ನು ಸೇರಿದೆವು. ಸುಮಾರು ನೂರು ಅಡಿ ಅಗಲ, ಇನ್ನೂರು ಅಡಿ ವಿಶಾಲವಾ ಗಿದ್ದು, ಮೂರು ಕಡೆಗಳಲ್ಲೂ ತೆರೆದ ಸಭಾಂಗಣವಿದು. ಸಾಲು ಸಾಲಾಗಿ ಸ್ತಂಭರಾಜಿಗಳು, ಕಮಾನಗಳು, ಈ ಮಂದಿರಕ್ಕೆ ಒಂದು ವಿಶೇಷವಾದ ಗಾಂಭೀರ್ಯವನ್ನು ಪ್ರೇರಿಸುತ್ತವೆ. ಈ ಸಭಾಂಗಣದ ನಡುವೆ ಮೊಗಲ್ ಬಾದಷಹರು ಕುಳಿತಿರುತ್ತಿದ್ದ ಸಿಂಹಾಸನವನ್ನಿರಿಸುವ ವೇದಿಕೆ ಇದೆ. ಈ ವೇದಿಕೆ ಹಾಲುಗಲ್ಲಿನ ರಚನೆ. ಅದರಲ್ಲೇ ಕೊರೆದು ನಾನಾ ವಿಧದ ಬಣ್ಣದ ಕಲ್ಲುಗಳನ್ನು ತುಂಬಿಸಿ ಮಾಡಿದ ಹೂಬಳ್ಳಿಗಳ ಕೆತ್ತನೆಯಿದೆ. ಮೊಗಲ್ ದೊರೆಗಳು ಇಲ್ಲಿ ಕುಳಿತು ಸಭೆ ಜರುಗಿಸುತ್ತಿದ್ದರಂತೆ. ಅಲ್ಲಿಂದ ಒಳಕ್ಕೆ ಹೋದರೆ—ಬಹು ವಿಶಾಲವಾದ ಉದ್ಯಾನವನ್ನು ಸೇರುತ್ತೇವೆ. ಉದ್ಯಾನ

ಬಹು ವಿಸ್ತಾರವಾದದ್ದು. ಅಲ್ಲಲ್ಲಿ ಸುಂದರವಾದ ಕಾರಂಜಿಗಳನ್ನು ನಟ್ಟಿದ್ದಾರೆ, ಕೊಳಗಳನ್ನು ನಿರ್ಮಿಸಿದ್ದಾರೆ. ಗಿಡಮರಗಳನ್ನು ಬೆಳೆಯಿಸಿ ಹಚ್ಚ ಹಸುರಿನ ಸೊಗವನ್ನೆಲ್ಲ ಚೆಲ್ಲಿದ್ದಾರೆ. ಈ ಹಸುರು ನೆಲದ ಬದಿಯಲ್ಲೂ, ನಡು ನಡುವೆಯೂ, ಅನೇಕ ವಾಸ್ತುರಚನೆಗಳಿವೆ. ಸಂಪೂರ್ಣ ಹಾಲುಗಲ್ಲಿನಿಂದಲೇ ನಿರ್ಮಿತವಾದ ಬಾದಷಹರ ಖಾಸಗಿ ದಿವಾನಖಾನೆಯೊಂದು ಕಾಣಸಿಗುತ್ತದೆ. ಉದ್ದಕ್ಕೂ ನೆಲದ ಮೇಲೆ ಹಾಲುಗಲ್ಲನ್ನು ಹಾಸಿದ್ದಾರೆ. ಅದರಲ್ಲೇ ಅಲಂಕೃತವಾದ ಕಾಲುವೆ ಕಡಿದಿದ್ದಾರೆ. ಹಿಂದೊಂದು ಕಾಲದಲ್ಲಿ ಯಮುನಾ ನದಿಯ ನೀರು ಈ ಕಾಲುವೆಯಲ್ಲಿ ಹರಿದಾಡುತ್ತಿತ್ತಂತೆ. ಅಂತಃಪುರದ ಸ್ನಾನ ಗೃಹಕ್ಕೂ ಹೋಗುತ್ತಿತ್ತಂತೆ. ನಮ್ಮೂರಿನಲ್ಲಿ ಹಾಲುಗಲ್ಲನ್ನು ಕಾಣುವುದಕ್ಕೆ ಕೆಲವೊಂದು ಶಾಲಾ ಕಟ್ಟಡಗಳ ಗೋಡೆಗಳನ್ನು ಕಾಣಬೇಕು. ಅಲ್ಲಿ ದಾನಿಗಳಾದ ಪ್ರೇತಾತ್ಮರ ಹೆಸರುಗಳನ್ನು ಹಾಲುಗಲ್ಲಿನಲ್ಲಿ ಕೊರೆದು ಗೋಡೆಗೆ ಅಂಟಿಸುವ ವಾಡಿಕೆಯಿದೆ. ಆದುದರಿಂದ ಹಾಲುಗಲ್ಲಿನ ನೆನಪಿನೊಡನೆ ಸತ್ತವರ ನೆನಪು ಬಂದೇ ಬರುತ್ತದೆ. ಇಲ್ಲಿ ಹಾಗೇನಿಲ್ಲ--ಚಾವಡಿಗಳಿಗೂ ಹಾಲುಗಲ್ಲೇ, ನೆಲಕ್ಕೂ ಅದೇನೆ. ಗೋಡೆ, ಸ್ತಂಭ, ಮಾಡುಗಳಿಗೂ ಅದನ್ನೇ ಬಳಸಿದ್ದಾರೆ. ಅದನ್ನು ತುಳಿದು ಓಡುವಾಗಲೆಲ್ಲ ನಮ್ಮ ಮನಸ್ಸಿಗೇ ಅಳುಕು ಬರುತ್ತದೆ.

ಇಂಥ ಹತ್ತೆಂಟು ಮಂದಿರಗಳನ್ನು ಸುತ್ತಿ, ಸುಳಿದು ನೋಡುತ್ತ ಅಲೆದಾಡಿದೆವು. ಮೊದಲಿಗೆ ಎದುರಾಗುವ ಮಂದಿರದಿಂದ ಉತ್ತರದಿಕ್ಕಿಗೆ ತಿರುಗಿದರೆ, ದೂರದಲ್ಲಿ ಯಮುನಾ ನದಿ ಹರಿಯುವುದು ಕಾಣುತ್ತದೆ. ಹಿಂದೊಂದು ಕಾಲದಲ್ಲಿ ಯಮುನೆ ಕೆಂಪು ಕೋಟೆಗೆ ಮೈಸವರಿಯೇ ಹಾದು ಹೋಗುತ್ತಿದ್ದಳಂತೆ. ಈಗ ಹಾಗಿಲ್ಲ. ಯಮುನೆ ಚಂಚಲ ಸ್ವಭಾವಿ. ಅವಳ ದಾರಿ ನಿಶ್ಚಿತದ್ದಲ್ಲ. ಬಾದಷಹರ ವೈಭವಕ್ಕೆ ಮುನಿದು ಆಕೆಯೂ ತನ್ನ ದಾರಿ ಬದಲಿಸಿ ಸರಿದಂತಿದೆ. ಯಮುನೆಯ ಸಂಚಾರ ಈ ಕೋಟೆಗೆ ಸಮೀಪವಾಗಿದ್ದಾಗ, ಈ ಅರಮನೆಗಳಿಗೆ ಇನ್ನೆಷ್ಟು ಸೊಗಸಿತ್ತೋ!

ಬಾದಷಹರ ರಾಣೀವಾಸದ ಸ್ನಾನಗೃಹವೂ ಚಂದ್ರಕಾಂತ ಶಿಲೆಯ ರಚನೆ. ಬೆಳುಗಲ್ಲಿನ ಕಾಲುವೆಯಿಂದ, ನದಿಯ ನೀರು, ಸುಂದರವಾದ ನಡುಮನೆಯೊಳಕ್ಕೆ ಹರಿದು ಬಂದು, ತುಸುವೇ ಆಳವಾದ ಕೊಳವೊಂದರಲ್ಲಿ ತುಂಬಿಕೊಳ್ಳುತ್ತದೆ. ಆ ನೀರಲ್ಲಿ ಹೂವು, ಅತ್ತರುಗಳನ್ನೆಲ್ಲ ತೇಲಿಸಿ, ರಾಜ್ಞ

ಮಹಿಳೆಯರು ಸ್ನಾನಮಾಡುತ್ತಿದ್ದರಂತೆ. ಆಗಿನ ದಿನದ ರಾಜವಿಲಾಸವನ್ನು ನೆನೆದು, ಜನ ಅಸೂಯೆಪಡಬಹುದಾದರೂ, ಅದು ಬರಿಯ ವಿಲಾಸವೆನ್ನು ವಂತಿಲ್ಲ. ಮೊಗಲರ ಈ ಅರಮನೆ,ಉದ್ಯಾನ ಮಂಟಪ, ಸ್ನಾನಗೃಹಗಳನ್ನೆಲ್ಲ ಕಂಡವರಿಗೆ—ಆ ಜನರಲ್ಲಿ ಸೌಂದರ್ಯ ದೃಷ್ಟಿ ತುಂಬಿದ್ದಿರಬೇಕೆಂದು ತೋ ರಲೇಬೇಕು. ಚೆಲುವಿನ ರೇಖೆ, ಆಕೃತಿ, ಬಣ್ಣಬಣ್ಣಗಳಲ್ಲಿನ ಮೇಳ—ಇವು ಗಳಲ್ಲಿ ಆಡಂಬರಗಳಿಗಿಂತ ಹೆಚ್ಚಾಗಿ ಲಲಿತ ಸೊಬಗಿಗೆ ಮನಸೋತವರು, ಅವರೆಂದು ತಿಳಿಯಬೇಕಾಗುತ್ತದೆ.

ಈ ಸ್ನಾನಗೃಹಕ್ಕೆ ತುಸು ದೂರದಲ್ಲಿ 'ಮೋತಿ ಮಜೀದ್' ಎಂಬ ಪ್ರಾರ್ಥನಾ ಗೃಹವಿದೆ. ಎದುರುಗಡೆ ಕಟ್ಟಿದ್ದ ಕೆಂಗಲ್ಲ ಪ್ರಾಕಾರದಿಂದಾಗಿ, ದೂರದಿಂದ ನೋಡುವ ನಮಗೆ,ಅದರ ಮೂರು ಶಿಖರಗಳು ಮಾತ್ರ ಕಾಣಿಸು ತ್ತವೆ. ಒಮ್ಮೆ ಈ ಪ್ರಾಕಾರವನ್ನು ದಾಟಿ ಒಳಕ್ಕೆ ಹೋದರೆ, ಶುದ್ಧ ಬಿಳು ಗಲ್ಲಿನ ಅಂಗಣ, ಸೋಪಾನ, ಚಾವಡಿ, ಸ್ತಂಭರಾಜಿಗಳೆಲ್ಲ ಕಾಣಿಸುತ್ತವೆ. ಬಿಳುಗಲ್ಲಿಗೆ ತನ್ನ ನೈರ್ಮಲ್ಯದಿಂದಲೇ ಮನಶ್ಶಾಂತಿ ಪ್ರೇರಿಸುವ ಶಕ್ತಿ ಯಿದ್ದಂತೆ ಕಾಣಿಸುತ್ತದೆ. ಅದು ನಾನಾಬಗೆಯ ಕೆತ್ತನೆಯಿಂದ ಕೂಡಿ ದ್ದರೂ, ಕಣ್ಣಿಗೆ ತಂಪೀಯುವ ಶಕ್ತಿಯಿದೆ. ಇಂಥಲ್ಲಿ ಬಾದಷಹರೇ ಏಕೆ? —ಶಾಂತಿ ಬಯಸಿ ಧ್ಯಾನಮಾಡಲಿಚ್ಛಿಸುವ ಯಾವನಿಗೂ ಮನ ತಣಿದೀತು. ನಾವು ಅದನ್ನು ನೋಡುತ್ತಿದ್ದಾಗಲೇ, ಮಾರವಾಡಿ ದಂಪತಿಗಳಿಬ್ಬರು ಈ ಮಂದಿರಮ್ನು ನೋಡಲು ಬಂದರು. ಅವರಲ್ಲಿ ಆ ಮಾರವಾಡಿ ಕನ್ಯೆ ತನ್ನೂ ರಿನ ಕೆಂಪುಲಂಗ, ಕೇಸರಿ ಬಣ್ಣದ ಮೇಲುದೆ ಹಾಕಿಕೊಂಡು, ಲಘುನಡಿಗೆ ಯಿಂದ ಆಚೀಚೆ ಓಡಾಡುವಾಗ—ಹಳೆಯ ಕಾಲದ ಕನಸು ನನಗುಂಟಾ ಯಿತು. ಈ ಆವರಣದಲ್ಲಿ ಮೊಗಲರು ಆಳುತ್ತಿದ್ದ ಕಾಲದಲ್ಲಿ, ಚಿತ್ರವಿಚಿತ್ರ ವಾದ ಬಣ್ಣದುಡುಗೆಗಳಿಂದ ರಂಜಿತರಾದ ಅರಮನೆಯ ರಾಜ ಮಹಿಳೆ ಯರು, ದಾಸ ದಾಸಿಯರು, ಕಿಲಕಿಲನೆ ಓಡಾಡುತ್ತಿದ್ದಾಗ, ಉದ್ಯಾನದ ಗಿಡ ಮರಗಳೆಡೆಯಲ್ಲಿ ಕಣ್ಣುಮುಚ್ಚಾಳೆಯಾಡುತ್ತಿದ್ದಾಗ, ಎಂಥ ಸುಂದರ ಸ್ವಪ್ನ ವಿಲಾಸ ತೇಲಾಡುತ್ತಿದ್ದಿರಬಹುದೋ—ಎಂಬ ಊಹೆ ನನಗಾಯಿತು.

ಮೋತಿ ಮಜೀದಿಯಿಂದ ನಾವು ಹೊರಗೆ ಬಂದು, ತಿರುಗಿ ಉದ್ಯಾ ನಕ್ಕೆ ಕಾಲಿಟ್ಟೆವು. ಹಚ್ಚಗೆ ಹಸುರಾಗಿ ಹಾಸಿದ ನೆಲ; ಅಲ್ಲಲ್ಲಿ ಇಕ್ಕೆಡೆಯ 'ಸೈಪ್ರಸ್' ವೃಕ್ಷಗಳಿಂದ ರಂಜಿತವಾದ ಕಾಲುದಾರಿಗಳು; ಹಸುರಿಗೆ ಪ್ರತಿ,

ಕೆಂಪುಗಲ್ಲಿನಿಂದ ನಿರ್ಮಿತವಾದ ಮಂಟಪಗಳು. ಅಲ್ಲಲ್ಲಿ, ಒಂದು ಕಾಲ ದಲ್ಲಿ ನೀರು ತುಂಬಿದ್ದ, ತುಸುವೇ ಆಳವಾದ ಕೊಳಗಳು—ಹಿಂದಿನವರಿಗೆ ಇವು ಸಂತಸ ಕೊಟ್ಟಂತೆ ಇಂದಿನ ಪ್ರವಾಸಿಗೂ ಸಂತಸ ಕೊಡುವಂಥವೇ. ನೋಡುವ ಕಣ್ಣುಗಳು ಮಾತ್ರಬೇಕು. ಮೈಮರೆವ ಮನಬೇಕು; ಅಸೂಯೆ ಯಿಲ್ಲದ ರಸಿಕತೆಯಂತು ಬೇಕೇಬೇಕು.

ಇವನ್ನೆಲ್ಲ ನೋಡಿ, ವೇಳೆಯಾಯಿತೆಂದು ಮದ್ರಾಸು ಹೊಟೇಲಿಗೆ ಹೋಗಿ ಊಟವನ್ನು ಮುಗಿಸಿ, ವಿಶ್ರಮಿಸಿದೆವು. ಬಿಸಿಲು ಇಳಿದ ಮೇಲೆ ನವ ದೇಹಲಿಯ ಇನ್ನೊಂದು ಪ್ರೇಕ್ಷಣೀಯ ಸ್ಥಳಕ್ಕೆ ಹೋದೆವು. ಊರ ಹೊರಗೆ, ಊರಿಗೆ ತಾಗಿಯೇ, ಲಕ್ಷ್ಮೀಪುತ್ರರಾದ ಬಿರ್ಲಾಮನೆತನದವರು ಕಟ್ಟಿಸಿದೊಂದು ದೇವಾಲಯ ಅಲ್ಲಿದೆ. ಆ ದೇವಾಲಯವನ್ನು 'ಬಿರ್ಲಾ ಮಂದಿರ'ವೆಂದೇ ಜನ ಕರೆಯುತ್ತಾರೆ. ಮಂದಿರ ಲಕ್ಷ್ಮೀನಾರಾಯಣರದು. ಹಲವಾರು ಲಕ್ಷ ರೂಪಾಯಿಗಳನ್ನು ವ್ಯಯಿಸಿ, ಇತ್ತೀಚೆಗೆ ಕಟ್ಟಿದ ಈ ದೇವಾಲಯ, ಉಳಿದ ಎಷ್ಟೋ ಅರ್ವಾಚೀನ ದೇವಾಲಯಗಳಿಗಿಂತ ಸುಂದರವಾಗಿದೆ. ಅದು ನಾಗರಶೈಲಿಯ ತದನುಕರಣೆಯಲ್ಲವಾದರೂ, ಅದನ್ನೇ ಆಧಾರವಾಗಿರಿಸಿಕೊಂಡ ವಾಸ್ತು ರಚನೆ. ಗುಡಿ ಇರುವ ಅಂಗಣ, ಗುಡಿಯ ಪ್ರಮಾಣಕ್ಕೆ ತಕ್ಕ ವೈಶಾಲ್ಯವಿಲ್ಲದ್ದು. ಅಂಗಣ, ಅಂಗಣದ ನೆಲ, ಬಣ್ಣಬಣ್ಣದ ಹಾಲುಗಲ್ಲುಗಳಿಂದ ಹಾಸಿತ್ತು. ಗುಡಿಯು-ಗರ್ಭಗೃಹ, ನವ ರಂಗ, ಮುಖಮಂಟಪಗಳಿಂದ ಕೂಡಿದ ಹಿರಿಯ ರಚನೆ. ಗುಡಿಯ ಶಿಖರ —ಒಂದರ ಮಗ್ಗುಲಿಗೆ ಇನ್ನೊಂದನ್ನು ಇರಿಸಿರುವ, ಮೂರು ಬೇರೆಬೇರೆ ಉನ್ನತ ಶಿಖರಗಳಿಂದ ರಂಜಿತವಾಗಿ ಕಾಣಿಸುತ್ತದೆ. ತೀರ ಹಿಂದಿನಿಂದಲೂ ತೀರ ಮುಂದಿನಿಂದಲೂ ನೋಡುವಾಗ, ಈ ಶಿಖರಗಳು ಬೇರೆಬೇರೆಯಾ ಗಿಯೇ ಕಾಣಿಸುವುದರಿಂದ ಅಷ್ಟೊಂದು ಸೊಗಸು ಕಾಣುವುದಿಲ್ಲ. ಆದರೆ ಎಡಬಲ ಪಾರ್ಶ್ವಗಳಿಂದ ಕಾಣುವ ಪ್ರಸಂಗ ಬಂದಾಗ, ಶಿಖರಗಳು ಒಕ್ಕೂಟವಾಗಿ ದೇವಾಲಯಕ್ಕೆ ಹೊಂದಿಕೊಂಡು ಚೆನ್ನಾಗಿಯೇ ಕಾಣುತ್ತವೆ. ಗುಡಿಯ ಒಳಗಡೆಯ ಗೋಡೆಗಳಲ್ಲಿ ಹಿಂದೂ ಪುರಾಣಗಳಿಗೆ ಸಂಬಂಧಿಸಿದ ಹಲವಾರು ಚಿತ್ರಗಳಿವೆ. ಕೆಲವು ಬಣ್ಣದಿಂದ ಬರೆದುವು, ಕೆಲವು ಕಲ್ಲಿನಲ್ಲಿ ಕೆತ್ತಿದುವು, 'ಹಣವಿದ್ದವರಿಗೆ ಅಭಿರುಚಿ ಇರಬೇಕೆಂದಿಲ್ಲ'—ಎಂಬುದಕ್ಕೆ ಅವು ಸಾಕ್ಷಿಗಳು. ಗುಡಿಯ ಮುಖ್ಯ ಪ್ರತಿಮೆಗಳಾದ ಲಕ್ಷ್ಮೀನಾರಾಯಣರ

ವಿಗ್ರಹಗಳು ಹಾಲುಗಲ್ಲಿನವುಗಳೇ. ವಿಗ್ರಹಗಳು ದೊಡ್ಡವು. ಆದರೆ ದೈವಿಕತೆ ಆ ವಿಗ್ರಹಗಳಲ್ಲಿ ಇಷ್ಟಿಷ್ಟೂ ಕಾಣಿಸದಂತಹ ಮೊದ್ದು ರಚನೆಗಳು.

ಗುಡಿಯ ಒಂದು ಮಗ್ಗುಲಿಗೆ, ಯಾತ್ರಿಕರಾಗಿ ಬಂದವರು ನೆಲೆಸಲು ಅನುಕೂಲವಾದ ನಿವಾಸಗೃಹಗಳಿವೆ. ಇನ್ನೊಂದು ಮಗ್ಗುಲಲ್ಲಿ ಬಿರ್ಲಾ ಮನೆತನದವರೇ ಕಟ್ಟಿಸಿದ,ಚಿಕ್ಕೊಂದು ಬುದ್ಧ ದೇವಾಲಯವಿದೆ. ಗುಡಿಯ ಹಿಂದುಗಡೆ ವಿಶಾಲವಾದೊಂದು ಉದ್ಯಾನವಿದೆ. ಅದಕ್ಕೂ ಹಿಂದೆ, ಬಹು ವಿಶಾಲವಾದ ಕಾಡಿನತಪ್ಪಲಿದೆ. ಈ ಉದ್ಯಾನವಲ್ಲಿ–ಕಾಲಿರಿಸಿದರೆ, ಭಕ್ತರ ಹಿಂಬಿಗಿಂತ ವಿಲಾಸಿಗಳ ಹಾವಳಿ ಹೆಚ್ಚಾಗಿ ಕಾಣಿಸುತ್ತದೆ. ಅಂಥವರನ್ನೇ ಆಕರ್ಷಿಸುವ ರಚನೆ ಆ ಉದ್ಯಾನದ್ದು. ಕೃತಕ ಕೊಳಗಳು, ಕೃತಕ ಕಾರಂಜಿಗಳು,ಚೆಲುವಿನ ಗಿಡಮರಗಳು,ಸಾಲದೆಂಬುದಕ್ಕೆ ಕಲ್ಲಿನಿಂದ ಕೆತ್ತಿದ ಕರಡಿ, ಒಂಟೆ, ಮೊಸಳೆ, ಖಡ್ಗಮೃಗದಂತಹ ಅಸಹ್ಯ ರೂಪಗಳನ್ನು ಇನ್ನಷ್ಟು ಅಸಹ್ಯವಾಗಿ ಚಿತ್ರಿಸಿದ ಶಿಲ್ಪಗಳಿವೆ. ನಾಲ್ಕಾರು ಮಟ್ಟಗಳಲ್ಲಿ ಶೋಭಿಸುವ ಈ ಉದ್ಯಾನ, ಪುಟ್ಟ ಸಂತೆಯೂ ಆಗಿದೆ. ಹುರಿಗಡಲೆ ಮಾರುವವರು, ಹಣ್ಣುಹಂಪಲು ಮಾರುವವರು, ಕೇಳಿದೊಡನೆ ಫೋಟೋ ತೆಗೆದು ತೋರಿಸುವವರು–ಇಂಥವರು ಸೇರಿ,ಉದ್ಯಾನವನ್ನು ಜಾತ್ರೆಯ ಸ್ಥಳವನ್ನಾಗಿ ಮಾಡಿದ್ದಾರೆ. ಹೀಗಾಗಿ ಮಕ್ಕಳ ಆಟಕ್ಕೆ, ವಿಲಾಸಿಗಳ ಭೇಟಿಗೆ—ಇದೊಂದು ಉತ್ತಮವಾದ ಸ್ಥಳವಾಗಿದೆ. ಇಷ್ಟೆಲ್ಲ ಕೊರತೆ ಕಂಡರೂ, ಇದೊಂದು ಚೆಲುವಿನ ಆವರಣ ಎನ್ನಲೇಬೇಕು.

ಬಿರ್ಲಾಮಂದಿರವನ್ನು ನೋಡಿ ಮುಗಿಸಿದ ಬಳಿಕ,ನಾವು ಹಳೆ,ಹೊಸ ದಿಲ್ಲಿ ನಗರಗಳ ನಡುವೆ ಮೈದಾನಿನಲ್ಲಿ,ನಡೆಯುತ್ತಿದ್ದ ಔದ್ಯೋಗಿಕ ಪ್ರದರ್ಶನವನ್ನು ನೋಡಲು ಹೋದೆವು. ಇಲ್ಲಂತೂ ಹೇಳಲಾರದ ಜನಸಂದಣಿ. ಪೇಟೆಯಲ್ಲಿ ದೊರೆಯಬಹುದಾದ ಮಾಲುಗಳನ್ನೇ ಇಲ್ಲಿ ಮಾರಲು ಬಂದ ಅಂಗಡಿಕಾರರು. ಜಾತ್ರೆ ನೋಡಲು ಬಂದವರೂ ಬಹುಮಂದಿ. ಆದರೂ ಉಪಯುಕ್ತ ಅಂಶ ಇಲ್ಲದೆ ಇರಲಿಲ್ಲ. ಆಧುನಿಕ ವಿಜ್ಞಾನ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ಹಲವಾರು ಕಾರ್ಖಾನೆಗಳ ಜನರು, ತಮ್ಮ ಯಂತ್ರೋಪಕರಣಗಳ ಪ್ರದರ್ಶನ ಏರ್ಪಡಿಸಿದ್ದರು. ಸುಮಾರು ಎರಡುಮೂರು ತಾಸುಗಳ ತನಕ, ಅದನ್ನೇ ನಿರೀಕ್ಷಿಸುತ್ತ ಸಮಯ ಕಳೆದೆವು. ನಮ್ಮ ದೇಶದಲ್ಲೇ ತಯಾರಾಗುವ ಕೆಲವು ಆಧುನಿಕ ಯಂತ್ರಗಳನ್ನು ಕಂಡು ನಮಗೆ

ಹೆಮ್ಮೆಯಾಗುವಂತಿದೆ.

ಅಲ್ಲಿಗೆ ಆ ದಿನದ ನಮ್ಮ ಉಂಡಾಡಿತನ ಮುಗಿಯಿತು. ಮಾರನೆಯ ದಿನ ಬೆಳಗ್ಗೆ ನಾವು ತಿರುಗಿ ನವದೇಹಲಿಗೆ ಬಂದು, ಗೆಳೆಯ ವ್ಯಾಸರಾಯ ನನ್ನು ಕೂಡಿಕೊಂಡು,ಕುತುಬ್ ಮಿನಾರನ್ನು ನೋಡಲು ಹೊರಟೆವು. ಅದಿರುವುದು ಹತ್ತುಹದಿನೈದು ಮೈಲುಗಳ ದೂರದಲ್ಲಿ. ಆದುದರಿಂದ ಒಂದು ಮೋಟರು ಸ್ಯಾಕಲು ರಿಕ್ಷಾವನ್ನು ಬಾಡಿಗೆಗೆ ಗೊತ್ತುಮಾಡಿ, ಪಯಣ ಹೊರಟೆವು. ನವದೇಹಲಿಯಲ್ಲಿ ಸಾಕಷ್ಟು ಮಿತವ್ಯಯದಿಂದ ಕುಳಿತು ತಿರುಗುವುದಕ್ಕೆ ಈ ವಾಹನ ಉತ್ಕೃಷ್ಟ. ಮೋಟರ್ ಸ್ಯಾಕಲೊಂದರ ಬೆನ್ನಿಗೆ ನಾಲ್ಕು ಜನ ಕುಳಿತಿರಬಹುದಾದ ಗಾಡಿ ಬಿಗಿದಿರುತ್ತಾರೆ. ಇದನ್ನು ನಡೆಯಿಸಲು ಪೆಟ್ರೋಲಿನ ಖರ್ಚು ಕಡಿಮೆ. ಓಟದ ವೇಗವೂ ಹೆಚ್ಚು. ಇದರಲ್ಲಿ ಕುಳಿತು ನಾವು ಎರಡು ಮೈಲು ದೂರದ ಸಫದರ್ ಜಂಗ್ ಎಂಬಲ್ಲಿಗೆ ಬಂದೆವು. ಇದೊಂದು ಮೊಗಲ್ ಕಾಲದ ಗೋರಿ.ವಿಶಾಲಪ್ರಾಕಾರದ ಒಳಗೆ ಸಫದರ್ ಜಂಗನ ಸಮಾಧಿಯಿದೆ. ಈಗ ಅದರ ಒಳಗಡೆ ನಿರಾಶ್ರಿತರು ಮನೆಮಾಡಿಕೊಂಡು, ಪ್ರೇಕ್ಷಕರು ನೋಡುವುದಕ್ಕೆ ತಡೆತೊಡೆಗಳು ಹೆಚ್ಚಾಗಿವೆ. ಒಳಗಿನ ಆವರಣವೂ ಹೊಲಸಾಗಿದೆ. ಕೆಮರಾ ಕೊಂಡು ಹೋದರೆ, ಆ ಜನ ಮುನಿಸುಗೊಳ್ಳುತ್ತಾರೆ. ಹೀಗಾಗಿ ನಾವು ಅಲ್ಲಿಂದ ಬರಿಗೈಯಿಂದಲೇ ಮರಳಿದೆವು. ಅನಂತರ ನೇರಾಗಿ ಕುತುಬ್ ಮಿನಾರ್ ಕಡೆಗೆ ಸಾಗಿದೆವು. ಆ ದೂರದ ತನಕವೂ ದೇಹಲಿ ಬೆಳೆದು,ಅನೇಕ ವಿಸ್ತರಣಗಳಾಗಿ ಹಬ್ಬಿಕೊಂಡಿವೆ.ಹಿಂದೆ ನಾನು ಕಂಡಾಗ, ಅದು ಬಟ್ಟಬಯಲಾಗಿತ್ತು. ಜನಹೀನ ಬೆಂಗಾಡಾಗಿತ್ತು. ರಸ್ತೆಯ ಎರಡು ಮಗ್ಗುಲಲ್ಲೂ ನಾವು ಹೋದ ವೇಳೆಯಲ್ಲಿ ಗೋಧಿಯ ಹೊಲಗಳು ಹಣ್ಣಾಗಿ ತಲೆದೂಗುತ್ತಿದ್ದುವು. ಕುತುಬನ್ನು ಸೇರುವುದಕ್ಕೆ ಅರ್ಧ ಗಂಟೆಯೂ ಹಿಡಿಯಲಿಲ್ಲ. ಅಲ್ಲಿನ ದೃಶ್ಯವೇ ಬೇರೆ. ಗಿಡಮರಗಳು ತುಂಬಿವೆ–ಅಲ್ಲಿ. ನೆಲದಲ್ಲೆಲ್ಲ ಹರವಿಬಿದ್ದಿರುವ ನೀರುಳ್ಳಿ ಬಣ್ಣದ ದೊರಗು ಮರಳಿನ ಚೆಲುವಂತು, ವಿಚಿತ್ರವಾಗಿತ್ತು. ಅದು ದೂರಕ್ಕೆ ಧೂಳಿನಂತೆ ಕಂಡರೂ, ಹತ್ತಿರ ಬರಲು ಕುಳಿತು ಮಕ್ಕಳಂತೆ ಆಟವಾಡುವ ಮನಸ್ಸು ಆಗುತ್ತದೆ.

ನಮ್ಮ ಹಳೆಯ ಚರಿತ್ರೆಪುಸ್ತಕಗಳಲ್ಲಿ—ಕುತುಬ್ ಮಿನಾರಿನ ಚಿತ್ರ ಇದ್ದೇ ಇರುತಿತ್ತು. ಅದರ ಸಮೀಪಕ್ಕೆ ರಾಜಾವಧಾನನ ಸ್ತಂಭದ ಚಿತ್ರವೂ

ಕಾಣಿಸುತ್ತಿತ್ತು. ನಾವು ಬಳಿಕ ನೋಡಹೋದುದು ಅದನ್ನೇ. ಇಲ್ಲಿ ಹಿಂದಿನ ಕಾಲದಲ್ಲಿ ಬಲುಸುಂದರವಾದ ದೇವಾಲಯವೊಂದಿತ್ತು. ಈಗ ಅದರ ಭಗ್ನ ಅವಶೇಷಗಳನ್ನು ಮಾತ್ರ ಕಾಣಬಹುದು. ಈ ಮಂದಿರದ ಎರಡು ಹೆಬ್ಬಾಗಿಲುಗಳು ಮಾತ್ರ ತಲೆಯೆತ್ತಿ ನಿಂತಿವೆ. ಅವುಗಳ ಗೋಡೆಯ ಮೇಲೆ ಕೆತ್ತನೆಯ ಚೆಲುವು ಬಹಳ. ದೇವಾಲಯವಿದ್ದ ತಾವಿನ ಅಂಗಣನಲ್ಲೇ, ಎರಕದ ಒಂದಡಿ ವ್ಯಾಸದ, ಸುಮಾರು ಇಪ್ಪತ್ತಡಿ ಎತ್ತರವಾಗಿರುವ ಒಂದು ಉಕ್ಕಿನ ಕಂಬವನ್ನು ನಟ್ಟಿದ್ದಾರೆ. ನಟ್ಟು ಹಲವಾರು ಶತಮಾನಗಳು ಕಳೆದರೂ, ಆ ಲೋಹಕ್ಕೆ ಇನ್ನೂ ತುಕ್ಕುಹಿಡಿದುದು ಕಾಣುವುದಿಲ್ಲ.ಆಧುನಿಕ ಕುಲುಮೆ, ಯಂತ್ರಸಲಕರಣೆಗಳಿಲ್ಲದ ಹಿಂದಿನ ದಿನಗಳಲ್ಲಿ, ಇಂಥ ಸ್ತಂಭಗಳನ್ನು ಹೇಗೆ ಎರೆದರೋ, ಹೇಗೆ ತಂದು ನಟ್ಟರೋ—ಎಂಬುದನ್ನು ನೆನೆದರೆ ವಿಸ್ಮಯವಾಗುತ್ತದೆ. ಅಲ್ಲೇ ಬಳಿಯಲ್ಲಿದೆ—ಕುತುಬ್‌ಶಾಯಿ ಮನೆತನದವರು ಕಟ್ಟಿಸಿದ 'ಮಿನಾರ್' ಇಲ್ಲವೆ ಕೊತ್ತಳ. ನೆಲದಿಂದ ನೆಟ್ಟಗೆ ದೀಪಸ್ತಂಭದಂತೆ ತಲೆಯೆತ್ತಿಕೊಂಡಿರುವ ಈ ಕೊತ್ತಳ,ಬುಡದಲ್ಲಿ ಸುಮಾರು ಹದಿನಾರು ಅಡಿ ವ್ಯಾಸವುಳ್ಳದ್ದು. ಒಳಗೆ ಸುರುಳಿಸುತ್ತಿ ಏರುವ ಸೋಪಾನ ಪಥಗಳಿಂದ ಕೂಡಿದೆ. ಹೊರಗಡೆ ಸುಂದರವಾದ, ನಯವಾದ, ಅಲಂಕೃತವಾದ ಮೈಯುಳ್ಳದ್ದಾಗಿದೆ! ಅದು ಏರುತ್ತ ಏರುತ್ತ ಸಪುರವಾಗಿ ತೀರ ಮೇಲಕ್ಕೇರಿ, ಬಾನನ್ನೇ ಚುಂಬಿಸುವಂತೆ ನಿಂತಿದೆ. ಕೆಲವು ವರ್ಷಗಳ ಹಿಂದೆ ಸಿಡಿಲಿನ ಆಘಾತದಿಂದ ಅದರ ಕಟ್ಟಕೊನೆಯ ಮೊದಲಿನ ಅಂತಸ್ತು ಕುಸಿದು ಬಿದ್ದಿತೆನ್ನುತ್ತಾರೆ. ಅದರೊಳಗೆ ಹೋಗುವ ದಾರಿ ಮಾತ್ರ ಕಿರಿದಾದುದು. ಶ್ರೀಪತಿಯಂಥ ಗೆಳೆಯರನ್ನು ಕರೆದುಕೊಂಡು ನಾವು ಹೋದೆವೆಂದರೆ, ಮೇಲಕ್ಕೇರಿದವರು ಕೆಳಕ್ಕೆ ಬರುವಂತೆಯೂ ಇಲ್ಲ. ಕೆಳಗಿರುವವರು ಮೇಲಕ್ಕೆ ಹೋಗುವಂತೆಯೂ ಇಲ್ಲ. ಆದುದರಿಂದ ಆ ಒಂದು ಸಾಹಸದ ಗೊಡವೆಗೇ ಹೋಗದೆ ನೋಟದಿಂದಲೇ ತೃಪ್ತರಾಗಿ ಮರಳಿದೆವು. ಇಲ್ಲೇ ಸಮೀಪಕ್ಕೆ ವಿಶ್ರಾಂತಿ ಗೃಹವಿದೆ. ಅಲ್ಲಿ ಹೋಗಿ ಕುಳಿತು ನಮ್ಮ ಮಿತ್ರನಿಗೆ ಪ್ರಿಯವಾದ ಸೋಡಾ—ಲಿಮನ್ ತರಿಸಿದೆವು;ಚಾ, ಬಿಸ್ಕಿಟು ತರಿಸಿದೆವು. ಉಪಹಾರಕ್ಕೆ ಕುಳಿತೆವು. ತುಸು ಹೊತ್ತಿನಲ್ಲಿ ದಕ್ಷಿಣಹಿಂದುಸ್ತಾನದ ಉಡುಗೆಯುಟ್ಟ ಇಬ್ಬರು ಹುಡುಗಿಯರೂ, ಒಬ್ಬ ಯುವಕನೂ ಅಲ್ಲಿಗೇ ಉಪಹಾರಕ್ಕೆ ಬಂದು ಕುಳಿತರು. ಹುಡುಗಿಯರ ಬಾಯಿಯಿಂದ 'ಪ್ಸೈಗೊ' ಎಂಬ ಮಾತು ಕೇಳು

ತ್ತಲೇ 'ಇಲ್ಲಿಗೂ ಬಂದೆಯಾ ಜಡಶಂಕರ!' ಎಂಬ ಬೆಂಗಳೂರಿನ ನಾಣ್ಣುಡಿ ನೆನಪಾಯಿತು ನಮಗೆ. ಅವರು ನಮ್ಮ ಊರಿನವರು! ಆಗಾಗಲೇ ತಾಸು ಹನ್ನೊಂದು ಕಳೆದಾಗಿತ್ತು.

ಕುತುಬನ್ನು ನೋಡಿ ಮುಗಿಸಿದ ನಾವು, ಊರಿಗೆ ಮರಳುತ್ತ, ಇನ್ನೂ ಒಂದು ಹೆಸರಾದ ಪ್ರಾಚೀನ ಸ್ಮಾರಕವನ್ನು ನೋಡಹೋದೆವು. ಸಫದರ್ ಜಂಗಿನ ಬಳಿ, ದಾರಿ ಕವಲೊಡೆದು ಯಮುನೆಯ ದಂಡೆಗೆ ಹೋಗುತ್ತದೆ. ಸುಮಾರು ಎರಡುಮೂರು ಮೈಲು ದೂರದ ಈ ಹಾದಿಯ ಇಕ್ಕಡೆಗಳಲ್ಲೂ ಕುರುಚಲು ಕಾಡು ಬೆಳೆದಿದೆ. ದಾರಿಯ ಮಗ್ಗುಲಲ್ಲಿ ಸುಂದರವಾದ ಸಾಲು ಮರಗಳಿವೆ. ದಾರಿಯಲ್ಲೂ ವಿಶೇಷ ಸಂಚಾರಿಗಳಿಲ್ಲದೆ—ಶಾಂತ ವಿಹಾರ ಸ್ಥಳವಾಗಿ ಅದು ಕಾಣಿಸುತ್ತದೆ.

ಆ ದಾರಿಯ ಮಗ್ಗುಲಲ್ಲಿ—ಇಬ್ರಾಹಿಂಲೋಡಿಯ ಸಮಾಧಿಯಿದೆ. ಈ ಸಮಾಧಿಯ ಬಳಿ, ಒಂದು ಹೊಸ ಉದ್ಯಾನವಿದೆ. ವೇಳೆ ಸಾಲದುದರಿಂದ ನಾವು ಅಲ್ಲಿ ತಿರುಗದೆ ನೇರಾಗಿ ಮುಂಬರಿದು ಅಲ್ಲಿರುವ ಹುಮಾಯೂನನ ಗೋರಿಯನ್ನು ನೋಡಹೋದೆವು. ಮೊಗಲರ ಹಿರಿತನವನ್ನೆಲ್ಲ ಹೊತ್ತಿರುವ ಈ ಸ್ಮಾರಕವು—ವಿಶಾಲವಾದೊಂದು ಅಂಗಣದ ನಡುವೆ ರಚನೆಗೊಂಡಿದೆ. ಸುಮಾರು ೨೦ ಅಡಿ ಉನ್ನತವೂ ೩೦೦ ಅಡಿ ಉದ್ದಗಲವೂ ಆದೊಂದು ಪೀಠದಮೇಲೆ ಅದನ್ನು ರಚಿಸಿದ್ದಾರೆ. ಇಂಡೋಸಾರ್ಸನಿಕ್ ವಾಸ್ತುಶೈಲಿಯ ಭವ್ಯವಾದೊಂದು ಉದಾಹರಣೆ ಇದು. ಈ ಹಿರಿಯ ಸಮಾಧಿಗೆ ನಾಲ್ದೆಸೆಗಳಲ್ಲೂ ಪ್ರವೇಶಕ್ಕೆ ಹಿರಿಯ ದ್ವಾರಗಳಿವೆ. ಇನ್ನೂ ಅಲ್ಲಲ್ಲಿ ಮೇಲಿನ ಅಂತಸ್ತುಗಳಿಗೆ ಹೋಗುವ ಕಿರಿಬಾಗಿಲುಗಳಿವೆ. ಈ ಬಾಗಿಲುಗಳಲ್ಲೇರಿ ಹೋದರೆ—ಮೇಲಿನ ಗುಂಬಜಿನ ತಳದ ತನಕ ಹೋಗಿ ಮಾಡಿನ ಚಪ್ಪಟೆಯಾದ ಚಾವಡಿಗೆ ಬರಬಹುದು. ಆಕೃತಿಯಲ್ಲಿ ಸಾಮಾನ್ಯ ತಾಜಮಹಲಿನಂತೆ; ದೂರದ ಕೊತ್ತಳಗಳು ಮಾತ್ರ ಇರುವುದಿಲ್ಲ. ಯಾವತ್ತು ರಚನೆ ಕೆಂಪು ಉಸುಬುಕಲ್ಲಿನದು.

ಈ ಮಂದಿರದ ಒಟ್ಟು ನೋಟ ತುಂಬ ಗಂಭೀರವಾದದ್ದು. ಗುಂಬಜಿನಿಂದ ಕಾಣಸಿಗುವ ಯಮುನಾ ನದಿಯ ನೋಟವಂತು ತೀರ ಸುಂದರವಾದದ್ದು. ಕೆಲವೇ ಸಮಯದ ಮೊದಲು, ಇಲ್ಲಿಯೂ ಹಲವು ನಿರಾಶ್ರಿತರ ವಸತಿಗಳಿದ್ದುವಂತೆ. ನಾವು ಹೋದಾಗ ಬರಿಯ ಹತ್ತೆಂಟು ಕುಟುಂಬಗಳು

ಉಳಿದಿದ್ದುವು. ಈ ಸ್ಮಾರಕದ ಹಿರಿತನಕ್ಕೂ, ಅವರ ಬಡತನಕ್ಕೂ ಎಂತಹ ತಾರತಮ್ಯ!

ಅಲ್ಲಿಂದ ನೆಟ್ಟಗೆ ನವದೇಹಲಿಗೆ ಬಂದೆವು. ನಮ್ಮ ಮುಂದಿನ ಯಾತ್ರೆಯು 'ಖಜುರಾಹೋ' ಎಂಬಲ್ಲಿಗೆ. ಅದು ಎಲ್ಲಿದೆ–ಎಂದು ಹೇಳಲು ನಮಗಾರೂ ಸಿಗಲಿಲ್ಲ. ಅದರ ವಿಚಾರ ತಿಳಿಯಲು ಪ್ರವಾಸದ ಕಚೇರಿಗೆ ಹೋದೆವು. ಒಕ್ಸ್‌ಫರ್ಡ್ ಪುಸ್ತಕಾಲಯಕ್ಕೆ ಹೋದೆವು. ವಾಸ್ತುಶಿಲ್ಪ ಗ್ರಂಥಗಳನ್ನು ತಿರುವಿ ಹಾಕಿದೆವು. ಅದು ಝಾನ್ಸಿಯಿಂದ ನೂರು ಮೈಲು ದೂರಕ್ಕಿದೆ–ಎಂಬ ವಿವರಕ್ಕಿಂತ ಹೆಚ್ಚಿನ ವಿವರ,ನಮಗೆ ದೊರೆಯದೆ ಹೋಯಿತು. ಮುಂದೆ ಅದನ್ನು ಕುರಿತು ಮಾಡಿದ ಪ್ರಯತ್ನಗಳೂ ವಿಫಲವಾದುವು. ಹೀಗಾಗಿ 'ಖಜುರಾಹೋ'ವಿನ ಯಾತ್ರೆ ಕನಸಿನಲ್ಲೇ ಉಳಿಯಿತು.

ಅನಂತರ ನಾನು, ಕನೋಟ್ ಸರ್ಕಸಿನಲ್ಲೇ ಒಂದು ದೊಡ್ಡ ಅಂಗಡಿಯಿದೆ, ಅಲ್ಲಿಗೆ ಹೋಗಿ ಟೆಲಿಫೋನ್ ಡೈರೆಕ್ಟರಿ ತೆಗೆದು, ನಮ್ಮ ಇಬ್ಬರು ಗೆಳೆಯರ ಪರಿಶೋಧನೆಗೆ ತೊಡಗಿದೆ. ಒಬ್ಬರು ಕೇಂದ್ರಸರಕಾರದ ಸೈನ್ಯದ ಇಲಾಖೆಯಲ್ಲಿದ್ದರು. ಇನ್ನೊಬ್ಬರು ಅದರ ಹಣಕಾಸಿನ ಇಲಾಖೆಯಲ್ಲಿದ್ದರು. ಮೊದಲಿನವರು ಊರಲ್ಲಿದ್ದಿಲ್ಲ ಎಂದು ತಿಳಿಯಿತು. ಇನ್ನೊಬ್ಬರು 'ಕಾರಂತ' ಎಂದು ಕೇಳುತ್ತಲೇ, ಫೋನನ್ನು ಕೈಯಲ್ಲಿ ಹಿಡಿದು ದೀರ್ಘ ಸಂಭಾಷಣೆಗೆ ನಿಂತೇಬಿಟ್ಟರು. 'ವಾಸುದೇವರಾವ್'ಎಂಬ ಆ ಮಿತ್ರರು ಕುಂದಾಪುರದಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ಶಾಲೆಯ ಸಹಪಾಠಿಯಾಗಿದ್ದರು.ಅಲ್ಲದೆ ನೆರೆಮನೆಯವರೂ ಆಗಿದ್ದರು. ತುಂಬಾ ಸರಳರು. ಅವರು ಊರುಬಿಟ್ಟು ಮುಂಬಯಿ, ಕರಾಚಿಗಳಲ್ಲಿ ವಾಸವಾಗಿದ್ದು, ಪಾಕಿಸ್ತಾನದ ಗೊಂದಲದಿಂದ ಪಾರಾಗಿಬಂದು, ಈಗ ದೇಹಲಿಯನ್ನು ಸೇರಿದ್ದಾರೆ. ಹಣಕಾಸಿನ ಇಲಾಖೆಯಲ್ಲಿ ಉಪಕಾರ್ಯದರ್ಶಿಯಾಗಿದ್ದಾರೆ. ನಾನು ಅವರನ್ನು ಕರೆಯುವಾಗಲೇ ನನ್ನ ಸ್ವರ ಕೇಳಿದೊಡನೆ "ನಿಮಗೆ ಅವಸರವಿಲ್ಲವಲ್ಲ. ಸ್ವಲ್ಪ ಹೊತ್ತು ಮಾತನಾಡೋಣ"ಎಂದು ಪ್ರಾರಂಭಿಸಿದರು. ಹಳೆಯ ನೆನಪು,ಆಗ್ರಹದ ಸ್ವಾಗತ, ಮುಂದಿನ ಭೇಟಿಯ ವೇಳೆ, ಮನೆಗೆ ಆಮಂತ್ರಣ, ಎಲ್ಲವನ್ನೂ ಒಂದೇ ಉಸಿರಿನಲ್ಲಿ ಹೇಳತೊಡಗಿದರು. ಅಷ್ಟೊಂದು ಕಾಲದ ಅಗಲಿಕೆಯ ಬಳಿಕ ನಮ್ಮ ನೆಚ್ಚಿನ ಮಿತ್ರರೊಬ್ಬರು ಮಾತನಾಡುವುದೆಂದರೆ ನಿಜಕ್ಕೂ ಅಷ್ಟು ಸಂತೋಷವಾಗುತ್ತದೆ. ಕಾಲದ ದೂರವೆಲ್ಲ ಅಳಿದು, ನಮ್ಮ ಎಳೆತನದ ಮನ

ಕುಣಿದಾಡುತ್ತದೆ. ವಾಸುದೇವರಾಯರು ಆದಿನ ಸಂಜೆ ನಮಗೆ ಭೇಟಿಯಾದರು. ತಮ್ಮ ಮನೆಗೆ ನಮ್ಮನ್ನೂ ಕರೆದೊಯ್ದರು. ಅವರ ಜತೆಗೆ ಪುತ್ತೂರಿನ ಇನ್ನೊಬ್ಬ ಬಂಧುವೂ ಇದ್ದ. ಆತನ ಹೆಸರು ವೆಂಕಟಕೃಷ್ಣನೆಂದು. ನನ್ನ ಅಣ್ಣನ ಕಡೆಯ ಸಂಬಂಧ ಅವರದ್ದು. ಈ ಇಬ್ಬರು ಗೆಳೆಯರು ನನ್ನನ್ನೂ ನನ್ನ ಮೂವರು ಮಿತ್ರರನ್ನೂ ಊಟ, ಹರಟೆ, ಸತ್ಕಾರಗಳಿಂದ ಕಂಡ ಬಗೆಯನ್ನು ಎಂದೂ ಮರೆಯುವಂತಿಲ್ಲ. ನಮ್ಮ ಪಾಲಿಗೆ ಅದೊಂದು ಹಿರಿಯ ಹಬ್ಬವೇ ಆಯಿತು. ವೆಂಕಟಕೃಷ್ಣ ಎಳೆಯ ಮಕ್ಕಳ ಸರಳತೆಯುಳ್ಳವ. ನಾವು ದಿಲ್ಲಿಯಿಂದ ಸಿಮ್ಲಾಕ್ಕೆ ಹೋಗುವೆವೆಂದು ಕೇಳಿದೊಡನೆ, ಸಿಮ್ಲಾದ ಮಾಹಿತಿಯನ್ನೆಲ್ಲ ಬರೆದು ಕೊಟ್ಟ. ಆತ ಸಿಮ್ಲಾದಲ್ಲಿ ಹಿಂದೆ ನೌಕರಿಯಲ್ಲಿದ್ದವ. ಅಲ್ಲಿನ ಹಿಮ ಚಳಿಗಳನ್ನು ನೆನೆದು, ತನ್ನ ಉಣ್ಣೆಯ ಕೋಟು ಬ್ಲೇಂಕೆಟುಗಳನ್ನೆಲ್ಲ ಉಡುಗೊರೆ ಮಾಡಲು ಬಂದುಬಿಟ್ಟ. ನಾವು ಆ ದಿನ ರಾತ್ರಿಯನ್ನೆಲ್ಲ ಅವರ ಮನೆಯಲ್ಲೇ ಕಳೆದೆವು. ಯುಗಯುಗದ ಹರಟೆ ಹೊಡೆದೆವು. ಮರುದಿನವೂ ಅಲ್ಲೇನೆ ಉಳಿದೆವು. ಮರುದಿನ ಮಿತ್ರ ಪಾಟೀಲರು ನಮ್ಮನ್ನು ಅಲ್ಲಿಯೇ ಕೂಡಿಕೊಂಡರು.

ಈಗ ಬಂದದ್ದು ನಮ್ಮ ದಿಲ್ಲೀವಾಸದ ನಾಲ್ಕನೆಯ ದಿನ. ಆ ರಾತ್ರೆ ನಾವು ಸಿಮ್ಲಾಕ್ಕೆ ಹೋಗುವುದಕ್ಕೆ ರೈಲಿನಲ್ಲಿ ಸೀಟು ಕಾದಿರಿಸಿದ್ದೆವು. ದಿಲ್ಲಿಯಲ್ಲಿ ನೋಡುವುದನ್ನೆಲ್ಲ ನೋಡಿಯಾದುದರಿಂದ, ನಾಲ್ಕನೆಯ ದಿನದ ನಮ್ಮ ಕಾರ್ಯಕ್ರಮ ಹೆಚ್ಚೇನಿರಲಿಲ್ಲ. ಸುಖವಾಗಿ ಗೆಳೆಯರೊಡನೆ ಚಕ್ಕಂದ ವಾಡಬೇಕೆಂದು ನಮ್ಮ ಆಸೆ. ಆದರೆ ಕನ್ನಡಮ್ಮನ ವಿಧಿ ದಿಲ್ಲಿಯಲ್ಲೂ ಬೆನ್ನು ಬಿಡಲೇ ಇಲ್ಲ. ಅಲ್ಲಿಯೂ ಒಂದು ಕನ್ನಡ ಸಂಘವಿದೆ. ನಾಲ್ಕನೆಯ ದಿನ ಬೆಳಿಗ್ಗೆ, ಪಾಟೀಲರು ಆ ಸಂಘದ ಆಶ್ರಯದಲ್ಲಿ ನನ್ನ ಉಪನ್ಯಾಸವನ್ನು ಏರ್ಪಡಿಸಿದ್ದರು. ಆ ರಾಜಧಾನಿಯಲ್ಲಿ ಕನ್ನಡದ ಕೂಗನ್ನು ಕೇಳುವವರಾರು—ಎಂದುಕೊಂಡು ಅಲ್ಲಿಗೆ ಹೋಗಿದ್ದೆ. ಅದು ಆದಿತ್ಯವಾರ ಬೆಳಿಗ್ಗೆ. ಪಾಟೀಲರಿಗೂ ಆ ವಿಷಯದಲ್ಲಿ ಅನುಮಾನ ಪ್ರಾಪ್ತಿಸಿತ್ತು. ಉಪನ್ಯಾಸದ ಪ್ರಕಟಣೆಯು ಕೆಲವು ಪತ್ರಿಕೆಗಳಲ್ಲಿ ಬಂದಿರಲಿಲ್ಲ. ಆದರೆ, ಹೋದ ಬಳಿಕ ಅಷ್ಟೊಂದು ನಿರಾಶೆಗೆ ಕಾರಣವಿದ್ದಂತೆ ಕಾಣಿಸಲಿಲ್ಲ. ಸುಮಾರು ಮೂವತ್ತು ಮಂದಿ ಸಭಿಕರು, ಸಾಲದುದಕ್ಕೆ ಪಾರ್ಲಿಮೆಂಟಿನ ಕೆಲವೊಂದು ಕನ್ನಡಿಗ ಸದಸ್ಯರು, ಸಭೆಗೆ ಆಗಮಿಸಿದ್ದರು. ಅನೇಕರ ಪರಿಚಯ ನನಗೆ ಮೊದಲೇ

S021927

ಇಷ್ಟುದರಿಂದ,ದಿಲ್ಲಿಯಾದರೂ ಹೆಚ್ಚಿನ ಸಂಕೋಚಕ್ಕೆಎಡೆ ಇದ್ದಿರಲಿಲ್ಲ.ಶ್ರೀ ಮುನವಳ್ಳಿಯವರು ಸಭೆಗೆ ಅಧ್ಯಕ್ಷರಾದರು. ಅನಂತರ ಶ್ರೀಮತಿ ರಾಘವನ್ ಎಂಬವರು ಕಾರಂತರ ಪರಿಚಯ ಮಾಡಿಕೊಟ್ಟರು. ಆ ಪರಿಚಯದ ಕೆಲ ವೊಂದು ಭಾಗ, ನನಗೇನೆ ಅಪರಿಚಿತವಾಗಿತ್ತು. ಪರಿಚಯದಲ್ಲಿ ನನಗೆ ಸ್ವಾರಸ್ಯವಾಗಿ ಕಂಡದ್ದೆಂದರೆ—ಅನುಮಾನ ಅನುಮಾನದಿಂದ ಅವರು "ನಿಮ್ಮ 'ಹೆತ್ತಳಾ ತಾಯಿ'ಕಾದಂಬರಿ ನನಗೇಕೋ ಚೆನ್ನಾಗಿ ಕಾಣಿಸಲಿಲ್ಲ"ಎಂದದ್ದು. ನನ್ನ ಹೆಚ್ಚಿನ ಬರಹಗಳು ಸ್ತ್ರೀಯರ ವಿಚಾರದಲ್ಲಿ ತುಂಬ ಆದರ ತೋರಿರುವಲ್ಲಿ, ಈ ಬರಹವೊಂದರಲ್ಲಿ ನಾಯಕಿಯನ್ನು ದೋಷಿಯನ್ನಾಗಿ ಮಾಡಿ ಚಿತ್ರಿಸಿದುದಕ್ಕೆ,ತುಂಬ ಅಸಮಾಧಾನ ಅವರಿಗೆ ಉಂಟಾಗಿರಬೇಕು. ಕನ್ನಡ ಕಾದಂಬರಿಗಳ ವಿಚಾರದಲ್ಲಿ ಆ ದಿನ ನಾನು ಮಾತಾಡುತ್ತ ಅವರಿಗೆ ಸಮಾಧಾನ ಹೇಳಬೇಕಾಯಿತು—"ಸಾಹಿತಿಯ ಕೆಲಸ ನೀತಿಕಾರನ ಕೆಲಸವಲ್ಲ. ಮಾನವನ ಗುಣದೋಷಗಳೆರಡನ್ನೂ ಕಂಡು, ಅವುಗಳ ಹಿನ್ನೆಲೆಯಲ್ಲಿ ಅವನ್ನು ತೂಗಿ ತಿಳಿದು, ಅಳೆದು ಚಿತ್ರಿಸುವುದು ಅವನ ಕೆಲಸ. ಅವನವನ ಅನುಭವಕ್ಕೆ ಸಾಹಿತಿ ಹೊಣೆಗಾರನೇ ಹೊರತು, ನೀತಿ ಅನೀತಿಗಳ ಹೊಣೆ ಅವನದ್ದಲ್ಲ"ಎನ್ನಬೇಕಾಯಿತು. ನನ್ನ ಉಪನ್ಯಾಸದ ರಗಳೆ ಮುಗಿದ ಮೇಲೆ ಗೆಳೆಯರೊಡನೆ ತುಸು ಹೊತ್ತು ನಿಂತು ಹರಟೆಯಾಡುತ್ತಿದ್ದೆವು. ಆಗ ಸಂಘದ ಕಾರ್ಯದರ್ಶಿಯರಾದ ಶ್ರೀ ರಾಘವನ್ ರವರು ಇನ್ನೊಮ್ಮೆ ಸಭೆ ಕೂಡಲು ಅಪ್ಪಣೆ ಮಾಡಿದರು. ಅದೇಕೆಂದು ಆಮೇಲೆ ತಿಳಿಯಿತು. ಉಪನ್ಯಾಸಕರಿಗೂ ಅಧ್ಯಕ್ಷರಿಗೂ ಪದ್ಧತಿಯಂತೆ ಹಾರವನ್ನು ಹಾಕಬೇಕಿತ್ತಲ್ಲ. ಆ 'ಹಾರ' ಬರುವುದಕ್ಕೆ ಅಷ್ಟು ತಡವಾಗಿತ್ತು. ಬಂದ ಮೇಲೆ ಅದನ್ನು ಹಾಕುವ ಸಂಭ್ರಮ ನಡೆಯಿತು. ಈ ಹಾರದ ಬದಲು ನಮಗೆ ಆಹಾರ ಹಾಕಿದ್ದರೆ ಎಷ್ಟೋ ಚೆನ್ನಾಗಿತ್ತಲ್ಲವೇ? ಉಪನ್ಯಾಸ ಮುಗಿಸಿ, ಧಾವಿಸಿದ್ದು ತಿರುಗಿ ಮಿತ್ರ ವಾಸುದೇವರಾಯನ ಮನೆಗೆ. ಅಲ್ಲಿ ಘನ ಘೋರ ಸಂಗ್ರಾಮವನ್ನೆಸಗಿದೆವು. ಈ ನನ್ನ ಮಿತ್ರರಿಬ್ಬರು, ಮಧ್ಯಪ್ರಾಂತದ ಭಯ್ಯಾನೊಬ್ಬನನ್ನು ತರಬೇತು ಮಾಡಿ,ಉತ್ತರ ಹಿಂದುಸ್ತಾನದ ನಳನನ್ನಾಗಿ ಮಾಡಿದ್ದರು. ನಿರ್ದಾಕ್ಷಿಣ್ಯವಾಗಿ ನಾವು ಅವನು ಅಟ್ಟು, ಬಡಿಸಿದುದನ್ನೆಲ್ಲ ತಿಂದು ತೇಗಿದೆವು. ಮಿತ್ರ ವೆಂಕಟಕೃಷ್ಣ, ತಾನು ಮಿತ ಭೋಜನ ಮಾಡುವವನಾದರೂ ನಮ್ಮ ಊಟಗಳಿಂದ ತೃಪ್ತಿಪಟ್ಟಂತೆ ಕಾಣುವುದಿಲ್ಲ.

ಆರಂಭದಲ್ಲಿ ದಿಲ್ಲಿಯನ್ನು ಪ್ರವೇಶಿಸುವಾಗ ನಮಗಾದ ಕಹಿ ನೆನಪನ್ನೆಲ್ಲ ಮರೆತು, ಈ ಗೆಳೆಯರ ಸ್ನೇಹ,ಸೌಹಾರ್ದಗಳಿಂದಾಗಿ, ತುಂಬಾ ಸಿಹಿಯಾಗಿ ಕೊನೆಗೊಂಡಿತು. ಊಟ ಮುಗಿಸಿ, ತಿರುಗಿ ನಾವು ಮದ್ರಾಸು ಹೊಟೇಲಿಗೆ ಬಂದೆವು. ಅಲ್ಲಿ ತುಸು ವೇಳೆ ವಿಶ್ರಮಿಸಿ, ಸಂಜೆ ಇನ್ನಷ್ಟು ಅಲೆದಾಡಿಕೊಂಡು ಪಾಟೀಲರ ಮನೆಗೆ ಬಂದೆವು. ಅವರು, ಅವರ ಒಬ್ಬಿಬ್ಬರು ಗೆಳೆಯರು ಆ ರಾತ್ರಿ ನಮ್ಮನ್ನು ರೈಲ್ವೆ ನಿಲ್ದಾಣಕ್ಕೆ ಮುಟ್ಟಿಸಿ ಬೀಳ್ಕೊಟ್ಟರು. ಹೀಗೆಯೇ ದಿಲ್ಲಿಯ ಪ್ರವಾಸ ಸುಖ, ಸಂತೋಷಗಳಿಂದ ಕಳೆಯಿತು.

೫. ನಿಸರ್ಗ ಸುಂದರ ಸಿಮ್ಲಾ

ರಾತ್ರಿ ದೇಹಲಿಯಲ್ಲಿ ಮಲಗಿದ ನಾವು, ಬೆಳಿಗ್ಗೆ 'ಕಲ್ಕಾ' ನಗರವನ್ನು ಸೇರಿದೆವು. ಕಲ್ಕಾಕ್ಕೇನೆ ಬೇರೆಯೇ ಒಂದು ರೈಲುಗಾಡಿಯನ್ನು ಓಡಿಸುತ್ತಾರೆ. ಆದರೆ ಅದರಲ್ಲಿ ತುಂಬಿದ ಜನರನ್ನು ನೋಡುವಾಗ, ಈ ಏರ್ಪಾಟು ತೀರ ಅನಾವಶ್ಯಕವೆಂದು ಕಾಣುತ್ತದೆ. ನಾವು ಹೊರಟ ದಿನ ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ ನಾಲ್ಕಾರು ಪ್ರವಾಸಿಗಳೂ ಇದ್ದಿರಲಿಲ್ಲ. ಮೂರನೆಯ ತರಗತಿಯೂ ಹಾಗೆಯೇ ಬರಿದಾಗಿತ್ತು. ಹಿಂದಣ ಕಾಲದಲ್ಲಿ, ಬೇಸಿಗೆ ಬಂತೆಂದರೆ ಸಿಮ್ಲಾಕ್ಕೆ ಹೋಗುವ ಜನ ಅದೆಷ್ಟೊ! ಈಗ ಸಿಮ್ಲಾ, ಸರಕಾರದ ಸೆಕೆಗಾಲದ ರಾಜಧಾನಿಯಲ್ಲ.ದಿಲ್ಲಿಯಿಂದ ರಾಜಧಾನಿ ಸಿಮ್ಲಾಕ್ಕೆ ಹೋಗುವ ಏರ್ಪಾಟು ಗವರ್ನರ್‌ಜನರಲ್ಲುಗಳ ಮುಕ್ತಾಯದೊಂದಿಗೆ ಕೊನೆಗೊಂಡಿತು. ಹಾಗಾಗಿ ರಾಜ ವೈಭವವನ್ನು ಕಳೆದುಕೊಂಡ ಈ ಸಿಮ್ಲಾ ನಗರ, ಇಂದು ಬರಿಯ ಆರೋಗ್ಯಧಾಮವಾಗಿ ಉಳಿದಿದೆ. ಪೂರ್ವ ಪಂಜಾಬ್ ಪ್ರಾಂತದ ಕೋರ್ಟುಕಚೇರಿಗಳಷ್ಟೇ ಅಲ್ಲಿ ಉಳಿದಿವೆ.ಪ್ರಾಚೀನ ರಾಜಕೀಯ ಗತವೈಭವ ಶೂನ್ಯವಾಗಿದ್ದರೂ ಸಿಮ್ಲಾಕ್ಕೆ ಹೋಗಬೇಕೆಂಬ ಆಸೆ ನಮಗೆ ಅತಿಯಾಗಿತ್ತು. ನಾವು ಹಿಮವತ್ ಪರ್ವತಗಳ ಬೆಡಗನ್ನು ಎಂದೂ ಕಂಡವರಲ್ಲ. ಆ ಆಸೆಯೇ ನಮ್ಮ ಈ ಪಯಣಕ್ಕೆ ಮುಂದೂಡಿತು. ಕಲ್ಕಾಕ್ಕೆ ಬಂದ ಮೇಲೆ ನಾವು, ಒಂದೋ ನಮ್ಮ ಬಂಡಿ ಬದಲಿಸಿ ಬೇರೆ ರೈಲಿನಲ್ಲಿ ಕುಳಿತು ಹೋಗಬೇಕು—ಇಲ್ಲವೆ ಮೋಟಾರು ಮಾರ್ಗವಾಗಿ ಪ್ರಯಾಣವನ್ನೆಸಗಬೇಕು. ಮೊದಲೇ ಟಿಕೇಟು ಕೊಂಡವರಾದುದರಿಂದ ಕಲ್ಕಾ—ಸಿಮ್ಲಾ ನೆರೋ ಗೇಜ್ ರೈಲಿನಲ್ಲಿ ಕುಳಿತೆವು. ಈ ರೈಲು ಚಿಕ್ಕದು. ಏರಬೇಕಾದ ಬೆಟ್ಟ ಎತ್ತರವಾದದ್ದು. ಸುಮಾರು ಐವತ್ತೈದು ಮೈಲು ದೂರ ಹೋಗಬೇಕು. ಅದರಿಂದಲೋ ಏನೋ, ಮೇಲ್ತರಗತಿಯ ಪ್ರಯಾಣಿಕರಿಗೆ ಬೇರೆಯೇ ರೈಲಿತ್ತು. ಮೂರನೆಯ ತರಗತಿಯ ಪ್ರವಾಸಿಗಳಿಗೆ ಇನ್ನೊಂದೇ ರೈಲು ಹೊರಡುತ್ತದೆ. ಏಳು ಘಂಟೆಗೆ ಹೊರಟ ನಾವು, ಹೆಚ್ಚುಕಡಿಮೆ ಇರುವೆಯ ಗತಿಯಿಂದ ಬೆಟ್ಟವನ್ನು ಸುತ್ತಿ, ಬಳಸಿ, ಏರಿ, ಸಿಮ್ಲಾವನ್ನು ಸೇರುವಾಗ ಮಧ್ಯಾಹ್ನದ ಎರಡು ತಾಸಾಗಿತ್ತು. ಘಂಟೆ ಘಂಟೆಗೂ ಸಿಮ್ಲಾ ಸೇರಬಹುದೆಂಬ ನಿರೀಕ್ಷೆ ನಮ್ಮದು. ಆ ರೈಲೋ! ಎಮ್ಮೆಯ ಕರುವಿ

ನಂತೆ ಏಗುತ್ತ ಏಗುತ್ತ, ಮೆಲುನಡೆಯಿಂದ ಮುಂದೆ ಸಾಗುತಿತ್ತು. ಆರೆಂಟು ಮೈಲಿಗೊಮ್ಮೆ ಜನರಿಲ್ಲದ ಊರಿನಲ್ಲಿ, ಕಾಲುತಾಸು ತಂಗುತಿತ್ತು. ಅವಸರದ ಜನಕ್ಕೆ ಹೇಳಿದ ಪ್ರವಾಸದ ದಾರಿ ಇದಲ್ಲ. ನಮಗೆ ಅಂಥ ಅವಸರವೂ ಇದ್ದಿಲ್ಲ. ಉನ್ನತವಾದ ಬೆಟ್ಟಗಳ ಮಗ್ಗುಲನ್ನು ತಬ್ಬಿಹಿಡಿದು, ಹೋಗುವ ರೈಲು ಅಲ್ಲಲ್ಲಿ ಸುರಂಗ ಮಾರ್ಗಗಳಲ್ಲಿ ಹೊಕ್ಕು, ಮರೆಯಾಗಿ, ತಿರುಗಿ ಹೊರಬಿದ್ದು ಎಷ್ಟು ಮೆಲುಗತಿಯಿಂದ ಹೋದರೂ ಬೇಸರ ಅನಿಸುವುದಿಲ್ಲ. ಕಾರಣ—ನಿಸರ್ಗದ ಬೆಡಗು ಈ ದಾರಿಯುದ್ದಕ್ಕೂ ತುಂಬಿ ಚೆಲ್ಲುತ್ತದೆ. 'ಕಲ್ಕಾ' ನಗರ ಸುಮಾರು ಮೂರು ಸಾವಿರ ಅಡಿ ಉನ್ನತವಾದುದು. ಸಿಮ್ಲಾ ಸಮುದ್ರ ಮಟ್ಟದಿಂದ ಏಳು ಸಾವಿರ ಅಡಿ ಉನ್ನತವಾಗಿದೆ. ಸಿಮ್ಲಾದ ಒಂದು ಗಿರಿ ಶಿಖರ ಎಂಟು ಸಾವಿರ ಅಡಿ ಎತ್ತರವಾಗಿದೆ. ಈ ಎತ್ತರವನ್ನೆಲ್ಲ ರೈಲು ಬಂಡಿ ಸಾಗಿ, ಏರುವಾಗ ಸಂಪೂರ್ಣ ಪರ್ವತಮಯ ಪ್ರದೇಶದಿಂದಲೇ ಏರಿ ಹೋಗಬೇಕಾಗುತ್ತದೆ.

ಮೊದಲಿನ ತುಸುದೂರ ಬೆಟ್ಟಗಳು ಚಿಕ್ಕ ಬಿದಿರು—ಸಾಮಾನ್ಯ ಗಿಡ ಮರಗಳಿಂದ ತುಂಬಿಕೊಂಡಂತೆ ಕಾಣುತ್ತವೆ. ಕೆಳಕ್ಕೆ ಕಣ್ಣುಹಾಸಿದರೆ ದೂರದ ಆಳದಲ್ಲಿ ನದಿಯೊಂದು ಹರಿಯುವುದು ಕಾಣುತ್ತದೆ. ಸುಮಾರು ಸಾವಿರ, ಎರಡುಸಾವಿರ ಅಡಿ ಎತ್ತರ ಏರಿದೆವೆಂದರೆ, ಬೇರೆಯೇ ತೆರನ ವೃಕ್ಷಾವಳಿ ಕಾಣಿಸುತ್ತದೆ. ಇನ್ನೊಂದು ಸಾವಿರ ಅಡಿಯ ಎತ್ತರದ ತನಕ ಬೆಟ್ಟದ ಬದಿಗಳಲ್ಲಿ ಕಾಣಿಸುವ ಗಾಳಿಮರದಂತಹ ಒಂದು ಜಾತಿಯ ವೃಕ್ಷ ಹಸುರೆಲೆಯ ಚವುರಿಗಳನ್ನು ಹಿಡಿದಂತಿವೆ. ಮರದಲ್ಲೆಲ್ಲ ಜೊಂಕೆಜೊಂಕೆ ಯಾಗಿ ತೂಗುವ ಹಸುರೆಲೆ ಕುಂಚಗಳು ಆ ಮರಗಳಿಗೆ. ಕೆಳಗೂ ಮೇಲೂ ಅದೊಂದೇ ಜಾತಿಯಮರ ಬೆಳೆದುಕೊಂಡಿದೆ. ನಮ್ಮ ಊರಿನಲ್ಲಿ ಕಾಣ ಸಿಗಲಾರದ ನೋಟ ಇದು. ಇನ್ನೂಒಂದು ಸಾವಿರಅಡಿ ಏರಿದರೆ,ಇನ್ನೊಮ್ಮೆ ನಮ್ಮ ಪಶ್ಚಿಮ ಘಟ್ಟದಲ್ಲಿ ಕಾಣಸಿಗುವಂತಹ ಒಂದು ಜಾತಿಯ ಮರ ಕಾಣಸಿಗುತ್ತವೆ. ನಾವು ಹೋದ ವೇಳೆ, ಅವೆಲ್ಲ ತಮ್ಮ ಎಲೆಗಳನ್ನೆಲ್ಲ ಕಳಚಿ ಭವ್ಯವಾದ ತಮ್ಮ ದಿಂಡು ಬೇರುಗಳನ್ನು ಎತ್ತಿಹಿಡಿದಿದ್ದುವು. ಹೊಸತಾಗಿ ಚಿಗುರಿ, ನಕ್ಕು,ಗಾಳಿಯಲ್ಲಿ ತಮ್ಮಕೆಂದಳಿರನ್ನು ತೂಗಿಸುತ್ತಿದ್ದುವು. ಅಲ್ಲಿಂದ ಮುಂದೆ ಸಿಮ್ಲಾದ ತುದಿಯತನಕ ಕಾಣಸಿಗುವ ಸಸ್ಯರಾಜಿ ಇನ್ನೊಂದೇ ತೆರನಾದುದು. ಇದು ಚಳಿ ಸೀಮೆಗಳಲ್ಲಿ ಕಾಣಸಿಗುವ ದೇವದಾರ ಮರಗಳು

ಅರಣ್ಯ. ಕೆನಡಾ, ಸ್ವಿಜರ್‌ಲೇಂಡ್ ದೇಶಗಳ ಚಿತ್ರಗಳಲ್ಲಿ ಉನ್ನತವಾದ 'ಪೈನ್' ವೃಕ್ಷಗಳ ನೋಟ ಕಂಡ ನೆನಪು ನಮಗೆ ಉಕ್ಕುತ್ತದೆ. ಅವೇ ಮರಗಳು, ತೇರು ತೇರುಗಳಂತೆ, ಬೆಟ್ಟದ ತುಂಬ ಇಳಿಜಾರಾದ ಮಗ್ಗುಲುಗಳನ್ನು ಸುತ್ತಿ, ಅಲಂಕರಿಸಿ ಹೆಮ್ಮೆಯಿಂದ ಬಾನಿನ ಕಡೆಗೆ ಚಾಚಿ ನಿಂತಿರುವ ನೋಟ-ಅನುಪಮ ಸೌಂದರ್ಯವನ್ನು ಬೀರುವಂತಹದು. ಹೀಗೆ ಸಸ್ಯಭೇದ ಕಾಣುತ್ತಹೋದರೂ ಗುಡ್ಡಬೆಟ್ಟಗಳ ಅಂಚುಗಳೆಲ್ಲ ಒಂದೇ ತೆರನಾಗಿವೆ. ಕಡಿದಾದ ಮೈಯುಳ್ಳ ಈ ಬೆಟ್ಟಗಳು ಎಲ್ಲಿ ಹುಟ್ಟುತ್ತವೆ, ಎಲ್ಲಿ ಮುಗಿಯುತ್ತವೆ ಎಂದು ತಿಳಿಯುವುದಿಲ್ಲ. ರೈಲುಹಾದಿ ಅವುಗಳ ಬನಿಗಳನ್ನು ಬಳಸಿಕೊಂಡು ಸುತ್ತುತ್ತಲೇ ಇದೆ. ಪ್ರತಿಯೊಂದು ಸುತ್ತಿನಲ್ಲೂ ಭವ್ಯವಾದ ನೋಟಗಳು ಕಾಣಿಸುತ್ತವೆ. ಎತ್ತರಕ್ಕೆ ಏರಿದಷ್ಟು ಅಗಾಧವಾದ ಪ್ರಪಾತ ಕೆಳಗಡೆ ಕಾಣಿಸುತ್ತದೆ. ಕಣಿವೆಯಲ್ಲಿ ವೇಗವಾಗಿ ಓಡುವ ನದಿಯ ಕುರುಹೂ ಕಾಣಿಸುತ್ತದೆ. ಹಿಮವೆಲ್ಲ ಬೆಟ್ಟದ ಮಗ್ಗುಲನ್ನು ತುಂಬಿದಾಗ ಈ ಬೆಟ್ಟಕ್ಕೆ ಎಂತಹ ಅಪೂರ್ವ ಬೆಡಗು ಬರಲಾರದು! ಹಿಮ ಕರಗಿ ನದಿ ಹರಿಯುವಾಗ ಈ ನದಿಯ ಸೊಕ್ಕು, ಉಕ್ಕು, ಘರ್ಜನೆಗಳು ಎಂತಹ ಉದ್ರೇಕವನ್ನು ತೋರಿಸಲಾರವು! ನೆಲದ ಮೇಲೆ ಕಾಣಿಸುವ ಈ ಸ್ವಪ್ನೋದ್ಯಾನ ಎಷ್ಟು ವಿಚಿತ್ರವೂ ಮನೋಹರವೂ ಆಗಿದೆಯೋ, ಅಷ್ಟೇ ವಿಚಿತ್ರವಾಗಿ ಇಲ್ಲಿನ ಗಗನ ಕಾಣಿಸುತ್ತದೆ. ನೀಲಾಕಾಶದಲ್ಲಿ ಬೆಳ್ಮುಗಿಲುಗಳು ಉರುಳುರುಳಿ ಕೆಲವೊಮ್ಮೆ, ಕೆಲವೊಂದು ಗಿರಿ ಶಿಖರಗಳನ್ನು ಮರೆಸುತ್ತವೆ. ಕೆಲವೊಮ್ಮೆ ತಾವೇ ಹಿಂದಕ್ಕೆ ಸರಿದು, ಹಿತವಾದ ಸೂರ್ಯನ ಬಿಸಿಲು, ಕಣಿವೆಕಂದರಗಳ ಮೇಲೆ ಬೀಳುವಂತೆ ಮಾಡಿ, ಅವುಗಳ ಶೋಭೆಯನ್ನು ಮೆರೆಯಿಸುತ್ತವೆ. ರೈಲಿನ ಪಯಣದಿಂದ ನಮ್ಮ ಮೈ ದಣಿದರೂ, ಈ ಕಣಿವೆ ಶಿಖರಗಳಿಂದ, ಇಲ್ಲಿನ ಹಸುರು ಹಚ್ಚೆಗಳಿಂದ, ನಮ್ಮ ಕಣ್ಣನ್ನು ಕೀಳಲು ಮನಸ್ಸೇ ಬರಲಾರದು.

ಈ ಪರ್ವತಾವಳಿಯನ್ನು, ಕಣಿವೆಗಳನ್ನು ಕಂಡು ನಮ್ಮ ಎದೆ ಎಷ್ಟು ಉಕ್ಕಬಹುದೋ, ಅಷ್ಟೇನೆ ಈ ಗುಡ್ಡಗಾಡಿನ ನಿವಾಸಿಗಳ ಸಲುವಾಗಿ ಎದೆ ಉಬ್ಬಬೇಕು. ಮೇಲಿನ ಬಣ್ಣನೆಗಳನ್ನು ಕೇಳಿದವರಿಗೆ ಇದೊಂದು ನಿರ್ಜನ ಪ್ರದೇಶವೆಂದು ಭಾವನೆಯಾಗುವುದು ಸಹಜ. ಇಲ್ಲಿನ ಒಂದೇ ಒಂದು ಬೆಟ್ಟ, ಒಂದೇ ಒಂದು ಕೊರಕಲು, ಒಂದೇ ಒಂದು ಬೆಟ್ಟದ ತಪ್ಪಲಲ್ಲಿ

ಜನನಿವಾಸ ಇಲ್ಲದಿಲ್ಲ. ಬೆಟ್ಟದ ತೀರ ಕೆಳ ಅಂಚಿನ ತನಕ ಮಾನವನ ಶ್ರಮದ ಫಲವನ್ನು ನಾವಿಲ್ಲಿ ಕಾಣುತ್ತೇವೆ. ಎಲ್ಲಿ ಕಾಡಿಲ್ಲವೋ ಎಲ್ಲಿ ಬಂಡೆ ಗಳಿಲ್ಲವೋ ಅಲ್ಲೆಲ್ಲವೂ ಮನುಷ್ಯ ಮಾಡಿದ ಕೃಷಿಯನ್ನು ಹೊಲಗದ್ದೆಗಳಲ್ಲಿ ಕಾಣುತ್ತೇವೆ. ಅಷ್ಟು ಇಳಿಜಾರಾದ ಬೆಟ್ಟದ ಮಗ್ಗುಲನ್ನು ಸವರಿ, ಅಂತರ, ಅಂತರಗಳನ್ನಾಗಿ ಮಾಡಿ, ಹೊಲಗದ್ದೆಗಳನ್ನು ಮಾಡಿಕೊಂಡಿದ್ದಾರೆ. ಹಾಗೆ ಬೆಳೆದ ಹೊಲಗದ್ದೆಗಳನ್ನೂ ಅವುಗಳ ಗಾತ್ರವನ್ನೂ ನೋಡಿ ನಕ್ಕೆವು. ತೀರ ಚಿಕ್ಕ ಹೊಲಗಳವು. ಒಂದು ಕಡೆಯಲ್ಲಿ ರೈತನು ಅಂಥ ಅಗಲ ಕಿರಿದಾದ ಹೊಲವನ್ನು ಉಳುತ್ತಿರುವುದನ್ನೂ ಕಂಡೆವು. ಆದರೆ ಮುಕ್ಕಾಲು ಮೂರು ವೀಸ ಹೊಲಗಳು ಉಳುವ ಗದ್ದೆಗಳಲ್ಲವೇ ಅಲ್ಲ. ಅವು ಎರಡು ಮೂರು ಅಡಿ ಅಗಲವಾಗಿದ್ದು ನೀಳವಾಗಿ ಹರಡಿದ ಬಟ್ಟೆಗಳಂತಿರುತ್ತವೆ. ಅಂತಹ ಸೋಪಾನಗಳಂತೆ ಕಾಣಿಸುವ, ವಕ್ರವಕ್ರವಾಗಿ ಕಾಣುವ ಗದ್ದೆಗಳನ್ನೇ ಜೀವನಕ್ಕೆ ಆಧಾರವಾಗಿಟ್ಟುಕೊಂಡು ಜನ ಬದುಕುತ್ತಿದ್ದಾರೆ. ಒಂದು ವಸತಿಗೂ ಇನ್ನೊಂದಕ್ಕೂ ತುಂಬ ದೂರವಿದೆ. ನೆಲದ ಉಳುಮೆಯೆಲ್ಲ ಕೈಯಿಂದಲೇ ಆಗಬೇಕು. ಬೆಟ್ಟದ ಮಗ್ಗುಲ ಝರಿಗಳಿಂದ ಅದಕ್ಕೆ ನೀರು ದೊರೆಯಬೇಕು. ಒಂದೊಂದು ಮನೆಗಷ್ಟೆ ಸಾಕಾಗುವಷ್ಟು ಕಿರಿಯ ಕೃಷಿಕ ಭೂಮಿಗಳವು. ಅಂಥವು ಸಾವಿರಾರಿವೆ. ಒಂದು ಮನೆಯವರು ಇನ್ನೊಂದು ಮನೆಯವರನ್ನು ಕಾಣಬೇಕಾದರೆ, ಒಂದೋ ಐನೂರು ಅಡಿ ಬೆಟ್ಟ ಏರಬೇಕು. ಅಥವಾ ಐನೂರು ಅಡಿ ಇಳಿಯಬೇಕು. ಬರಿಯ ನೂರು ಗಜ ದೂರಕ್ಕೆಕಾಣುವ ಮನೆಯನ್ನು ಸೇರಬೇಕಾದರೂ-ಅಂಕುಡೊಂಕಾದ ಹಾದಿಯಲ್ಲಿ ಒಂದು ಮೈಲು ನಡೆಯಬೇಕು. ಇಲ್ಲವೆ ಅಷ್ಟು ಶ್ರಮದಿಂದ ಬೆಟ್ಟ ಹತ್ತಿ ಇಳಿಯಬೇಕು. ಸಿಖ್ ರೈತರು ಇಂಥ ಗುಡ್ಡಗಾಡಿನಲ್ಲಿ, ಬಹುಕಾಲದಿಂದ ನೆಲೆಸಿದ್ದಾರೆ. ಮಾನವನ ಧಾರ್ಷ್ಟ್ಯ, ಸಾಹಸ, ತೋರಿಸಿದ್ದಾರೆ. ಇದನ್ನು ಕಾಣುವಾಗಲಂತು—ಪಶ್ಚಿಮಘಟ್ಟದ ಗುಡ್ಡಕಾಡುಗಳ ಬಳಿ ವಾಸಿಸುವ ನನಗೆ ನಮ್ಮ ಜನಗಳ ಅಧೀರತೆ ಹೊಳೆಯದೆ ಹೋಗಲಿಲ್ಲ. ಪಶ್ಚಿಮಘಟ್ಟಗಳಲ್ಲಿ ಮಳೆ, ಸಸ್ಯಸಮೃದ್ಧಿ, ನೆಲದ ಸಾರವಂತಿಕೆ–ಇದಕ್ಕಿಂತ ಎಷ್ಟೋ ಪಾಲಿಗೆ ಮಿಗಿಲಾದುದು. ದುಡಿಯಲು ಶಕ್ತಿಯಿದ್ದರೆ, ನಮ್ಮ ಜನರು ಎಂದೆಂದೂ ಬರಗಾಲಕ್ಕೆ ಬೆದರಬೇಕಾಗಿಲ್ಲ ಎನಿಸುತ್ತದೆ. ಆದರೂ ನಮ್ಮ ಜಿಲ್ಲೆಯ ಪಶ್ಚಿಮಘಟ್ಟದ ಉದ್ದಕ್ಕೂ, ಆಚೀಚಿನ ಸೆರಗುಗಳಲ್ಲಿ ಈ ರೀತಿ

ಪರ್ವತವಾಸಿಗಳಾಗಿರುವ ಕುಟುಂಬಗಳು ಹೆಚ್ಚಿಗೆ ಕಾಣಸಿಗಲಾರವು.

ಎರಡು ಘಂಟೆಯ ಹೊತ್ತಾದರೂ ಹಸಿವಿನಿಂದ ನಮ್ಮ ಮೈ ದಣಿದಿದ್ದಾಗ, ನೋಡಿ ನೋಡಿ ಕಣ್ಣು ಬಾಡಿದ್ದಾಗ, ನಮ್ಮ ಬಂಡಿ ಇನ್ನೂ ಬೆಟ್ಟಗಳನ್ನು ಏರುತ್ತಲೇ ಇತ್ತು. ಮತ್ತೂ ಎತ್ತರದ ಬೆಟ್ಟಗಳು ಕಾಣಿಸುತ್ತಲೇ ಇದ್ದುವು. ಅವುಗಳ ಶಿಖರಗಳಲ್ಲಿ ನೂರಾರು ಮನೆಯ ಮಾಡುಗಳು ಕಾಣಿಸುತ್ತಿದ್ದುವು. ಬೆಟ್ಟದ ಎಡೆಗಳಲ್ಲೆಲ್ಲ ದೇವದಾರದ ಮರಗಳು ಹಸುರು ಬಾವುಟ ಹಿಡಿದ ಧ್ವಜ ಸ್ತಂಭಗಳಂತೆ ಕಾಣುತಿದ್ದುವು. ರೈಲುದಾರಿಯ ಆ ಬೆಟ್ಟದ ಸೆರಗಿನಲ್ಲಿ ಕೆಮಿಲ್ಲಾಗಳು ಗುಲಾಬಿಬಣ್ಣದ ಸುಂದರ ಹೂಗಳನ್ನು ತಳೆದಿದ್ದುವು. ದಣಿದ ನಾವು, ಉದಾಸೀನರಾಗಿಯೇ ಎಲ್ಲವನ್ನೂ ನೋಡಿದೆವು. ಕಟ್ಟಕೊನೆಗೆ ಬಂಡಿ ಸಿಮ್ಲಾ ನಿಲ್ದಾಣಕ್ಕೆ ಬರುತ್ತಲೇ ಉಸ್ಸೆಂದು ಕೆಳಕ್ಕಿಳಿದೆವು. ಇಳಿದ ಹತ್ತೆಂಟು ಪ್ರವಾಸಿಗಳನ್ನು ಸ್ವಾಗತಿಸಲು ಅವರ ಇಮ್ಮಡಿಯಷ್ಟು ಜನರೂ ಅವರ ನಾಲ್ಮಡಿ ಕೂಲಿಗಳೂ ಕಾದಿದ್ದರು. ಬೇರೆ ಬೇರೆ ವಿಶ್ರಾಂತಿಗೃಹದ ಪ್ರತಿನಿಧಿಗಳು ಅಲ್ಲಿಗೆ ಬಂದಿದ್ದು, ಕ್ಷೇತ್ರದ ಪಂಡರಂತೆ 'ನಮ್ಮಲ್ಲಿಗೆ ಬನ್ನಿ, ನಮ್ಮಲ್ಲಿಗೆ ಬನ್ನಿ' ಎಂದು ಇಳಿದವರನ್ನು ಆಮಂತ್ರಿಸುತಿದ್ದರು. ಕೆಂಪಂಗಿ ತೊಟ್ಟ ರೈಲುಕೂಲಿಗಳು, ಹೆಣಕ್ಕೆ ಮುತ್ತುವ ಹದ್ದುಗಳಂತೆ, ನಮ್ಮ ಸಾಮಾನುಗಳನ್ನು ಹೊರಲು ಕವಿದರು. ಅವರಲ್ಲೇ ಪರಸ್ಪರ ಸ್ಪರ್ಧೆ; ಜಗಳ. 'ಆ ಹೊಟೇಲಿನಲ್ಲಿ ಅಂಥ ಅನುಕೂಲತೆಯಿಲ್ಲ. ಇಂಥ ಅನುಕೂಲತೆಯಿಲ್ಲ'. "ನಮ್ಮಲ್ಲಿ ಕಾಲ್ ಬೆಲ್ ಇದೆ. ಜಾಗ ಪ್ರಶಸ್ತವಾಗಿದೆ–ಬಿಸಿನೀರಿನ ನಲ್ಲಿಯಿದೆ" ಎಂದು ತಮ್ಮನ್ನು ಹೊಗಳಿಕೊಂಡು, ಪರರನ್ನು ತೆಗಳುವ ಸಾಹಸ ಮಾಡಿದ್ದರು. ಅವರ ಸ್ಪರ್ಧೆ ನಮಗೆ ಬೇಡವಾಗಿತ್ತು. ನಾವು ಹೊರಡುವಾಗ ನಮ್ಮ ದಿಲ್ಲಿಯ ಮಿತ್ರರು ರಾಯಲ್ ಹೊಟೇಲು ಚೆನ್ನಾಗಿದೆ ಎಂದಿದ್ದುದರಿಂದ, ಆ ಹೊಟೇಲಿನ ಪ್ರತಿನಿಧಿಯ ಹಿಂದಕ್ಕೆ ನಾವು ಹೊರಟೆವು. ಒಬ್ಬ ಕೂಲಿ ನಮ್ಮ ಸಾಮಾನುಗಳಿಗೆ ಹಗ್ಗ ಬಿಗಿದು ಬೆನ್ನಮೇಲೆ ಅವುಗಳನ್ನಿರಿಸಿಕೊಂಡು ನಮ್ಮ ಹಿಂದಕ್ಕೆ ಹೊರಟ. ಈ ಗುಡ್ಡಗಾಡಿನ ಜನ ಗಟ್ಟಿಮುಟ್ಟಾದವರು. ಅವರನ್ನು ಪಹಾಡಿಗಳೆನ್ನುತ್ತಾರೆ. ಅವರದು ಬೆಳ್ಳಗಿನ ಬಣ್ಣ; ಮುಖದಲ್ಲಿ ತುಸುಮಟ್ಟಿಗೆ ಮಂಗೋಲರ ವರ್ಚಸ್ಸು ಕಾಣುತ್ತದೆ. ಎಂತಹ ಭಾರವಾದ ಹೊರೆಯನ್ನೂ ಅವರ ಹೆಂಗುಸರಾಗಲೀ, ಗಂಡಸರಾಗಲಿ ಬೆನ್ನಿಗೆ ಹೇರಿಕೊಂಡು, ಹೊರೆ ಬಿಗಿದ ಹಗ್ಗದ

ಸೆರಗನ್ನು ತಲೆಗೆ ಸಿಕ್ಕಿಸಿಕೊಂಡು, ಭಾರಕ್ಕೆ ಬೆನ್ನನ್ನೊಡ್ಡಿ, ಮೈ ಬಗ್ಗಿಸಿ ಚಲಿಸುತ್ತಾರೆ. ನಾವು ನಡೆದುಕೊಂಡು ಹೊಟೇಲನ್ನು ಸೇರಿದೆವು.

ಹವೆಯು ಶೀತವಾಗಿತ್ತು. ಹೊಟೇಲಿನ ನಾಲ್ವತ್ತೈವತ್ತು ಕೊಠಡಿಗಳಲ್ಲಿ, ಬರಿಯ ನಾಲ್ಕಾರು ಮಂದಿಗಳು ವಾಸವಾಗಿರಲಿಲ್ಲ. ಹೊಟೇಲಿನ ಮೂರನೆಯ ಅಂತಸ್ತಿನಲ್ಲಿ ನಮಗೆ ನಿವಾಸದ ಏರ್ಪಾಡಾಯಿತು. ಕೊಠಡಿಯು ಮಂಚ, ಆಸನ, ಮೇಜು ಬೀರುಗಳಿಂದ ಸಜ್ಜಾಗಿದ್ದು, ಅದಕ್ಕೆ ತಾಗಿಕೊಂಡೇ ಬಚ್ಚಲಿನ ಏರ್ಪಾಟೂ ಇತ್ತು. ಕೋಣೆಯಿಂದ ಹೊರಗಿನ ಜಗುಲಿಗೆ ಬಂದರೆ, ಎದುರುಗಡೆಯಲ್ಲಿ ಆಳವಾದ ಕಣಿವೆ ಕಾಣಿಸುತ್ತದೆ. ಕಣಿವೆಯ ಮೈಯೆಲ್ಲ ಹಸುರು ದೇವದಾರು ಮರಗಳಿಂದ ತುಂಬಿತ್ತು. ಎಡಬಲಕ್ಕೆ ವೃಕ್ಷಭರಿತವಾದ ಬೆಟ್ಟದ ಸೆರಗುಗಳು. ನಮ್ಮ ನಿತ್ಯದ ಉಡಿಗೆಯಲ್ಲೇ ಅಲ್ಲಿ ನಿಂತು ನೋಡುವುದು ಕಷ್ಟ. ಶೀತವಾದ ಗಾಳಿ ಬಡಿಯುತ್ತಲೇ ಇರುತ್ತದೆ. ಹಾಗಾಗಿ ನಾವು ಕದ ಮುಚ್ಚಿ ಒಳಕ್ಕೆ ಬಂದೆವು. ಬಿಸಿನೀರಿನಲ್ಲಿ ಸ್ನಾನಮಾಡಿದೆವು. ಅನಂತರ ಪರೋಟಾ ಭೋಜನವಾಯಿತು. ನಮ್ಮ ಊಟಮುಗಿಸಿ, ಒಂದರ್ಧ ತಾಸು ವಿಶ್ರಮಿಸಿಕೊಂಡ ಮೇಲೆ ಕಾಫಿ ತರಲು ಹೇಳಿದೆವು. ಆ ದಿನ ನಮಗೆ ಬೆಳಗಿನಿಂದಲೂ ಕಾಫಿ ಸೇವನೆಯಾಗದೆ ತಲೆ ಸಿಡಿಯುತ್ತಲೇ ಇತ್ತು. ಈ ಜನ 'ಎಂಥ ಕಾಫಿ'ತಂದು ಕೊಡುತ್ತಾರೋ ಎಂಬ ಭೀತಿ ನಮಗೆ. ಆದರೆ ದಟ್ಟವಾದ ಕಾಫಿಯ ಗುಡಾಣವೇ ನಮ್ಮ ಮುಂದೆ ಬಂದಿತು. ದಣಿದ ಶ್ರೀಪತಿ ಸಂಪೂರ್ಣ ಪ್ರಸನ್ನಚಿತ್ತನಾಗಿ ಅದನ್ನು ನೋಡಿದ. ಇಬ್ಬರೂ ಯಥೇಷ್ಟ ಕಾಫಿ ಕುಡಿದೆವು. ಈ ಚಳಿಸೀಮೆಯಲ್ಲಾದರೂ ಶ್ರೀಪತಿ ನೀರು ಕುಡಿಯಲು ಮರೆಯುತ್ತಾನೋ ಎಂದು ಎಣಿಸಿದರೆ, ಆತ ಎರಡು ದೊಡ್ಡ ಥಾಲಿಗಳಲ್ಲಿ ತಣ್ಣೀರು ತರಿಸಿಕೊಂಡು ಕುಡಿದೇಬಿಟ್ಟ.

ನಮ್ಮ ಮುಂದಿನ ಕಾರ್ಯಕ್ರಮ ನಿಶ್ಚಯವಾಗಿಯೇ ಇತ್ತು. ಸಂಜೆಯಾಗುವ ತನಕ ಅಲೆದಾಡುವುದೆಂದು. ನಮ್ಮ ಮೊದಲನೆಯ ಗುರಿ ಜಕ್ಕೋ ಬೆಟ್ಟದ ಶಿಖರ. ನಗರದ ನಡುವೆಯೇ ಇರುವ ಆ ಬೆಟ್ಟ, ಸಮುದ್ರ ಮಟ್ಟಕ್ಕಿಂತ ೮೦೦೦ ಅಡಿ ಎತ್ತರವಾಗಿದೆ. ನಾವಿರುವ ಹೊಟೇಲಿಗಿಂತ ಬರಿಯ ಸಾವಿರ ಅಡಿ ಎತ್ತರವದು. ಅದನ್ನೇರುವುದು ಅಷ್ಟೇನು ದೊಡ್ಡ ಕೆಲಸವಲ್ಲವೆಂದು,ಇಬ್ಬರೂ ಕೆಮೆರಾ ಹಿಡಿದುಕೊಂಡು ಹೊರಟೆವು. ಶ್ರೀಪತಿ ಉಣ್ಣೆಯ ಪಾಯಿಜಾಮಾ ತೊಟ್ಟು, ಬಿಳಿಯ ಷರಾಯಿ ತೊಟ್ಟು, ಮೇಲೆ ಕೋಟು

ಥರಿಸಿ ಪೊರೆಪುಗನಂತೆ ಹೊರಟ. ಅವನ ದೊರೆತನ, ನಮ್ಮ ಉತ್ಸಾಹ ಕುಸಿಯುವುದಕ್ಕೆ ಹೆಚ್ಚು ಸಮಯ ಬೇಕಾಗಲಿಲ್ಲ. ಸಿಮ್ಲಾ ನಗರದಲ್ಲಿ ಸಮತಟ್ಟಾದ ಮಾರ್ಗಗಳು ಒಂದೆರಡೂ ಇಲ್ಲ. ಇರುವ ಎರಡು ಮುಖ್ಯ ರಸ್ತೆಗಳು ನಗರವನ್ನು ತೀರ ಬಳಸಿನಿಂದ ಸುತ್ತುವುವು. ನಗರಸಂಚಾರ ಹೆಚ್ಚಾಗಿ ಏಣಿ ಇಳಿಯುವಂತೆ ಇಳಿದು ಹತ್ತಿಕೊಂಡೆ ಸಾಗಬೇಕು. ಹಾಗೆ ಮಾಡಬಾರದೆಂದಿದ್ದರೆ—ನೂರು ಗಜ ದೂರವನ್ನು, ಎರಡು ಮೈಲು ಸುತ್ತಿಕೊಂಡು ಸೇರಬೇಕು. ನಾವು ಸರಳಗಾಮಿಗಳಾದೆವು. ಜನವಸತಿಯುಳ್ಳ ಇಲ್ಲಿನ ಬಾಜಾರಗಳಲ್ಲಿ ವಾಹನಗಳ ಸೌಕರ್ಯವಿಲ್ಲ. ನಾಲ್ಕುಮಂದಿ ಎಳೆಯುವ ರಿಕ್ಷಾಗಾಡಿ ಮಾತ್ರ ಇದೆ. ಊರಿನೊಳಗೆ ಮೋಟರು ವಾಹನಗಳ ಸಂಚಾರವೂ ಇಲ್ಲ. ಇಲ್ಲಿನ ಒಳದಾರಿಗಳಲ್ಲಿ ನಡೆದು ಹೋಗುವವರೇ ಹೆಚ್ಚು. ನಡೆದಾಡುವ ಮಂದಿ ದಾರಿಯಲ್ಲೇ ಅಲೆದಾಡುತ್ತಾರೆ. ಹೊರೆ ಹೊರುವವರು, ಅವರಿಗೆ ಸಮತೂಕದಲ್ಲಿ, ಹೊರೆ ಹೊರುವ ಹೇಸರ ಕತ್ತೆಗಳು ಸಹ ನಮಗೆ ಇಂಥ ದಾರಿಗಳಲ್ಲಿ ಸಹಚರರಾಗುತ್ತಾರೆ. ಹೆಜ್ಜೆಹೆಜ್ಜೆಗೂ ಉಸಿರು ಕಟ್ಟುತ್ತಾ, 'ಜಕ್ಕೋ' ಬೆಟ್ಟ ಎಲ್ಲಿ? ಎಂದು ಕೇಳುತ್ತಾ ನಾವು ಹೊರಟೆವು. 'ಮಾಲ್' ಎಂಬ ಮುಖ್ಯ ರಸ್ತೆ ಹಾದು ಮುಂದೆ ಸಾಗುತ್ತಲೇ, ಬೆಟ್ಟದ ಬೆನ್ನು ಸಿಗುತ್ತದೆ. ಅಲ್ಲಿಂದ ಆಚೀಚಿನ ಆಳವಾದ ಕಣಿವೆಗಳು, ದೂರದ ನಗರ ವಿಸ್ತರಣಗಳು, ಅರಮನೆಗಳಂತೆ ಕಾಣುವ ಹಲವಾರು ಬಂಗಲೆಗಳು ಬಹಳ ರಮಣೀಯವಾಗಿ ಕಾಣುತಿದ್ದುವು. ಉದ್ಯೋಗವಿಲ್ಲದ ಜನ ಹಲವರು ರಸ್ತೆಯ ಮಗ್ಗುಲುಗಳಲ್ಲಿ ಹಾಕಿದ ಬೆಂಚುಗಳ ಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದರು. ನಾವು ಪರ್ವತವೇರಲು ಪ್ರಾರಂಭಿಸಿದೆವು. ಕಿರಿದಾದ ದಾರಿಯೊಂದು ದೇವದಾರು ಮರಗಳ ಎಡೆಯಲ್ಲಿ ಮುಂದುವರಿಯುತ್ತಲೇ ಇತ್ತು. ಆಚೀಚೆ ಮರಗಳ ಬುಡದಲ್ಲಿ ನೂರಾರು ಮಂಗಗಳು ಚಳಿಗೆ ಮೈ ಮುದುರಿಸಿಕೊಂಡು ಕುಳಿತ ನೋಟ ಕಾಣಿಸುತಿತ್ತು. ಶ್ರೀಪತಿ ನನಗೆ ಬಲು ಹಿಂದಿನಿಂದ, ಬೆವರಿನ ಮಳೆ ಸುರಿಯುತ್ತಾ 'ಕುಡಿದ ಕಾಫಿಯ ನೀರು ಇಷ್ಟುಬೇಗ ಸುರಿಯಿತಲ್ಲ'—ಎಂದು ವ್ಯಥಿಸುತ್ತ, ಮೂಗು ಬಾಯಿಗಳಿಂದ ಉಸಿರೆಳೆಯುತ್ತ ಬರುತ್ತಲಿದ್ದ. ಪರರ ಮೇಲಿನ ಕರುಣೆಗೆ ತಕ್ಕ ಸ್ಥಳ, ಅನುತಾಪಕ್ಕೆ ತಕ್ಕ ಸ್ಥಳ ಇದಲ್ಲವೆಂದು ನಾನು ಮುಂದೆ ಮುಂದೆ ಸಾಗುತ್ತಲೇ ಇದ್ದೆ. ಮುಕ್ಕಾಲು ತಾಸಿನ ತನಕ ನಡೆದು, ದಣಿದು, ಜಕ್ಕೋ ಶಿಖರ ಸೇರಿದೆವು.

ಶಿಖರದ ತುದಿಯ ತನಕವೂ ಉನ್ನತವಾದ ದೇವದಾರು ಮರಗಳಿವೆ. ಶಿಖರದ ತುದಿಯಲ್ಲೊಂದು ದೇವಾಲಯವಿದೆ. ಅಲ್ಲಿಗೂ ನೀರು ದೊರೆಯುವಂತೆ ಕೊಳಾಯಿ ಇರಿಸಿದ್ದಾರೆ. ದೇವಾಲಯದ ಸುತ್ತಲೂ ನಮ್ಮಷ್ಟೂ ಉತ್ಸಾಹವಿಲ್ಲದೆ ಕುಳಿತಿದ್ದ ಕಪಿ ವರ್ಗವಿತ್ತು. ಅಲ್ಲಿರಿಸಿದ್ದ ಬೆಂಚೊಂದರ ಮೇಲೆ ನಾವಿಬ್ಬರೂ ಕುಳಿತುಕೊಂಡೆವು. ಬಾನಿನಲ್ಲಿ ವಿಶಾಲವಾದ ಬೆಳ್ಮುಗಿಲುಗಳು ನಲಿದಾಡುತ್ತಲೇ ಇದ್ದುವು. ಸಿಮ್ಲಾ ಕಣಿವೆಯ ಮೇಲೆ, ಬೆಟ್ಟದ ಸೆರಗುಗಳ ಮೇಲೆ,ನಗರದ ಬೀದಿ ಬಂಗಲೆಗಳ ಮೇಲೆ ಬಿಸಿಲು ನೆಳಲುಗಳು ಕೆಡವುತ್ತ ಮುಗಿಲರಾಜಿ ಕವಿಯುತ್ತಿತ್ತು, ತೆರೆಯುತ್ತಿತ್ತು. ನಡೆದು ಬಂದ ನಮಗೆ ಮೈ ಬಿಸಿ ಏರಿದ್ದರೂ ಸ್ವಲ್ಪ ಹೊತ್ತಿನೊಳಗಾಗಿ ಬೀಸುವ ಚಳಿಗಾಳಿ ಮೈಯ ರೋಮವನ್ನು ನಿಮಿರಿಸಿತು. ಆಚೀಚೆ ಅಡ್ಡಾಡಿದೆವು, ನಾಲ್ದೆಸೆಯ ಕಣಿವೆಯ ನೋಟವನ್ನು ನೋಡಿದೆವು. ಬೆಟ್ಟದ ತುದಿಯಲ್ಲಿ ನಿಂತು ಕೆಳಗಿನ ಮರ್ತ್ಯಲೋಕವನ್ನು ನೋಡಿದೆವು. ಬೆಟ್ಟದ ತುದಿಯಲ್ಲಿ ನಿಂತು ಕೆಳಗಿನ ಲೋಕವನ್ನು ನೋಡುವಾಗ ನಾವು ಸ್ವರ್ಗದ ನಂದನ ವನದಲ್ಲಿದ್ದೇವೆ ಎಂಬ ಭಾವನೆಯಾಗುತ್ತದೆ. ಹೀಗೆ ಒಂದು ತಾಸು ಸಮಯ ಅಲ್ಲಿ ಕಳೆದುದಾಯಿತು. ಇನ್ನೊಂದು ಬೆಟ್ಟ ತುಳಿದುದಾಯಿತು. ಇಳಕಲು ದಾರಿಯಲ್ಲಿ ಕಾಲು ಜಾರದಂತೆ ಜಾಗ್ರತೆಯಿಂದ ಇಳಿಯಬೇಕಾಯಿತು. ಮುಖ್ಯ ರಸ್ತೆಗೆ ಬಂದು ತಲಪುವಾಗ ಅಲ್ಲಷ್ಟೆ ಸ್ವಲ್ಪ ಬಿಸಿಲು ಬಿದ್ದಿತ್ತು. ಸಿಮ್ಲಾದ ಗಂಡಸರು ಕೇವಲ ಯುರೋಪಿಯನ್ ಉಡುಗೆಯಲ್ಲಿ ಅಲೆದಾಡುತ್ತಿದ್ದರಲ್ಲದೆ, ವಾಹನ ಸಂಚಾರವಿಲ್ಲದ ರಸ್ತೆಯಲ್ಲಿ ಹರಟೆಯಾಡುತ್ತಿದ್ದರು. ಬೆಳ್ಳಗಿನ ಪಂಜಾಬಿ ಹೆಂಗಸರು, ಕಡು ಕೆಂಪು, ಹಸುರು ಉಣ್ಣೆಯ ನಿಲುವಂಗಿಗಳನ್ನು ತೊಟ್ಟು ವಿಹರಿಸುತಿದ್ದರು. ಸ್ವಾಭಾವಿಕವಾಗಿ ಬಿಳಿದೊಗಲು, ಹೊಳಪಿನ ಕಣ್ಣು, ಸುಂದರವಾದ ಮೈಕಟ್ಟುಗಳುಳ್ಳ ಈ ಸ್ತ್ರೀಯರು,ತಮಗಿರುವ ಸೌಂದರ್ಯ ಸಾಲದೆಂಬ ಭ್ರಮೆಗೆ ಬಲಿಯಾಗಿ, ರಕ್ತದ ಬಟ್ಟಲಿಗೆ ಬಾಯಿಯಿಕ್ಕಿ ಬಂದವರಂತೆ ತುಟಿಗೆ ಕೆಂಪು ಬಣ್ಣ ಸವರಿಕೊಂಡಿದ್ದರು. ಅದು ತೀರ ಅಸಹ್ಯವಾಗಿ ಕಾಣುತ್ತಿತ್ತು. ಕಾಗದಗಳಿಂದ ತುಟಿಗಳನ್ನು ಕತ್ತರಿಸಿ ಹಚ್ಚಿದ್ದಾರೋ ಎಂಬ ಭ್ರಮೆಯಾಗುತಿತ್ತು.

ಬೆಟ್ಟದ ಬೆನ್ನಿನ ಮೇಲೆ ಬಿಸಿಲು ಬೀಳುತ್ತಿದ್ದಷ್ಟು ಸಮಯ ಆರಾಮವಾಗಿ ಕುಳಿತಿರುವುದಕ್ಕೆ ಮನಸ್ಸಾಗುತ್ತದೆ. ಇಲ್ಲಿನ ಶೀತಗಾಳಿ ಸಹನೀಯ

ವಾಗುತ್ತದೆ. ಸೂರ್ಯ ಮುಳುಗಿದನೆಂದರೆ ಅವನ ಕಾವು ತಪ್ಪಿತೆಂದರೆ, ವಿಹಾರದ ತಂಟೆ ಬೇಡೆನಿಸುತ್ತದೆ. ಸಾಕಷ್ಟು ದಪ್ಪನಾದ ಉಣ್ಣೆಯ ಬಟ್ಟೆಯಿಲ್ಲದ ವ್ಯಕ್ತಿ ಸಿಮ್ಲಾದಲ್ಲಿ ಹುಟ್ಟುವಂತಿದ್ದರೆ ಕುರಿಯಾಗಿ ಹುಟ್ಟುವುದು ವಾಸಿ ಎಂದು ಕಾಣುತ್ತದೆ. ಸಂಜೆಯ ಚಳಿಗೆ ಕುಳಿತಿರಲಾರದೆಯೇ, ನಮ್ಮ ಕಾಲು ದಣಿದಿದ್ದರೂ ಮೈಯನ್ನು ಬೆಚ್ಚಗಿರಿಸುವುದಕ್ಕಾಗಿಯೇ ಅಲೆದಾಡಬೇಕಾಯಿತು.

ಕೆಲವೊಮ್ಮೆ, ನಮ್ಮ ಶ್ರೀಪತಿಯ ಕಣ್ಣಿನ ಮುಂದೆ ಆನೆ ಹೋದರೂ ಕಾಣಿಸುವುದಿಲ್ಲ. ಆದರೆ ಒಂದು ವಿಷಯ ಮಾತ್ರ ಇದಕ್ಕೆ ಅಪವಾದ. ಮಾಲ್‌ನಲ್ಲಿ ಸಂಚರಿಸುತ್ತಿದ್ದಾಗ ಅವನ ಕಣ್ಣಿಗೆ 'ಇಂಡಿಯಾ ಕಾಫಿಹೌಸಿ'ನ ಬೋರ್ಡು ಬೀಳಬೇಕೇ? ಅವನ ಪ್ರೇರಣೆಯಿಂದ ನಾನು ಆ ಕಾಫಿ ಮಂದಿರ ಸೇರಿದೆ. ಬರಿಯ ಕಾಫಿ ಕುಡಿದರೆ ಆರೋಗ್ಯಕ್ಕೆ ಒಳ್ಳೆಯದಲ್ಲವೆಂದು 'ಸೆಂಡ್‌ವಿಚ್' ತರಿಸಿ, ತಿಂದು, ಅದರ ಮೇಲೆ ಎರಡೆರಡು ಗೆಲನ್ ಕಾಫಿ ಸುರಿದೆವು. ಶ್ರೀಪತಿಯ ಶರೀರದಲ್ಲಿ, ಬೆಟ್ಟವೇರಿ ಬಂದುದರ ಪರಿಣಾಮವಾಗಿ ಇಳಿದಿದ್ದ ಜಲಮಟ್ಟ, ಕಾಫಿ ಕುಡಿದ ಬಳಿಕ, ಮೊದಲಿನ ಸ್ಥಾನಕ್ಕೆ ಬಂದು ತಲುಪಿತು. ನಾನು ಅಲ್ಲಿಂದ ಕಾಲುಕೀಳುವುದರೊಳಗಾಗಿ ಆತ 'ಐಸ್ ಲೆಮನಿದೆಯೋ' ಎಂದು ಕೇಳಲಿಕ್ಕೆ ಸಿದ್ಧ. "ಮಹಾರಾಯಾ, ತಲಾ ಏಳೇಳು ರೂಪಾಯಿ ಕೊಟ್ಟು, ರೋಯಲ್ ಹೊಟೇಲಿನ ಅನ್ನದ ಋಣ ತಪ್ಪಿಸಿಕೊಳ್ಳಬೇಕೆನ್ನುತ್ತೀಯಾ?" ಎಂದು ಹೇಳಿದ ಮೇಲೆ, ಐಸ್ ಲೆಮನ್ ಕೊಳ್ಳದೆಯೆ ಆತ ಹೊರಟ. ದಾರಿಯಲ್ಲಿ ಹಾಯುತ್ತ, ಮಾಲಿನ ಅಂಗಡಿ ಬಾಗಿಲುಗಳನ್ನು ಇಣಿಕಿನೋಡಿ, ಹಾಗೆಯೇ ಬೆಟ್ಟವಿಳಿದು, ನಮ್ಮ ಹೊಟೇಲನ್ನು ಸೇರಿದೆವು. ನಾವಿದ್ದ ಕೊಟಡಿಯ ಮುಂಗಡೆಯಲ್ಲಿ ಅಸಾಧ್ಯ ಶೀತಗಾಳಿ ಬೀಸುತ್ತಿತ್ತು. ಅದರ ಕದವಿಕ್ಕಿಕೊಂಡು, ನಮ್ಮ ಊಟ ತರಿಸಿ ಮೆಲ್ಲಗೆ ಭೋಜನ ಮಾಡುತ್ತ ಕುಳಿತೆವು. ಹಸಿವೂ ಚೆನ್ನಾಗಿತ್ತು. ಬಡಿಸಿದ ಊಟವೂ ಚೆನ್ನಾಗಿತ್ತು.

ಬೆಳದಿಂಗಳಲ್ಲಿ ಸಿಮ್ಲಾದ ಬೀದಿ ತುಳಿಯಬೇಕೆಂಬ ಭ್ರಮೆ ನಮಗೆ. ಆದರೆ ಆ ರಾತ್ರಿಯ ಚಂದ್ರನು ಮಾತ್ರ ಬೆಟ್ಟದ ಹಿಂದಿನಿಂದ ಇನ್ನೂ ತಲೆಯೆತ್ತಬೇಕಿತ್ತು. ಗಳಿಗೆಗೊಮ್ಮೆ ನಾವು ಹೊರಕ್ಕೆ ಬಂದು ಇಣಿಕಿ ನೋಡಿದೆವು. ಎದುರಿನ ಕಣಿವೆ ಕತ್ತಲಾಗಿತ್ತು. ಆದರೆ ಮಗ್ಗುಲಿನ ಬೆಟ್ಟದ ಸೆರಗುಗಳು ಮಾತ್ರ ಅಪ್ಸರ ರಾಜ್ಯವೆನಿಸುತ್ತಿತ್ತು. ಹಸುರು ಮರಗಳಿಂದಾವೃತವಾದ

ಆ ಗೋಡೆಯ ಅಂಧಕಾರದಲ್ಲಿ ನಗರದ ವಿದ್ಯುದ್ದೀಪಗಳು ನಕ್ಷತ್ರಲೋಕ ದಂತೆ ಮಿನುಗುತ್ತಿದ್ದುವು. ಮೇಲೆ, ಕೆಳಗೆ, ಸುತ್ತಮುತ್ತ—ಮಿಂಚುತಿದ್ದ ಈ ವಿದ್ಯುತ್ ತಾರೆಗಳು ವಿಚಿತ್ರವಾದ ಸೊಬಗನ್ನು ಕೊಡುತಿದ್ದವು. ಚಳಿ ಏರು ತ್ತಲೇ ಇತ್ತು. ಚಂದ್ರ ಮೂಡುವ ಭರವಸೆ ಸಮಯ ಸರಿದರೂ ಉಂಟಾ ಗಲಿಲ್ಲ. ಹಾಗೆಂದು ಕದವಿಕ್ಕಿಕೊಂಡು ಹಾಸಿಗೆ ಬಿಡಿಸಿ ಮಲಗಿಕೊಂಡೆವು. ನಾವು ಊರಿಂದ ಹೊರಡುವಾಗ ಸಿಮ್ಲಾದ ಪ್ರವಾಸ ನಮ್ಮ ಎಣಿಕೆಯಲ್ಲೀ —ಇದ್ದಿರಲಿಲ್ಲ. ಆದರೆ ನಮ್ಮ ಶ್ರೀಪತಿ ಬಲು ದೂರದರ್ಶಿ. ದಪ್ಪಗಾದ ಬ್ಲೇಕೆಂಟ್, ಕ್ವಿಲ್ಟ್—ಏನೇನು ಬೇಕೋ ಅವುಗಳನ್ನು ಬರುವಾಗಲೇ ತಂದಿದ್ದು, ಅವುಗಳೊಳಕ್ಕೆ ಸೇರಿ ಮಲಗಿದ ಮಹಾನುಭಾವ ಬೆಳಗ್ಗೇನೇ ಎದ್ದದ್ದು. ನನ್ನ ಬಟ್ಟೆಗಳೆಲ್ಲ ಹತ್ತಿಯವು. ದಪ್ಪನಾದ ಚದ್ದರೊಂದನ್ನು ನಾನು ಹೊದೆದುಕೊಂಡು ಮಲಗಿದೆ. ಅದು ಚಳಿಗೆ ಶೀತವಾಗಿಯೇ ಕಾಣಿಸು ತಿತ್ತು. ಆದುದರಿಂದಲೇ ನಾನು ಮಾಡಿದ ನಿದ್ರೆ ಎಚ್ಚರವೋ ನಿದ್ರೆಯೋ ಎಂಬ ಅನುಮಾನದಿಂದ ಕೂಡಿತ್ತು.

ಎರಡನೆಯ ದಿನ ಬೆಳಗಿನ ಉಪಾಹಾರ ಮುಗಿದೊಡನೆಯೇ, ನಗರದ ಒಂದೂ ಎಲ್ಲೆಯನ್ನೂ ಬಿಡದೆ, ಸುತ್ತಿ ಬರಬೇಕೆಂದು ಸಂಕಲ್ಪ ಮಾಡಿದೆವು. ಸಮನಾದ ಡಾಮರು ಬಳಿದ ರಸ್ತೆಗಳು ಎಲ್ಲೆಲ್ಲಿದ್ದುವೋ ಅಲ್ಲೆಲ್ಲವೂ ಹೋಗಿ ಬರುವ ಆಸೆ ನಮ್ಮದು. ಈ ಹಾದಿಗಳೆಲ್ಲ ಹೆಚ್ಚಾಗಿ ಬೆಟ್ಟದ ಮೈಗೆ ಅಂಟಿ ಸರಿಯತಕ್ಕವು. ಅವುಗಳ ಒಂದು ಕಡೆಯಲ್ಲಿ ಕಣಿವೆ ಕಾಣಿಸುತ್ತಲೇ ಇರು ತ್ತದೆ. ನೂರು ಗಜ ಸರಿದು ನಿಂತರೂ, ಒಂದೊಂದು ಕಡೆ ಒಂದೊಂದು ಬಗೆಯ ಕಣಿವೆಯ ನೋಟ ಕಾಣಿಸುತಿತ್ತು. ಆಳವಾದ ಕಣಿವೆಯಲ್ಲಿ ಮಾಡಿ ರುವ ಹೊಲ, ತೋಟ, ಬಂಗಲೆಗಳು ಕಾಣಸಿಗುತ್ತವೆ. ನಾನಾ ಆಕೃತಿಯ ಬೆಟ್ಟದ ಸೆರಗುಗಳು ಹಸುರುಡುಗೆಯಿಂದ ವಿಚಿತ್ರ ಬೆಡಗನ್ನು ಸೂಸುತ್ತವೆ. ಅಂಥ ಒಂದು ಕಡೆಯಲ್ಲಿ ನಿಂತು ನೋಡಿದಾಗ ಬಹು ದೂರದಲ್ಲಿನ ಪರ್ವ ತಾವಳಿಯೊಂದು ನಮಗೆ ಕಾಣಿಸಿತು. ಪರ್ವತಾವಳಿಯ ಮೈಬಣ್ಣ ನೀಲ ಮಿಶ್ರಿತವಾದ ಬೂದು ಬಣ್ಣ. ಅದು ಬಾನೊಡನೆ ಬೆರೆತಂತೆ ಕಂಡರೂ ಅದರ ಶಿಖರವನ್ನು ಬಹು ದೂರದ ತನಕ ಆವರಿಸಿಕೊಂಡಿರುವ ಹಿಮವಲಯ ಶುಭ್ರವಾಗಿ ಹೊಳೆಯುತಿತ್ತು. ಸಮೀಪದ ಹಿಮವಂತ ನಮಗೆ ಕಾಣಿಸ ಬೇಕಾದರೆ, ಸಿಮ್ಲಾದಿಂದ ಇನ್ನೂ ಐವತ್ತು ಮೈಲು ದೂರ ತಿಬೇಟಿನ ಕಡೆಗೆ

ನಾವು ಸಾಗಿ ಹೋಗಬೇಕಂತೆ. ಅದು ಕತ್ಕಾಲಕ್ಕೆ ಸಾಧ್ಯವಿಲ್ಲದ ಮಾತು. ಆದುದರಿಂದ ಈ ದೂರದೃಶ್ಯದಿಂದಲೇ ತೃಪ್ತಿ ಪಡಬೇಕಾಯಿತು. ಅಲ್ಲಿ ನಿಂತೆವು; ಇಲ್ಲಿ ನಿಂತೆವು; ಮೈಲು ಫರ್ಲಾಂಗುಗಳಿಗೊಮ್ಮೆ ನಿಂತು ನೋಡುತ್ತ ನಗರದ ನಾಲ್ಕು ದಿಸೆಯಲ್ಲೂ ಅಲೆದಾಡಿವು. ಒಂದು ಕಡೆ ಜಕ್ಕೋ ಪರ್ವತದ ಮಗ್ಗುಲಿಗೆ ಅಂಟಿ ಸಾಗಿಹೋಗುವ ದಾರಿ ನರಕುಂದ ಎಂಬಲ್ಲಿಗೆ ಹೋಗುತ್ತದೆ. ಅಲ್ಲಿಂದಲೇ ಹಿಮುಮತ್ ಪ್ರಾಂತ ಆರಂಭವಾಗುತ್ತದಂತೆ. ಆ ದಾರಿಯಲ್ಲಿ ನಾವು ಮೂರು ಮೈಲು ದೂರ ನಡೆದುಹೋದೆವು. ಸಿಮ್ಲಾದ ಒಂದು ಹೊರಬಾಗಿಲಿಗೆ ಬಂದೆವು. ಒಂದು ಕಡೆ ಬೋಳಾದ ಗುಡ್ಡ ಬಲು ಎತ್ತರಕ್ಕೆ ಎದ್ದು ನಿಂತು ಕಾಣಿಸುತ್ತದೆ. ಆ ಗುಡ್ಡದ ಮೈಯಲ್ಲೂ ಕೃಷಿಕ ಭೂಮಿ ಕಾಣಿಸುತ್ತದೆ, ಜನವಸತಿ ಕಾಣಿಸುತ್ತದೆ. ಇನ್ನೊಂದು ಕಡೆ ಬೆಟ್ಟ ಇಳಿದು ಕಣಿವೆಯಾಗಿ, ತಿರುಗಿ ಬೇರೊಂದು ಪರ್ವತಾವಳಿಯಲ್ಲಿ ಬೆರೆತು ಮೇಲಕ್ಕೇರತೊಡಗುತ್ತದೆ. ಅದರ ಹಿಂದೆ ಬೆಟ್ಟದ ಸಾಲುಸಾಲುಗಳು! ತಿರುಗಿ ಬಹುದೂರದಲ್ಲಿ ಹೊಳೆದು ಕಾಣಿಸುವ ಹಿಮವಂತದ ನೋಟ. ಸೃಷ್ಟಿ ಸೌಂದರ್ಯ ನೋಡುವವನಿಗೆ ಸಿಮ್ಲಾ ನಗರದ ಬಹಿರ್ವಲಯಗಳೆಲ್ಲ ತಣಿಸಲಾರದ ಚೆಲುವನ್ನು ತೋರುತ್ತವೆ. ಎಲ್ಲಿ ನೋಡಿದರೂ ಬೆಟ್ಟ, ಎಲ್ಲಿ ನೋಡಿದರೂ ಕಣಿವೆ, ಎಲ್ಲಿ ನೋಡಿದರೂ ಕಾಡಿನ ಸೆರಗು, ಶೀತಲವಾದ ಹವೆ. ಎಷ್ಟು ನಡೆದರೂ ಆಯಾಸವಾಗದಂತಹ ಆವರಣ. ಅವನ್ನೆಲ್ಲ ತುಳಿದು, ನೋಡಿ, ತಣಿದು, ತಿರುಗಿ 'ಮಾಲ್'ಗೆ ಬಂದು, ಇನ್ನಷ್ಟು ಕಾಫಿ ದಕ್ಕಿಸಿಕೊಂಡು ಹದಿನೆರಡು ಘಂಟೆಯ ಹೊತ್ತಿಗೆ ನಮ್ಮಹೊಟೇಲನ್ನು ಸೇರಿದೆವು. ಊಟ ಮುಗಿಸಿ, ತುಸು ವಿಶ್ರಾಂತಿ ಪಡೆದು, ಸಮನಾಗಿ ಎರಡು ಘಂಟೆಗೆ ಬಸ್ಸು ನಿಲ್ದಾಣವನ್ನು ಸೇರಿದೆವು. ನಮ್ಮಮರು ಪಯಣ ಬಸ್ಸಿನಲ್ಲಿ. ನಾವು ಕುಳಿತದ್ದು ಬಸ್ಸೂ ಅಲ್ಲ; ಕಾರೂ ಅಲ್ಲ. ಒಂದು ಸ್ಟೇಶನ್ ವೇಗನ್. ಅದರಲ್ಲಿ ನಾಲ್ವರೇ ಪ್ರಯಾಣಿಕರು. ಒಬ್ಬೊಬ್ಬ ಏಳೇಳು ರೂಪಾಯಿ ತೆರಬೇಕಾಗಿತ್ತು. ಕೊಟ್ಟರೂ ಚಿಂತೆಯಿಲ್ಲ; ಸುಖವಾದ ಪ್ರಯಾಣ. ರೈಲಿಗಿಂತ ವೇಗವಾಗಿ ಅದು ಹೋಗುತ್ತದೆ. ಅಲ್ಲದೆ ಹೋಗುವ ಡಾಮರು ಹಾದಿಯು ರೈಲು ಸರಿಯುವ ಬೆಟ್ಟದ ಇನ್ನೊಂದು ಬದಿಯಿಂದ ಹಾದುಹೋಗುತ್ತದೆ. ಹೀಗಾಗಿ ಮೊದಲು ಕಾಣದ ಹಲವಾರು ನವೀನ ಪ್ರದೇಶಗಳು, ಕಾಡುಗಳು, ಕಣಿವೆಗಳು, ಜನವಸತಿಗಳು—ನಮಗೆ ಕಾಣಲು ದೊರೆತವು. ಐವ

ತ್ತೈದು ಮೈಲು ದೂರದ ಈ ದಾರಿಯಲ್ಲಿ ಪೇಟೆಪಟ್ಟಣಗಳ ಸಂಖ್ಯೆ ಬರಿಯ ನಾಲ್ಕೋ ಆರೋ. ಆದರೂ ಎಲ್ಲ ಬೆಟ್ಟಗಳ ಕಿಬ್ಬದಿಗಳಲ್ಲಿಯೂ ಗುಡ್ಡಗಾಡಿನ ಪಂಜಾಬಿ ರೈತರು ಕಾಣಸಿಗುತ್ತಾರೆ. ಮೊಸಲು ಕಂಡ ಹಾದಿಗಿಂತ ಈ ಹಾದಿಯ ಮಗ್ಗುಲಿನ ಕಣಿವೆಯ ನೋಟ, ಬೆಟ್ಟದ ಮಗ್ಗುಲಿನ ಕೃಷಿ, ಇನ್ನಷ್ಟು ಹಸನಾಗಿ ತೋರುತ್ತದೆ. ಆರಂಭದಲ್ಲಿ ದೇವದಾರು ಮರ ಕವಿದ ಬೆಟ್ಟದ ತಪ್ಪಲನ್ನು ಬಿಟ್ಟರೆ, ಮುಂದೆ ಬಹು ದೂರ, ಇಪ್ಪತ್ತು, ಮೂವತ್ತು ಮೈಲಿನ ತನಕ ಬೆಟ್ಟದ ಸಸ್ಯಹೀನ ಮಗ್ಗುಲೇ ಕಾಣಸಿಗುತ್ತದೆ. ಅನಂತರ ತಿರುಗಿ ಕಾಡುಗಳು ಬರುತ್ತವೆ. ಮೊದಲು ಬಣ್ಣಿಸಿದ ಎರಡು ಮೂರು ತೆರನ ಸಸ್ಯವೃಂದಗಳಿರುವ ಬೆಟ್ಟದ ತಪ್ಪಲು ಇಲ್ಲಿದೆ. ದಾರಿ ಸುತ್ತುತ್ತದೆ, ಇಳಿಯುತ್ತದೆ, ಏರುತ್ತದೆ. ಡಾಮರು ಬಳಿದ ರಸ್ತೆಯಾದುದರಿಂದ ಪ್ರಯಾಣಿಕನಿಗೆ ಆಯಾಸವಾಗುವುದಿಲ್ಲ. ರೈಲು ಏಳು ತಾಸು ವೇಳೆ ತೆಗೆದುಕೊಂಡ ಹಾದಿಯನ್ನು ಬರಿಯ ಮೂರೂವರೆ ತಾಸಿನ ಅವಧಿಯಲ್ಲಿ ಮೋಟರು ಸಾಗಿ ಬಂದಿತು. ಕಲ್ಕಾ ನಗರವನ್ನು ನಾವು ಸೇರುವಾಗ ಇನ್ನೂ ಕತ್ತಲು ಕವಿದಿರಲಿಲ್ಲ. ನಾವು ನೆಟ್ಟಗೆ ರೈಲು ನಿಲ್ದಾಣಕ್ಕೆ ಬಂದೆವು. ಅಷ್ಟೊಂದು ದೊಡ್ಡ ನಿಲ್ದಾಣದಲ್ಲಿ ಹತ್ತೆಂಟು ಮಂದಿ ಪ್ರವಾಸಿಗಳೂ ಇಲ್ಲ. ನಿಲ್ದಾಣದಲ್ಲಿ ರಾತ್ರಿ ಹನ್ನೊಂದು ಘಂಟೆಗೆ ಹೊರಡುವ ದೇಹಲಿ ಬಂಡಿ ಆಗಲೇ ಬಂದು ನಿಂತಿತ್ತು. ನಾವು ಬಂದವರೇ ಟಿಕೇಟನ್ನು ಕೊಂಡು, ಬಂಡಿಯಲ್ಲೇ ಬಿಡಾರ ಹೂಡಿದೆವು. ಶ್ರೀಪತಿ ತಾಳ್ಮೆ ಇಲ್ಲದೆ ಪ್ಲೇಟ್‌ಫೋರ್ಮನ್ನು ಅಳೆಯುತಿದ್ದ. ಆತಗೆ ಮುಂದಿನ ಯೋಚನೆ ಬಹಳ ಪೀಡಿಸುತ್ತಿತ್ತೆಂದು ಕಾಣುತ್ತದೆ. ಒಮ್ಮೆ ಬಂದು 'ಊಟಕ್ಕೆ ಹೇಳಿದ್ದೇನೆ' ಎಂಬ ಶುಭ ಒಸಗೆಯನ್ನು ಬೀರಿದ. ಎಂಟು ಘಂಟೆಗೆ ಸಮನಾಗಿ ಊಟ ಬಂದಿತು. ಆರೆಂಟು ಬಟ್ಟಲನ್ನಿರಿಸಿಕೊಂಡು ರೆಸ್ಟೋರೆಂಟ್ ಸೇವಕನೊಬ್ಬ ಔತಣ ಸಹಿತನಾಗಿ ನಮ್ಮ ಎದುರಿಗೆ ಬಂದು ನಿಂತ. ನೋಡಿದೊಡನೆ ಇದು ಅಗ್ಗದ ಊಟ ಅನಿಸಿತು ನನಗೆ. ಶ್ರೀಪತಿ ನನಗೆ ಧೈರ್ಯ ಹೇಳಿದ. "ಏನಿಲ್ಲ ಹೆಚ್ಚೆಂದರೆ ಒಂದೂವರೆ ರೂಪಾಯಿ ಹೇಳಿಯಾರು" ಎಂಬ ಭವಿಷ್ಯ ಹೇಳಿದ. ರೈಲಿನ ಊಟ ಅಗ್ಗವಾಗುವುದುಂಟೇ? ಊಟ ಮುಗಿಯಿತು. ಬಿಲ್ಲೂ ಬಂದಿತು. ಅದು ಅಗ್ಗವಾಗಿಯೇ ಇತ್ತು. ಆರು ರೂಪಾಯಿ ಹದಿನೆರಡಾಣೆಗಳು ಮಾತ್ರ. ಚಿಲ್ಲರೆ ದೊರಕಿಸಿಕೊಳ್ಳುವ ಅಪೇಕ್ಷೆಯಿಲ್ಲದೆ ಆ ಸೇವಕನಿಗೆ ಏಳು ರೂಪಾಯಿ

ಕೊಟ್ಟೆವು.ಪ್ರಸನ್ನವದನನಾದ ಆ ಸೇವಕ "ಇನ್ನೊಮ್ಮೆ ಕಲ್ಯಾಕ್ಕೆ ಬಂದಾಗ ನನ್ನನ್ನೇ ಕರೆಯಬೇಕು. ನನ್ನ ನಂಬರು ಇಂತಿಷ್ಟು"–ಎಂದು ತನ್ನ ಬಿಲ್ಲೆ ತೋರಿಸಿದ. ಬಿಲ್ಲೆಯ ನಂಬರು ಶ್ರೀಪತಿಗೆ ನೆನಪಿದೆಯೋ ಇಲ್ಲವೋ. ಬಿಲ್ಲಿನ ನಂಬರು ನನಗೆ ನೆನಪಿದೆ.

ಅನಂತರ ಬಂಡಿ ಹೊರಡಲಿ, ಬಿಡಲಿ. ಮಲಗಿಯೇ ಬಿಡುವ-ಎಂದು ನಾವು ಹಾಸಿಗೆ ಬಿಡಿಸಿ ಮಲಗಿಕೊಂಡೆವು. ಬೆಳಗಾಗುವಾಗ ದೇಹಲಿ ಬಂದಿತ್ತು. ರಾತ್ರಿ ನಮ್ಮ ಗಾಡಿಗೆ ನುಗ್ಗಿದ ಇನ್ನೂ ಮೂವರು ಮಂದಿ ಪಯಣಿಗರ ಗುರುತು ನಮಗೆ ಬೆಳಗಾದ ಮೇಲೆಯೇ ತಿಳಿದದ್ದು. ರಾತ್ರಿಯಲ್ಲಿ ನಮ್ಮ ತಲೆಯಲ್ಲಿ ಸಿವ್ಲಾದ ಅಪ್ಸರ ಲೋಕ ಸುತ್ತುತ್ತಲಿತ್ತು.

೬. ಆಗ್ರಾ ಯಾತ್ರೆ

ದೇಹಲಿಗೆ ಬಂದ ನಾವು ಮುಂದಿನ ಪಯಣಕ್ಕೆ, ನಮ್ಮ ಬಂಡಿ ಬದಲಿಸ ಬೇಕಿತ್ತು. ಒಂಬತ್ತು ಘಂಟೆಗೆ ಅಲ್ಲಿಂದ ಮುಂಬಯಿಗೆ ಹೊರಡುವ ಮೈಲ್ ಗಾಡಿಯಲ್ಲಿ ಹೋಗಿ ಕುಳಿತುಕೊಂಡೆವು. ಬಂಡಿ ಹೊರಡುವುದಕ್ಕೆ ಇನ್ನೆರಡು ತಾಸು ಉಳಿದಿದ್ದುದರಿಂದ ಅಲೆದಾಡಲು ಎಷ್ಟೋ ಸಮಯವಿತ್ತು. ಅದರಲ್ಲಿ ಹೋಗಿ ಕುಳಿತೆವು. ದಿನ ಪತ್ರಿಕೆಗಳನ್ನು ಕೊಂಡು, ಓದಿ ಹೊತ್ತು ಕಳೆದೆವು. ಬಳಿಕ ರೈಲ್ವೆ 'ಎನ್‌ಕ್ವಾಯರಿ ಆಫೀಸಿಗೆ' ಹೋಗಿ 'ಖಜುರಾಹೋ ಎಲ್ಲಿದೆ?' ಎಂದು ಕೇಳಿದೆವು. ಹಿಂದಣ ದಿನಗಳಲ್ಲಿ–ರೈಲ್ವೆಯವರು ಅಜಂತಾ, ಎಲ್ಲೋರಾಗಳಷ್ಟೇ ಪ್ರಾಶಸ್ತ್ಯವನ್ನು ಇಲ್ಲಿನ ದೇವಾಲಯಗಳಿಗೆ ಕೊಟ್ಟು ಪ್ರಕಟಣೆ ಹೊರಡಿಸುತ್ತಿದ್ದರು. ಈಗ ಅದಾವುದೂ ಇಲ್ಲ. ನಾನು ಕೇಳಿದ್ದಕ್ಕೆ ಅಲ್ಲಿದ್ದ ನೌಕರ 'ಖಜುರಾಹ' ಎಂಬ ರೈಲ್ವೆ ನಿಲ್ದಾಣದ ಪರಿಚಯ ಮಾಡಿಕೊಟ್ಟ. 'ಖಜುರಾಹ'ಬೇರೆಯೇ 'ಖಜುರಾಹೋ'ಬೇರೆಯೇ ಎಂದು ನನಗೆ ತಿಳಿದಿತ್ತು. ಆದರೆ ಆ ಎರಡನೆಯ ಊರಿನ ಪರಿಚಯ ಆಫೀಸಿನಲ್ಲಿದ್ದ ಆ ಯುವಕನಿಗೆ ಗೊತ್ತಿರಲಿಲ್ಲ. ಹೀಗಾಗಿ ನಾನು ನಿರಾಶೆಯಿಂದ ಮರಳಿದೆ. ಒಂಬತ್ತು ಘಂಟೆಗೆ ಸರಿಯಾಗಿ ಬಂಡಿ ಹೊರಡಿತು. ನಮ್ಮ ಕೊಠಡಿಯಲ್ಲಿದ್ದ ಇತರ ಪ್ರವಾಸಿಗಳು ಸೈನಿಕರು. ಅವರು ತಮ್ಮ ರಾಜ್ಯದ ಪ್ರಸ್ತಾಪವನ್ನಾಡುತ್ತಿದ್ದಾಗ, ನಮಗೊಂದೂ ಅರ್ಥವಾಗುತ್ತಿರಲಿಲ್ಲ. ನಾವು ಬೇಸರದಿಂದ ಕುಳಿತು ಆಚೀಚೆ ನೋಡುತ್ತಿದ್ದೆವು. ಬರಿಯ ಮೂರು ತಾಸಿನ ದಾರಿ ಆಗ್ರಾ ನಗರಕ್ಕೆ. ರೈಲ್ವೆ ನಕಾಶೆಯಲ್ಲಿ ಆಗ್ರಾ ಜಂಕ್ಷನ್ ಗುರುತಿಸಿದ್ದಾರೆಂದು ನನಗೇಕೋ ಅಳಿಯಲಾರದ ನೆನಪು. ಅದಕ್ಕೆ ಸಮೀಪವೇ 'ರಾಜಾಕಿ ಮಂಡಿ' 'ಆಗ್ರಾಕಾಂಟ್', ಎಂಬ ನಿಲ್ದಾಣಗಳಿವೆ. ಜಂಕ್ಷನ್‌ನಲ್ಲಿ ನಾವು ಇಳಿದು, ನಮ್ಮ ವಸತಿಯ ಏರ್ಪಾಟು ಮಾಡಬೇಕೆಂದು ಯೋಚಿಸಿಕೊಂಡೆವು. ಬಂಡಿಯು ವೇಗವಾಗಿ ಸಾಗುತ್ತ 'ಮಥುರಾ' ನಿಲ್ದಾಣಕ್ಕೆ ಬಂದಿತು. ಅಲ್ಲಿ ಮಧ್ಯಾಹ್ನದ ಊಟದ ಏರ್ಪಾಟನ್ನು ಮಾಡಿದೆವು. ಊಟ ಕುಳಿತಲ್ಲಿಗೆ ಬಂದದ್ದರಿಂದ, ನಾವಿಬ್ಬರೂ ಅದನ್ನು ಮೆಲ್ಲುತ್ತಾ ಹೊತ್ತು ಕಳೆದೆವು. ಅನಂತರ ಬಂದದ್ದು 'ರಾಜಾಕಿ ಮಂಡಿ,' ಅನಂತರ ಬಂದಿತು 'ಆಗ್ರಾಕಾಂಟ್'. ನಾವು ಈ ಎರಡು ಸ್ಥಳಗಳಲ್ಲೂ ಇಳಿಯದೆ,

ಮುಂದಿನ ಸ್ಟೇಶನಿನಲ್ಲಿ ಇಳಿಯಬೇಕು; ಅದೇ ಆಗ್ರಾ ಜಂಕ್ಷನ್—ಎಂಬ ಆತ್ಮವಿಶ್ವಾಸದಿಂದ ಕುಳಿತೇ ಇದ್ದೆವು. ಬಂಡಿ ಹೊರಟಿತು. ಆಚೀಚೆ ನೋಡಿದರೆ ಆಗ್ರಾ ನಗರ ಕಳೆದು, ಬಟ್ಟ ಬಯಲು ಬರತೊಡಗಿತು. 'ಇದೇನು? ಆಗ್ರಾ ಜಂಕ್ಷನ್ ಬರುವುದಿಲ್ಲವಲ್ಲ'—ಎಂದು ಬಳಿ ಕುಳಿತ ಪ್ರವಾಸಿಯೊಬ್ಬನನ್ನು ಕೇಳಿದೆವು.

"ಆಗ್ರಾಕಾಂಟ್ ಬಂದು ಹೋಯಿತಲ್ಲ" ಎಂದ ಆತ.

"ಆಗ್ರಾ ಜಂಕ್ಷನ್ ಬೇರೆ ಇಲ್ಲವೇ?"

"ಕೆಂಟೋನ್‍ಮೆಂಟ್ ಜಂಕ್ಷನೇ ಜಂಕ್ಷನ್. ಬೇರೆ ಜಂಕ್ಷನ್ ಇಲ್ಲ" ಎಂದು ಉತ್ತರ ಬಂದಿತು.

ಆಗ ನಿಜಕ್ಕೂ ನಮಗೆ ದಿಗಿಲಾಯಿತು. ಇಳಿಯಬೇಕಾದಲ್ಲಿ ಇಳಿಯದೆ, ಮಂಕರಂತೆ ಕುಳಿತುನೋಡುತಿದ್ದೆವು ನಾವು. ಇನ್ನೇನು ಮಾಡಬೇಕು-ಎಂದು ಬಗೆಗಾಣದಾಯಿತು. ನಮ್ಮ ಬಂಡಿ ಮುಂದೆ ನಿಲ್ಲತಕ್ಕ ಸ್ಥಳ 'ಗ್ವಾಲಿಯರ್'. ಅಲ್ಲಿಯ ತನಕ ಹೋಗಿ, ತಿರುಗಿ ಆಗ್ರಾಕ್ಕೆ ಮರಳುವ ಪ್ರಸಂಗ ಬಂತಲ್ಲ-ಎಂಬ ಬೇಸರಕ್ಕೊಳಗಾದೆವು. ಅದರ ಬದಲು ಇನ್ನೂ ಮುಂದುವರಿದು ಝಾನ್ಸಿಗೆ ಹೋಗಿ ಇಳಿದರೆ, ಅಲ್ಲಿಂದಲಾದರೂ 'ಖಜುರಾಹೋ' ಪತ್ತೆ ತಿಳಿದೀತು. ಅದನ್ನು ಮುಗಿಸಿಕೊಂಡು ಆಗ್ರಾಕ್ಕೆ ಮರಳುವ-ಎಂಬ ಯೋಚನೆ ಮಾಡಿದೆವು. ಝಾನ್ಸಿಗೆ ಹೋಗುವ ಒಬ್ಬ ಸರಕಾರಿ ನೌಕರ ನಮ್ಮ ಬಳಿಯಲ್ಲಿ ಕುಳಿತಿದ್ದ. ಅವನನ್ನು 'ಖಜುರಾಹೋ'ವಿನ ವಿಚಾರದಲ್ಲಿ ಕೇಳಿದೆವು. ಆತನಿಗೆ ಆ ಹೆಸರೇ ಹೊಸತು. ಆತನ ಸಿಪಾಯಿಯೊಬ್ಬ 'ಖಜರಾಹ' ಸ್ಟೇಶನ್ ವಿಚಾರ ಹೇಳತೊಡಗಿದ. ಸೇವಕ ನಮ್ಮೊಡನೆ ಮಾತನಾಡುವುದು ಅವನ ಆಫೀಸರ್ ಸಾಹೇಬನಿಗೆ ಸರಿಕಾಣಿಸಲಿಲ್ಲ. ಆದುದರಿಂದ ಅವನೂ ಸುಮ್ಮನಾದ. ನಮಗೂ ಬೇಸರ ಬಂದಿತ್ತು. ಒಂದು ದಿನವೇ ಹಾಳಾಯಿತಲ್ಲ ಎಂಬ ಚಿಂತೆಮೂಡಿತ್ತು. "ಏನೂ ಆಗಲಿ, ಅಕಸ್ಮಾತ್ ಬಂಡಿ ಎಲ್ಲಿಯಾದರೂ ನಿಲ್ಲುವ ಪ್ರಸಂಗ ಬಂದರೆ, ಮೊದಲ ನಿಲ್ದಾಣದಲ್ಲೇ ಇಳಿದು ಹಿಂದಿರುಗಿ ಬಿಡುವ" ಎಂದು ಸಾಮಾನುಗಳನ್ನು ಬಾಗಿಲ ಬಳಿಗೆ ತಂದಿರಿಸಿ ಕಾದು ನಿಂತೆವು. ನಮ್ಮ ಸುದೈವಕ್ಕೆ 'ಧೋಲ್ಪುರ' ಬರುತ್ತಲೇ ನಮ್ಮ ಬಂಡಿ ನಿಂತಿತು. ನಿಂತದ್ದೇಕೆಂದು ನಮಗೂ ತಿಳಿಯದು. ಅಲ್ಲಿಂದ ಹತ್ತುವ ಪ್ರವಾಸಿಗಳೂ ಇದ್ದಿಲ್ಲ. ಇಳಿಯುವವರೂ ನಮಗೆ ಕಾಣಿಸಲಿಲ್ಲ. ನಾವು

ಇಳಿದ ಮೇಲೆ ತಿಳಿಯಿತು—ಪ್ರಥಮ ತರಗತಿಯ ಒಬ್ಬಪ್ರವಾಸಿಗಾಗಿ ಬಂಡಿ ನಿಂತಿತೆಂದು. ನಮ್ಮ ಸುದೈವದಿಂದ ಅದು ಹಾಗೆ ನಿಂತಿತಷ್ಟೆ. ಇಳಿದ ಬಳಿಕ, ಸ್ಟೇಶನ್ ಮಾಸ್ಟರರಲ್ಲಿಗೆ ಹೋಗಿ ಹೀಗಾಯಿತೆಂದು ಹೇಳಿದೆವು. 'ಚಿಂತಿಲ್ಲ. ಇನ್ನೊಂದು ತಾಸಿನಲ್ಲಿ ಆಗ್ರಾಕ್ಕೆ ಹೋಗುವ ಪೆಸೆಂಜರ್ ಬಂಡಿ ಬರುತ್ತದೆ. ಹೋಗುವಿರಂತೆ" ಎಂದು ಆತ ನುಡಿದ. ತಾಸು ಕಳೆಯುತ್ತಲೇ, ಆ ಬಂಡಿ ಬಂದಿತು. ಟಿಕೇಟನ್ನು ಕೊಂಡು ಹೊರಡುತ್ತಿದ್ದಾಗ, ಸ್ಟೇಶನ್ ಮಾಸ್ಟರ್ ನಾವಿದ್ದಲ್ಲಿಗೆ ತಾನಾಗಿಯೆ ಬಂದು "ಏನು, ಟಿಕೇಟು ಕೊಂಡಿರಾ?" ಎಂದು ಕೇಳಿದ. ಆತಗೆ ನಮ್ಮನ್ನು ರಿಯಾಯತಿಯಿಂದ ಮರಳಿ ಕಳುಹಿಸುವ ಮನ ವಿದ್ದಂತೆ ಕಂಡಿತು. 'ಆದರೆ ನಮ್ಮ ತಪ್ಪಿಗಾಗಿ ರೈಲ್ವೆಯವರ ಮೇಲೆ ದಂಡ ಹೊರಿಸುವುದೇನು ನ್ಯಾಯ'-ಎಂದು ನಾವು ಟಿಕೇಟುಕೊಂಡಿದ್ದೆವು. ಬಂಡಿ ಸಾಗಿತು. ಬಿಸಿಲ ಜಳ ತುಂಬ ಕಾಣಿಸಿತು. ಬರಿಯ ಒಂದು ತಾಸಿನ ಹಾದಿ ಆಗ್ರಾಕ್ಕೆ ಇದ್ದಿದ್ದರೂ, ಮೊದಲೇ ಉಂಟಾದ ಬೇಸರ, ಜತೆಗೆ ಬೇಸಿಗೆಯ ಜಳ—ಎರಡರಿಂದಲೂ ಪ್ರವಾಸ ಸಾಕಾಗಿಹೋಗಿತ್ತು. ಅಂತು ಸಂಜೆಯ ಐದು ಘಂಟೆಯ ಹೊತ್ತಿಗೆ ನಮ್ಮ ಬಂಡಿ ಆಗ್ರಾಕಾಂಟ್ ಸೇರಿತು.

ಅಲ್ಲಿ ಬಂಡಿಯಿಂದಿಳಿದು ತೀರ ಸಮೀಪದಲ್ಲಿದ್ದ "ಲಾರ್ಡ್ಸ್" ಹೊಟೇಲಿಗೆ ಹೋಗಿ ವಸತಿಯ ಏರ್ಪಾಟುಮಾಡಿದೆವು. ಹೊಟೇಲು ಬರಿಯ ನೂರು ಗಜದೊಳಗಿದ್ದರೂ, ಅರಿಯದ ನಮ್ಮಿಂದ ಟಾಂಗದವನು ಒಂದು ರೂಪಾಯಿ ಕೊಂಡನು. ಹೊಟೇಲಿನ—ಹೊರಗಿನ ಒಂದು ಮನೆಯಲ್ಲಿ ನಮಗೆ ಜಾಗಕೊಟ್ಟರು. ಅಲ್ಲಿ ಸಾಮಾನಿರಿಸಿ, ಸ್ನಾನ ಮುಗಿಸಿ, ಬಟ್ಟೆ ಬದಲಿಸಿ ಉಪಹಾರ ಮುಗಿಸಿದೆವು. ಸಂಜೆಯಾದರೂ ಸುಮ್ಮನೆ ಕುಳಿತಿರಲು ಮನವಾಗಲಿಲ್ಲ. ಅಲ್ಲಿಂದ ತಿರುಗಿ ಟಾಂಗಾದಲ್ಲಿ ಕುಳಿತು,ತಾಜಮಹಾಲನ್ನು ನೋಡುವುದಕ್ಕೆ ಹೊರಟೆವು. ಬೆಳದಿಂಗಳು ಬೀಳುವ ತನಕ ಮನೆಗೆ ಮರಳ ಬಾರದೆಂದು ಎಣಿಸಿಹೊರಟಿದ್ದೆವು. ಆಗ್ರಾ ನಗರ ನೋಡಲು ಅಷ್ಟೊಂದು ಚೆನ್ನಾಗಿಲ್ಲ. ಆದರೆ ಹೋದ ಕೆಂಟೋನ್‌ಮೆಂಟ್ ಭಾಗ ಶುಚಿಯಾಗಿಯೂ ಸುಂದರವಾಗಿಯೂ ಇತ್ತು. ಅಗಲವಾದ ಡಾಮರು ರಸ್ತೆಗಳು, ವಿಶಾಲವಾದ ಹಿತ್ತಲು ಮನೆಗಳು. ಮುಂದೆ ಸರಿಯುತ್ತ, ಸರಿಯುತ್ತ, ದಾರಿಯ ಸಾಲು ಮರಗಳು ಮನಸ್ಸಿಗೆ ತುಂಬಾ ಆಹ್ಲಾದವನ್ನಿತ್ತುವು. ನಮ್ಮ ಹೊಟೇಲಿನಿಂದ ಸುಮಾರು ಮೂರು ಮೈಲು ದೂರವಿತ್ತು—'ತಾಜ್'ಗೆ. ಅದಿರುವುದು

ಯಮುನಾ ನದಿಯ ದಂಡೆಯಲ್ಲಿ. ನಮ್ಮದೊರೆ ಉಡುಗೆಯ ಶ್ರೀಪತಿ, ಟಾಂಗಾ ಇಳಿದೊಡನೆಯೇ, ಸಲಾಂ ಕೊಟ್ಟು ಸ್ಥಳಪರಿಚಯ ಮಾಡಿಕೊಡಲು ಅಲ್ಲಿನ ಗೈಡ್ ಜನಗಳು ನಮ್ಮನ್ನು ಸುತ್ತುವರಿದರು. ಅವರನ್ನೆಲ್ಲ ಸರಿಸಿಕೊಂಡು, ನಮ್ಮಷ್ಟಕ್ಕೆ ತಾಜ್ ನೋಡಲು ನಾವು ಸಾಗಬೇಕಾಯಿತು.

'ತಾಜ್' ಸೇರುವ ಮೊದಲೇನೆ, ಉನ್ನತವಾದ ಕೆಂಪು ಶಿಲೆಯ ಮಹಾ ದ್ವಾರವೊಂದು ನಮಗೆ ಇದಿರಾಗುತ್ತದೆ. ಅದರ ಕಮಾನಿನೊಳಗಿಂದ ಎದುರಿನ ಪ್ರಾಂಗಣವನ್ನೂ ಉದ್ಯಾನವನ್ನೂ, ಅನತಿ ದೂರದಲ್ಲಿರುವ ತಾಜ್ ಮಂದಿರ ವನ್ನೂ ಕಾಣಬಹುದು. ನಾನು ಹಿಂದೆ ಎರಡೆರಡು ಬಾರಿ ಈ ಪ್ರದೇಶಕ್ಕೆ ಬಂದವನಾದರೂ ಇನ್ನೂ ಕಂಡು ಬೇಸರಗೊಳ್ಳುವಂತಿಲ್ಲ. ವಾಸ್ತು ಕೃತಿ ಗಳಲ್ಲಿ ಅದೇನೆ ಅತ್ಯುತ್ತಮ ಕೃತಿ ಎಂದು ನಾನು ತಿಳಿದವನಲ್ಲ. ಆದರ ನಿರ್ಮಾಣಕ್ಕಾಗಿ ಕೆಡವಿದ ಹಣ, ಪಟ್ಟ ಶ್ರಮ—ಇವೆಲ್ಲವುಗಳಿಗಿಂತ ಹೆಚ್ಚು, ಆ ನಿರ್ಮಾಣಕ್ಕೆ ಕಾರಣವಾದ ಪ್ರೇಮಮಯ ಕನಸು ನನಗೆ ಅಧಿಕ ಸಂತೋಷವನ್ನುಂಟುಮಾಡುವಂಥದು. ಈ ಮಂದಿರದ ನಿರ್ಮಾಣಕ್ಕಾಗಿ ಯಾವಾವ ದೇಶಗಳಿಂದ ಕಲ್ಲುಗಳನ್ನು ತಂದರು; ರತ್ನಗಳನ್ನು ತಂದರು, ಶಿಲ್ಪಿಗಳನ್ನೂ ಕರೆತಂದರು—ಎಂಬುದು ಇತಿಹಾಸ ಓದಿದವನಿಗೆ ತಿಳಿಯುವ ಅಂಶ. ಆದರೆ ಅದನ್ನು ಓದದೆಯೇ ಇದನ್ನು ನೋಡಿದರೂ ಈ ಮಂದಿ ರಕ್ಕೆ ಕಾರಣನಾದ ಶಹಜಹಾನನ ಭಾವಜೀವನ, ಸೌಂದರ್ಯಪ್ರಿಯತೆ, ರಸಿಕ ಹೃದಯ ಹೇಗಿದ್ದಿತೆಂದು ಸ್ವಯಂ ವ್ಯಕ್ತವಾಗಬೇಕು. ತನ್ನ ಇನಿಯ ಳಾದ ಮುಮ್ತಾಜ್‌ಳ ನೆನಪನ್ನು ಶಾಶ್ವತವಾಗಿ ನಿಲ್ಲಿಸುವುದಕ್ಕೆ ಆತ ಈ ಮಂದಿರ ರಚಿಸಿದ್ದಾನೆ. ಇಂದು—ಮುಮ್ತಾಜ್ ಶಹಜಹಾನರಿಬ್ಬರ ನೆನಪೂ ನಮಗೆ ಇದನ್ನು ಕಂಡು ಉಂಟಾಗುತ್ತದೆ. ಸೌಂದರ್ಯದಲ್ಲಿ, ಈ ಕಟ್ಟಡ ಇದೇ ಆಗ್ರಾದಲ್ಲಿರುವ ಇತ್‌ಮತ್ ಉದ್ದೌಲನ ಗೋರಿಗಿಂತ ಕಡಿಮೆಯ ಲ್ಲದ್ದು. ಆದರ ಶೈಲಿಯೂ ಸ್ವತಂತ್ರವಾದದ್ದು, ಸೌಂದರ್ಯವೂ ಬೇರೆತೆರನಾ ದುದು.

ತಾಜಮಹಲು ಇಂಡೋ ಸಾರ್ಸನಿಕ್ ಶೈಲಿಯಲ್ಲಿ ರಚಿಸಿದ ಸುಂದರ ನಿರ್ಮಾಣ. ದಿಲ್ಲಿಯ ಹುಮಾಯೂನನ ಗೋರಿಯೂ ಈ ತೆರನಾದುದು. ಉನ್ನತವಾದ, ವಿಶಾಲವಾದ ಚಚ್ಚೌಕ ನೆಲಗಟ್ಟಿನ ಮೇಲೆ, ಆದಕ್ಕೂ ಕಿರಿ ದಾದ ಚಚ್ಚೌಕವಾದ ಮಂದಿರದ ಮೈಕಟ್ಟು ನಿಂತಿದೆ. ನಾಲ್ದೆಸೆಗೂ ನಾಲ್ಕು

ಮಹಾದ್ವಾರಗಳಿವೆ. ಚೌಕದಾಕೃತಿಯ ತಳದ ಮೇಲೆ, ಮೂಲೆ ಮುರಿದು ಎಂಟು ಪಟ್ಟಿಗಳಾಗಿ ಮಾಡಿದ ಉನ್ನತ ಗೋಡೆಗಳು ನಿಂತಿವೆ. ಈ ಕಟ್ಟಡ ವನ್ನೆಲ್ಲ ಆವರಿಸುವಂಥ ಹಿರಿಯ ಗುಂಬಜ್ ಅದನ್ನು ಮುಚ್ಚುತ್ತದೆ. ಉಳಿದವಕ್ಕೂ ಇದಕ್ಕೂ, ಹುಮಾಯೂನನ ಗೋರಿಗೂ ಇದಕ್ಕೂ, ಇರುವ ಮುಖ್ಯ ವ್ಯತ್ಯಾಸವೆಂದರೆ–ಅವು ಕೆಂಪುಗಲ್ಲಿನವು; ಇದು ಹಾಲಿಗಲ್ಲಿನದು. ಇಲ್ಲಿ ಮಂದಿರದ ನಾಲ್ಕು ಮೂಲೆಗಳಲ್ಲಿ ಕಟ್ಟಡಕ್ಕೆ ಸಮತೋಲ ಬರುವಂತೆ, ನಾಲ್ಕು ಉನ್ನತವಾದ ಕೊತ್ತಲಗಳನ್ನು ರಚಿಸಿದ್ದಾರೆ. ಉಳಿದ ಕಡೆಗಳಲ್ಲಿ ಅವಿಲ್ಲ. ಆದರೂ ಬಹು ಎತ್ತರಕ್ಕೆ ಒಮ್ಮೆಗೆ, ನೆಟ್ಟಗೆ ಮೇಲಕ್ಕೇರುವ ಈ ಕಟ್ಟಡದ ಮೈ ರೇಖೆ, ಮೇಲಕ್ಕೆ ದುಂಡಾಗಿ ಗುಂಬಜಿನಲ್ಲಿ ಕೊನೆಗೊಳ್ಳುವು ದಾದರೂ, ಮುಖ್ಯ ಮಂದಿರದ ಎಡಬಲಗಳಿಗೆ ದೃಢವಾದ ಸಮತೋಲ ಬಂದಿಲ್ಲ. ಈ ಕಟ್ಟಡ ಏನನ್ನೋ ಕಳಕೊಂಡಿದೆ ಅನ್ನುವ ಭಾವ ಉಂಟಾಗು ತ್ತದೆ. ಅದು ಏನು? ಎಂಥದು?–ಎಂದು ತಿಳಿಯಲು ನಾವು ಸಾಸ್ರಾಮ ನಗರ ದಲ್ಲಿನ ಶೇರ್‌ಷಹಾನ ಗೋರಿಯನ್ನು ಕಾಣಬೇಕು. ಅಲ್ಲಿ ನೆಲದ ಮಟ್ಟದಿಂದ ಮೆಲ್ಲಮೆಲ್ಲಗೆ ಕಟ್ಟಡದ ನೀಳ, ವಕ್ರ ರೇಖೆಗಳು ಬೆರೆತು ಗುಂಬಜಿನಲ್ಲಿ ಲಲಿತ ವಾಗಿ ಕೊನೆಗೊಳ್ಳುವಂತೆ ಕಾಣುತ್ತವೆ. ಇಲ್ಲಿ ಅಂಥ ಹೊಂದಿಕೆಯಿಲ್ಲ. ಇದು ತಾಜಮಹಲಿನ ಮುಖ್ಯ ಕೊರತೆ.

ಆದರೂ ಸುತ್ತಲಿನ ಸುಂದರವಾದ ಉದ್ಯಾನ, ಉದ್ಯಾನದ ಗಿಡ ಮರಗಳು, ಅಲ್ಲಲ್ಲಿ ಲಲಿತವಾಗಿ ನಿರ್ಮಿಸಿದ ಕೊಳ, ಕಾರಂಜಿಗಳು, ವೇದಿಕೆ ಗಳು, ಒಂದು ಕಡೆ ಕಾಣುವ ಯಮುನೆಯ ಪ್ರವಾಹ, ಈ ಮಂದಿರಕ್ಕೆ ಹೆಚ್ಚಿನ ಸೊಗಸು ಕೊಡುತ್ತವೆ. ಬಹು ದೂರದಿಂದಲೂ ಈ ಮಂದಿರ ಉನ್ನತ ವಾಗಿಯೇ ಕಾಣಿಸುತ್ತದೆ.

ಸಂಜೆ ಮುಂಜಾನೆಗಳಲ್ಲಿ ಎಳೆಬಿಸಿಲು ಈ ಮಂದಿರದ ಬಿಳುಗಲ್ಲಿನ ಮೇಲೆ ಕುಣಿದಾಡುವಾಗ, ಯಾವುದೋ ಅಪೂರ್ವ ಕಾಂತಿ ಅದರಿಂದ ಹೊಮ್ಮುತ್ತದೆ. ಸುಣ್ಣಬಳೆದ ಕಟ್ಟಡದ ಜಳ ಅದಕ್ಕಿಲ್ಲ. ದಂತ, ಮುಕ್ತಾ ಫಲಗಳ ಮಿದುತನ ಅದರ ಬಿಳಿಯ ಬಣ್ಣಕ್ಕಿದೆ. ಮಂದಿರದ ಉನ್ನತ ಪೀಠ ವನ್ನೇರಿ ನಾಲ್ಕುಸುತ್ತು ಅಲೆದಾಡುವಾಗ, ನಮ್ಮ ಮನಸ್ಸು ತಲ್ಲೀನವಾಗು ತ್ತದೆ. ವ್ಯಕ್ತಿಯ ಹಿರಿಯ ಆಕಾಂಕ್ಷೆಯೊಂದು ಎಂಥ ಅಪೂರ್ವ ಕಾಣಿಕೆ ಯನ್ನು ಸಲ್ಲಿಸಿತು–ಎಂಬ ನೆನಪು ನಮಗಾಗುತ್ತದೆ. ಅದನ್ನೇ ತಿರುತಿರುಗಿ

ಕಾಣುವ ಆಸೆ ಉಂಟಾಗುತ್ತದೆ. ಮಂದಿರದ ನಾಲ್ಕು ಸುತ್ತಲಿನ ಬಾಗಿಲುಗಳಲ್ಲಿ ಹಾಲುಗಲ್ಲಿನ ಕ್ಷೀರ ಚೆಲುವಿನ ಕೆತ್ತನೆಗಳಿವೆ. ಒಳಗಿನ ಸಮಾಧಿಗಳು, ಅದರ ಸುತ್ತು ನಿಲ್ಲಿಸಿದ ಚಂದ್ರಕಾಂತ ಶಿಲೆಯ ಕಲ್ಲಿನ ತೆರೆಗಳು ಅನನ್ಯವಾದ ಚಿತ್ರ, ಪ್ರತಿರೂಪಗಳಿಂದ ತುಂಬಿರುವಂಥವು. ಸಂಜೆಯ ಬಿಸಿಲು ಈ ಪ್ರದೇಶದಿಂದ ಮರವೆಯಾಗಿ, ನಸುಕು ಹರಿದರೆ, ತಲೆಯೆತ್ತಿನಿಂತ ಕಟ್ಟಡವೊಂದೇ ನಮಗೆ ಕಾಣಿಸುತ್ತದೆ. ಆ ಮಂಜು ಬೆಳಕಿನಲ್ಲೂ ಅದರ ಕಾಂತಿ ಹೊಮ್ಮಿ ಕಾಣುತ್ತದೆ. ಕಟ್ಟಡದ ಬಾಹ್ಯರೇಖೆಗಳು ಹರ್ಷವನ್ನುಂಟುಮಾಡುತ್ತವೆ. ನಾವು ಆ ದಿನ ರಾತ್ರಿ ಒಂಬತ್ತು ತಾಸು ಕಳೆಯುವ ತನಕ ಅಲ್ಲೇ ಕುಳಿತು ನೋಡಿದೆವು. ಬಾನಿನಲ್ಲಿ ಚಂದ್ರೋದಯದ ಸುಳಿವು ಕಂಡೀತೇ ಎಂದು ಆಸೆಮಾಡಿದೆವು. ಆದರೆ ಅದರ ಬದಲು, ದೂರದ ರೈಲಿನ ಸರ್ಚ್ ಲೈಟುಗಳು ಮಂದಿರದ ಹಿಂದಿನ ದಿಂಗತದಲ್ಲಿ ಬೆಳಗಿದುವು. ಚಂದ್ರೋದಯಕ್ಕೆ ಇನ್ನೂ ವೇಳೆಯಿದ್ದುದರಿಂದ, ಆ ಧಿನ ನಾವು ನಿರಾಶೆಗೊಂಡು ಮನೆಗೆ ಮರಳಿದೆವು. ಮರುದಿನ ನಮ್ಮ ವಿಹಾರ ತೊಡಗಿದುದು ಇಲ್ಲಿಂದಲೇ. ಒಂದು ತಾಸನ್ನು ಇಲ್ಲೇ ಕಳೆದೆವು. ಫೋಟೋ ತೆಗೆದೆವು. ಅರೆಗಣ್ಣಿನಿಂದ, ತೆರೆಗಣ್ಣಿನಿಂದ, ಉದ್ಯಾನದ ನಾಲ್ಕು ಮೂಲೆಗಳಿಗೂ ಹೋಗಿ ಅದರ ಸೊಬಗನ್ನೀಕ್ಷಿಸಿದೆವು. ಅದನ್ನು ನೋಡಿದಂತೆಲ್ಲ ಶಹಜಹಾನನ ಮೇಲಿನ ಅಭಿಮಾನ ಹೆಚ್ಚುತ್ತಲಿತ್ತು.

ತಾಜಮಹಲಿನಿಂದ ಒಂದು ಮೈಲು ದೂರಕ್ಕಿದೆ—ಆಗ್ರಾ ಕೋಟೆ. ಅಲ್ಲಿ ಮೊಗಲರ ಹಲವಾರು ಅರಮನೆ, ಸಭಾಂಗಣಗಳಿವೆ. ಹಾಗೆಂದು ಅವನ್ನು ಕಾಣಲು ಹೊರಟೆವು. ದಾರಿಯ ಇಕ್ಕಡೆಗಳಲ್ಲೂ ಆಗ ತಾನೆ ಅರಳಿ ಸುಗಂಧವನ್ನು ಬೀರುತ್ತಿದ್ದ ಒಂದು ಬಗೆಯ ಚಂಪಕ ಶೋಭಿಸುತಿತ್ತು. ನಮ್ಮೂರಿನ ಸಂಪಿಗೆಯ ಹೂವಿಗಿಂತ ಬಿಳುಪಾದ, ನೀಳವಾದ ಈ ಸಂಪಿಗೆಗೆ ಮಧುರವಾದ ವಾಸನೆಯಿದೆ. ಅದರ ಹೆಸರು ‘ರಾಮದಾನಿ ಚಂಪಕ’ವಂತೆ. ಸಂಪಿಗೆಯ ಮರದ ಎಲೆಯು ಮಾತ್ರ ಮುತ್ತುಗದ ಎಲೆಯಂತಿದೆ. ಈ ದಾರಿಯ ಬದಿಗಳಲ್ಲಿ, ಹಸುರುಹಚ್ಚೆ ತುಂಬಿದ ಉದ್ಯಾನಗಳಿವೆ. ಬಿದಿರ ಮೆಳೆಗಳೂ ಇವೆ.

ಆಗ್ರಾ ಕೋಟೆ, ಪ್ರೇಕ್ಷಕರಿಗೆ ಬೆಳಿಗ್ಗೆ ಒಂಬತ್ತು ಘಂಟೆಗೆ ತೆರೆಯುತ್ತದೆ. ಸರಿಯಾಗಿ ೯ ಘಂಟೆ ಆಗುವಾಗ ನಾವಲ್ಲಿದ್ದೆವು. ಹೊರಗಿನ ಕೋಟೆ,

ದಿಲ್ಲಿಯ ಕೆಂಪು ಕೋಟೆಯಂತೆ ಸಾಮಾನ್ಯವಾದದ್ದು. ಕೋಟೆಯ ಒಂದು ಮಗ್ಗುಲಿಗೆ ಯಮುನಾ ನದಿ ಹರಿಯುತ್ತದೆ. ಇನ್ನೊಂದು ಮಗ್ಗುಲಿನಿಂದ ನಗರದ ಗೊಂದಲವೆಲ್ಲ ಕೇಳಿಸುತ್ತದೆ. ಕೋಟೆಯ ಒಳಕ್ಕೆ ಹೊಕ್ಕರೆ, ಹೊರಗಿನ ರಾಜ್ಯವೆಲ್ಲ ಮರೆತು, ಸ್ತಬ್ಧವಾದ ಅರಮನೆಯ ಆವರಣ ಬರುತ್ತದೆ. ಕೆಲವು ಕಡೆ ಕೆಂಪು ಕಲ್ಲಿನಿಂದ ರಚಿಸಿದ ಹಲವಾರು ಚಾವಡಿಗಳಿವೆ; ಮುಖಮಂಟಪಗಳಿವೆ. ಅವಾವುವೂ ವಿದೇಶಿಯ ಶೈಲಿಯವುಗಳಲ್ಲ; ದೇಶಿಯವಾದುವು. ಈ ಅರಮನೆಗಳನ್ನು ಮೊಗಲ ಅರಸರು ತಮ್ಮ ಹಿಂದೂ ಸತಿಯರಿಗಾಗಿ ಕಟ್ಟಿಸಿದರೆನ್ನುತ್ತಾರೆ. ಅಲ್ಲಿಂದ ಮುಂದುವರಿದರೆ ನಾಲ್ಕೆಂಟು ಇತರ ಕಟ್ಟಡಗಳು ಬರುತ್ತವೆ. ಹಾಲುಗಲ್ಲಿನಿಂದ ರಚಿಸಿದ ಮಂಟಪಗಳು, ಸಭಾಂಗಣಗಳು ಬರುತ್ತವೆ. ಒಂದು ಸಭಾಂಗಣ ಭಾರಿ ದೊಡ್ಡದು; ದಿಲ್ಲಿಯ ದಿವಾನಿ ಆಮ್ ಸಭಾಂಗಣದಷ್ಟೇ ದೊಡ್ಡದಾದುದು. ಇದು ಚಂದ್ರಕಾಂತ ಶಿಲೆಯಿಂದ ರಚಿತವಾಗಿದ್ದು ಅದರ ನೂರಾರು ಸ್ತಂಭರಾಜಿಗಳು, ಆವರ್ತಿಸಿ ಬರುವ ಕಮಾನುಗಳು, ಈ ಮಂದಿರಕ್ಕೆ ಭವ್ಯರೂಪಕೊಡುತ್ತವೆ. ಇನ್ನೊಂದು ಕಡೆ ಅಂತಃಪುರವಿದೆ. ವಿಚಿತ್ರ ಸ್ನಾನಗೃಹವಿದೆ. ಕನ್ನಡಿಯ ಚೂರುಗಳಿಂದ ಚಿತ್ರವಿಚಿತ್ರ ಪ್ರತಿರೂಪಗಳನ್ನು ಬರೆದು ತುಂಬಿಸಿದ ಗೋಡೆಗಳುಳ್ಳ ಈ ಸ್ನಾನ ಗೃಹ, ಅಂಬೇರದಲ್ಲಿ ನಾವು ಕಂಡ ಸ್ನಾನಗೃಹದ ಮಾದರಿಯದು. ಈ ಮಂದಿರದ ಬಲಗಡೆಗೆ–ಶಹಜಹಾನನು ಕುಳಿತುಕೊಳ್ಳುತ್ತಿದ್ದ ಒಂದು ಮುಖಮಂಟಪವಿದೆ. ಉನ್ನತವಾದ ಕೋಟೆಯ ಗೋಡೆಯ ಮೇಲೆ ಅದು ವಿರಮಿಸಿದೆ. ಅಲ್ಲಿ ಕುಳಿತರೆ, ದೂರದ ತಾಜಾಮಹಲೂ, ವಕ್ರಗಾಮಿಯಾಗಿ ಹರಿಯುವ ಯಮುನಾ ನದಿಯೂ ಕಾಣಿಸುತ್ತವೆ. ಈ ಪ್ರದೇಶದ ಸೊಬಗನ್ನು ಎಷ್ಟೂ ಬಣ್ಣಿಸಬಹುದು. ನಮ್ಮ ಜತೆಗೆ ಬಂದಿದ್ದ ಮಾರ್ಗದರ್ಶಿಯೊಬ್ಬನು, ಗೆಳೆಯ ಶ್ರೀಪತಿಯನ್ನು ತನ್ನ ಐತಿಹಾಸಿಕ ಜ್ಞಾನದಿಂದ ಬೆರಗುಪಡಿಸುತ್ತಿದ್ದ. ನಾನು ಈ ಮಂದಿರಗಳ ಚಿತ್ರ, ಚಲಚ್ಚಿತ್ರ ತೆಗೆಯುತ್ತಲಿದ್ದೆ.

ಇಲ್ಲಿಂದ ನಾವು ಮುಂದುವರಿದು ಹೋದುದು, ಒಂದು ಮಸೀದಿಗೆ. ತುಸು ಎತ್ತರಕ್ಕೆ ಏರಿ ಅನಂತರ ಉನ್ನತವಾದ ಒಂದು ಅಂಗಣವನ್ನು ಸೇರಿದೆವು. ಅಂಗಣದ ಒಂದು ಮಗ್ಗುಲಲ್ಲಿ ಮಸೀದಿಯ ಚಾವಡಿಯಿದೆ. ಅದರ ಸಭಾಸದನವನ್ನು ಮುಚ್ಚಿಕೊಂಡು ಆರೆಂಟು ಸುಂದರ ಗುಂಬಜುಗಳು

ಸಾಲಾಗಿ ಕಾಣಿಸುತ್ತವೆ. ಅಂಗಣದ ನಾಲ್ಕು ಸುತ್ತಲೂ ಬೆಳುಗಲ್ಲಿನಿಂದ ಮಾಡಿದ,ಚೌಕಿಯ ಮನೆಯಂತೆ ಕಾಣಿಸುವ ಚಾವಡಿಗಳಿವೆ. ಈ ಯಾವತ್ತು ರಚನೆ ಹಾಲುಗಲ್ಲಿನದು. ಈ ವಾಸ್ತುಕೃತಿ ಹಿರಿಮೆಯಲ್ಲಿ ಅಷ್ಟೊಂದು ಹೆಚ್ಚಿನದಲ್ಲವಾದರೂ, ನಿತ್ಯ ಉಪಯೋಗಿಯಾದ ಈ ವಾಸ್ತು ವಿಧಾನವು ಕಣ್ಣಿಗೆ ಚೆನ್ನಾಗಿಯೇ ಕಾಣಿಸುತ್ತದೆ. ಮನಸ್ಸಿಗೂ ಶಾಂತಿಯನ್ನೀಯುತ್ತದೆ. ಇವೆಲ್ಲವನ್ನು ನೋಡಿ ಮುಗಿಸುವುದರೊಳಗಾಗಿ, ನಮ್ಮ ಮನಸ್ಸು ಕೋಟೆಯನ್ನು ದಾಟಿ, ಬಸ್ಸು ನಿಲ್ದಾಣಕ್ಕೆ ಮುಂದುವರಿದಿತ್ತು. ಇತ್‌ಮತ್ ಉದ್ದೌಲನ ಗೋರಿಯನ್ನು ನೋಡಿಕೊಂಡು, ಫತ್ತೇಪುರ ಸಿಕ್ರಿಯನ್ನು ಕಾಣಬೇಕೆಂಬ ಆಸೆ ನಮಗೆ. ಊಟವನ್ನಂತೂ ಮರೆತು ಬಂದಿದ್ದೆವು. ಕೋಟೆಯನ್ನು ದಾಟಿ ಹೊರಕ್ಕೆ ಬಂದವರೇ, ಬಸ್ ನಿಲ್ದಾಣಕ್ಕೆ ಓಡಿದೆವು. ಬಸ್ಸು ನಿಲ್ದಾಣ ಜನರ ಗೊಂದಲದಿಂದ ತುಂಬಿತ್ತು. ಸಂಯುಕ್ತ ಪ್ರಾಂತಕ್ಕೆ ಸೇರುವ ಅಲ್ಲಿನ ಬಸ್ಸು ಸರ್ವಿಸುಗಳು ಸರಕಾರದುವು. ಹಲವಾರು ಊರುಗಳಿಗೆ ಹೋಗುವ ಬಸ್ಸುಗಳು ಅಲ್ಲಿ ಸಾಲುಸಾಲಾಗಿ ನಿಂತಿದ್ದುವು. ಫತ್ತೇಪುರ ಸಿಕ್ರಿಗೆ ಹೋಗುವ ಬಸ್ಸು ಮಾತ್ರ ಬಂದಿರಲಿಲ್ಲ. ಹಾಗೆಂದು ಸದ್ದರ್ ರೈಲು ನಿಲ್ದಾಣಕ್ಕೆ ಹೋದೆವು. ಫತ್ತೆಪುರಕ್ಕೆ ಹೋಗುವ ರೈಲು ಬಂಡಿ ಹೊರಟುಹೋಗಿತ್ತು. ತಿರುಗಿ ಬಸ್ಸು ನಿಲ್ದಾಣಕ್ಕೆ ಮರಳಿದೆವು. ಆಗ ನಮ್ಮದೂ ಬಂದು ನಿಂತಿತ್ತು. ಬಂಡಿಯ ಅರ್ಧ ಮುಂಭಾಗ ಒಂದನೇ ತರಗತಿಯಂತೆ; ಹಿಂಭಾಗವೆಲ್ಲ ಎರಡನೇ ತರಗತಿ. ಟಿಕೇಟು ಪಡೆದು ಹೋಗಿ ಕುಳಿತೆವು. ಬಂಡಿ ಹೊರಡುವುದಕ್ಕೆ ಇನ್ನೂ ವೇಳೆಯಿತ್ತು. ಕುಳಿತಲ್ಲಿಯೇ ನೀರು ತರಿಸಿ ಕುಡಿದೆವು. ಒಂದು ಥಾಲಿ ನೀರಿಗೆ ಅರ್ಧಾಣೆ ಮಾತ್ರ ಬೆಲೆ. ಆದರೆ ಆ ಧೂಳು, ಬಿಸಿಲಿನಲ್ಲಿ ಥಾಲಿಗೆ ನಾಲ್ಕಾಣೆ ಎಂದಿದ್ದರೂ ಕೊಡಲೇಬೇಕು. ಅನಂತರ, ಬರ್ಫ್ ಸೇರಿಸಿದ ಹಾಲನ್ನು ಕೊಂಡು ಕುಡಿದೆವು. ಹಾಲಿಗೆ ಹಿಮಗಡ್ಡೆ ಸೇರಿಸಿ ಕುಡಿದರೆ, ಹೊಟ್ಟೆಗೆ ಶಿಲೆಯ ಕಲ್ಲು ಹಾಕಿದಷ್ಟು ಗಟ್ಟಿಯಾಗುತ್ತದೆ–ಎಂಬ ಅನುಭವ ನಮಗೆ ಬಂದಿತು. ಮುಂದೆ ಎರಡು ತಾಸುಗಳ ತನಕ ಹೊಟ್ಟೆಯಲ್ಲಿ ಹಸಿವಿನ ಸುಳಿವೇ ಇಲ್ಲ. ಹಾಗಲ್ಲದೆ ಹೋಗಿದ್ದರೆ ಗೆಳೆಯ ಶ್ರೀಪತಿ ನನ್ನನ್ನೇ ತಿನ್ನುತ್ತಿದ್ದನೋ ಏನೋ.

ಮಧ್ಯಾಹ್ನದ ಬಿಸಿಲಿಗೆ ಬಸ್ಸು ಹೊರಟಿತು.ಜನನಿಬಿಡವಾದ ಊರನ್ನು ಕಳೆಯಲು ಮೂರು ನಾಲ್ಕು ಮೈಲು ಸಾಗಬೇಕಾಯಿತು. ಊರ ದಾರಿ

ಯಲ್ಲಿ ಬಸ್ಸನ್ನು ತೀರ ಮೆಲ್ಲಗೆ ನಡೆಸುತ್ತಾರೆ. ಮೈರಾವಣನ ಅಬ್ಬರವಿಲ್ಲ. ಊರು ಕಳೆಯಿತೆಂದರೆ ಬಸ್ಸಿಗೆ ಆವೇಶಬರುತ್ತದೆ. ಅಗಲವಾದ ನೇರಾದ ಡಾಮರು ಬಳಿದ ರಸ್ತೆ. ಜನ, ವಾಹನಗಳ ಸಂಚಾರ ಕಡಿಮೆ. ಇಕ್ಕಡೆ ಗಳಲ್ಲೂ ಸುಂದರವಾದ ಸಾಲುಮರಗಳಿವೆ. ಗಾಳಿಯನ್ನು ಸೀಳಿಕೊಂಡು ಬಸ್ಸು ಬಲು ವೇಗದಿಂದ ಸಾಗಿತು. ಒಂದೂವರೆ ತಾಸಿನಲ್ಲಿ ನಾವು ಫತ್ತೇ ಪುರ ಸಿಕ್ರಿಯನ್ನು ಸೇರಿದೆವು.

'ಫತ್ತೇಪುರ' ಇತಿಹಾಸ ಬಲ್ಲವರಿಗೆ ತಿಳಿದಿರಬೇಕಾದ ಊರು. ಬೇರೊಂದು ಫತ್ತೇಪುರವಿದೆ. ನಾವು ಹೋದ ಊರಿಗೆ 'ಫತ್ತೇಪುರ ಸಿಕ್ರಿ' ಅನ್ನುತ್ತಾರೆ. ಬಾದಷಹ ಅಕ್ಬರನು ತನ್ನ ರಾಜಧಾನಿಯನ್ನು ಈ ಊರಿಗೆ ತಂದು ಸ್ಥಾಪಿಸಬೇಕೆಂದು ಬಯಸಿದನಂತೆ. 'ಸೇಲಿಂ ಚಿಸ್ತಿ' ಎಂಬ ಮುಸ ಲ್ಮಾನ ಗುರು ಅಲ್ಲಿದ್ದ. ಅವನ ಮೇಲೆ ಅಕ್ಬರನಿಗೆ ಅಭಿಮಾನ. ಗುರು ವಿನ ಬಳಿ ಇರಬೇಕೆಂಬ ಆಸೆಯಿಂದ ಈ ನಗರವನ್ನು ಕಟ್ಟಿಸಿದನಂತೆ. ನಗರ ನಿರ್ಮಿಸಿದ ಭಾಗ, ಸುತ್ತಣ ಬಯಲು ಭೂಮಿಗಿಂತ ಉನ್ನತವಾಗಿ ಕಾಣಿ ಸುವ ಗುಡ್ಡದ ಮೈ. ಅದರ ನಾಲ್ಕು ಸುತ್ತಲಿನ ಕೋಟೆಕೊತ್ತಲಗಳು ಈಗೆಲ್ಲ ಮಣ್ಣುಪಾಲಾಗಿವೆ. ಆದರೆ ಮುಖ್ಯ ರಚನೆಗಳು ಅಳಿಯದೆ ನಿಂತಿವೆ. ಇಲ್ಲಿ ಕಾಣಬಹುದಾದ ಅಂಶವನ್ನು ಎರಡು ವಿಭಾಗಗಳಾಗಿಮಾಡಬಹುದು. ಅರಮನೆ ಭಾಗ ಮತ್ತು ಚಿಸ್ತಿಯ ಸ್ಮಾರಕಗಳೆಂದು. ಮೊದಲು ನಮಗೆ ಇದಿ ರಾಗಿ ಕಾಣುವುದು ಕೋಟೆಯಂತಿರುವ ಪೌಳಿ. ಅಲ್ಲಿಗೆ ಹೋಗಲು ಸುಮಾ ರು ಐವತ್ತು ಅಡಿ ಮೇಲಕ್ಕೆ ಏರುವ ಸೋಪಾನಗಳಿವೆ. ಸೋಪಾನಗಳ ಮೇಲಕ್ಕೆ ತೀರ ದೊಡ್ಡದಾದ ಒಂದು ದ್ವಾರವಿದೆ. ಬುಲನ್ ದರವಾಜಾ ಅನ್ನುತ್ತಾರೆ ಅದನ್ನು. ಗೋಣನ್ನು ಹಿಂದಕ್ಕೆ ಬಗ್ಗಿಸಿಯೇ ಈ ಮಹಾದ್ವಾರ ವನ್ನು ನೋಡಬೇಕಾಗುತ್ತದೆ. ಅಕ್ಬರನ ಎದೆಗಾರಿಕೆ, ಹಿರಿಮೆಗಳಿಗೆ ಸಾಕ್ಷಿ ಎಂಬಂತಿದೆ—ಈ ಹಿರಿಯ ದ್ವಾರ. ಹೆಮ್ಮೆಯಿಂದ ನಿಂತು ಅದು ಪ್ರವಾಸಿ ಗಳನ್ನು ಸ್ವಾಗತಿಸುತ್ತದೆ. ಆದರೆ ಅದರ ಮುಂದೆ ನಿಂತ ಮನುಷ್ಯ ಮಾತ್ರ– ಚಿಕ್ಕ ಹುಳುವಾಗಿ ಕಾಣಿಸುತ್ತಾನೆ. ಅದಕ್ಕೆ ಅಂಜಬೇಕಾಗಿಲ್ಲ; ಅದು ತೆರೆದ ಬಾಗಿಲು! ಒಳಕ್ಕೆ ಹೋದರೆ, ಬಹು ದೊಡ್ಡ ಅಂಗಣ. ಆರೆಂಟು ಎಕ್ರೆ ಭೂಮಿಯನ್ನೇ ಆವರಿಸುವ ಈ ಅಂಗಣದ ನಾಲ್ಕು ಸುತ್ತಲು, ಉನ್ನತ ಸ್ತಂಭರಾಜಿಗಳುಳ್ಳ, ಉದ್ದಗಲವೆರಡೂ ಇರುವ ಚಾವಡಿಗಳನ್ನು ಕಾಣ

ಬಹುದು. ಅಂಗಳದ ನೆಲಕ್ಕೂ ಚಾವಡಿಗೂ ಕೆಂಪು ಮರಳುಗಲ್ಲನ್ನು ಹಾಸಿದ್ದಾರೆ. ಅಂಗಳದ ಕೇಂದ್ರದಲ್ಲಿ, 'ದರವಾಜ'ಕ್ಕೆ ಎದುರಾಗಿ, ಸಲೀಮನ ಸಮಾಧಿಯಿದೆ. ಇದು ಅಷ್ಟೊಂದು ದೊಡ್ಡ ರಚನೆಯಲ್ಲ. ಆದರೆ ಹಾಲುಗಲ್ಲಿನ ಈ ಮಂದಿರ ಆಕಾರ, ಆಯ–ಅಳತೆಗಳಲ್ಲಿ ಪರಸ್ಪರ ಹೊಂದಿಕೆಯುಳ್ಳದ್ದು; ಬಲು ಸುಂದರವಾಗಿ ಕಾಣುವಂಥದು. ಇಲ್ಲಿನ ಚಿತ್ರಗೆಲಸಗಳಲ್ಲಿ ಬೇಕಷ್ಟು ನಾಜೂಕಿದೆ. ಅಕ್ಬರನ ಗುರುಭಕ್ತಿಗೆ ತಕ್ಕ ಕಾಣಿಕೆ ಇದು–ಎಂದು ನಮಗೆ ಅನಿಸುತ್ತದೆ.

ಈ ಆವರಣವನ್ನೆಲ್ಲ ನೋಡಿ, ಸುತ್ತಲಿನ ಚಾವಡಿಗಳಲ್ಲೆಲ್ಲ ಸುತ್ತಾಡಿ, ಹೊರಕ್ಕೆ ಬಂದು, ಒಂದು ಫರ್ಲಾಂಗು ದೂರ ಸರಿದೆವೆಂದರೆ, ಇನ್ನೊಂದೇ ಪ್ರಾಕಾರ ನಮಗೆ ಕಾಣಸಿಗುತ್ತದೆ. ಅದರ ಒಳಗೆಹೊಕ್ಕು ಯಾವ ಮೂಲೆ ತಿರುಗಿದರೂ ಅಲ್ಲಲ್ಲಿ- ಹಲವಾರು ಚಿಕ್ಕಪುಟ್ಟ ಅರಮನೆಗಳು, ಸಭಾಂಗಣಗಳು ನಮಗೆ ಕಾಣಸಿಗುತ್ತವೆ. ಅಕ್ಬರ್ ಧರ್ಮಚರ್ಚೆಗೆ ಕುಳಿತುಕೊಳ್ಳುತ್ತಿದ್ದ ಕೊಠಡಿ, ತನ್ನ ರಾಜಪುತ ಸತಿಯರಿಗಾಗಿ ಕಟ್ಟಿಸಿದ ಅರಮನೆ, ಹೀಗೆ ಎಷ್ಟೆಷ್ಟೋ ಸುಂದರ ಮಂದಿರಗಳಿವೆ. ಅಲ್ಲಿನ ಮುಖ್ಯವಾದ ಒಂದು ರಚನೆ ಪಂಚಮಹಲ್. ಐದು ಉಪ್ಪರಿಗೆಯುಳ್ಳ ಈ ಮಂದಿರದ ಬಹು ಭಾಗ, ನಾಲ್ಕು ಸುತ್ತಲು ತೆರೆದ ಚಾವಡಿಗಳಿಂದ ಮಾಡಿದುದು. ಮೊದಲ ಮಾಳಿಗೆಗಿಂತ ಎರಡನೆಯದು ಆಯದಲ್ಲಿ ಕಿರಿದು. ಅದಕ್ಕಿಂತ ಮೂರನೆಯದು ಕಿರಿದು. ಹಾಗೆಯೇ ತೀರ ಮೇಲಿನ ಉಪ್ಪರಿಗೆ ಇನ್ನಷ್ಟು ಕಿರಿದಾದುದು. ಅಂತಸ್ತಿನಿಂದ ಅಂತಸ್ತಿಗೆ ತುಂಬ ಮೇಳ ಕಾಣುತ್ತದೆ. ಅದೊಂದು ಕಾಲದಲ್ಲಿ ಬಾದಷಹ ಕೊನೆಯ ಅಂತಸ್ತಿನ ಮೇಲೆ ಕುಳಿತುಕೊಂಡು–ಎದುರಿಗೆ ಹರಡಿದ ವಿಶಾಲವಾದ ಅಂಗಳದಲ್ಲಿ ತನ್ನ ದಾಸದಾಸಿಯರನ್ನು ನಿಲ್ಲಿಸಿ, ಚದುರಂಗ ಆಡುತ್ತಿದ್ದನಂತೆ. ಅದಕ್ಕೆ ಅನುಕೂಲವಾಗುವಂತೆ, ಅಂಗಣದಲ್ಲಿ ಚದುರಂಗದ ಆಕಾರವನ್ನು ಬರೆದಿದೆ. ಈ ಪಂಚಮಹಲಿಗೆ ತೀರ ಸಮೀಪವಾಗಿ ಪುಟ್ಟೊಂದು ಕೊಳವಿದೆ.

ಮೊಗಲರು ಕಟ್ಟಿಸಿದ ಈ ಎಲ್ಲ ಅರಮನೆಗಳನ್ನು ಕಾಣುವವರಿಗೆ ಒಂದು ಸಂಕೋಚವೇನೋ ಬರುತ್ತದೆ. ಇವರ ಅರಮನೆಗಳ ಚಾವಡಿಗಳು, ಸಭಾಂಗಣಗಳು ಎಷ್ಟು ತೆರೆದಿರುತ್ತವೆಯೋ, ಕೊಠಡಿಗಳು, ಅಂತಃಪುರಗಳು ಅಷ್ಟು ಮುಚ್ಚಿಕೊಂಡಿರುತ್ತವೆ. ಅವುಗಳೊಳಗೆ ಕದವಿಕ್ಕಿ ಕುಳಿತರೆ

ಉಸಿರುಕಟ್ಟಿ ಸಾಯಬೇಕು. ಕಿಟಕಿಗಳ ಸುಳಿವಿಲ್ಲ. ದೀಪವಿಲ್ಲದೆ ಹಗಲಲ್ಲಿ ಅವುಗಳೊಳಗೆ ಸಂಚರಿಸುವುದೂ ಕಷ್ಟ. ಅರಮನೆಯ ಬಾಳಿನಲ್ಲಿ ಬಾಹ್ಯಾಡಂಬರಕ್ಕೂ, ಅಂತರಂಗದ ಜೀವನಕ್ಕೂ ಯಾವ ಹೊಂದಿಕೆಯೂ ಇದ್ದಿರಲಾರದು ಎಂಬುದಕ್ಕೆ ಈ ರಚನೆಗಳೇ ಸಾಕ್ಷಿಯೆನ್ನಬೇಕು. ಹೊರಗೆ ನೃತ್ಯ, ನಲಿವು, ಬೆಡಗುಗಳು ತುಂಬಿರುತ್ತಿದ್ದರೆ, ಒಳಗೆ ಕತ್ತಲೆ, ಕೌತುಕ, ದುಃಖ ತುಂಬಿರುತ್ತಿದ್ದಂತೆ ಕಾಣುತ್ತದೆ. ಅರಮನೆಯಾದರೇನು—ಅದು ಸಹ ಮಾನವನ ಕೃತಕಬಾಳಿನ ಕುರುಹಲ್ಲವೇ!

ಅಕ್ಬರ್ ಬಾದಷಹ, ಈ ಎಲ್ಲ ಸಂಭ್ರಮವನ್ನು ಸೃಷ್ಟಿಸಿದ ಬಳಿಕ, ಆವನ ಗುರು ಸಮ್ಮತಿಸದೆ ಹೋದುದರಿಂದ, ಇಲ್ಲಿಗೆ ರಾಜಧಾನಿಯನ್ನು ತರಲಿಲ್ಲವಂತೆ. ಅದನ್ನೆಲ್ಲ ಹಾಳುಬಿಟ್ಟ. ಹೀಗಿರುತ್ತ—ಆಗ್ರಾದಿಂದ ಬರಿಯ ನೋಟಕ್ಕೆಂದು ಹೊರಟುಬಂದ ನಾವು, ಇಲ್ಲಿ ಬಿಡಾರಮಾಡುತ್ತೇವೆಯೇ? ಅಕ್ಬರನಿಗೆ ಬೇಡದ್ದು ನಮಗೂ ಬೇಡವೆಂದು—ಹೊರಟೇಬಿಟ್ಟೆವು. ಹೊರಟದ್ದು ವೈರಾಗ್ಯದಿಂದಲ್ಲ, ಕೇವಲ ಹಸಿವಿನಿಂದ. ಈ ಊರಿನಲ್ಲಿ—ತಿನ್ನಲು ಏನು ಸಿಕ್ಕೀತು—ಎಂಬ ಯೋಚನೆಯಿಂದ. ಹಿಂದೊಮ್ಮೆ,ಮೂರಾಣೆ ಕೊಟ್ಟು ಹಾಲಿನ ಅಭಿಷೇಕ ಮಾಡಿಕೊಂಡು ಹೋದ ನೆನಪು ನನಗೆ. ಬರಿಯ ಈ ಹದಿನೈದು ವರ್ಷಗಳೊಳಗಾಗಿ, ಹಿಂದೆ ಕಂಡ ಊರಿನ ಎಮ್ಮೆಗಳನ್ನೆಲ್ಲ ಪಾದರಕ್ಷೆಯಾಗಿ ಪರಿವರ್ತಿಸಿರಬೇಕು. ಇಲ್ಲವಾದರೆ ಒಂದು ಔನ್ಸ್ ಹಾಲೂ ನಮಗೆ ಆ ದಿನ ಸಿಗಬಾರದೇ? ಇಲ್ಲವೆ, ನನ್ನ ಗೆಳೆಯ ಬರುವನೆಂದು ಕೇಳಿಯೇ ಊರಿನ ಎಮ್ಮೆಗಳು ಸತ್ಯಾಗ್ರಹ ಹೂಡಿದ್ದುವೋ ಏನೋ; ಮತ್ತಾವ ಕಾರಣವೂ ನನಗೆ ಕಾಣುವುದಿಲ್ಲ.

ಅಂತೂ ನಿರಾಶೆಯಿಂದ ಊರಿನ ಬೀದಿಯಲ್ಲಿ ಅಲೆದಾಡಿದೆವು. ಈ ಊರಿನ ಜನವಸತಿ ಕಡಿಮೆಯಾಗಿದ್ದರೂ, ನೊಣ ವಸತಿ ಕಡಿಮೆಯಾಗಿರಲಿಲ್ಲ. ಪ್ರತಿಯೊಂದು ಮಿಠಾಯಿ ಅಂಗಡಿಯಲ್ಲಿಯೂ, ಕುಂಭಮೇಳಕೆ ಹೋಗುವ ಪ್ರವಾಸಿಗಳಂತೆ, 'ನೊಣ' ತುಂಬಿಕೊಂಡಿದ್ದುವು. ಅಲ್ಲಿ ತಿಂಡಿ ಕೊಳ್ಳುವುದಕ್ಕೆ ಬೆದರಿಕೆ; ಕೊಂಡರೆ ಕೊಲೆರಾದ ಹೆದರಿಕೆ. ಕೊಳ್ಳದಿದ್ದರೆ ಹಸಿವೆಯ ಬೆದರಿಕೆ. ಹಾಗೂ ಹೀಗೂ, ಒಂದು ಅಂಗಡಿಯನ್ನು ಶೋಧಿಸಿ, ಅದೂ ನೊಣವಿಲ್ಲದ್ದಲ್ಲ, ಆದರೂ ತಿಂಡಿಗಳಿಗೆ ಜರಡಿ ಕವುಚಿಟ್ಟಿದ್ದರು. ಅಲ್ಲಿಂದ ಒಂದಿಷ್ಟು ತಿಂಡಿ ಖರೀದಿಮಾಡಿದೆವು. ಮಿಠಾಯಿಯ ಮೇಲಿನ

ಜರಡಿಯ ಮುಚ್ಚಳ ತೆಗೆದು, ತೂಗಿ ಅವನ್ನು ನಮಗೆ ಕೊಡುವ ವೇಳೆಯೊಳಗಾಗಿ, ಅವುಗಳ ಮೇಲೆ ಕುಳಿತ ನೊಣಗಳ ಸಂಖ್ಯೆಯನ್ನೆಣಿಸಿದರೂ ಬೆದರಿಕೆ ಬರಬೇಕು. ಆದರೆ ಆ ಊರಿನ ಒಟ್ಟು ನೊಣಗಳ ಸಂಖ್ಯೆಗೂ, ಇದಕ್ಕೂ ಇರುವ ಅಪಾರ ವ್ಯತ್ಯಾಸವನ್ನು ಕಂಡು, ಧೈರ್ಯದಿಂದ ತಿಂಡಿಯನ್ನು ಕೊಂಡು ಬಸ್ಸು ನಿಲ್ದಾಣಕ್ಕೆ ಬಂದೆವು. ನಾವು ಬರುವುದರೊಳಗೆ ಬಂದ ಬಸ್ಸು ಹೊರಟುಹೋಗಿತ್ತು. ಇನ್ನೊಂದು ಬಂದಿರಲಿಲ್ಲ. ಅಲ್ಲೊಬ್ಬ ಮಹಾನುಭಾವನಿಂದ ಚಹಾ ಮಾಡಿಸಿದೆವು. ನಾವು ತಂದ ತಿಂಡಿ ಬಿಡಿಸಿದೆವು. ಏನು ಮಹಿಮೆಯೋ ಅದರದ್ದು. ತುಸುವೇ ಮಳೆಯು ಕಡಲು ದಂಡೆಯ ಉಸುಕಿನ ಮೇಲೆ ಬಡಿದಾಗ ಉಂಡೆಕಟ್ಟುವ ಮರಳಿನಂತೆ—ನಾವು ತಂದ ಮಿಠಾಯಿಯಿತ್ತು. ಧೈರ್ಯವಾಗಿ ಅದನ್ನುಗಂಟಲಲ್ಲಿ ತುರುಕಿಸಿದೆವು. ಬಹಳ ಸಿಹಿಯಾಗಿಇರಲಿಲ್ಲ. ಆದರೆ ನೀರನ್ನು ಹೀರುವುದರಲ್ಲಿ ಈ ತಿಂಡಿ, ಹೆಸರನ್ನು ಹೇಳಲೇ? ನಾರನಕಟಾಯಿ, ಸ್ಪಂಜಿಗಿಂತ ಉತ್ತಮ ವಸ್ತು. ಹಿಂದೆ ಸುರತ್ ನಗರದ ಮೂಲಕ ಹಾಯ್ದುಹೋದಾಗ, ಆ ಊರಿನ ನಾರನಕಟಾಯಿ ಉತ್ತಮವೆಂದು ಕೇಳಿ, ಕೊಂಡು ತಿಂದಿದ್ದೆ. ಇದು ಅದರಂತೆ ಚಿಕ್ಕದಲ್ಲ. ನಮ್ಮ ಶ್ರೀಪತಿಯ ಸೈಜಿನ ಕಟಾಯಿಗಳಿವು. ಸಿಹಿ ಕಡಿಮೆಯಾಗಲು ಶುಗರ್ ಸೆಂಡಿಕೇಟ್ ಜವಾಬ್ದಾರಿ. ಅಂತೂ ಕಟಾಯಿ ತಿಂದ ನಾವು, ನೀರು ಕುಡಿಕುಡಿದು ಕಡಾಯಿಗಳೇ ಆದೆವು. ಅದರ ಮೇಲೆ ಸುರಿದ ನೀರೆಷ್ಟೋ, ಚಹಾ ಎಷ್ಟೋ, ಸೋಡಾ ಎಷ್ಟೋ—ನಮಗಂತು ತಿಳಿಯದು ಅಂತೂ ನಮ್ಮ ಹಸಿವಿನ ಹುಟ್ಟಡಗಿಹೋಯಿತು.

ಅಷ್ಟು ಹೊತ್ತಿಗೆ ಬಸ್ಸೊಂದು ಬಂದಿತು. ಆ ಬಸ್ಸಿನ ಕಂಡಕ್ಟರ ಬಾರದ ಕಾರಣದಿಂದ, ಒಂದೂವರೆ ತಾಸು ತಡವಾಗಿಯೇ ಬಂದಿತು. ನಮ್ಮ ಎಣಿಕೆಯಲ್ಲಿ ಐದು ಘಂಟೆಯ ರೈಲಿಗೆ ಆಗ್ರಾನಗರ, ಬಿಟ್ಟು ಕಾಶಿಗೆ ಹೊರಡಬೇಕೆಂದಿತ್ತು. ಆ ಬಂಡಿ ತಪ್ಪಿದರೆ, ಒಂದು ರಾತ್ರಿಯೆಲ್ಲಾ ಆಗ್ರಾದಲ್ಲೇ ಕಳೆಯಬೇಕಾಗುತ್ತದೆ ನಾವು. ಹೀಗಾಗಿ ಆ ಬಸ್ಸಿನ ಡ್ರೈವರು ಮಹಾನುಭಾವನ ಸ್ನೇಹ ಮಾಡಿದೆವು. ದಾರಿಯಲ್ಲೆಲ್ಲೂ ವೇಳೆ ಮಾಡದೆ ಸಾಗಿದರೆ ನಮಗೆ ರೈಲು ಸಿಕ್ಕೀತು—ಎಂದು ಹೇಳಿದೆವು. ಆತನಿಗೆ ಏನು ಮರುಕ ಕಂಡಿತೋ. ತನ್ನ ಸಾಹಸವನ್ನೆಲ್ಲ ಉಪಯೋಗಿಸಿ, ಆಗ್ರಾಕ್ಕೆ ನಮ್ಮನ್ನು ನಾಲ್ಕೂವರೆ ಘಂಟೆಯೊಳಗೆ ತಂದು ಬಿಟ್ಟ. ಅಲ್ಲಿಂದ ನಮ್ಮ ಹೊಟೇಲಿಗೆ,

ಎರಡೂವರೆ ಮೈಲಿನ ಹಾದಿ. ಟಾಂಗಾದಲ್ಲಿ, ಜನನಿಬಿಡವಾದ ಆ ಹಾದಿಯಲ್ಲಿ ನಾವು ಹೇಗೋ ಹೇಗೋ ಸಾಗಿ, ಹೊಟೇಲನ್ನು ಸೇರಿದೆವು. ಅವಸರದಿಂದ ನಮ್ಮ ಸಾಮಾನುಗಳನ್ನು ಕಟ್ಟಿ ಬಂಡಿಯಲ್ಲಿರಿಸಿ, ಹೊಟೇಲಿನವನ ಬಿಲ್ ಕೊಟ್ಟು, ಕಾಂಟ್ ಸಿಲ್ಟಾಣಕ್ಕೆ ಬರುವಾಗ ಐದು ನಿಮಿಷ ಉಳಿದಿತ್ತು. ಮುಂದಿನ ಐದು ನಿಮಿಷ—ಅವಸರವೇ ಅವಸರ! ಅಂತೂ ಬಂಡಿ ಹೊರಡುವುದರೊಳಗಾಗಿ ಅದನ್ನೇರಿಯೇ ಬಿಟ್ಟೆವು.

ಬಂಡಿ ಯಮುನಾ ನದಿಯ ಸೇತುವೆ ದಾಟಿ ಸರಿಯಿತು. ಇನ್ನೊಮ್ಮೆ ನಮಗೆ ತಾಜ್‌ನ ದೂರದರ್ಶನವಾಯಿತು. ಈ ಗಲಭೆ, ಅವಸರಗಳಿಂದಾಗಿ ಇತ್‌ಮತ್ ಉದ್ದೌಲನ ಮಂದಿರವನ್ನು ನೋಡಲು ನಮಗಾಗಲೇ ಇಲ್ಲ. ಒಮ್ಮೆ ಕಂಡವನಿಗೆ, ಅದರ ಚೆಲುವನ್ನು ಬಲ್ಲವನಿಗೆ, ಅದರಿಂದೆಷ್ಟು ನಷ್ಟ ಎಂಬ ಅನುಭವವಾಗುತ್ತದೆ. ನಮ್ಮ ಶ್ರೀಪತಿಯ ಪಾಲಿಗೆ—ಅದು ಕಾಣುವ ಗೋರಿಗಳಲ್ಲಿ ಒಂದು ಕಡಿಮೆಯಾಯಿತೆಂಬ—ಭಾವನೆ ತಂದಿರಬೇಕು. ನಾವು ಇನ್ನೂ ಒಂದು ದಿನ ನಿಂತಿದ್ದರೆ, ಸಮೀಪದ ಸಿಕಂದರ್ ಎಂಬಲ್ಲಿಗೂ ಹೋಗಿ, ಅಕ್ಬರ್ ಬಾದಷಹನ ಗೋರಿಯನ್ನು ಕಂಡು ಬರಬಹುದಾಗಿತ್ತು. ಯಾಕೆ ನಮಗೆ ಈ ಗೋರಿಗಳನ್ನು ನೋಡುವ ಹವಣಿಕೆಯೋ! ಗೋರಿ ಕಟ್ಟಿಸಿದವರೂ ಸಾಯುತ್ತಾರೆ. ಕಟ್ಟಿದವರೂ ಸಾಯುತ್ತಾರೆ. ಕಟ್ಟದೆಹೋದವರ ಪಾಲಿಗೂ ಸಾಯಲಿಚ್ಛಿಸದವರ ಪಾಲಿಗೂ ಸಾವಂತು ಇದ್ದೇ ಇದೆ. ಆದರೂ ಗೋರಿ ಕಾಣುವ ಹವಣಿಕೆ ನಮಗೆ! ಪ್ರಾಯಶಃ ಸತ್ತಮನುಷ್ಯ ತಿರುಗಿ ಮೇಲೇಳದಂತೆ, ಈ ಮಂದಿರ ಮಾಡುವುದರಿಂದ ಜನಕ್ಕೆ—ಏನೋ ಒಂದು ಹಿಗ್ಗಾಗುತ್ತಿರಬೇಕು—ಗೋರಿಗಳನ್ನು ಮೇಲಿಂದ ಮೇಲೆ ಕಾಣುವುದಕ್ಕೆ! ಒಂದು ಪೀಡೆ ತೊಲಗಿತಲ್ಲ—ಎಂಬ ಹಿಗ್ಗು!

೭. ಕಾಶಿ ಯಾತ್ರೆ

ನಮ್ಮೂರ ಸಂಪ್ರದಾಯಗಳಲ್ಲಿ ಮದುವೆಯ ಪ್ರಾರಂಭಕ್ಕೆ, ಸಮಾವರ್ತನೆ ನಡೆಯುವ ಕಾಲದಲ್ಲಿ,ಮದುವೆಯಾಗುವ ಹುಡುಗ ಕಾಶಿಯಾತ್ರೆಗೆ ಹೊರಡುವ ಒಂದು ಕಟ್ಟಳೆಯುಂಟು. ಆಗ ಅವನ ಸೋದರಮಾವ ಬಂದು, ಅವನನ್ನು ತಡೆಹಿಡಿದು, "ಬೇಡಯ್ಯ, ಊರಿನಲ್ಲಿರು. ಲಗ್ನವಾಗು. ಒಳ್ಳೇ ಹುಡುಗಿಯನ್ನು ಹುಡುಕಿಕೊಡುತ್ತೇನೆ" ಎಂದು ಅವನನ್ನು ಸಮಾಧಾನ ಪಡಿಸಿ ಮದುವೆಗೆ ಒಲಿಸುವುದುಂಟು. ಕಾಶಿಯ ಮೇಲಿನ ನಮ್ಮ ಭಕ್ತಿ ಇಂಥ ಮದುವಣಿಗನ ನಟನೆಗಿಂತ ಕಡಿಮೆಯದಲ್ಲ. ಶ್ರೀಪತಿಯಾಗಲೀ, ನಾನಾಗಲೀ, ಕಾಶಿಗೆ ಹೊರಟದ್ದು—ಎಲ್ಲ ಊರುಗಳಂತೆ ಅದೂ ಒಂದು ಊರು—ಎಂಬ ತಿಳುವಳಿಕೆಯಿಂದಲೇ. ನಾನು ಹಿಂದೆರಡು ಬಾರಿ ಅಲ್ಲಿಗೆ ಹೋಗಿ ಬಂದವ. ಒಮ್ಮೆ ನನ್ನ ಹಿರಿಯರೊಡನೆ ಯಾತ್ರಾರ್ಥಿಯಾಗಿ ಹೋಗಿದ್ದೆ. ಆಗ ಕ್ಷೇತ್ರಗಳ ವಿಚಾರದಲ್ಲಿ ಜಿಗುಪ್ಸೆಯನ್ನು ಅಂಟಿಸಿಕೊಂಡೂ ಬಂದಿದ್ದೆ. ಎರಡನೆಯ ಬಾರಿ ಹೋದದ್ದು—ಅಲ್ಲಿನ ಹಿಂದೂ ವಿಶ್ವವಿದ್ಯಾನಿಲಯ ನೋಡುವ ಸಲುವಾಗಿ. ಈ ವಿಶ್ವವಿದ್ಯಾನಿಲಯದಲ್ಲಿ ನಮ್ಮೂರಿನ ಅನೇಕ ವಿದ್ಯಾರ್ಥಿಗಳು ಕಲಿಯುತ್ತಾರೆ. ನಮ್ಮ ನಾಡಿನ ಕೆಲವು ಪ್ರಾಧ್ಯಾಪಕರೂ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ವಿಶ್ವವಿದ್ಯಾಲಯದ ಬೆಳವಣಿಗೆಯಲ್ಲಿ ಏನೇನು ಮಾರ್ಪಾಟಾಗಿವೆ ಎಂದು ತಿಳಿಯುವ ಕುತೂಹಲ ತಳೆದಿದ್ದ ನಾನು, ಅಲ್ಲಿನ ಡಾ। ದಾಸಣ್ಣಾಚಾರ್ಯರೆಂಬ ಪ್ರಾಧ್ಯಾಪಕರಿಗೆ ಬರುವುದಾಗಿ ತಿಳಿಸಿದ್ದೆ. ಅವರ ಪರಿಚಯ ನನಗಿತ್ತಾದರೂ, ಅವರ ತೀರ ಆಪ್ತನೆಂದು ನಟಿಸಲಾರೆ. ಹಿಂದೆ ನಾನು ಹೋದಾಗ ಅವರು ಭೌತವಿಜ್ಞಾನ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಸಾಧನೆ ಸಲಕರಣೆಗಳನ್ನು ನನಗೆ ತೋರಿಸಿ, ಬಣ್ಣಿಸಿದ್ದರು. ಈ ಬಾರಿಯೂ ಅವರನ್ನು ಕಾಡುವುದಕ್ಕೆ ಸಂಕೋಚವೇ ಆಗಿತ್ತು. ಆದರೆ ಅವರ ಪ್ರತ್ಯುತ್ತರ ಪ್ರೀತಿಯ ಸ್ವಾಗತದ ಆಸೆಯನ್ನು ತೋರಿಸಿತು. ಹಾಗಾಗಿ ಧೈರ್ಯದಿಂದ ಹೊರಟೆವು.

ಆಗ್ರಾದಿಂದ ಹೊರಟವರು 'ತುಂಡ್ಲಾ' ಜಂಕ್ಷನಿಗೆ ಬಂದೆವು. ಸಂಜೆಯಾಗುವಾಗಲೇ ಆ ಊರನ್ನು ಸೇರಿದ್ದರೂ,ಮುಂದಿನ ಬಂಡಿ ಬರುವುದಕ್ಕೆ, ಇನ್ನೂ ನಾಲ್ಕು ತಾಸುಗಳಷ್ಟು ವೇಳೆಯಿತ್ತು. ವೈಟಿಂಗ್ ರೂಮಿನಲ್ಲಿ ಕುಳಿತು

ಕಾದೆವು; ಬೇಸರದಿಂದ ಹೊರಕ್ಕೆ ಬಂದು ಪ್ಲೇಟ್ ಫೋರ್ಮಿನ ಬೋರ್ಡು ಗಳನ್ನು ಓದತೊಡಗಿದೆವು. ಅಪಾರ ಸುಧಾರಣೆಯಾಗಿತ್ತು ಆ ರಾಜ್ಯದಲ್ಲಿ. ಯು. ಪಿ. ಸರಕಾರ ಇಂಗ್ಲೀಷನ್ನು ಓಡಿಸಿ, ಹಿಂದೀ ಮೆರೆಯಿಸುವ ಸಲು ವಾಗಿ, ಹಿಂದೀ ಭಾಷೆಯ ಬೋರ್ಡುಗಳನ್ನು ಹಾಕಿಸಿತ್ತು. ಹೀಗಾಗಿ ದೇವನಾಗರಿಯಲ್ಲಿ ಬರೆದ ಬೋರ್ಡು ಗುರುತಿಸಿಯೂ "ವೆಜಿಟೇರಿಯನಾ ರಿಸ್ಟೋರೆಂಟ್ ಕಹಾಂ ಹೈ?" ಎಂದು ಕೇಳುವ ಭಾಗ್ಯ ನಮಗೆ ದೊರೆಯಿತು. ಕೇಳಿ, ಹುಡುಕಿ ಒಂದು ಉಪಾಹಾರಗೃಹ ಹೊಕ್ಕೆವು. ಓದಿಯೂ ಜನರನ್ನು ಕೇಳಿದ ಕಾರಣವೆಂದರೆ—ಅಲ್ಲಿನ ಇಂಗ್ಲಿಷ್ ಹಿಂದೀ ಭಾಷಾಂತರದ ಮಹಾತ್ಮೆ. ನಮ್ಮ ಪಾಲಿಗೆ ಭೋಜನಗೃಹ ಶಾಂತವಾಗಿತ್ತು.ಅಲ್ಲಿ ನಮಗೆ ಚೆನ್ನಾದ ಊಟ ವೂ ದೊರಕಿತು. ತಲಾ ಒಂದರ ಒಂದೂವರೆ ರೂಪಾಯಿಯಲ್ಲಿ ಹೊಟ್ಟೆ ತುಂಬುವ ಊಟ ದೊರಕಿದುದಕ್ಕೆ ಸಂತೋಷಪಟ್ಟೆವು. ಆಗ 'ಕಲ್ಕಾ' ನಗ ರದ ಮೂರೂವರೆ ರೂಪಾಯಿಯ ಊಟದ ನೆನೆಪಾಗದೆ ಹೋಗಲಿಲ್ಲ. ಒಂದೇ ರೈಲ್ವೆ ಆಡಳಿತೆಯ ಕೆಳಗೆ ಇವೆರಡು ಮಂದಿರಗಳಿದ್ದರೂ, ಒಂದೊಂದು ಊರಿನ ಹಣೆ ಬರಹ ಒಂದೊಂದು ತೆರ. ಊಟ ಮುಗಿಸಿದೆವು; ಮೇಲಿಷ್ಟು ಕಾಫಿ ಸುರಿಸಿದೆವು; ವೈಟಿಂಗ್ ರೂಮಿಗೆ ಮರಳಿಬಂದು ನಮ್ಮ ಬಂಡಿ ಬರುವ ತನಕ ಕಾದು ಕುಳಿತೆವು. ಹದಿನೊಂದು ಘಂಟೆಯ ವೇಳೆಗೆ ಆ ಬಂಡಿ ಬಂದಿತು. ಸಾಮಾನ್ಯ ಎರಡನೆಯ ತರಗತಿಯ ಡಬ್ಬಿಯೊಂದನ್ನು ಹೊಕ್ಕೆವು. ಅಲ್ಲಿ ಕೆಳಗಿನ ಬೆಂಚುಗಳಲ್ಲಿ ಆರೆಂಟು ಮಂದಿ ಮಲಗಿದ್ದರು. ಕೆಲವರ ಉಡಿಗೆಯನ್ನು ಕಂಡರೇನೆ, ಇವರು ಅಲ್ಲಿಗೆ ಹೇಗೆ ಬಂದರಪ್ಪಾ ಎಂಬ ಅನುಮಾನವಾಗುತಿತ್ತು. ನಾವು ಮೇಲಂತಸ್ತನ್ನು ಸೇರಿ ಬೆಳಗಾ ಗುವ ತನಕ ಮಲಗಿಕೊಂಡೆವು. ಬೆಳಗಾಗುತ್ತಲೇ ಟಿಕೇಟು ಕಲೆಕ್ಟರನೊಬ್ಬ ನಮ್ಮ ಬಂಡಿಯನ್ನು ಹೊಕ್ಕ. ಹಿಂದಿನ ರಾತ್ರಿಯ ನಮ್ಮ ಅನುಮಾನ ನಿಜ ವಾಯಿತು. ಇಬ್ಬರು ಪ್ರವಾಸಿಗಳು ಆ ಎಕ್ಸ್‌ಪ್ರೆಸ್ ಬಂಡಿಯಲ್ಲಿ ಕುಳಿತ ದ್ದಕ್ಕೆ, ಎರಡನೆ ತರಗತಿಯ ಟಿಕೇಟುಕೊಳ್ಳುವ ಮಾತಂತಿರಲಿ,ಮೂರನೆಯ ತರಗತಿಯ ಎಕ್ಸಪ್ರೆಸ್ ಟಿಕೇಟನ್ನು ಸಹ ಕೊಂಡಿರಲಿಲ್ಲ. ಆತ ಟಿಕೇಟಿನ ಸರ್‌ಚಾರ್ಜ್ ಕೇಳಿದ್ದಕ್ಕೆ ಒಬ್ಬ ಮುಖ ತಗ್ಗಿಸಿದ. ಇನ್ನೊಬ್ಬ ಯುದ್ಧಕ್ಕೇ ಹೊರಟುಬಿಟ್ಟ. ಆ ಯುದ್ಧ ಒಂದು ತಾಸಿನ ತನಕ ನಡೆದು, ಆ ಒರಟು ಪೆಸೆಂಜರನನ್ನು ಬಂಡಿಯಿಂದ ಕೆಳಗಿಳಿಸುವುದಕ್ಕೆ ಟಿಕೇಟು ಕಲೆಕ್ಟರನಿಗೆ

ಪ್ರಾಣಕ್ಕೆ ಬಂದಿತು. ದೇಶಕ್ಕೆ ಸ್ವಾತಂತ್ರ್ಯ ಬಂದರೆ ಹಾಗಲ್ಲವೆ ಬರಬೇಕು? ನಮ್ಮ ಸರಕಾರ, ನಮ್ಮ ದುಡ್ಡಿನಿಂದ ನಡೆಸುವ ರೈಲಿಗೆ, ನಾವು ಟಿಕೇಟು ತೋರಿಸಬೇಕೆಂದು ಕೇಳುವುದು ಅನ್ಯಾಯವಲ್ಲವೇ? ಕೇಳಿದರೆ ಸ್ವಾತಂತ್ರ್ಯಕ್ಕೇನು ಬೆಲೆ?

ಹಾಗೆಯೇ ರೈಲು ಅಲ್ಲಹಾಬಾದು ನಿಲ್ದಾಣಕ್ಕೆ ಬಂದಿತು. ಅಲ್ಲಿ ಉಪಾಹಾರ ತರಿಸಿಕೊಂಡೆವು; ಪತ್ರಿಕೆಗಳನ್ನು ಕೊಂಡೆವು; ಎಡೆಎಡೆಯಲ್ಲಿ ಗಂಗಾ ಬಯಲು ಭೂಮಿಯ ಸೌಂದರ್ಯವನ್ನು ನಿರೀಕ್ಷಿಸುತ್ತ ಮುಂದೆ ಸಾಗಿದೆವು. ಹೊರಗೆ ಇಣಿಕಿದಲ್ಲಿ ಸುತ್ತಲಿನ ಪ್ರದೇಶವೆಲ್ಲ ತೀರ ಬಯಲಾಗಿದ್ದು, ದಿಗಂತ ವಿಶ್ರಾಂತವಾಗಿ ಹಾಸಿದಂತೆ ಕಾಣಿಸುತ್ತಿತ್ತು. ಎಲ್ಲೆಲ್ಲಿಯೂ ಉತ್ತು ಸಾಗುಮಾಡಿದ ಚಪ್ಪಟೆ ಭೂಮಿ. ಆಗ ತಾನೇ ಹೂಬಿಟ್ಟ ಮಾವಿನ ಮರಗಳು. ನಡುನಡುವೆ ಹೂ ಬಿಟ್ಟ 'ಮಹೋವಾ' ವೃಕ್ಷಗಳು. ಇವನ್ನು ಬಿಟ್ಟರೆ ಇತರ ವೃಕ್ಷ ಜಾತಿಗಳು ಹೆಚ್ಚಾಗಿ ಕಾಣಿಸುತ್ತಿರಲಿಲ್ಲ. ತೀರ ಸಾಮಾನ್ಯ, ಒಂದೇ ತೆರನ ದೃಶ್ಯಾವಳಿಯನ್ನು ನೋಡಿ ಬೇಸರ ಬರುತ್ತಿತ್ತು. ರೈಲನ್ನು ಹತ್ತಿ ಇಳಿಯುವ ಜನರ ಉಡಿಗೆತೊಡಿಗೆಗಳಲ್ಲೂ ಬಣ್ಣಗಳ ವೈವಿಧ್ಯವಿಲ್ಲ. ಹೆಚ್ಚಾಗಿ ಮಾಸಲು ಬಿಳಿ ಬಟ್ಟೆಗಳನ್ನುಟ್ಟ ಗಂಡಸರು; ಅದರಂತೆ ಬೆಡಗಿಲ್ಲದ ಬಟ್ಟೆಯುಟ್ಟ ಹೆಂಗಸರು–ಬಂದು ಹೋಗುತ್ತಿದ್ದರು. ದೇಹಲಿ ರಜಪುತಾನಗಳಲ್ಲಿ ಕಾಣಲು ಸಿಗುತ್ತಿದ್ದ ಬಣ್ಣಬಣ್ಣದ ರುಮಾಲು, ಸೀರೆ, ಪರಿಕಾರಗಳ ಸೊಬಗೊಂದೂ ಇಲ್ಲಿರಲಿಲ್ಲ. ಬಯಲನ್ನು ನೋಡಿ, ನೋಡಿ ಮೆಲ್ಲಗೆ ಉಷ್ಣವಾಗುತ್ತ ಬರುತ್ತಿದ್ದ ಹವೆಯಿಂದ ಕಣ್ಣು ಬಾಡಿಹೋಗಿತ್ತು. ನಮ್ಮ ಬಂಡಿ 'ಬೆನಾರಿಸ್ ಕಾಂಟ'ನ್ನು ಸೇರುವಾಗ, ಮಧ್ಯಾಹ್ನದ ಒಂದೂವರೆ ತಾಸಾಗಿತ್ತು. ಅಲ್ಲಿಂದ ಬೆನಾರಿಸ್ ವಿಶ್ವವಿದ್ಯಾಲಯ ನಾಲ್ಕು ಮೈಲು ದೂರವಿದೆ. ನಾವಲ್ಲಿಗೆ ಹೋಗುವಾಗ ಎರಡು ಘಂಟೆ ಹೊತ್ತಾಗುತ್ತದೆ. ಆ ಅವೇಳೆಯಲ್ಲಿ ಹೋಗಿ 'ನಮಗೆ ಊಟವಾಗಿಲ್ಲ'ವೆಂದು ಹೇಳಿ, ಮನೆಯವರಿಗೆ ತೊಂದರೆ ಕೊಡುವುದು ಸಮುಸಲ್ಲವೆಂದು ತೋರಿತು. ರೈಲು ನಿಲ್ದಾಣದಲ್ಲಿಯೇ ನಮ್ಮ ಊಟ ಮುಗಿಸಿ,ಹೊರಕ್ಕೆ ಬಂದೆವು. ನನ್ನ ಹಿಂದಿನ ಸ್ಮರಣೆಯಂತೆ–ನಿಲ್ದಾಣದಲ್ಲಿ ನೂರಾರು ಅಶ್ವಶಕಟಗಳಿರಬೇಕಾಗಿತ್ತು. ಕಾಶಿಯ ಹಿಂದಿನ ಕಾಲದ ಕುದುರೆ ಗಾಡಿಗಳೆಂಥವು–ಬಲ್ಲಿರಾ? ಎರಡು ಗಾಲಿಗಳ ಮೇಲೆ ಬಯಲಾಟದ ರಥದಂತೆ ಕಟ್ಟಿದ ವಿಚಿತ್ರವಾದ ಪೀಠವೊಂದು;

ಅದಕ್ಕೆ ನಾಲ್ಕು ಗೂಟಗಳನ್ನು ನಟ್ಟು, ಅದರ ಮೇಲೊಂದು ಬಟ್ಟೆಯ ಗೋಪುರ ಕಟ್ಟುತ್ತಾರೆ. ಒಟ್ಟು ಒಂದು ಚದರ ಗಜ ಗಾತ್ರದ ಆ ಪೀಠದ ಮೇಲೆ ಸಾರಥಿಯಲ್ಲದೆ ನಾಲ್ವರು ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು, ಆ ಬಂಡಿ ಓಡಿಸುವಾಗ, ಬಂಡಿ ಯಾವ ಕಡೆಗೂ ತೇಲಿ, ಮಾಲಿ, ತೆವಳುವ ಆ ಓಟದ ರೀತಿಯೆಂಥದು! ಅದರಲ್ಲೂ ಸಾರಥಿ ಕುಳಿತುಕೊಂಡು ತನ್ನ ಬಾರುಕೋಲನ್ನು ಗಾಲಿಗೆ ಹಿಡಿದು, ಧ್ವನಿ ಹೊರಡಿಸಿದನೆಂದರೆ, ಕುದುರೆ ಬೆದರಿ,ತಾನು ಹೋಗಬೇಕಾದ ಗುರಿಯೊಂದನ್ನು ಬಿಟ್ಟು,ಚಪ್ಪನ್ನೈವತ್ತಾರು ದೇಶಗಳಿಗೂ ಓಡತೊಡಗುತ್ತದೆ. ಈ ಬಾರಿ ಮಾತ್ರ ನಮಗೆ ಅಂಥ ಒಂದೇ ಒಂದು ರಥವಾದರೂ ಕಾಣಸಿಗಬೇಡವೇ? ಕುರುಕ್ಷೇತ್ರದ ಯುದ್ಧದಲ್ಲಿ ನರ ನಾರಾಯಣರು ಕುಳಿತಂಥ ರಥದ ಮಾದರಿಯನ್ನು ಕಾಶಿಯಲ್ಲೇ ಕಾಣ ಬೇಕೆಂದು ನಾವು ಬಯಸಿ ಬಂದರೆ, ಒಂದಾದರೂ ಸಿಗಬೇಡವೇ? ಕಾಶಿಗೆ ಹೋದರೆ ಕಾಸಿಗೊಂದು ಕುದುರೆ—ಎಂದು ಹಳೆಯ ಗಾದೆಯಿದೆಯಲ್ಲ. ಇಂದು ಕಾಶಿಯಲ್ಲಿ ಕುದುರೆಗಳೂ ದುರ್ಲಭ. ಅದರ ಬದಲು-ಎಲ್ಲಿ ನೋಡಿ ದರಲ್ಲಿ ಸ್ಯಾಕಲ್ ರಿಕ್ಷಾಗಳು ತುಂಬಿವೆ. ಕಲ್ಲಿಕೋಟೆಯಲ್ಲಿ ಕಾಣುವಂತೆ ನರರ ಭುಜಬಲದಿಂದ ಸಾಗುವ ರಿಕ್ಷಾಗಳಲ್ಲ. ಮನುಷ್ಯನ ಕಾಲುಬಲದಿಂದ ಸಾಗುವಂಥ ಹೊಸ ಮಾದರಿಯ ರಥಗಳು. ಹೋಗಿ ಒಂದು ರಥವನ್ನೇರಿ ದೆವು. ಎರಡು ಬೆಡ್ಡಿಂಗ್, ಒಂದು ಟ್ರಂಕ್, ಒಂದು ಚೀಲ, ಆ ಮೇಲೆ ನಾವಿಬ್ಬರು. ಅವನ್ನೆಲ್ಲ ಇರಿಸುವುದಕ್ಕೆ ಜಾಗವಿಲ್ಲದಿದ್ದರೂ, ಶ್ರೀಪತಿ ಬಿಟ್ಟ ಕಾಲು ಆಸನದಲ್ಲಿ, ನನ್ನ ಕೈಕಾಲುಗಳು ನನ್ನದಲ್ಲ, ಎಂದು ತಿಳಿದುಕೊಂಡು ಕುಳಿತುಬಿಟ್ಟೆ. ರಥವೇನೋ ಆರಂಭದಲ್ಲಿ ಅನಾಯಾಸವಾಗಿ ಸಾಗಿತು. ಮುಂದೆ ಮುಂದೆ ಹೋಗುತ್ತ, ಬೀಸುವ ಗಾಳಿ ಎದುರಾಗಲು, ನಮ್ಮ ಸಾರ ಥಿಯ ಪಾಡನ್ನು ಹೇಳಿತೀರದು. ಅಂತೂ ಒಂದು ತಾಸಿನ ಅವಧಿಯಲ್ಲಿ ನಾವು ವಿಶ್ವವಿದ್ಯಾಲಯದ ವಿಶಾಲವಾದ ಪ್ರದೇಶವನ್ನು ಸೇರಿದೆವು. ಅದರ ಗೇಟು ಬರುತ್ತಲೇ ನಾನು ಕೆಳಕ್ಕೆ ಇಳಿದೆ. ಅಂದರೆ ಶ್ರೀಪತಿಯ ಒತ್ತಾಟ ದಿಂದ ನನ್ನ ಕೈಕಾಲುಗಳ ಮಾಂಸವೆಲ್ಲಾ ನಜ್ಜುಗುಜ್ಜಾಗಿತ್ತು. ಬಂಡಿಯ ವನು ಮುಂದೆ ಸಾಗಿದ. ಸುದೈವಕ್ಕೆ ಎಂಬಂತೆ ಡಾ। ದಾಸಣ್ಣಾಚಾರ್ಯರು ಸೈಕಲಿನಲ್ಲಿ ನಮಗೆ ಎದುರಾಗಿಯೇ ಬರುತ್ತಿದ್ದರು. ಕಾಲೇಜಿಗೆ ಹೊರಟ ಅವರು, ನಮ್ಮನ್ನು ಕಂಡು ಮನೆಗೆ ಮರಳಿದರು. ಮಧ್ಯಾಹ್ನದ ಆ ವೇಳೆ,

ಕಾಶಿಯ ಹವೆ ಮಣಿಕರ್ಣಿಕೆಯ ಹವೆಯಷ್ಟು ಉಷ್ಣವಾಗಿತ್ತು. ಆದರೆ ಆಚಾರ್ಯರ ಹಿತ್ತಿಲಿನಲ್ಲಿ ಗಿಡಮರಗಳು ತುಂಬ. ಆ ಆವರಣ ತಂಪಾಗಿತ್ತು. ಹೋಗಿ ಹಾಯಾಗಿ ಅವರ ಮನೆಯಲ್ಲಿ ಕುಳಿತೆವು. ಮುಂದೆ ಯಥಾವಕಾಶ ವಾಗಿ ಸ್ನಾನ, ಉಪಾಹಾರ, ಮಾತುಕತೆ ಒಂದೇ ಸವನೆ ನಡೆಯತೊಡಗಿತು.

ಡಾ। ಆಚಾರ್ಯರವರು ಮಂಗಳೂರಿನ ಬಾಳೆಬೈಲಿನವರು. ಕಾಶಿಗೆ ಹೋದರೂ ತಮ್ಮ ಹಿತ್ತಿಲಿನಲ್ಲಿ ಬಾಳೆ ಬೆಳೆಸುವುದನ್ನು ಅವರು ಬಿಟ್ಟಿರಲಿಲ್ಲ. 'ಹುಟ್ಟುಗುಣ ಘಟ್ಟ ಹತ್ತಿದರೂ ಬಿಟ್ಟೀತೆ?' ಅವರ ಹಿತ್ತಿಲಿನಲ್ಲಿ ಬಾಳೆ ಮಾತ್ರವಲ್ಲ; ಇನ್ನೂ ಹಲವಾರು ಸಸ್ಯ ಜಾತಿಗಳಿದ್ದುವು. ಅವರಿಗೆ ಸಸ್ಯ ವೆಂದರೆ ಪ್ರೀತಿ. ಹೀಗಾಗಿ ಅಪೂರ್ವದ ಗಿಡಗಳೆನ್ನೆಲ್ಲ ತಂದು ನಟ್ಟಿದ್ದರು. ಆಗ್ರಾದಲ್ಲಿ ಕಂಡ ರಾಮದಾನಿ ಚಂಪಕದ ಗಿಡವೂ ಅಲ್ಲಿತ್ತು. ಇಂಗಿನ ಗಿಡವೂ ಒಂದಿತ್ತು. ಬೇರೆ ಎಷ್ಟೆಷ್ಟೋ ಗಿಡಗಳನ್ನು ಬೆಳೆಯಿಸಿದ್ದರು. ಇದು ಅವರ ವಿರಾಮ ಕಾಲದ ವ್ಯವಸಾಯವಿರಬೇಕು. ಡಾಕ್ಟರರು ಇಲ್ಲಿನ ವಿಶ್ವವಿದ್ಯಾಲಯವನ್ನು ಸೇರಿ ಸುಮಾರು ಇಪ್ಪತ್ತು ವರ್ಷಗಳಾಗಿವೆ. ಹಿಂದೆ ನಾನು ಅವರನ್ನು ಇದೇ ಸ್ಥಳದಲ್ಲಿ ಭೇಟಿಯಾದಾಗ, ಕಂಡ ಸ್ವಭಾವಕ್ಕಿಂತ, ಅವರ ಮನಸ್ಸು ಎಷ್ಟೋ ಉಲ್ಲಾಸಕರವಾಗಿ, ಮಿದುವಾಗಿ, ಹಾಸ್ಯಪ್ರಿಯ ವಾಗಿ, ತೀಕ್ಷ್ಣ ವಿಮರ್ಶಾಯುಕ್ತವಾಗಿರುವಂತೆ ಕಾಣಿಸಿತು. ಅವರ ಪತ್ನಿ ಬೆಂಗಳೂರಿನಿಂದ ಬಂದವರು. ಅವರಿಗೆ ಇಬ್ಬರು ಗಂಡು ಮಕ್ಕಳು. ಅವರ ಸಂಸಾರ ಜೀವನದಲ್ಲಿ ತುಂಬ ಹೊಂದಿಕೆ,ಸಲುಗೆ,ಪ್ರೀತಿ ಅಡಿಗಡಿಗೂ ವ್ಯಕ್ತವಾಗುತ್ತಿತ್ತು. ಮನೆಗೆ ಬಂದ ಅತಿಥಿಗಳಿಗೆ-ತಾವು ಹೊಸಬರು, ಹೊರ ಗಿನವರು—ಎಂಬ ಭಾವನೆ ಇಷ್ಟಿಷ್ಟೂ ಉಂಟಾಗುವಂಥ ನಡತೆ ಅವರದ್ದಲ್ಲ. ಎಷ್ಟೋ ಬಾರಿ ಪ್ರವಾಸಿಯಾದವನಿಗೆ ಅನಿಸುವುದುಂಟು: 'ಯಾರ್ಯಾರ ಮನೆಗೆ ಹೋಗಿ ಏತಕ್ಕೆ ತೊಂದರೆ ಕೊಡಬೇಕೆ'ಂದು. ನಾವು ಹೊಟೇಲಲ್ಲಿ ಇಳಿದುಕೊಂಡು, ಚೌಕಶಿ ಮಾಡದಿದ್ದರೆ— ಬೇಕಾದ ಸೌಕರ್ಯ, ವಿರಾಮ ಪಡೆಯಬಹುದು;ನಿಜ. ಆದರೆ ಸ್ನೇಹ ಸೌಹಾರ್ದಗಳನ್ನುಎಲ್ಲಿಂದ ಕೊಳ್ಳಲು ಬಂದೀತು? ಆ ದೃಷ್ಟಿಯಿಂದ ಅಲ್ಪಾಹಾರ ದೊರೆಯುವ ತೀರ ಬಡಮಿತ್ರರ ಕುಟೀರ ಸಹ ಹೊಟೇಲಿಗಿಂತ ಮೇಲೆನಿಸುತ್ತದೆ. ಆದರೆ ಆಚಾರ್ಯರ ಕುಟೀರ ಸುಂದರವಾಗಿಯೂ ಇತ್ತು; ವಿಶಾಲವಾಗಿಯೂ ಇತ್ತು. ಉಪ ಹಾರ,ಉಪಚಾರ ಎಲ್ಲವೂ ಧಾರಾಳವಾಗಿತ್ತು. ತೀರ ಸವಿಯಿಂದ ಕೂಡಿತ್ತು.

ಕಾರಣವಿಲ್ಲದೆಯೂ ಅವರಲ್ಲಿಗೆ ಹೋಗಿ, ನಾಲ್ಕು ದಿನವಿದ್ದು ಅವರೊಡನೆ ಕಾಲ ಕಳೆಯಲು ಮನಸ್ಸಾಗುವಂತಹ ಸ್ಥಳ ಅವರದ್ದು.

'ಸಂಜೆಯಾಗುತ್ತಲೇ ಅಲೆದಾಡಲು ಹೋಗೋಣ'–ಎಂದು ಆಚಾರ್ಯರೊಡನೆ ಹೊರಟೆವು. ಆಚಾರ್ಯರು ಮೊದಲಿಗೆ ನಮ್ಮನ್ನು ಅಲ್ಲಿನ ಹಲವು ಹಾಸ್ಟೆಲುಗಳಲ್ಲಿ ಒಂದಕ್ಕೆ ಕರೆದೊಯ್ದರು. ಸುಮಾರು ಎರಡೂವರೆ ಸಾವಿರ ವಿದ್ಯಾರ್ಥಿಗಳು ಅಲ್ಲಿನ ಹಾಸ್ಟೆಲುಗಳಲ್ಲಿ ವಾಸವಾಗಿದ್ದಾರೆ. ಆಗ ಎಪ್ರಿಲ್ ತಿಂಗಳು ಒಂಬತ್ತು ಸಂದಿತ್ತಾದುದರಿಂದ ಬಹುಮಂದಿ ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿಕೊಂಡು ತಮ್ಮ ಊರಿಗೆ ತೆರಳಿದ್ದರು. ಆದರೆ ಅಲ್ಲಿ ಇನ್ನೂ ಅಭ್ಯಾಸಕ್ಕೆ ಕುಳಿತಿದ್ದವರ ಸಂಖ್ಯೆ ಕಡಿಮೆಯಾಗಿತಲಿಲ್ಲ. ಆಚಾರ್ಯರು ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳಿದ್ದ ಕೊಟಡಿಯೊಂದರ ಕದ ಬಡಿದು, ಒಳಗಿದ್ದವರನ್ನು ಎಚ್ಚರಿಸಿ, ನಮ್ಮ ಪರಿಚಯ ಮಾಡಿಕೊಟ್ಟರು. ನಾವು ಕಿರಿದಾದ ಕೋಣೆಯೊಂದನ್ನು ಸೇರಿದೆವು. ಅಲ್ಲಿ ಕುರ್ಚಿಯ ಮೇಲೆ ಕುರ್ಚಿಯಿಟ್ಟು, ಪುಟ್ಟ ಒಂದು ಸಭೆಯನ್ನೇ ಜರಗಿಸಿದೆವು. ಸಭೆಯೊಂದಿಗೆ ಕಾಫಿ, ಉಪಹಾರಗಳ ಸತ್ಕಾರವೂ ಆಯಿತು. ಅಲ್ಲಿಂದ ಇಳಿದು ಬಂದವರೇ ರಿಕ್ಷಾವೊಂದರಲ್ಲಿ ಕುಳಿತು, ವಿಸ್ತಾರವಾದ ವಿದ್ಯಾಲಯದ ಬಯಲನ್ನೆಲ್ಲ ಸುತ್ತಾಡಿದೆವು. ಈ ವಿಶ್ವವಿದ್ಯಾಲಯದ ಸ್ಥಾಪಕರಾದ ಮದನಮೋಹನ ಮಾಲವೀಯರು ಒಂದೂವರೆ ಸಾವಿರ ಎಕ್ರೆ ಜಮೀನನ್ನು ಅದಕ್ಕಾಗಿ ದೊರಕಿಸಿಕೊಟ್ಟಿದ್ದರು. ಇದೇನೇ ಒಂದು ದೊಡ್ಡ ನಗರ–ಎಂಬಷ್ಟು ಈಗ ಬೆಳೆದುಕೊಂಡಿದೆ. ಅವರ ದೂರದರ್ಶಿತ್ವ, ಕಾರ್ಯಪಟುತ್ವ ಮುಂದಿನವರಿಗೂ ಬಂದಿದ್ದರೆ, ದೇಶದ ವಿಶ್ವವಿದ್ಯಾಲಯಗಳಲ್ಲಿ ಇದು ಅತ್ಯಂತ ಹಿರಿಯ ಸ್ಥಾನವನ್ನು ಗಳಿಸುತ್ತಿತ್ತು.

ಅಲೆದಾಡಿ ಅಲೆದಾಡಿ, ಹೊಸದಾಗಿ ಒಂದು ದೇವಾಲಯ ಕಟ್ಟುತ್ತಿದ್ದ ಸ್ಥಳಕ್ಕೆ ಬಂದೆವು. ಕಾಶಿಯಲ್ಲಿ ದೇವಾಲಯಗಳಿಗೆ ಬರಗಾಲವೇ? ಸಾವಿರಗಟ್ಟಲೆ ಇವೆ. ಆದರೂ ಈಗಿನ ವೈಸ್ ಚಾನ್ಸಲರಾದ ಗೋವಿಂದ ಮಾಲವೀಯರು ಇಲ್ಲೊಂದು ಹಿರಿಯ ದೇವಾಲಯ ಕಟ್ಟಿಸತೊಡಗಿದ್ದಾರೆ. ಬರಿಯ ಒಂದೆರಡು ಕೋಟಿ ರೂಪಾಯಿಗಳನ್ನು ವ್ಯಯಿಸಿ ಅದನ್ನು ಮುಗಿಸುವ ಆಸೆ ಅವರದ್ದು. ಈ ಗುಡಿಗಾಗಿ ವ್ಯಯಿಸುವ ಹಣದಲ್ಲಿ ಹತ್ತನೆಯ ಒಂದಂಶವನ್ನು ವಿವಿಧ ಕಾಲೇಜುಗಳ ವೈಜ್ಞಾನಿಕ ಬೆಳವಣಿಗೆಗೆ, ವಿಸ್ತರಣೆಗೆ ಬಳಸಿ

ದ್ದಾದರೆ, ಸ್ಥಾಪಕರ ಆಕಾಂಕ್ಷೆ ಎಷ್ಟೋ ಪೂರ್ಣವಾಗುತ್ತಿತ್ತು. ತಂದೆಯ ದಾರಿಯೇ ಬೇರೆ! ಅವರ ಮಗನ ದಾರಿಯೇ ಬೇರೆ! ಸರ್ ರಾಧಾಕೃಷ್ಣರಂಥ ವೈಸ್ ಚಾನ್ಸ್ಲರು ಇಂಥ ವಿಶ್ವವಿದ್ಯಾಲಯಗಳಲ್ಲಿ ಬಹು ದಿನ ನಿಲ್ಲಲಾರದೆ ಹೋದರು ಎಂದು–ಕೇಳಿ ವ್ಯಥೆಯಾಗುತ್ತದೆ.

ನಮ್ಮ ಅಂದಿನ ಸಂಜೆಯ ವಿಹಾರದಿಂದಾಗಿ ಅನೇಕ ಕನ್ನಡ, ಕನ್ನಡೇತರ ಗೆಳೆಯರ ಪರಿಚಯವಾಯಿತು. ಹಾಗೆಯೇ ಕನ್ನಡಮ್ಮನ ಪ್ರಾರಬ್ಧವೂ ನನಗೆ ಗಂಟುಬಿತ್ತು. ಮರುದಿನ ಕಾಲೇಜಿನಲ್ಲಿ ನನ್ನದೊಂದು ಉಪನ್ಯಾಸವನ್ನು ಏರ್ಪಡಿಸುವ ನಿಶ್ಚಯ ಮಾಡಿದರು. ಉಪನ್ಯಾಸದ ಪರಿಹಾರಕ್ಕಾಗಿ ಒಂದು ಔತಣದ ಏರ್ಪಾಟೂ ಆಯಿತು.

ನಾನು ವಿಶ್ವವಿದ್ಯಾಲಯದ ಆವರಣದಲ್ಲಿ ಎರಡು ದಿನ ಕಳೆದು, ಹಲವು ಮಿತ್ರರ ಪರಿಚಯ ದೊರಕಿಸಿಕೊಂಡು, ವಿಶ್ವವಿದ್ಯಾಲಯದ ಚಟುವಟಿಕೆಗಳು ಎಷ್ಟೆಷ್ಟು ವಿಸ್ತರಿಸಿವೆ ಎಂದು ಕೇಳುವ ಕುತೂಹಲ ತಾಳಿದೆ. ಆದರೆ ಯಾರೊಬ್ಬರ ಬಾಯಿಯಿಂದಲೂ ಆಶಾದಾಯಕವಾದ ಪ್ರತ್ಯುತ್ತರ ದೊರಕಲಿಲ್ಲ. ಹಾಸ್ಟೆಲುಗಳೇನೋ ಹೆಚ್ಚುತ್ತಲಿವೆ. ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆಯುತ್ತಲಿದೆ. ಶಿಕ್ಷಣ ಸಾಧನ, ಸಲಕರಣೆ, ಆವರಣಗಳ ದೃಷ್ಟಿಯಿಂದ ಬೆಳವಣಿಗೆಯಾಗಲಿ, ಉತ್ಸಾಹವಾಗಲಿ ಉಂಟಾದಂತೆ ಅವರ ಸಂಭಾಷಣೆಗಳು ಹೇಳಲಿಲ್ಲ. ಒಬ್ಬ ಮನುಷ್ಯ ಎಷ್ಟೊಂದು ಹಿರಿಯಾಸೆ ಕಟ್ಟಿಕೊಂಡು ಸಮಾಜಸೇವೆಗೆ ಹೊರಟರೂ, ಅವನ ಬಳಿಕ, ಅವನ ಆದರ್ಶ ಹಿಡಿದು ನಡೆಯುವ ವರ್ಚಸ್ಸುಳ್ಳ ವ್ಯಕ್ತಿಗಳು ನಾಡಿನಲ್ಲಿ ಇಲ್ಲವಾದರೆ, ನಮ್ಮ ಎಷ್ಟೋ ಕನಸುಗಳು ನೆನಸಾಗಲಾರವು. ಹಣದ ಬಲದಿಂದ ಎಷ್ಟೋ ದೊಡ್ಡದೊಡ್ಡ ಸಂಸ್ಥೆಗಳು ಯಾಂತ್ರಿಕವಾಗಿ ನಡೆಯಬಹುದು. ಆದರೆ ಅವುಗಳಲ್ಲಿ ಜೀವಕಳೆ ಉಳಿಯುವುದಿಲ್ಲ.

ಎರಡನೆಯ ದಿನ ನಾವು ಡಾ। ಆಚಾರ್ಯರವರೊಡನೆ ಕಾಶೀಕ್ಷೇತ್ರ ಸಂಚಾರ ಮಾಡಿದೆವು. ಆಚಾರ್ಯರಲ್ಲವೇ–ಅದಕ್ಕೆ ತಕ್ಕವರು. ಆದರೆ ನಮ್ಮ ಆಚಾರ್ಯರಿಗೆ ಧರ್ಮದ ಹೆಸರಿನಲ್ಲಿ ನಡೆಯುವ ಯಾವೊಂದು ಠಕ್ಕೂ ಹಿಡಿಸದು. ಮೂಢ ಭಕ್ತಿ ಇಷ್ಟಿಷ್ಟೂ ಸೇರುವುದಿಲ್ಲ. ಪ್ರಾಯಶಃ ಗೆಳೆಯರೆಂಬ ದಾಕ್ಷಿಣ್ಯಕ್ಕಾಗಿ, ಅವರು ಈ ಪರ್ಯಟಣೆಗೆ ಒಪ್ಪಿದರೆಂದು ಕಾಣುತ್ತದೆ. ಮೊದಲು ನಾವು ಹೋದದ್ದು–ಯುನಿವರ್ಸಿಟಿ ಮಗ್ಗುಲಲ್ಲೇ

ಇರುವ ರಾಮನಗರಕ್ಕೆ. ಅಲ್ಲಿನ ಗಂಗೆಯ ಈಚಿನ ಮಗ್ಗುಲು ವಿಶಾಲವಾದ ಕೃಷಿಕ ವಲಯವಾಗಿದೆ. ಹಾದಿಯ ಮಗ್ಗುಲಲ್ಲಿ, ರೈತರು ಗುಡಿಸಲು ಕಟ್ಟಿಕೊಂಡು, ಯವೆ ಗೋಧಿಯ ಕಾಳನ್ನು ಗಾಳಿಗೆ ಒಡ್ಡಿ, ಹೊಟ್ಟು ಬೇರೆ ಮಾಡುತ್ತಿದ್ದರು.

ಅಲ್ಲಿ ಹೆಚ್ಚೇನು ಚೆಲುವನ್ನು ಕಾಣದೆ 'ಹನುಮಾನಘಾಟಿ'ನ ಕಡೆಗೆ ಸಾಗಿದೆವು. ಅಲ್ಲಿಂದ ಮುಂದೆ ಗಂಗೆಯ ತಡಿಯಲ್ಲಿ ಸುಮಾರು ಮೂರು ಮೈಲು ಉದ್ದಕ್ಕೂ ಹಾಸಿದೆ ಕಾಶಿ ನಗರ. ಈ ನಗರ ಹಲವು ಸ್ನಾನ ಘಟ್ಟಗಳಿಗೆ ಹೆಸರಾದದ್ದು. ಮೊದಲಿಗೆ ಸಿಗುವುದು ಹನುಮಾನ ಘಟ್ಟ. ಅಲ್ಲೇನೆ ಮೈಸೂರಿನ ಛತ್ರವೊಂದಿದೆ. ಆಸುಪಾಸಿನಲ್ಲಿ ಎಷ್ಟೋ ಮೈಸೂರಿನ ಜನರು ವಾಸವಾಗಿದ್ದಾರೆ. ಇಲ್ಲಿರುವವರಲ್ಲಿ ಬಹುಮಂದಿ ಒಂದೋ—ಯಾತ್ರಿಕರಾಗಿ ಬಂದವರು, ಇಲ್ಲವೆ ಪಂಡರಾಗಿ ನೆಲೆಸಿದವರು. ಈ ಕ್ಷೇತ್ರಕ್ಕೆ ಬರುವ ಜನ, ಪಿತೃಪ್ರೀತರ್ಥ್ಯ ಕ್ರಿಯೆಗಳನ್ನು ಮಾಡಿ ಹೋಗುವುದು ರೂಢಿ. ಹೀಗಾಗಿ ಪಂಡರ ನೆರವಿಲ್ಲದೆ ಕ್ಷೇತ್ರಯಾತ್ರೆ ಎಂಬುದು ಸಾಗದ ಮಾತು. ಹೊರಟ ನಾವು ಪಂಡರು ಪುರೋಹಿತರುಗಳಲ್ಲಿ ವಿಶ್ವಾಸವಿಲ್ಲದವರು. ನಮ್ಮ ಮಾರ್ಗದರ್ಶಿಗಳಾದ ಆಚಾರ್ಯರು ನಮಗೆ ತಕ್ಕವರು. ಹೀಗಾಗಿ ಕ್ಷೇತ್ರದ ಸೊಬಗನ್ನು ನೋಡುವುದಷ್ಟೇ ನಮ್ಮ ಕೆಲಸವಾಗಿತ್ತು. ಗಂಗೆಯ ತಡಿಗಳು ಒಂದು ಜಾತಿಯ ಮಿದು ಮಣ್ಣಿನಿಂದಾದುವು. ಆ ಮಣ್ಣನ್ನೇ ಪಾಯವಾಗಿರಿಸಿಕೊಂಡು ಅನಾದಿ ಕಾಲದಿಂದಲೂ ಅನೇಕ ಸೋಪಾನ, ಸೌಧ, ಗುಡಿಗೋಪುರಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ಆ ಸೋಪಾನಗಳನ್ನಿಳಿದು, ಗಂಗೆಯಲ್ಲಿ ಮುಳುಗಿ, ಮಿಂದ, ಜನಸಂಖ್ಯೆಯನ್ನೆಣಿಸಬಲ್ಲವರಾರು? ನಮ್ಮ ದೇಶದ ಯುಗಮಾನದ ಸಂಸ್ಕೃತಿಯಲ್ಲಿ, 'ಗಂಗಾಸ್ನಾನ' ಅನೇಕರ ಜೀವನದ ಮುಖ್ಯ ಆದರ್ಶವೇ ಆಗಿ ಬಂದಿದೆ. ಕಾಶಿಯ ಯಾತ್ರೆಗಾಗಿ ಬದುಕನ್ನೇ ಮುಡಿಪಾಗಿಟ್ಟುಕೊಂಡ ಜನ ಎಷ್ಟೋ ಮಂದಿ. ಕಾಶಿಯಲ್ಲೇ ಅಸುವನ್ನೀಗಬೇಕು—ಎಂಬ ಭ್ರಮೆಯಿಂದ ಅಲ್ಲಿಗೆ ಬಂದು ನೆಲೆಸಿದ ಹಿರಿಯರೆಷ್ಟೋ ಮಂದಿ. ಮಹಾಭಾರತದ ಕಾಲದಿಂದಲೂ ಅಥವಾ ಅದಕ್ಕೂ ಪೂರ್ವದಿಂದಲೂ ಕಾಶಿಯ ನಿಲುವು ಅಚ್ಚಳಿಯದೆ ನಿಂತು ಬಂದಿದೆ. ಅಲ್ಲಿನ ದೇವಾಲಯಗಳು, ಸ್ನಾನಘಟ್ಟಗಳು, ಯಾಗ ಶಾಲೆಗಳು, ಶಾಸ್ತ್ರಶಾಲೆಗಳು, ಹಿಂದಿಂದಲೂ ಉಳಿದು ಬಂದಿವೆ. ದೇಶದ ಬಹು ಮಂದಿ

ಯ ಆದರವನ್ನು ಪಡೆದಿದೆ. ನಮಗೆ ವಿಶ್ವಾಸವಿರಲಿ, ಇಲ್ಲದಿರಲಿ, ನಮ್ಮ ಸಂಸ್ಕೃತಿಯ ಹಿರಿಯ ಕುರುಹಾದ ಈ ಕಾಶಿ ಏನೆಂದು ತಿಳಿಯುವುದರಲ್ಲಿ ಪ್ರಯೋಜನವಿದ್ದೇ ಇದೆ.

ನಾವು ಹನುಮಾನ ಘಟ್ಟದಿಂದ, ಒಂದು ದೋಣಿ ಮಾಡಿಕೊಂಡು, ನದಿಕರೆಗೆ ಸಮೀಪವಾಗಿ ಅಲ್ಲಿನ ಮುಖ್ಯ ಘಟ್ಟಗಳನ್ನೆಲ್ಲ ಕಾಣಲು ಹೊರಟೆವು. ಸುಮಾರು ಐವತ್ತು ಅಡಿ ಎತ್ತರ, ನೂರು ಅಡಿ ಅಗಲವಾಗಿವೆ ಈ ಸೋಪಾನ ರಾಜಿಗಳು. ಒಂದೊಂದು ಘಟ್ಟಕ್ಕೂ ಒಂದೊಂದು ಹೆಸರಿದೆ. ಕಾಮೇಶ್ವರ, ದಶಾಶ್ವಮೇಧ, ಮಣಿಕರ್ಣಿಕಾ ಎಂದು ಎಷ್ಟೋ ಪುರಾಣ ಪ್ರಸಿದ್ಧ ಹೆಸರುಳ್ಳವುಗಳಿವು. ಘಟ್ಟಗಳ ಮಗ್ಗುಲಲ್ಲಿ ಕಟ್ಟಿಸಿದ ಸೌಧಗಳು ನೀರಲ್ಲಿ ಪ್ರತಿಬಿಂಬಿಸುವಾಗ ವಿಚಿತ್ರವಾದ ಬೆಡಗುಂಟಾಗುತ್ತದೆ. ಗಂಗಾಜಲ ನಾವು ಹೋದಾಗ ತೀರ ಇಳಿಮಟ್ಟದಲ್ಲಿದ್ದರೂ, ಬೇಸಿಗೆ ಬಂದೊಡನೆ ಈ ಸೋಪಾನಗಳನ್ನೆಲ್ಲ ಆವರಿಸಿ, ಎಷ್ಟೋ ಗುಡಿ, ಸೌಧಗಳನ್ನೆಲ್ಲ ಮುಳುಗಿಸಿ ಬಿಡುತ್ತದೆ. ಆಗ ಪ್ರವಾಹದ ವೇಗವೂ ಹೆಚ್ಚು. ಶಿಲೆಯಿಂದಲೇ ಈ ಸೌಧ ಸೋಪಾನಗಳನ್ನು ರಚಿಸಿದ್ದರೂ, ಗಂಗೆಯ ಆರ್ಭಟಿಗೆ ಅವು ತಡೆಯಲ್ಲ. ಹೀಗಾಗಿ ಅನೇಕ ಮಂದಿರಗಳ ತಳಪಾಯವೇ ಕುಸಿದು, ಹಲವೊಂದು ಕಟ್ಟಡಗಳು ಕುಸಿದು ಬಿದ್ದುದನ್ನು, ಬೀಳುವಂತಿರುವುದನ್ನೂ ಕಾಣಬಹುದು. ಹಿಂದಿನ ಜನರು ಎಷ್ಟೊಂದು ಭಕ್ತಿಯಿಂದ, ಎಷ್ಟೊಂದು ಧನವ್ಯಯದಿಂದ ಇವನ್ನೆಲ್ಲ ರಚಿಸಿದ್ದರೋ, ಅಷ್ಟೇ ಸಾಹಸದಿಂದ ಅವುಗಳ ಜೀರ್ಣೋದ್ಧಾರದ ಕೆಲಸವಾಗಲೀ, ಪುನರ್ರಚನೆಯ ಕೆಲಸವಾಗಲೀ ಆಗುತ್ತಿರುವುದನ್ನು ಕಾಣೆ.

ನಾವು ಸಾಗುತ್ತಾ ಕಂಡ ಒಂದು ಘಟ್ಟ ಮಣಿಕರ್ಣಿಕೆ. ಕಾಶಿಯಲ್ಲಿ ಮಡಿದವರನ್ನು ತಂದು ಗಂಗೆಯಲ್ಲಿ ಮೀಯಿಸಿ, ಸುಡುವ ತಾಣವಿದು. ಸೋಪಾನಗಳ ಮೇಲೆಯೇ ಶವದಹನವಾಗುತ್ತದೆ. ಆಗಾಗಲೇ ಮೂರು ನಾಲ್ಕು ಚಿತೆಗಳು ಉರಿಯುತ್ತಿದ್ದು, ಸೋಪಾನದ ಮೇಲೆ ಕೆಂಬಟ್ಟೆ ಹೊದೆಯಿಸಿದ ಆರೆಂಟು ಚಟ್ಟಗಳೂ ಕಾಣಿಸುತ್ತಿದ್ದುವು. ಮಣಿಕರ್ಣಿಕೆ ಶವದಹನಗಳ ನಿತ್ಯನೋಟ. ಇದರ ನೆನಪಿನೊಂದಿಗೆ ಪುರಾಣಕಾಲದ ಒಂದು ಕಥೆ ನಮಗೆ ನೆನಪಾಗಲೇ ಬೇಕು. ಅದೇ ಸತ್ಯಸಂಧ ಹರಿಶ್ಚಂದ್ರನ ಕತೆ. ಇಲ್ಲೇನೆ ಆತ ಸ್ಮಶಾನದ ಕಾವಲುಗಾರನಾಗಿದ್ದನಂತೆ. ಮಣಿಕರ್ಣಿಕೆಯನ್ನು ದಾಟಿ

ಮುಂದುವರಿಯುವ ಮೊದಲೇ ನಾವು ತಡಿಗೆ ಬಂದು ಮೇಲಕ್ಕೇರಿದೆವು. ಅಲ್ಲೊಂದು ಮಂದಿರವಿದೆ. ನೇಪಾಲಿ ಮಂದಿರವೆನ್ನುತ್ತಾರೆ ಅದನ್ನು. ಅದರ ಬಹುಭಾಗ ಮರದಿಂದಲೇ ನಿರ್ಮಿತವಾಗಿದೆ. ಈ ದೇವಾಲಯ ಬಲು ಪುರಾತನವಾದದ್ದು. ಕೇವಲ ನೇಪಾಲದ ವಾಸ್ತು ಶೈಲಿಯನ್ನು ತೋರಿಸುವಂಥದು. ಗುಡಿ ಚಿಕ್ಕದಾದರೂ ಅದರ ಕಟ್ಟಿಗೆಯ ಗೋಡೆಗಳು, ಮದನಕೈವಿಗ್ರಹಗಳು, ಕಿಟಿಕಿ ಬಾಗಿಲುಗಳಲ್ಲಿ ಕೊರೆದ ನಾನಾಬಗೆಯ ಚಿತ್ರ ಕೆತ್ತನೆ ಪ್ರತಿಮೆಗಳು, ಕಲಾವಿದರ ಸುಂದರ ಕೈವಾಡವನ್ನು ತೋರಿಸುತ್ತವೆ. ಸೌಂದರ್ಯದ ಜತೆಗೆ ಅಸಹ್ಯವೂ ಅಲ್ಲಿ ಸೇರಿದೆ. ವಾತ್ಸಾಯನ ಕಾಮಶಾಸ್ತ್ರದ ನಿದರ್ಶನಗಳನ್ನು ವಿಪುಲವಾಗಿ ಅಲ್ಲಿ ಚಿತ್ರಿಸಿದ್ದಾರೆ. ನಮ್ಮ ದೇಶದ ಅನೇಕಾನೇಕ ಪ್ರಾಚೀನ ವಾಸ್ತು ಮಂದಿರಗಳಲ್ಲಿ ಒಂದಲ್ಲ ಒಂದು ಕಡೆ, ಈ ಬಗೆಯ ಮಿಥುನಚಿತ್ರಗಳನ್ನು ತೋರಿಸುವುದನ್ನು ಕಾಣಬಹುದು. ಹಳೆಬೀಡು, ಪುರಿ, ಖಜುರಾಹೋ ಇಲ್ಲೆಲ್ಲ ಅವುಗಳುಂಟು. ಮಾನವನ ಪೂರ್ವ ಸಂಸ್ಕೃತಿಯಲ್ಲಿ 'ಸಂಭೋಗ'ಕ್ಕೆ ಈಗ ಕಾಣುವಷ್ಟು ಅಸಹ್ಯ ಅಂಟಿಕೊಂಡಿರಲಿಲ್ಲವೋ ಏನೋ. ಶುಭಕಾರ್ಯಗಳಲ್ಲಿ ಅದೊಂದು ಎನಿಸಿದುದರಿಂದಲೋ ಏನೋ—ದೇವಾಲಯಗಳಲ್ಲೂ ಅವುಗಳಿಗೆ ಮನ್ನಣೆ ಕೊಟ್ಟುದನ್ನು ಕಾಣುತ್ತೇವೆ. ಆದರೆ ನೈಸರ್ಗಿಕ ಮೈಥುನ ಚಿತ್ರಗಳ ಬದಲು, ತೀರ ಅಶ್ಲೀಲ ಮಾತ್ರವಲ್ಲ, ವಕ್ರಮನೋವೃತ್ತಿಯ ಚಿತ್ರ ಬರೆದಿರುವುದರ ಉದ್ದೇಶ ಮಾತ್ರ ನನಗಿನ್ನೂ ಅರ್ಥವಾಗಿಲ್ಲ.

ಈ ನೇಪಾಲಿ ಮಂದಿರದ ಎದುರು ಇನ್ನೊಂದು ದೊಡ್ಡ ಮಂದಿರವಿದೆ. ಅದೂ ದೇವಾಲಯಕ್ಕೆ ಸಂಬಂಧಿಸಿದ್ದು. ಅದರ ಮುಂಗಡೆಯ ಮರದ ಕಟಾಂಜನ, ಬಾಗಿಲು ಮೊದಲಾದುವು ಸಹ ತುಂಬ ಹೆಚ್ಚಿನ ಕೆತ್ತನೆಯ ಚಮತ್ಕೃತಿಯನ್ನು ತೋರಿಸುತ್ತವೆ. ಈ ಮಂದಿರವನ್ನು ನೋಡಿ, ಇಳಿದು, ದೋಣಿಯನ್ನೇರಿ ವಿಶ್ವೇಶ್ವರನ ಗುಡಿಯ ಸಮೀಪದ ಸ್ನಾನ ಘಟ್ಟವನ್ನು ನಾವು ಸೇರಿದೆವು. ಬಂದುದಕ್ಕೆ ವಿಶ್ವೇಶ್ವರನ ದರ್ಶನವಾಗಬೇಡವೇ? ಅಲ್ಲದೆ ಈ ವರೆಗೆ ಕಾಣದ ಭಕ್ತಿರಸ ಶ್ರೀಪತಿಯಲ್ಲಿ ಮೂಡಿದ್ದೂ ಕಂಡಿತು. ಪ್ರಾಯಶಃ ಮನೆಯಲ್ಲಿ ತಾನು ಬಿಟ್ಟು ಬಂದಿರುವ ತಾಯಿಯನ್ನು ಸಂತೋಷಗೊಳಿಸಲೆಂದೋ ಏನೋ, ಆತ ದೈವ ದರ್ಶನೋತ್ಸಾಹಿತನಾದ. ಹಿಂದೆ ಈ ಗುಡಿಯ ಬಳಿಗೆ ನಾಲ್ಕಾರು ಬಾರಿ ನಾನು ಬಂದಿದ್ದೆ. ಆಗಿನ ಜನಜಂಗುಳಿ

ಯನ್ನು ಕಂಡು ಬೆದರಿದ್ದೆ. ಈ ಬಾರಿ ಅದರ ಅರಿವಾಸಿಯಷ್ಟು ಜನರೂ
ಕಾಣಿಸಲಿಲ್ಲ. ಪ್ರಾಯಶಃ ಆಯಾತ್ರಿಗಳು ಕುಂಭಮೇಳದ ಆಕರ್ಷಣೆಯಿಂ
ದಾಗಿ ಹರಿದ್ವಾರದ ಕಡೆಗೆ ಹೋಗಿರಬೇಕು. ಅದರಿಂದ ನಮಗೇನೋ ಅನು
ಕೂಲವಾಯಿತು. ಆದರೆ ನಮ್ಮ ಜತೆಯಲ್ಲಿದ್ದ ಡಾಕ್ಟರರವರು "ನಿಮ್ಮ ಕಿಸೆ
ಜಾಗ್ರತೆ" ಎನ್ನುತ್ತಿದ್ದರು. ನ್ಯಾಯವಾಗಿ ಆತ್ಮಜಾಗ್ರತೆಯಿಂದ ಬರುವ ಯಾ
ತ್ರಿಕ, ಕಿಸೆಯ ಜಾಗ್ರತೆ ವಹಿಸುವುದು ಹೇಗೆ? ಅಲ್ಲದೆ ಕ್ಷೇತ್ರದಲ್ಲೂ ಕಳ್ಳ
ರಿದ್ದಾರೆ—ಎಂಬ ಅನುಮಾನ ನಮ್ಮಲ್ಲಿ ಹುಟ್ಟಿಸಿದರೆ, ನಮ್ಮಲ್ಲಿ ಭಕ್ತಿ ಎಷ್ಟು
ಉಳಿದೀತು? ನಮ್ಮಂತೆ ಬರುವ ಯಾತ್ರಿಕರನ್ನೆಲ್ಲ ಕಳ್ಳರೆಂಬ ಅನುಮಾನ
ದಿಂದಲೇ ನಾವು ನೋಡಬೇಕಾಗುತ್ತದೆ. ಅವರೂ ಸಹ ನಮ್ಮನ್ನು ಹಾಗೆ
ನೋಡಿಯಾರು—ಎಂಬ ಯೋಚನೆ ಬಂದರೆ ಕ್ಷೇತ್ರಕ್ಕೇ ಬರುವುದು ಬೇಡ
ಎಂದೆನಿಸಿ ಬಿಡುತ್ತದೆ. ಅಂತೂ ಅನುಮಾನ ತೊಡಗಿದ ಮೇಲೆ ಪರಿಹಾರ
ವಿಲ್ಲ. ಕಿಸೆಯ ಮೇಲೆ ಕೈಯಿರಿಸಿಕೊಂಡೇ ಮುಂದುವರಿದೆವು. ಮೊದಲು
ಹೋದದ್ದು ಒಂದು ಹೂವಿನ ಅಂಗಡಿಗೆ. ಅಲ್ಲಿ ನಮ್ಮ ಕೆಮರಾ, ಚಪ್ಪಲಿ
ಗಳನ್ನಿರಿಸಿದೆವು. ಅಂಗಡಿಕಾರ ಶ್ರೀಪತಿಯ ಮತ್ತು ನನ್ನ ಅಪಾರ ಭಕ್ತಿ
ಯನ್ನು ಗುರುತಿಸಿ ನಾಲ್ಕೆಂಟು ರೂಪಾಯಿಗಳ ಹೂಗಳನ್ನು ಕೊಡಲು ಬಂದ.
ನಾವು ಅನುಮಾನದಿಂದ, ನಮ್ಮ ಭಕ್ತಿಯ ತೂಕಮಾಡಿಕೊಂಡು, ಅಳೆದು,
ಈಗಿನ ಧಾರಣೆಯ ವಾಸಿಯಿಂದ ಗುಣಿಸಿ, ಒಂದು ರೂಪಾಯಿಯ ಹೂವ
ನ್ನಷ್ಟೆ ಕೊಂಡುಕೊಂಡೆವು. ಅದೆಲ್ಲವನ್ನು ಶ್ರೀಪತಿಯ ಕೈಯಲ್ಲಿ ಕೊಟ್ಟು,
ಅವನನ್ನು ಮುಂದಿರಿಸಿಕೊಂಡು, ಅವನ ಹಿಂದೆಯೇ ನಡೆದೆವು. ಪರೋಪ
ಕಾರಿಯಾದ ಪಂಡನೊಬ್ಬ, ಬೇಡವೆಂದರೂ ನಮ್ಮ ಬೆನ್ನು ಬಿಡದೆ, ಶ್ರೀಪ
ತಿಗೆ ಮಾರ್ಗದರ್ಶಕನಾದ. ಆ ಕಿರುದಾರಿಯಲ್ಲಿ ಹೆಜ್ಜೆಗೊಂದು ದೇವಸ್ಥಾನ
ವಿದೆ. ಅಂಗುಲಕ್ಕೊಂದು ದೇವರಿದ್ದಾರೆ. ಅಷ್ಟು ಸಾಲದೆಂಬುದಕ್ಕೆ ಕೈನೀಡು
ತ್ತಿರುವ ತೆರತೆರನ ಭಿಕ್ಷುಕವೃಂದ/ ಇವರನ್ನೆಲ್ಲ ತೃಪ್ತಿ ಪಡಿಸಿ, ಗುಡಿಯನ್ನು
ಸೇರುವುದಾದರೆ, ವಿಶ್ವಾಮಿತ್ರನ ತಪೋಮಹಿಮೆಯೂ ಸಾಕಾಗಲಾರದು.
ನನ್ನ ಗೋತ್ರ ಅದೇನೆ ಆದರೂ, ಆ ಮಹಿಮೆ ನನಗೆಲ್ಲಿಂದ ಬರಬೇಕು?
ಉಳಿದ ದೇವರುಗಳ ಕಡೆಗೆ ನಾವು ಮುಖ ಹಾಕದೆ, ಏಕಾಗ್ರಚಿತ್ತತೆಯಿಂದ
ನೆಟ್ಟಗೆ ವಿಶ್ವೇಶ್ವರ ಮಂದಿರವನ್ನೇ ಹೊಕ್ಕೆವು. ಅಲ್ಲಾದರೂ ಸುಖವುಂಟೇ?
ಗುಡಿಯ ಜಾವಡಿಗಳಲ್ಲೆಲ್ಲ ಅಸಂಖ್ಯಾತ ದೇವರುಗಳಿದ್ದರು. ಸಾಲದುದಕ್ಕೆ

ಪಂಚಪಾಂಡವರ ಬಿಡಾರವೂ ಅಲ್ಲೇ ಇತ್ತು. ನಮ್ಮ ಪಂಡ-'ಇದು ಧರ್ಮ ರಾಯ' 'ಇದು ಭೀಮಸೇನ' ಎನ್ನುತ್ತಲೇ ನನಗೆ ರೋಷವೇರಿತು. ಶ್ರೀಪ ತಿಯ ಮುಖಕ್ಕೇನೆ ಇನ್ನೊಬ್ಬ ಭೀಮಸೇನ ಇದ್ದಾನೆ-ಎಂದು ಹೇಳಿದ ಅವನ ಧಾರ್ಷ್ಟ್ಯವೆಷ್ಟಿರಬೇಡ! ಆದರೂ ಪುಣ್ಯಾತ್ಮ ಕೌರವರಲ್ಲಿನ ಒಬ್ಬನ ಹೆಸರನ್ನು ಹೇಳಲಿಲ್ಲ! ಪ್ರಾಯಶಃ ನಮ್ಮನ್ನೆಲ್ಲ ಆ ಪಡೆಗೆ ಸೇರಿಸಿದ್ದನೋ ಏನೋ.

ನಾವು ಹೋದಾಗ ವಿಶ್ವನಾಥ ಮಂದಿರದ ಗರ್ಭಗೃಹ ಸಾಕಷ್ಟು ತೆರ ವಾಗಿತ್ತು. ಜಲಕುಂಡ ಒಂದರಲ್ಲಿ ದೇವರ ವಿಗ್ರಹ ಕಾಣಿಸದಷ್ಟು ಹೂ, ಬಿಲ್ವ ಪತ್ರಗಳಿಂದ ಮುಚ್ಚಿದ್ದರು. ಬಳಿಯಲ್ಲಿ ಮಂತ್ರಘೋಷವಾಗುತಿತ್ತು. ನನಗೆ ಯಾವುದು ಮೆಚ್ಚದೆ ಹೋದರೂ ಮುಕ್ತಕಂಠದಿಂದ ಮಾಡುವ ವೇದ ಘೋಷದ ಮೇಲೆ, ಅರ್ಥ ತಿಳಿಯದಿದ್ದರೂ ಅಭಿಮಾನ. ನಮ್ಮ ಸಭೆ ಸಮಾ ರಂಭಗಳಲ್ಲಿ ನೂರು ಶ್ರುತಿಗಳಲ್ಲಿ ಸಾವಿರ ಜನ ಸೇರಿ ಹಾಡುವ 'ಜನಗಣ ಮನ' ಹಾಡನ್ನು ಸಹಿಸಬೇಕಾಗಿ ಬಂದಾಗಲೆಲ್ಲ, ಶ್ರುತಿಬದ್ಧವಾಗಿ ಏಕಧ್ವನಿ ಯಿಂದ ಹೊರಡಿಸುವ ವೇದಘೋಷದ ನೆನಪು ಆಗಿಯೇ ಆಗುತ್ತದೆ.ಅದೊಂ ದನ್ನು ಬಿಟ್ಟರೆ ನಮ್ಮ ಗಂಡು ಸಮಾಜಕ್ಕೆ ಸಾಮಾಜಿಕ ಕಂಠವೆಂಬುದೇ ಇಲ್ಲ. ಗುಡಿಯಲ್ಲಿ ಶ್ರೀಪತಿಯು ತನ್ನ ಮತ್ತು ನಮ್ಮ ಪರವಾಗಿ ಪುಷ್ಪವನ್ನ ರ್ಪಿಸಿದ ಮೇಲೆ ಅವನ ಮೂಲಕವಾಗಿಯೇ ಬ್ರಾಹ್ಮಣೋಚಿತವಾದ ದಕ್ಷಿಣೆ ಯನ್ನು ಕೊಡಿಸಿ ಹೊರಕ್ಕೆ ಬಂದೆವು. ಆದರ ಕಾರಣವಿಷ್ಟೆ. ಶ್ರೀಪತಿಯ ಹಣದ ಚೀಲವೂ, ನನ್ನದೂ ನನ್ನ ಹತ್ತಿರವೇ ಇರತಕ್ಕದ್ದು. ಈ ಇನ್‌ಫ್ಲೇ ಶನ್ ಬಂದ ಮೇಲೆ ಸಾವಿರಕ್ಕೆ ಮೂರು ಸೊನ್ನೆಗಳಿವೆ ಎಂದು ಸಂಪೂರ್ಣ ಮರೆತವನು ಶ್ರೀಪತಿ.

ಕಾಶಿಯ ವಿಶ್ವೇಶ್ವರನ ಗುಡಿಗೆ ಸಮೀಪವಾಗಿಯೇ ಒಂದು ಮಸೀದಿ ಇದೆ. ಇದು ಹಿಂದೊಂದು ಕಾಲದಲ್ಲಿ ಸುಂದರವಾದ, ಮೂಲ ವಿಶ್ವೇಶ್ವರನ ದೇವಾಲಯವೇ ಇದ್ದಿರಬೇಕು. ಈಗ ದೇವಾಲಯದ ಭಗ್ನಗೊಂಡ ಹಿಂಭಾಗ ಮಾತ್ರವಿದೆ. ಮುಂಭಾಗದಲ್ಲಿ ವಿಧರ್ಮಿಯರ ಮಸೀದಿಯೊಂದು ರಚನೆಯಾಗಿದೆ. ಈ ಸ್ಥಳದಲ್ಲಿ ಯಾವ ಅರ್ಚನೆ ಪ್ರಾರ್ಥನೆಗಳೂ ನಡೆಯು ತ್ತಲಿಲ್ಲವಾದರೂ ಪೋಲಿಸ್ ಕಾವಲೇನೋ ಕಾಣುತ್ತಿದೆ. ಅನ್ಯಧರ್ಮ ಅಸಹಿಷ್ಣುತೆಯ ತಾಪವನ್ನು ನಮ್ಮ ದೇಶ ಎಷ್ಟು ಕಾಲದ ತನಕ ಸಹಿಸಿ ತ್ತೆಂದು ದೇಶದ ಇತಿಹಾಸವೇ ಹೇಳಬೇಕು. ದೇಶದ ಎಷ್ಟೆಡೆಗಳಲ್ಲೂ

ದೇವಾಲಯಗಳನ್ನು ಬಸದಿಗಳಾಗಿ ಮಾಡಿದ, ಬಸದಿಗಳನ್ನು ದೇವಾಲಯಗಳಾಗಿ ಮಾಡಿದ, ಇವೆರಡನ್ನೂ ಅಳಿದು ಮಸೀದಿಗಳನ್ನಾಗಿ ಮಾಡಿದ—ಉದಾಹರಣೆಗಳಿಲ್ಲ! ಮತಧರ್ಮ ಅಸಹಿಷ್ಣುತೆಯ ಕಳಂಕವಲ್ಲದೆ ಇದು ಬೇರೆಯಲ್ಲ. ಆದರೂ ದೇಶ ಒಳಿತಾಗಬೇಕಾದರೆ ಇಂಥ ಹಾಳು ನೆನಪುಗಳನ್ನು ಮರೆಯಬೇಕಾಗುತ್ತದೆ. ಅಂಥ ವಿಷವನ್ನು ದಕ್ಕಿಸಿಕೊಳ್ಳಬಲ್ಲವನಿಗೆ ಮಾತ್ರ ದೇಹ ಧಾರ್ಢ್ಯ ಬಂದೀತು.

ಈ ಮಸೀದಿಗೆ ಸಮೀಪವಾಗಿ ಈಗೊಂದು ಭಜನಾ ಮಂದಿರವಿದೆ. ನಾವು ಹೋದಾಗ ಅಲ್ಲಿ ಪುರಾಣ ಪ್ರವಚನ ನಡೆಯುತಿತ್ತು. ಅನೇಕ ಸ್ತ್ರೀ ಪುರುಷರು ಕಲೆತು, ಅದರಲ್ಲಿ ಭಾಗಿಗಳಾಗಿದ್ದರು. ಒಂದು ಕಾಲದಲ್ಲಿ ಕಾಶಿ ನಗರದಲ್ಲೆಲ್ಲ ಹೀಗಿದ್ದು, ಹಿಂದು ಸಂಸ್ಕೃತಿಯ ಧಾರ್ಮಿಕ ಮನೋವೃತ್ತಿಯನ್ನು ಸಾರುತ್ತಿದ್ದಿರಬೇಕು. ಅ ಮನೋವೃತ್ತಿ ಸಂಪೂರ್ಣ ನಾಶವಾಗಿಲ್ಲವೆಂದೇ, ಈ ಕ್ಷೇತ್ರ ಇಂದಿಗೂ ಯಾತ್ರಾಸ್ಥಳವಾಗಿ ಉಳಿದಿದೆ.

ನಾವೆಲ್ಲರು ಹೊರಕ್ಕೆ ಬಂದೆವು. ಅಲ್ಲಿಂದ ಅನ್ನಪೂರ್ಣಾ ಮಂದಿರಕ್ಕೆ ಹೋದೆವು. ಅದನ್ನು ನೋಡಿಕೊಂಡು ಹೊರಕ್ಕೆ ಬರುವಾಗಲೇ ಶ್ರೀಪತಿಯ ಹೃತ್ಕಮಲದಲ್ಲಿ ಭಕ್ತಿ ರಸ ಉಕ್ಕಿಬರುತ್ತಿತ್ತು. "ಗಂಗಾಜಲವನ್ನು ಕೊಳ್ಳಬೇಕಲ್ಲ. ಗಂಗೆಯಲ್ಲಿ ಮೀಯದಿದ್ದರೂ ಹೋಗುವಾಗ ಮನೆಗಿಷ್ಟು ಜಲ ಒಯ್ಯಬೇಡವೇ? ಕೊಂಡುಹೋದರೆ ಅಜ್ಜಿಗೆ ತುಂಬಾ ಸಂತೋಷವಾದೀತು" —ಎಂದ. ನಾನೂ ಬಲ್ಲೆ—ಅವನ ಅಜ್ಜಿಯನ್ನು. ನನ್ನ ಅಜ್ಜಿಯ ಪ್ರೀತ್ಯರ್ಥವಾಗಿಯೇ ಹಿಂದಿನ ಕಾಲದಲ್ಲಿ ನಾನು ಅವಳೊಡನೆ ಕಾಶಿಗೆ ಬಂದದ್ದು. ಶ್ರೀಪತಿಯ ಅಜ್ಜಿಯಂತು ತೊಂಬತ್ತು ವಯಸ್ಸಿನ ಹಾಸಿಗೆ ಹಿಡಿದ ವೃದ್ಧೆ. ಅವಳ ಆಸೆಯಲ್ಲಿ ಗಂಗಾಜಲಕ್ಕೆ ಎಂಥ ಮನ್ನಣೆಯ ಸ್ಥಾನವಿದೆ—ಎಂದು ತಿಳಿಯಲಾರೆನೆ? ಹೀಗಾಗಿ ಗೆಳೆಯನಿಗೆ ಆಶ್ವಾಸನ ಕೊಟ್ಟೆ. ಕಾಶಿಯಲ್ಲಿ ಗಂಗೆಯನ್ನು ಬಿಂದಿಗೆಯಲ್ಲಿ ತುಂಬಿಸಿ ಬಾಯ್ಮುಚ್ಚಿ ಕೊಡುವ ಉದ್ಯೋಗಿಗಳೇ ಇದ್ದಾರಂತೆ. ಅದಕ್ಕಾಗಿ 'ಕಾಳಜಿ' ಮಾಡಬೇಕಾಗಿರಲಿಲ್ಲ. ಅದನ್ನು ಕೊಳ್ಳುವ ಮೊದಲು ಅಲ್ಲಿನ ಮಾರ್ಕೆಟಿಗೆ ಹೋದೆವು. ಬಟ್ಟೆಯಂಗಡಿಗಳನ್ನೆಲ್ಲ ಸುತ್ತಿದೆವು. ನಮ್ಮ ಸಂಚಾರದ ಪುಣ್ಯದಲ್ಲಿ ಸ್ವಲ್ಪವಾದರೂ ಮನೆಯ ಮಡದಿಯರಿಗೆ ದೊರೆಯಲೆಂದು, ಸೀರೆ ಪೀತಾಂಬರಗಳ ಖರೀದಿ ಮಾಡಿ ಹೊರಟೆವು.

ಆಗಲೇ ಹೆನ್ನೊಂದು ಘಂಟೆಯ ಮೇಲಾಗಿತ್ತು. ಹಸಿವು ನೀರಡಿಕೆ 'ಕೆಫಿನ್'ಲಾಲಸೆ ಎಲ್ಲವೂ ಅತ್ಯಧಿಕವಾಗಿತ್ತು.ಆಚಾರ್ಯರನ್ನು ಕೇಳಿದೆವು. "ಕಾಶಿ ಸುತ್ತಿದೆವಯ್ಯ, ಕಾಶೀಪೀತಾಂಬರ ಕೊಂಡೆವಯ್ಯ, ಕಾಫಿಕೊಡದಿಹ ಕಾಶಿ ಬಲು ಫಾಸಿ ಕಾಣಯ್ಯಾ" ಎಂದೆವು. ಅವರೋ—ನಮ್ಮ ಮನವಿಗೆ ಕೂಡಲೇ ಮುದ್ರೆಯನ್ನಿಕ್ಕಿದರು. ನಮ್ಮನ್ನು ಮುತ್ತಯ್ಯ ಸೆಟ್ಟರ ಅಂಗಡಿಗೆ ಕೊಂಡೊಯ್ದರು. ಅಂಗಡಿಯ ಬಾಗಿಲಿನಲ್ಲೇ ತಮಿಳಿನ ವಾಸನೆ ಬಂತು. ಒಳಗೆ ಕಾಲಿಟ್ಟರೆ ಕಾಫಿಯ ವಾಸನೆ. ಕಾಫಿ ಕುಡಿದ ಮೇಲೆ "ಗಂಗಾಜಲ?" ಎಂದ ಶ್ರೀಪತಿ. ಎಲ್ಲಾದರೂ ಈತನಿಗೆ ಸೋಡಾ, ಲೆಮೊನೇಡ್ ಯೋಚನೆ ಬಂದೀತೇ—ಎಂದು ಯೋಚಿಸಿದ್ದೆ ನಾನು. ಮುತ್ತಯ್ಯ ಸೆಟ್ಟರ ಅಂಗಡಿಯ ಒಂದು ಬೀರುವಿನಲ್ಲಿ ರವಾನೆ ಹಾಕಲಿರುವ ಗಂಗಾಜಲದ ಬುಡ್ಡಿಗಳನ್ನು ಸಾಲುಸಾಲಾಗಿ ಇರಿಸಿದ್ದರು. ಸಣ್ಣದೊಂದು ಬುಡ್ಡಿಯ ಕ್ರಯ ಕೇಳಿದೆ. ಶ್ರೀಪತಿಗೆ ಅಸಮಾಧಾನವಾಯಿತು. ಗಂಗಾಜಲದ ಕೊಡಕ್ಕೇ ಕೈ ಹಾಕಿದ ಅವನು. ಅಜ್ಜಿಗೆ ಗಂಗಾಜಲ ಪಾನಮಾಡಿಸುವ ಬದಲು ಸ್ನಾನಮಾಡಿಸುವ ಆಲೋಚನೆ ಅವನದು. ಆಗಲಿ, ಅವನ ಇಚ್ಛೆ ಇದ್ದಂತೆಯೇ—ಎಂದು ಎಂಟು ರೂಪಾಯಿಯ ಬಿಂದಿಗೆಗೆ,ಐದು ರೂಪಾಯಿಗಳ ಅಂಚೆವೆಚ್ಚಕೊಟ್ಟ ರವಾನೆ ಹಾಕಲು ಅಪ್ಪಣೆಮಾಡಿದೆವು. ನಾನು ಊರಿಗೆ ಮರಳುವಾಗ ಶ್ರೀಪತಿಯ ಮನೆಯನ್ನು ಹಾದು ಬಂದೆ. ತನ್ನ ಮೊಮ್ಮಗನ ಈ ಒಂದು ಸತ್ಕರ್ಮಕ್ಕಾಗಿ, ಆ ಮುದುಕಿ ತುಂಬಾ ಸಂತೋಷಗೊಂಡಿದ್ದಳು. ಅದಕ್ಕಿಂತ ಹೆಚ್ಚೇನು ಬೇಕು?

ಆ ಬಳಿಕ ನಾವು ಮೂವರೂ ಮನೆಗೆ ಮರಳಿದೆವು. ನಮ್ಮ ಊಟ ವಾಯಿತು; ಹಾಸಿಗೆಯಲ್ಲಿ ಉರುಳಾಟವಾಯಿತು. ಏಳುವ ಹೊತ್ತಿಗೆ ಆಚಾರ್ಯರ ಆಮಂತ್ರಣದ ಮೇರೆಗೆ, ಕೆಲವು ಕನ್ನಡ ಮಿತ್ರರು ಮನೆಗೆ ದಯಮಾಡಿಸಿದ್ದರು. ನಮಗೆಲ್ಲ ಉಪಾಹಾರ ಸಮಾರಂಭ ಜರಗಿತು. ದೂರದ ಕಾಶಿಯಲ್ಲಿ ಅಷ್ಟೊಂದು ಕನ್ನಡ ಜನರನ್ನು ಕಂಡರೆ ಸಂತೋಷವಾಗದಿದ್ದೀತೇ? ಈ ಉಪಹಾರವನ್ನು ಮುಗಿಸಿ, ನಾವು ಅಲೆದಾಡುತ್ತ ಕಾಲೇಜಿನ ಕಡೆಗೆ ಹೋದೆವು. ಅನೇಕ ಕನ್ನಡ ವಿದ್ಯಾರ್ಥಿಗಳು ಉಪನ್ಯಾಸದ ಸಲುವಾಗಿ ಬಂದಿದ್ದರು.ದಾಸಣ್ಣಾಚಾರ್ಯರವರನ್ನುಅಧ್ಯಕ್ಷರನ್ನಾಗಿರಿಸಿಕೊಂಡು ನನ್ನ ಉಪನ್ಯಾಸ ನಡೆಯಿತು. ಆ ಬಡಪಾಯಿಗಳನ್ನು ಕೊರೆದು ಕೊಲ್ಲುವ

ಸರ್ವಪ್ರಯತ್ನವನ್ನೂ ಮಾಡಿದೆ. ಉಪನ್ಯಾಸ ಕೇಳಿದ ಮೇಲೆಯೂ ಅವರು ಸಶರೀರಿಗಳಾಗಿ ನನ್ನನ್ನು ಎದುರಿಸಿದ್ದುದನ್ನು ನೋಡಿ ತುಂಬ ವಿಸ್ಮಯವಾಯಿತು. ಈ ಜನಗಳೆಲ್ಲ ಬಹಳ ಗಟ್ಟಿಗರೆಂದುಕೊಂಡೆ.

ಉಪನ್ಯಾಸ ಮುಗಿದ ಮೇಲೆ, ಅದೇ ಆವರಣದಲ್ಲಿ ಅಲೆದಾಡುತ್ತ ತುಸು ಸಮಯ ಕಳೆದೆವು. ಅಲ್ಲಿನ ಕನ್ನಡ ವಿದ್ಯಾರ್ಥಿಗಳು ನಮ್ಮ ಮೇಲಿನ ಅಭಿಮಾನದಿಂದ ಲಿಂಬಿಡಿ ಹಾಸ್ಟೆಲಿನಲ್ಲಿ ಒಂದು ಔತಣ ಏರ್ಪಡಿಸಿದ್ದರು. ಸಾಹಿತಿಯಾದವನ ಭಾಗ್ಯವೇ ಭಾಗ್ಯ. ತನಗೆ ತಿಳಿಯದ್ದನ್ನೂ, ತಿಳಿದುದನ್ನೂ ಹೇಳಿ, ಜನರನ್ನು ದಣಿಸಿದ ಮೇಲೆಯೂ ಅಭಿಮಾನದಿಂದ ಅವನಿಗೆ ಔತಣ ಕೊಡುವ ಜನರ ಮುಂಕುತನಕ್ಕೆ ಏನು ಅನ್ನಬೇಕು? ಔತಣದ ಕಾಲದಲ್ಲಿ ಕಾರ್ಯದರ್ಶಿಯಿಂದ ವಂದನಾರ್ಪಣೆಯಾಯಿತು. ಊಟಮಾಡಿದ ನಮ್ಮ ದಯಾಳುತನವನ್ನು ಹೊಗಳಿ ಅವರು, ಊಟ ಕೊಟ್ಟ ಅವರ ಔದಾರ್ಯವನ್ನು ಹೊಗಳಿ ನಾವು, ಹೀಗೆ ಉಭಯ ಕುಶಲೋಪರಿಸಾಂಪ್ರತಃ ಮಾಡಿಕೊಂಡು ರಾತ್ರೆ ಹತ್ತು ಘಂಟೆಗೆ ಮನೆಯನ್ನು ಸೇರಿದೆವು. ಬರುವಾಗ, ವಿಶ್ವವಿದ್ಯಾಲಯದ ಹಾದಿ ಬೀದಿಗಳು ಗಜಕ್ಕೆ ನಾಲ್ಕುಗಜಗಳಾಗಿ ಕಂಡವು. ಅಷ್ಟೆಲ್ಲ ತಿಂಡಿ ತಿನ್ನಬಾರದಿತ್ತು-ಎಂದೆನಿಸಿತು ನಮಗೆ. ತಿಂದ ಮೇಲೆ ನಮಗುಳಿದ ದಾರಿಯೆಂದರೆ ಅದನ್ನು ಜೀರ್ಣಿಸಿಕೊಳ್ಳುವುದು ಮಾತ್ರ. ಕಾಶಿಯ ವಿಶ್ವೇಶ್ವರ ನಂಜನ್ನು ತಿಂದು, ಇಂದಿಗೂ ಬದುಕಿದ್ದಾನಲ್ಲವೇ! ಹಾಗಿದ್ದ ಮೇಲೆ ಸಿಹಿಯಾದ ಊಟ ಉಂಡು ನಾನು, ಈ ಪುಸ್ತಕ ಬರೆಯುವುದಕ್ಕಾದರೂ ಬದುಕಿ ಉಳಿಯ ಬೇಡವೇ?

ನನಗೆ ಕಾಶಿಗಿಂತ ಹೆಚ್ಚಿನ ಅಭಿಮಾನ ಕಾಶಿಗೆ ತೀರ ಸಮೀಪವಾಗಿರುವ ಸಾರನಾಥದ ಮೇಲೆ ಉಂಟಾಗುತ್ತದೆ. ಸಾರನಾಥ ಹಿಂದೊಂದು ಕಾಲದಲ್ಲಿ ಬುದ್ಧನು ಪ್ರಥಮ ಬಾರಿಗೆ ತನ್ನ ಸಂದೇಶವನ್ನರುಹಿದ ಪವಿತ್ರ ಸ್ಮರಣೆಯ ಊರು. ನಾವು ಎರಡನೆಯ ದಿನ ಬೆನಾರಿಸ್ ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಾಪಕರಾದ ಎನ್. ಎಂ. ಕುಲಕರ್ಣಿಯವರೊಂದಿಗೆ ಈ ಸ್ಥಳದ ಸಂದರ್ಶನಕ್ಕಾಗಿ ತೆರಳಿದೆವು. ಬರಿಯ ಎಂಟು ಹತ್ತು ಮೈಲು ದೂರದ ದಾರಿ ಅಲ್ಲಿಗೆ. ದಾರಿಯುದ್ದಕ್ಕೂ ಸಾಲುಮರಗಳಿವೆ. ಇಕ್ಕಡೆಗಳಲ್ಲಿ ವಿಶಾಲವಾದ ಮೈದಾನು, ಭೂಮಿ ಹರಡಿದೆ. ವಿರಾಮವಿದ್ದಲ್ಲಿ, ನಡೆದೇ ಹೋಗಿಬರಬಹುದಾದ ಸ್ಥಳವದು. ನಾವು ಆ ಸಂಜೆಯೇ ಮುಂದಿನ ಪಯಣ

ಬೆಳೆಸುವ ನಿಶ್ಚಯ ಮಾಡಿದ್ದರಿಂದ, ಟೇಕ್ಸಿಮಾಡಿಕೊಂಡು ಸಾರನಾಥಕ್ಕೆ ಹೋದೆವು. ಮೊದಲು ಸಂದರ್ಶಿಸಿದ್ದು ಅಲ್ಲಿನ ವಸ್ತು ಪ್ರದರ್ಶನಾಲಯವನ್ನು. ಈ ಸ್ಥಳದಲ್ಲಿ ಕೆಲವು ವರ್ಷಗಳ ಹಿಂದೆ ನೆಲವನ್ನು ಅಗೆದಾಗ ಅನೇಕ ಪ್ರಾಚೀನ ವಾಸ್ತು ಶಿಲ್ಪಗಳ ಕುರುಹು ದೊರೆತುವು. ಆಗ ದೊರೆತ ಹಲವು ಶಿಲ್ಪಗಳ ಮಾದರಿಗಳನ್ನು ಈ ಮಂದಿರದಲ್ಲಿ ಸಂಗ್ರಹಿಸಿ, ಪ್ರದರ್ಶನಕ್ಕಿರಿಸಿದ್ದಾರೆ. ಬುದ್ಧ ದೇವನ ಹಲವಾರು ಸುಂದರ ಪ್ರತಿಮೆಗಳನ್ನು ಇಲ್ಲಿ ಕಾಣಬಹುದು. ಜ್ಞಾನಿ ಬುದ್ಧನ ಉಪದೇಶಮಾಡುತ್ತಿರುವ ಪ್ರತಿಮೆ, ಬೋಧಿಸತ್ವನ ಮನುಷ್ಯ ಪ್ರಮಾಣದ ಶಿಲಾಪ್ರತಿಮೆಗಳಿವೆ. ಆ ವಿಗ್ರಹಗಳ ಮುಖಗಳಲ್ಲಿ ಕಾಣುವ ಕಾಂತಿ, ಶಾಂತಿಗಳು ಇಂದಿಗೂ ಅವನ ತತ್ತ್ವೋಪದೇಶವನ್ನು ನಮಗೆ ಉಣಿಸಬಲ್ಲುವು. ಅದನ್ನು ಹೀರುವಷ್ಟು ಪಕ್ವವಾದ ಮನ ಮಾತ್ರ ನಮಗಿರಬೇಕು. ಇಂಥ ಹತ್ತೆಂಟು ಪ್ರೇಕ್ಷಣೀಯ ವಿಗ್ರಹಗಳನ್ನು ಇಲ್ಲಿ ಕಾಣಬಹುದು. ಅಲ್ಲದೆ ಅಶೋಕ ಸ್ತಂಭದ ಶಿಖರ ಇಲ್ಲೊಂದಿದೆ. ಇಂದು ಆ ರಾಜಕುರುಹನ್ನು ನಮ್ಮ ರಾಷ್ಟ್ರ ಸಂಕೇತವನ್ನಾಗಿ ಇರಿಸಿಕೊಂಡಿದ್ದೇವಷ್ಟೆ. ಎರಡು ಸಾವಿರ ವರ್ಷಗಳ ದೀರ್ಘಮರೆವಿನ ಮೇಲೆ ತಿರುಗಿ,ಅದಕ್ಕೆ ಮನ್ನಣೆ ಸಲ್ಲುತ್ತಿರುವುದು ದೇಹಕ್ಕೆ ಕಲ್ಯಾಣದ ಸೂಚನೆ ಎಂದೇ ಹೇಳಬೇಕು:

ಪ್ರದರ್ಶನಾಲಯದಿಂದ ಮುಂದುವರಿದು ಹೋದರೆ, ನೂರು ಗಜ ದೂರದಲ್ಲಿ, ನೆಲವನ್ನಗೆದ ಪ್ರಾಚ್ಯಶೋಧನೆಯ ಕುರುಹು ಕಾಣುತ್ತದೆ. ಭೂಗತವಾದ ಬೌದ್ಧಯುಗದ ವಾಸ್ತುಗಳ ನೆಲಗಟ್ಟು,ರಚನೆಗಳನ್ನು ಅಲ್ಲಿ ಕಾಣಬಹುದು. ಇಂದಿನವರು ಉಪಯೋಗಿಸುತ್ತಿರುವಂಥ ಇಟ್ಟಿಗೆಗಳಿಂದಲೇ, ಆ ರಚನೆ ಮಾಡಿದ್ದಾರೆ. ತಿರುಗಿ ಇಲ್ಲಿಂದ ಹತ್ತಿಪ್ಪತ್ತು ಗಜ ದೂರಕ್ಕೆ ಉನ್ನತವಾದೊಂದು ಬೌದ್ಧಕಾಲದ ಸ್ತೂಪವಿದೆ. ಹಿರಿದಾದ ತೇರಿನ ಆಕೃತಿಯಲ್ಲಿ ಕಟ್ಟಿದ ಈ ಸ್ತೂಪ, ಅರ್ಧಮರ್ಧ ಕಾಲದ ಹಾವಳಿಗೆ ತುತ್ತಾಗಿದೆ. ಇದರ ಆಕೃತಿಗೂ ಸಾಂಚಿಯಲ್ಲಿ ಕಾಣಬಹುದಾದ ಹಿರಿಯ ಸ್ತೂಪಗಳ ಆಕೃತಿಗೂ ತುಂಬ ವ್ಯತ್ಯಾಸವಿದೆ. ಅಲ್ಲಿಯ ಸ್ತೂಪಗಳು ಅಚ್ಚಳಿಯದೆ ಇಂದಿಗೂ ನಿಂತಿವೆ. ಸ್ತೂಪದ ಹೊರಗಿನ ಕಟಾಂಜನ, ತೋರಣಗಳೂ, ತಮ್ಮ ರಮಣೀಯತೆಯನ್ನು ಸೂಚಿಸುತ್ತವೆ. ಇಲ್ಲಿ—ಅವಾವುವೂ ಇಲ್ಲ.

ಈ ಸ್ತೂಪಕ್ಕೆ ಸಮೀಪವಾಗಿ, ಒಂದು ಅರ್ವಾಚೀನ ಬೌದ್ಧದೇವಾಲಯವನ್ನು ನಿರ್ಮಿಸಿದ್ದಾರೆ. ಬೌದ್ಧ ಧರ್ಮಾಭಿಮಾನಿಗಳಾದ ಅನೇಕ

ವಿದೇಶೀಯರು ಸೇರಿ, ಸಾರ್ವಜನಿಕ ವಂತಿಗೆಯಿಂದ, ಕಟ್ಟಿದ ಚೆಲುವಿನ ದೇವಾಲಯ ಇದು. 'ಮೂಲಗಂಧ ಕುಟಿ' ಎಂದು ಇದಕ್ಕೆ ಹೆಸರು. ಪ್ರಾಯಶಃ ಬುದ್ಧನ ಮೂಲಗ್ರಂಥವನ್ನು ಸ್ಮರಿಸುವ ಕುಟೀರವಿರಬೇಕು. ಈ ಗುಡಿಯನ್ನು ಕಟ್ಟಿ ಇನ್ನೂ ಇಪ್ಪತ್ತು–ಮೂವತ್ತು ವರ್ಷಗಳಾಗಿಲ್ಲ. ಗುಡಿ ಸುಂದರವಾದ ಆಕೃತಿಯುಳ್ಳದು. ಗುಡಿಯ ಒಳಗಡೆ ಬುದ್ಧ ಜೀವನದ ಅನೇಕ ಚಿತ್ರಗಳನ್ನು ಒಬ್ಬ ಜಾಪಾನಿ ಚಿತ್ರಗಾರನಿಂದ ಬರೆಯಿಸಿದ್ದಾರೆ. ೧೯೩೪ರಲ್ಲಿ ನಾನು ಸಾರನಾಥಕ್ಕೆ ಹೋದಾಗ, ಈ ಚಿತ್ರಬರೆಯುವ ಕೆಲಸ ತೊಡಗಿತ್ತಷ್ಟೆ. ಈಗ ಅದು ಸಂಪೂರ್ಣವಾಗಿದೆ. ಚಿತ್ರಗಳು ದೇಶೀಯ ಮತ್ತು ಜಪಾನೀಯ ಚಿತ್ರಶೈಲಿಯ ವಿಚಿತ್ರವಾದೊಂದು ಮೇಳ. ಅವುಗಳಲ್ಲಿ ಕೆಲವೊಂದು ಭಾಗ ಸುಂದರವಾಗಿಯೇ ಇದೆ. ಆದರೆ ಎಲ್ಲವೂ ಒಂದೇ ಮಟ್ಟದ ಕೌಶಲ್ಯವನ್ನು ತೋರುತ್ತಲಿಲ್ಲ. ಅಲ್ಲದೆ ಎಷ್ಟೋ ಕಡೆ ಒಂದು ಚಿತ್ರದಿಂದ,ಇನ್ನೊಂದಕ್ಕೆ ಸಮನಾದ ಹೊಂದಿಕೆಯೂ ಕಾಣಿಸುವುದಿಲ್ಲ. ಈ ಚಿತ್ರಗಳನ್ನು ಬರೆದು ಮುಗಿಸಿ, ಬರಿಯ ಹದಿನೈದು ವರ್ಷಗಳಾದರೂ ಈಗಾಗಲೇ ಗೋಡೆಯ ಗಾರೆಯಲ್ಲಿ ಬಿರುಕುಬಂದಿದೆ. ಅಲ್ಲಿ ಬಳಸಿದ ಕೆಂಪು, ಗುಲಾಬಿ, ಹಸುರು ಬಣ್ಣಗಳು ಇನ್ನೆಷ್ಟು ವರ್ಷ ಉಳಿದಾವೋ ಎನ್ನುವುದು ಕಷ್ಟ. ಬುದ್ಧನನ್ನು ಕುರಿತಾದ ಚಿತ್ರಗಳನ್ನು ಬರೆಯುವ ಯೋಗ್ಯತೆಯುಳ್ಳವರು ನಮ್ಮ ದೇಶದಲ್ಲೇ ಇದ್ದಿಲ್ಲವೇ–ಎಂಬ ನಿರಾಶೆಯೂ ನಮಗುಂಟಾಗುತ್ತದೆ. ಅಜಂತದಲ್ಲಿ ಚಿತ್ರಾಭ್ಯಾಸ ಮಾಡಿದ ನಂದಲಾಲ ವಸುಗಳಂಥ ಕಲಾಕೋವಿದರಿಂದ, ಇದಕ್ಕೂ ಹೆಚ್ಚಿನ ಕೆಲಸ ಮಾಡಿಸಬಹುದಿತ್ತಲ್ಲ— ಎಂಬ ಆಸೆ ನಮಗಾಯಿತು.

ಹೇಗೂ ಇರಲಿ—ಬುದ್ಧ ಜನಿಸಿ, ಬೆಳೆದು, ಬೌದ್ಧನಾಗಿ ತತ್ತ್ವೋಪದೇಶ ಮಾಡಿದ ನೆಲದಲ್ಲಿ, ಅವನ ಅರ್ವಾಚೀನ ಸ್ಮಾರಕ ಒಂದಾದರೂ ಆದುದಕ್ಕೆ ಸಂತೋಷಪಡಬೇಕು. ಹಿಂದುಗಳೇತಕ್ಕೆ ಬೌದ್ಧನನ್ನು ಮರೆಯಬೇಕು? ನಮ್ಮ ಸಂಕಲ್ಪಗಳಲ್ಲಿ ಬುದ್ಧನನ್ನು ಅವತಾರಿಯನ್ನಾಗಿ ಮಾಡಿದ ಮಂತ್ರಗಳು ಸಿಗುತ್ತವೆ. ಪುರಾಣಗಳು ಬುದ್ಧನನ್ನು ಒಂಬತ್ತನೆಯ ಅವತಾರನಾಗಿ ಸಾರಿವೆ. ಆದರೂ ಯಾವುದೋ ಕಾರಣದಿಂದ ಬುದ್ಧ ಧರ್ಮಕ್ಕೂ ಬೋಧಿಸತ್ವನಿಗೂ ಸಲಬೇಕಾದ ಮನ್ನಣೆ ಈ ದೇಶದಲ್ಲಿ ಸಲ್ಲುತ್ತಲಿಲ್ಲ—ಎಂಬುದು ವ್ಯಥೆಯ ಮಾತು. ನನ್ನ ಪಾಲಿಗೆ ಬುದ್ಧ ಇನ್ನೂ ಹಿಂದುವಾಗಿಯೇ

ಉಳಿದಿದ್ದಾನೆ. ಆತ ಕುಲದಲ್ಲಿ ಬ್ರಾಹ್ಮಣ. ತನ್ನ ಕಾಲದ ಶಾಸ್ತ್ರ ಪೌಢಿಮೆಯನ್ನೂ ಸಂಸ್ಕೃತಿಯ ಸಾರವನ್ನೂ ಅರಗಿಸಿಕೊಂಡು, ಕ್ರಾಂತಿಕಾರನಾಗಿ ಮೆರೆದು, ಜಗತ್ತಿಗೆ ತನ್ನದೇ ಆದ ಸಂದೇಶವನ್ನು ಬೀರಿದ. ಅವನ ಸುತ್ತಲಿದ್ದ ಅಂಥ ಬ್ರಾಹ್ಮಣ ಪುರಾಣವಾದಿಗಳಿಗೆ ಆತ ನಾಸ್ತಿಕ, ಅಧರ್ಮಿ ಎಂದೆನಿಸಿದರೂ ವಿಚಾರಶಾಲಿಯಾದ ದೂರದರ್ಶಿಗೆ ಬೌದ್ಧ ಧರ್ಮ ಚೈತನ್ಯಮಯವಾದುದು, ಆಸ್ತಿಕವಾದುದು. ಬದುಕನ್ನು ತಂತ್ರ, ಮಂತ್ರ, ಜಡ ಆರಾಧನೆಗಳಲ್ಲಿ ಸವೆಯುವ ಬದಲು, ಸಜೀವವಾದ ಜೀವನಮಾರ್ಗದಲ್ಲಿ ಕಳೆಯಲು ಪ್ರೇರೇಪಿಸಿದವನು ಬುದ್ಧ. ಬ್ರಹ್ಮನ ಹೆಸರೆತ್ತದೆ ಹೋದರೂ ಲೋಕವನ್ನು ಬಹ್ಮನನ್ನಾಗಿಯೇ ಕಂಡು ಬಾಳಿದ ಮಹಾನುಭಾವನಾತ. ಈ ವ್ಯಕ್ತಿಯ ಸ್ಮರಣಾತೀತವಾದ ಸಾರನಾಥ ನನ್ನ ಪಾಲಿಗೆ ಬಲು ಪ್ರಿಯವಾದ ನೆನಪುಗಳನ್ನುಂಟುಮಾಡುವ ಸ್ಥಳವಾಗಿ ಉಳಿದಿದೆ.

ನಾವು ಸುಮಾರು ಮೂರುತಾಸು ಕಾಲವನ್ನು ಸಾರನಾಥದಲ್ಲಿ ಕಳೆದ ಮೇಲೆ, ಮನೆಗೆ ಮರಳಿದೆವು. ಮುಂದೆಲ್ಲ ಅವಸರವೆ! ಊಟ ಮುಗಿಸಿ ಹೊರಡುವ ತಯಾರಿ ಮಾಡಿ ಡಾ। ಆಚಾರ್ಯರವರ ಅನುಮತಿ ಪಡೆದು, ತಿರುಗಿ ಸೈಕಲ್‌ರಿಕ್ಷಾ ತರಿಸಿಕೊಂಡು ಕೆಂಟೋನ್‌ಮೆಂಟನ್ನು ಸೇರಿದೆವು. ಬೆಳಗ್ಗೆಲ್ಲ ಬುದ್ಧನ ಸ್ಮಾರಕ ಸ್ಥಳಗಳನ್ನು ಕಂಡು, ಭೂತಕಾಲದ ನೆನಪಾಗಿದ್ದರೆ, ಈ ರಿಕ್ಷಾಪ್ರವಾಸ ಮಾತ್ರ ಬಹು ವಿಪರೀತವಾಗಿತ್ತು. ಎಲ್ಲಿಲ್ಲದ ಬಿಸಿಲುಗಾಳಿ ಹಾದಿಯುದ್ದಕ್ಕೂ ಬೀಸುತ್ತಲಿತ್ತು.

ಅದಕ್ಕಿದಿರಾಗಿ ಬಂಡಿಯನ್ನು ತಳ್ಳಿಕೊಂಡು ಹೋಗುವ ಸಾರಥಿಯ ಸಾಹಸ ಚಿತ್ರಹಿಂಸೆಯಾಗಿತ್ತು. ಹಾಗೆಂದೇ ಒಂದೂಕಾಲು ರೂಪಾಯಿ ಬಾಡಿಗೆ ಗೊತ್ತುಮಾಡಿದ ನಾವು, ಅವನಿಗೆ ಎರಡುರೂಪಾಯಿ ಕೊಟ್ಟು ಇಳಿದರೂ ಮನಸ್ಸಿಗೆ ನರವಾಹನರಾಗುವುದು ಉಚಿತವಲ್ಲವೆಂದೇ ತೋರಿತು.

ನಾವು ನಿಲ್ದಾಣವನ್ನು ಮುಟ್ಟುವಾಗಲೇ ಡಾಲ್ಮಿಯಾ ನಗರಕ್ಕೆ ಹೊರಡುವ ಬಂಡಿ—'ತುಫಾನ್ ಮೈಲ್' ಬರುವುದರಲ್ಲಿತ್ತು. ಡಾಲ್ಮಿಯಾ ನಗರ 'ದೇರಿ ಒನ್ ಸೋನ್' ಅಂದರೆ ಸೋನ್ ನದಿ ದಂಡೆಯ ಮೇಲೆ, 'ದೇರಿ' ಎಂಬ ಊರಿಗೆ ಸಮೀಪವಾದದ್ದು. ಕಾಶಿಯಿಂದ ಅಲ್ಲಿಗೆ ಬರಿಯ ೭೪ ಮೈಲುಗಳ ದೂರ. ನೂರು ಮೈಲಿನೊಳಗೆ ಪ್ರವಾಸಮಾಡುವವರಿಗೆ ಉತ್ತರ ಹಿಂದುಸ್ತಾನದ ಮೈಲ್ ಮತ್ತುಎಕ್ಸ್‌ಪ್ರೆಸ್ ಬಂಡಿಗಳಲ್ಲಿ ಟಿಕೇಟನ್ನು ಕೊಡುವುದೇ

ಇಲ್ಲ. ಈಗ ಬರಲಿರುವ ಬಂಡಿ ಮೈಲ್. ಮುಂದೊಂದು ಘಂಟೆಯಲ್ಲಿ ಬರುವಂಥದು ಎಕ್ಸ್‌ಪ್ರೆಸ್. ಇವೆರಡನ್ನೂ ಬಿಟ್ಟರೆ ಕತ್ತಲಾಗುವುದರೊಳಗೆ ನಮಗೆ ದೇರಿಗೆ ಹೋಗುವ ಬಂಡಿಯಿಲ್ಲ. ಆ ಶ್ರಮವನ್ನು ತಪ್ಪಿಸಿಕೊಳ್ಳಲು ನೂರುಮೈಲು ದೂರಕ್ಕೆ ಟಿಕೇಟನ್ನು ಪಡಕೊಂಡೆವು. ಬಂಡಿಯಲ್ಲಿ ಕುಳಿತೆವು. ಬಂಡಿಯೂ ಹೊರಟಿತು. ಮಧ್ಯಾಹ್ನದ ಸೆಕೆ, ಬಿಸಿಯಾದ ಗಾಳಿ ಅಸಹನೀಯವಾಗಿತ್ತು. ಈ ತೆರನಾದ ಹವೆ ನಮ್ಮ ಪ್ರವಾಸದ ಪ್ರಾರಂಭದಲ್ಲೇ ದೊರಕಿದ್ದರೆ ನಾವು ಪೂರ್ಣ ಪ್ರವಾಸಮಾಡದೆ, ಊರಿಗೆ ಮರಳಬೇಕಿತ್ತೋ ಏನೋ. ಅಂತೂ ಮೂರು ತಾಸಿನ ತಾಪದಾಯಕ ಪ್ರಯಾಣವನ್ನು ಮುಗಿಸಿ, ದೇರಿಗೆ ಕಾಲಿಟ್ಟೆವು. ದೇರಿ ಎಂದು ಹೆಸರಿಗಷ್ಟೇ ಆ ಊರು. ಅಲ್ಲಿನ ಹಿರಿಮೆಯು ಡಾಲ್ಮಿಯಾರವರ ಔದ್ಯೋಗಿಕ ಕೇಂದ್ರದಿಂದಾಗಿ. ಈ ಕೇಂದ್ರದಲ್ಲಿ ನನ್ನ ಮಿತ್ರರಾದ, ಮತ್ತು ಪುತ್ತೂರಿನವರೇ ಆದ ಮೊಳಹಳ್ಳಿ ಸಂಜೀವರಾಯರು ವಾಸವಾಗಿದ್ದಾರೆ. ಅವರನ್ನು ಬಹು ದಿನ ನೋಡಿಲ್ಲವೆಂದು ನಾನು ಅಲ್ಲಿಗೆ ಬರಲು ನಿರ್ಧಾರಮಾಡಿದ್ದು.

೮. ಡಾಲ್ಮಿಯಾ ನಗರ

ಡಾಲ್ಮಿಯಾ ನಗರವು ಮೈಸೂರಿನ ಭದ್ರಾವತಿಯಂತೆ, ತಾತಾರವರ ಜಾಮ್‌ಷದ್‌ಪುರದಂತೆ ಒಂದು ಪ್ರಸಿದ್ಧವಾದ ಔದ್ಯೋಗಿಕ ಕೇಂದ್ರ.ಅಲ್ಲಿನ ಸಕ್ಕರೆ, ಸಿಮೆಂಟು, ಎಣ್ಣೆ, ಕಾಗದದ ಕಾರ್ಖಾನೆಗಳಿಂದಾಗಿ ಒಂದು ಹೊಸ ಪಟ್ಟಣವೇ ಆ ಊರಿನಲ್ಲಿ ನಿರ್ಮಾಣವಾಗಿದೆ. ಈ ಒಟ್ಟು ಕಾರ್ಖಾನೆಯಿಂದಾಗಿ ಅಲ್ಲಿ ಹತ್ತಿಪ್ಪತ್ತು ಸಾವಿರ ಕೆಲಸಗಾರರು ದುಡಿಯುತ್ತಿದ್ದಾರೆ. ಅವರ ಸಲುವಾಗಿ ವಸತಿಗಳು, ಶಾಲೆಗಳು, ಆಸ್ಪತ್ರೆಗಳು ರಚಿತವಾಗಿವೆ. ಈ ನಗರಕ್ಕೆ ಬೇಕಾದ ವಿದ್ಯುತ್ತನ್ನು ಅಲ್ಲಿಯೇ ಪೂರೈಸುತ್ತಿದ್ದಾರೆ. ಈಗಾಗಲೇ ಸುಮಾರು ಇಪ್ಪತ್ತು ಸಾವಿರ ಕಿಲೋವಾಟ್ ಶಕ್ತಿಯನ್ನು ಅಲ್ಲಿ ಹುಟ್ಟಿಸುತ್ತಿದ್ದಾರೆ. ಈ ಊರು ಬಿಹಾರಕ್ಕೆ ಸೇರುವ ಭಾಗ. ಬಿಹಾರದಲ್ಲಿ ಕಲ್ಲಿದ್ದಲು ದೊರಕುತ್ತದೆಂದು ಕೇಳಿದ್ದೀರಲ್ಲ. ಆ ಕಲ್ಲಿದ್ದಲೇ ಇಲ್ಲಿ ಉಗಿಯ ಟರ್ಬೈನುಗಳನ್ನು ಕಾಯಿಸಿ, ವಿದ್ಯುತ್ತನ್ನು ಒದಗಿಸುತ್ತದೆ. ಈಗ ಇದರ ಇಮ್ಮಡಿ ಗಾತ್ರದ ಹೊಸ ಟರ್ಬೈನುಗಳನ್ನು ಹೂಡುತ್ತಿದ್ದಾರೆ. ಊರಿಗೆ ಬೇಕಾದ ಶಕ್ತಿ ಹೀಗೆ ಪೂರೈಕೆಯಾದರೆ ಇನ್ನು ಬೇಕಾದದ್ದು ನೀರು. 'ದೇರಿ' ನದಿಯ ಕಾಲುವೆಯೊಂದು ಈ ಊರಿನ ಮಗ್ಗುಲಿನಲ್ಲೇ ಹರಿಯುತ್ತಿದೆ. ಆದರೆ ಕಾರ್ಖಾನೆಯವರು ಸೋನ್ ನದಿಯ ದಂಡೆಯಲ್ಲಿ ಕೆಲವೊಂದು 'ಬೋರ್ ವೆಲ್'ಗಳನ್ನು ನಿರ್ಮಿಸಿ, ಅದರಿಂದ ಬೇಕಷ್ಟು ನೀರನ್ನು ಕಾರ್ಖಾನೆಗಳಿಗೂ ಜನವಸತಿಗೂ ದೊರಕಿಸಿಕೊಳ್ಳುತ್ತಿದ್ದಾರೆ.

ನನ್ನ ಮಿತ್ರರಾದ ಸಂಜೀವರಾಯರು ಡಾಲ್ಮಿಯಾ ನಗರದ ವಿದ್ಯುತ್ತಿನ ಮುಖ್ಯ ಅಧಿಕಾರಿಗಳಾಗಿದ್ದಾರೆ.ನಾನು ಇಲ್ಲಿಗೆ ಬರುವುದಕ್ಕೆ ಸ್ನೇಹಿತರ ಸರಸ ಸಲ್ಲಾಪದ ಜತೆಯಲ್ಲಿ ಬೇರೊಂದು ಉದ್ದೇಶವನ್ನೂ ಇರಿಸಿಕೊಂಡಿದ್ದೆ. ಅದು ಇಲ್ಲಿನ ಉದ್ಯೋಗಗಳ ಚಲಚ್ಚಿತ್ರ ಸಂಗ್ರಹಿಸಬೇಕೆಂದು. ಅದಕ್ಕೆ ಬೇಕಾಗುವ ನೆರವನ್ನು ಕೊಡಲು ಗೆಳೆಯರು ಇದ್ದೇ ಇದ್ದಾರೆ. ನಾವು ಇಲ್ಲಿ ಕಳೆದ ಎರಡು ದಿನಗಳಲ್ಲಿಯೂ ಬಹುಭಾಗವನ್ನು ಈ ಉದ್ದೇಶಕ್ಕಾಗಿ ಮೀಸಲಾಗಿರಿಸಿದ್ದೆವು.

ನಾವಿದ್ದ ಎರಡು ದಿನಗಳಲ್ಲೂ ಹವೆ ಮಾತ್ರ ನಮಗೆ ಕೃಪೆಮಾಡಲಿಲ್ಲ. ಏನು ಉರಿಬಿಸಿಲ ಜಳ! ಬೀಸುವಗಾಳಿ ಉರಿಯನ್ನೇ ಹೊತ್ತು ತರುವಂತಿತ್ತು.

ಊರಿನಲ್ಲಿ ಮರಮಟ್ಟುಗಳ ಸುಳಿವೂ ಕಡಿಮೆ. ಹೀಗಾಗಿ ಬಿಸಿಲ ಜಳ ನೋಡಿ
ಕಣ್ಣಿನ ಪಸೆಯಾರಿ ಕಣ್ಣಾಲಿ ಊದಿಕೊಳ್ಳುತ್ತಿತ್ತು. ಬರಿಯ ಎರಡು ದಿನಗಳ
ಹವೆಯೇ ನಮ್ಮನ್ನು ಕಂಗೆಡಿಸಿತು. ಆದರೆ ಬಿಹಾರಿಗಳು ಅಂಥ ಮೂರು
ತಿಂಗಳ ಬೇಸಿಗೆಯನ್ನು ಸಹಿಸಬೇಕಾಗುತ್ತದೆ. ಇಲ್ಲಿ ಬೇಸಿಗೆಯ ಉಷ್ಣತೆ
೧೧೫°ಗೆ ಮುಟ್ಟುತ್ತದಂತೆ. ನಮಗೆ ದೊರಕಿದ್ದು ಬರಿಯ ೧೦೩°ಯ ಉಷ್ಣತೆ.
ಅದಕ್ಕೇನೇ ಬೆಂದೆವು ನಾವು. ನಮ್ಮ ಮಿತ್ರರೆನ್ನುತ್ತಾರೆ "ನಿಮ್ಮ ಪುಣ್ಯಕ್ಕೆ
ಸಿಮೆಂಟ್ ಗಿರಣಿ ಈಗ ಕೆಲಸಮಾಡುತ್ತಲಿಲ್ಲ. ಕುಲುಮೆಯನ್ನು ಪುನರು
ಜ್ಜೀವನಗೊಳಿಸುತ್ತಿರುವುದರಿಂದ ಆ ಕೆಲಸ ನಿಂತಿದೆ. ಅದೂ ನಡೆಯು
ತ್ತಿದ್ದರೆ ಸಿಮೆಂಟಿನ ಧೂಳೆಲ್ಲ ನಗರದ ಹವೆಯಲ್ಲಿ ತುಂಬಿಹೋಗುತ್ತದೆ.
ಆಗ ಉಸಿರಾಡುವುದಕ್ಕೂ ಕಷ್ಟವಾಗುತ್ತದೆ. ಹವೆ ಧೂಳಿನಿಂದಾಗಿ ಮಬ್ಬು
ಗೊಳ್ಳುತ್ತದೆ" ಎಂದು.

ನಾವು ಹೋದ ದಿನ ಸಂಜೆ ಹವೆಯ ತಾಪ ಸಹಿಸಲಾರದೆ, ತಣ್ಣೀರ
ಸ್ನಾನಮಾಡಿ, ಉಡಿಗೆ ಬದಲಿಸಿ, ಕತ್ತಲು ಹರಿಯುತ್ತಲೆ ಅಲೆದಾಟಕ್ಕೆ ಹೊ
ರಟೆವು. ಶ್ರೀಮತಿ ಮತ್ತು ಶ್ರೀಮಾನ್ ಸಂಜೀವರಾಯರುಗಳ ಜತೆಯಲ್ಲೇ
ಹೊರಟೆವು. ಅವರದ್ದೇನೋ ಕ್ಲಬ್ಬು ಇದೆಯಂತೆ. ಅಲ್ಲಿಗೆ ಹೋದೆವು.
ಕ್ಲಬ್ಬೇನೋ ಬಲು ದೂರದಲ್ಲಿರಲಿಲ್ಲ. ಅವರ ಮನೆಗೆ ತೀರ ಸಮೀಪವಾ
ಗಿತ್ತು. ಕ್ಲಬ್ ಸೇರುವ ಮೊದಲೇ ನಮಗೆ ಒಂದು ದೇವಾಲಯದ ಆವ
ರಣ ಕಾಣಿಸಿತು. ಅಲ್ಲಿ ಮೂರು ದೇವರ ಗುಡಿಗಳಿದ್ದುವು. ಅರ್ವಾಚೀನ
ಬಂಗಲೆಯೊಂದರಲ್ಲಿ ಮೂರು ಚಂದ್ರಕಾಂತ ಶಿಲೆಯ ಮೂರ್ತಿಗಳನ್ನಿರಿಸಿ
ದ್ದರು. ನಾಲ್ಕಾರು ಮಂದಿ ಭಕ್ತರೂ ಗುಡಿಯ ಮುಂದೆ ಸೇರಿದ್ದರು. ಈ
ಹೊಸಯುಗದ ದೇವಾಲಯಗಳನ್ನು ಕಂಡರೆ ನನಗೇಕೋ ಬೇಸರ. 'ಮಂ
ದಿರ'ವೆಂಬ ಭಾವನೆಯೇ ಅವುಗಳಿಂದ ಉಂಟಾಗುವುದಿಲ್ಲ. ಹಳೆಯ ದೇ
ವಾಲಯಗಳಲ್ಲಿ ಗರ್ಭಗುಡಿಯಲ್ಲಿ ಕತ್ತಲು ತುಂಬಿಕೊಂಡಿದ್ದು ನೀಲಾಂ
ಜನದ ಬೆಳಕಿನಲ್ಲಿ ವಿಗ್ರಹ ಮಸುಕು ಮಸುಕಾಗಿ ಕಾಣುವಾಗ ಮನಸ್ಸನ್ನು
ಏಕಾಗ್ರಗೊಳಿಸುವುದು ಸುಲಭವಾಗುತ್ತದೆ; ಮನಸ್ಸಿಗೂ ಶಾಂತಿ ಬರು
ತ್ತದೆ. ನಮ್ಮ ನವೀನ ಮಂದಿರಗಳಲ್ಲಿ ನಾಲ್ಕು ಸುತ್ತಲೂ ಸಮಾನ ಬೆಳಕು,
ಗದ್ದಲ ತುಂಬಿಯೇ ಇರುತ್ತದೆ. ಮನಸ್ಸು ಹೊರಗಿನ ತಳಮಳದಲ್ಲಿ ಭಾಗಿ
ಯಾಗಿ, ಅಲ್ಲಿ ಶಾಂತಿಯನ್ನು ದೊರಕಿಸುವುದು ಕಷ್ಟ. ಎಲ್ಲ ಸಂಪ್ರದಾಯ

ಗಳನ್ನೂ ನಾವು ಅನುಕರಣೆಯೇನೋ ಮಾಡುತ್ತೇವೆ. ಆದರೆ ಅನುಕರಣೆಯ ಇತಿಮಿತಿಗಳನ್ನು ಮಾತ್ರ ಎಣಿಸುವುದಿಲ್ಲ. ಬೇಕಾದಲ್ಲಿ ಬಿಟ್ಟು, ಬೇಡವಾದಲ್ಲಿ ಅನುಕರಣೆ ಮಾಡುವುದೇ ಹೆಚ್ಚು. ದೇವಾಲಯದ ಸಂದರ್ಶನವಾದ ಬಳಿಕ, ಅದರ ಮಗ್ಗುಲಿನ ಶಾಂತ ಆವರಣದಲ್ಲಿದ್ದ ನಮ್ಮ ಗೆಳೆಯರ ಕ್ಲಬ್ಬಿಗೆ ಹೋದೆವು. ಸಂಜೀವರಾಯರು ಅವರ ಮಿತ್ರರಿಬ್ಬರು ದಂಪತಿಯುಕ್ತರಾಗಿ ಕುಳಿತಿದ್ದರು. ಅವರು ಕರೆಯದಿದ್ದರೆ ನಾವು ಅಲ್ಲಿ ಕಾಲು ಇರಿಸಲು ಅನುಮಾನಿಸಬೇಕಿತ್ತು. ನಾವಿಬ್ಬರು ವಿವಾಹಿತರಾಗಿದ್ದರೂ ಪತಿತ್ವ ಮಾತ್ರ ನಮ್ಮಲ್ಲಿತ್ತು. ನಮ್ಮ 'ಹೋಮು'ಗಳನ್ನು ಮನೆಯಲ್ಲೇ ಬಿಟ್ಟು ಬಂದಿದ್ದೆವಲ್ಲ—ಅಂತೂ ಅವರದು ಗೃಹಸ್ಥರ ಕ್ಲಬ್. ಅವರು ಕರೆದಾದುದರಿಂದ ಹೋಗಿ ಧೈರ್ಯವಾಗಿ ಕುಳಿತೆವು. ಮೇಜಿನ ಮೇಲೆ ಚಾ, ತಿನಿಸುಗಳು ಬಂದೆರಗಿದುವು. ಇದು ಕ್ಲಬ್ಬೋ, ರೆಸ್ಟೋರಾಂಟೋ ಎಂಬ ಅನುಮಾನವಾಯಿತು ನಮಗೆ. ಅನಂತರ ಇನ್ನೊಂದು ಜತೆ ಬಂಗಾಲಿ ದಂಪತಿಗಳು ಆಗಮಿಸಿದರು. ಅವರು ಬರುತ್ತಲೇ—ವಿಚಾರಲಹರಿಯೇ ಹೊರಟಿತು. ವಿಷಯ—ನಾನಾತೆರದ ಕಾಯಿಲೆಗಳು, ಅವಕ್ಕೆ 'ಹೊಮಿಯೊಪತಿ' ಸರ್ವೋತ್ಕೃಷ್ಟ ಚಿಕಿತ್ಸಾ ಮಾರ್ಗ—ಇದನ್ನು ಕುರಿತೇ ಸಂಭಾಷಣೆ ಸಾಗಿತು. ನಮ್ಮಿಬ್ಬರನ್ನು ಬಿಟ್ಟರೆ ಆ ಉಳಿದ ಆರು ಮಂದಿಯೂ ಡಾಕ್ಟರರಾಗಿಯೇ ಕಾಣಿಸಿದರು ನಮಗೆ. ಅವರ ಮಾತಿಗೊಂದಿಷ್ಟು ಒಗ್ಗರಣೆ ಹಾಕುವ ಎಂದರೆ, ನಮಗೆ ಎಲೋಪತಿ, ಆಯುರ್ವೇದ, ಯುನಾನಿ ಇವುಗಳಲ್ಲಿ ಒಂದೇ ಒಂದು ವಿಷಯವಾದರೂ ತಿಳಿದಿರಬೇಡವೇ! ಅಂತೂ ಅವರ ಸಭೆ ಮುಗಿಯುವಾಗ, ಕೊಳ್ಳುವ ರೋಗಿಗಳಿದ್ದರೆ, ನಾವೂ ಒಂದಿಷ್ಟು ಮದ್ದನ್ನು ಯಾರಿಗಾದರೂ ತಿನಿಸಬಹುದೆಂಬ ಧೈರ್ಯ ಉಂಟಾಯಿತು.

ರಾತ್ರಿ ಮನೆಗೆ ಬಂದು, ಊಟ ಮುಗಿಸಿದ ಮೇಲೆ, ಸಂಜೀವರಾಯರೊಡನೆ ಸಂಭಾಷಣೆಗೆಂದು ಕುಳಿತೆವು. ರಾಯರೊಡನೆ ಸಂಭಾಷಣೆ ಅಂದರೆ ಎಲ್ಲರೂ ಮಾತನಾಡಿದರೆಂದರ್ಥವಲ್ಲ. ಕಾರಣ ಸಂಜೀವರಾಯರು ಮಾತನಾಡತೊಡಗಿದರೆ ಎಲ್ಲರಿಗೂ ಮಾತನಾಡುವ ಅವಕಾಶವೆಲ್ಲಿ? ನಾವಂತು ಕೇಳುವ ಕುತೂಹಲದಿಂದಲೇ ಕುಳಿತೆವು. ಇಂತಹ ಸದ್ಬುದ್ಧಿ ನಮಗೆ ಬರುವುದು ಅಪೂರ್ವ. ರಾಯರು ತಮ್ಮ ಅಮೇರಿಕಾದ ಪ್ರವಾಸಾನುಭವಗಳನ್ನು ವಿವರವಾಗಿ ಹೇಳುತ್ತಿದ್ದರು; 'ಕೇಳೋಣ, ಕೇಳೋಣ' ಎಂದನಿಸು

ತ್ತಲೇ ಇತ್ತು. ಅಮೇರಿಕವನ್ನು ನೋಡಿ ಬಂದ ಮೇಲೆ ಅವರಿಗೆ— ನಮ್ಮ ದೇಶದ ಜನಗಳ ನಡವಳಿಕೆ, ಶಿಸ್ತು, ಉದ್ಯಮಗಳ ವಿಚಾರದಲ್ಲಿ ಎಲ್ಲಿಲ್ಲದ ತಾತ್ಸಾರ ಉಂಟಾಗಿತ್ತು. ನಮ್ಮ ಶೀಲ, ಪ್ರಾಮಾಣಿಕತೆಗಳ ವಿಚಾರದಲ್ಲಿ ಸಂಪೂರ್ಣ ನಿರಾಶೆಯೇ ಬಂದಿತ್ತು. ಇದು ಅವರೊಬ್ಬರದೇ ಅಭಿಪ್ರಾಯವಲ್ಲ. ವಿದೇಶಕ್ಕೆ ಹೋಗಿ ಬಂದ ನನ್ನ ಅನೇಕ ಮಿತ್ರರ ಅಭಿಪ್ರಾಯವೂ ಹೀಗೆಯೇ ಇದೆ. ನಮಗೇನೋ ಸ್ವಾತಂತ್ರ್ಯ ಬಂದಿದೆ. ಬಲು ದೊಡ್ಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾವು ಹುಟ್ಟಿದ್ದೇವೆ. ಬಾಯಿ ತೆರೆದರೆ ಆಕಾಶ ಪುರಾಣದ ಮಾತುಗಳನ್ನೂ ಆಡುತ್ತೇವೆ. ಆದರೆ ಜೀವನದ ಸಮಸ್ಯೆಗಳನ್ನು ಎದುರಿಸಬೇಕಾದವನಲ್ಲಿ ಇರಬೇಕಾದ ಯಾವ ಆವಶ್ಯಕ ಗುಣಗಳೂ ನಮ್ಮ ಜನರಲ್ಲಿ ಕಾಣಿಸುತ್ತಲಿಲ್ಲ. ಜನಸಾಮಾನ್ಯರೂ, ಅವರ ಮುಂದಾಳುಗಳೆನ್ನಿಸುವವರೂ ಒಂದೇ ಮಟ್ಟದ ವ್ಯಕ್ತಿಗಳೆನಿಸಿದ್ದಾರೆ.ಹಕ್ಕುಗಳಿಗಾಗಿ ಕಾದಾಡುವವರೇ ಎಲ್ಲರು. ವೀರ ಕಾದಾಟವನ್ನೇನೋ ಮಾಡುತ್ತೇವೆ. ಆದರೆ ನಮ್ಮ ನಮ್ಮ ಕರ್ತವ್ಯಗಳ ವಿಚಾರ ಬಂದಲ್ಲಿ, ಬೇಜವಾಬ್ದಾರಿಯಿಂದಲೇ ವರ್ತಿಸುತ್ತೇವೆ. ಇದನ್ನೆಲ್ಲ ಕಂಡರೆ ಶತಮಾನ ಸಂದರೂ ನಮಗೆ ದೊರಕಿದ ಸ್ವಾತಂತ್ರ್ಯದ ಲಾಭ ದೊರಕುತ್ತದೆ ಎನ್ನುವುದು ಅನುಮಾನದ ವಿಚಾರ.

ಮರುದಿನ ಡಾಲ್ಮಿಯಾ ನಗರದ ಕಾರ್ಖಾನೆಗಳನ್ನು ನೋಡುವುದಕ್ಕೆ ಹೋದೆವು. ಇಲ್ಲಿ ತುಂಬ ಹಣ ಸುರಿದು ಉದ್ಯಮ ನಡೆಸುತ್ತಿದ್ದಾರೆ. ಆದರೆ ಉದ್ಯಮಶೀಲತೆಗೆ ಪ್ರತಿಯಾದ ಜಡ ಪ್ರವೃತ್ತಿ, ಮೈಗಳ್ಳತನ ತುಂಬ ಕಣ್ಣಿಗೆ ಕಾಣಿಸುತ್ತದೆ. ಆಡಳಿತೆಯಲ್ಲಿ ಅಪನಂಬಿಕೆ, ಕೆಲಸಗಾರರಲ್ಲಿ ಮೈಗಳ್ಳತನ,ಉದ್ದಿಮೆಗಾರರಲ್ಲಿ ಬರಿಯ ಲಾಭದ ಲಾಲಸೆ,ಕೂಲಿಗಾರ ಮುಖಂಡರಲ್ಲಿ ರಾಜಕೀಯಕ್ಕಾಗಿ ಬಡವರ ಕಷ್ಟವನ್ನು ದುರುಪಯೋಗಪಡಿಸಿಕೊಳ್ಳುವ ವಂಚನೆ-ಪ್ರತಿಯೊಂದು ದುರ್ಲಕ್ಷಣವೂ ಸೇರಿಕೊಂಡು ಉದ್ಯಮದ ಬೆಳವಣಿಗೆಗೆ ವಿಘಾತಕವಾಗುತ್ತಿವೆ. ಕೆಲಸಮಾಡುವುದನ್ನು ಎಷ್ಟೆಷ್ಟು ವಿಧದಿಂದ ತಪ್ಪಿಸಬಹುದೋ, ಮುಂದುವರಿಸಬಹುದೋ ಅಷ್ಟೆಲ್ಲ ಪ್ರಯತ್ನ ಮಾಡುವ ಜನವೇ ಸುತ್ತಲೆಲ್ಲ. ಕೆಲವು ದಿನಗಳ ಹಿಂದೆ, ಅಲ್ಲಿ ಬೆಂಕಿಯ ಪ್ರಕರಣವೂ ಒಂದು ನಡೆದಿತ್ತು. ದೊಡ್ಡದೊಂದು ಕಾರ್ಖಾನೆಗೇನೆ ಕೆಲಸಗಾರರು ಬೆಂಕಿ ಹೊತ್ತಿಸಿದ್ದರು. ಅಂಥ ಸೇಡಿನ ಪರಿಣಾಮವನ್ನು ಸಮಾಜವೇ ಹೊರಬೇಕಾಗುತ್ತದೆ-ಎಂಬ ಅರಿವು ನಮ್ಮ ಜನಕ್ಕೆ ಇರುವಂತಿಲ್ಲ. ನಾವು

ಅಲ್ಲಿದ್ದ ವೇಳೆಗೆ ತುಸು ಹಿಂದು ಮುಂದೆ, ಮೂರು ಹಿರಿಯ ರೈಲ್ವೆ ಅಪಘಾತಗಳ ವಿಚಾರವಾಗಿ ಪತ್ರಿಕೆಯಲ್ಲಿ ಓದಿದ್ದೆವು. ನಮ್ಮ ಕಮ್ಯುನಿಸ್ಟ್ ಬಾಂಧವರು ದೇಶಹಿತವನ್ನು ಸಾಧಿಸುವ ಈ ವಿಚಿತ್ರ ರೀತಿಯನ್ನು ಕಂಡರೆ "ಮಗಳು ವಿಧವೆಯಾದರೂ ಚಿಂತೆಯಿಲ್ಲ;ಅಳಿಯ ಸಾಯಲೇ ಬೇಕು" ಎಂಬ ಗಾದೆಯ ಮಾತಿನ ನೆನಪಾಗುತ್ತದೆ. ಶ್ರೀಮಂತರು ಬಡವರನ್ನು ಹಣದ ವಿಚಾರದಲ್ಲಿ ಸುಲಿಯುವ ನೀತಿಯನ್ನು ಖಂಡಿಸುವ ಜನರೇ, ಕೂಲಿಗಾರರ ಅಜ್ಞಾನವನ್ನು ಸುಲಿದು ತಮ್ಮ ರಾಜಕೀಯದ ಬೇಳೆ ಬೇಯಿಸುವುದು ನ್ಯಾಯವೆಂದು ತಿಳಿಯುವಂತೆ ಕಾಣುತ್ತದೆ. ಒಂದು ಇನ್ನೊಂದಕ್ಕಿಂತ ಹೀನವಾದ ಸುಲಿಗೆ ಎಂದು ತಿಳಿಯುವ ತನಕ, ನಮ್ಮ ದೇಶ ಮುಂದುವರಿಯಲಾರದು.

ಇಲ್ಲಿನ ಸಿಮೆಂಟ್ ಕಾರ್ಖಾನೆಗೆ ಬೇಕಾಗುವ ಕಚ್ಚಾ ಮಾಲುಗಳು—ಅಂದರೆ ಸುಣ್ಣದ ಕಲ್ಲು, ಕಲ್ಲಿದ್ದಲು, ಬಿಹಾರದಲ್ಲೇ ಸಿಗುತ್ತವೆ. ಜಿಪ್ಸಮ್ ಮಾತ್ರ-ಪಾಕಿಸ್ತಾನದಿಂದ ಬರಬೇಕು. ಈ ಮೂರು ವಸ್ತುಗಳನ್ನು ಯಂತ್ರಗಳಲ್ಲಿ ಸಾಗಿಸಿ, ಯಂತ್ರಗಳಿಂದಲೇ ಪುಡಿ ಮಾಡಿ, ನೀರಿನಿಂದ ಮಡ್ಡಿಯಾಗಿ ಮಾಡಿ ಕಾದಿರಿಸಬೇಕಾಗುತ್ತದೆ. ಅದನ್ನು ಕುಲುಮೆಗಳಲ್ಲಿ ಸುಟ್ಟು, ಸಿಮೆಂಟಾಗಿ ಪರಿವರ್ತಿಸಬೇಕು. ಈ ಕುಲುಮೆಯೇ ಈ ಉದ್ಯೋಗದ ವೈಶಿಷ್ಟ್ಯ. ಬಹಳ ಎತ್ತರವಾದ, ದೊಡ್ಡದಾದ ಗೋಡೆಗಳಿಂದ ಆವೃತವಾದ ಕುಲುಮೆಯದು. ಅಲ್ಲಿಗೆ ಬಂದು ಬೀಳುವ ಕಚ್ಚಾ ಮಾಲಿನ ಮಡ್ಡಿ, ಸುಮಾರು ಐನೂರು ಅಡಿ ಉದ್ದವಾಗಿಯೂ ಹದಿನೆರಡು ಅಡಿ ಗಾತ್ರವಾಗಿಯೂ ಇರುವ ನೀಳವಾದ ಉಕ್ಕಿನ ಕೊಳವೆಯಲ್ಲಿ ಹರಿಯುತ್ತದೆ. ಹಾಕಿದ ಬೆಂಕಿ, ಕುಲಿಮೆಯುದ್ದಕ್ಕೂ ಹೋಗುವ ಏರ್ಪಾಟಿದೆ. ಒಳಗೆ ಬರುತ್ತಿರುವ ಮಡ್ಡಿ ನಿಂತಲ್ಲೇ ನಿಲ್ಲದಂತೆ ಮಾಡಲು ಈ ಉಕ್ಕಿನ ಕೊಳವೆಯೇ ತನ್ನ ಅಚ್ಚಿನಲ್ಲಿ ತಿರುಗುತ್ತದೆ. ಎಲ್ಲವೂ ಅಪಾರ ಶಕ್ತಿಯಿಂದಾಗುವ ಕೆಲಸ. ಕುಲುಮೆಯ ಬೆಂಕಿ ದಿನ ದಿನ ಉರಿಯುತ್ತಲಿರಬೇಕು. ದಿನದ ಇಪ್ಪತ್ತನಾಲ್ಕು ತಾಸೂ ಕೆಲಸ ನಡೆಯುತ್ತಿರಬೇಕು. ವರ್ಷಕ್ಕೊಂದೆರಡು ಬಾರಿ ಅದನ್ನು ಚೊಕ್ಕಮಾಡುವಾಗ ಮಾತ್ರ, ನಿಲ್ಲಿಸುವ ಸಂಭವವಿದೆ. ಹೀಗೆ ಅದು ದಿನಕ್ಕೆ ಇಪ್ಪತ್ತನಾಲ್ಕು ತಾಸು ವಿರಾಮವಿಲ್ಲದೆ ಚಲಿಸಿದರೆ ಮಾತ್ರ ಲಾಭದಾಯಕವಾದೀತು. ಒಂದು ಕುಲುಮೆಯಿಂದ ದಿನಕ್ಕೆ ೫೦೦ ಟನ್ ಸಿಮೆಂಟಾಗುವಂಥ ಏರ್ಪಾಟಿದೆ. ನಾವು ಕಂಡಾಗ ಅಂಥದೇ

ಇನ್ನೊಂದು ಕುಲುಮೆಯನ್ನು ಮೊದಲ ಕುಲುಮೆಯ ಮಗ್ಗುಲಲ್ಲಿ,ರಚಿಸುತ್ತಿದ್ದರು. ಉಕ್ಕಿನ ಈ ಯುಗದಲ್ಲಿ ನಮ್ಮ ನೂರಾರು ಬಗೆಯ ಕಟ್ಟಡ, ಕಾಲುವೆಗಳಿಗೆ ಸಿಮೆಂಟು ಅನಿವಾರ್ಯ ವಸ್ತುವಾಗಿ ಬಂದಿದೆ. ಈ ಉದ್ಯೋಗ ಎಷ್ಟು ಬೆಳೆದರೂ ನಮ್ಮ ಆಂತರಿಕ ಆವಶ್ಯಕತೆ ಪೂರೈಸಬೇಕಾದರೆ ಇನ್ನೂ ಹಲವು ವರ್ಷಗಳು ಬೇಕಾದಾವು. ಈ ಉದ್ಯೋಗಕ್ಕೆ ಬೇಕಾಗುವ ಕಚ್ಚಾ ಮಾಲುಗಳೂ,ಉತ್ಪನ್ನವಾಗುವ ಸಿಮೆಂಟೂ,ಗಾತ್ರದಲ್ಲಿ ಹೆಚ್ಚಿನವು. ಅವನ್ನು ಸಾಗಿಸುವುದಕ್ಕೆ, ಸಂಗ್ರಹಿಸುವುದಕ್ಕೆ, ಪುಡಿಮಾಡುವುದಕ್ಕೆ ತುಂಬ ಶಕ್ತಿ ಬೇಕು. ಸ್ವಯಂಚಾಲಕ ಯಂತ್ರಗಳುಬೇಕು. ತಯಾರಾದ ಸಿಮೆಂಟು ಕಾರ್ಖಾನೆಯಿಂದ ಹೊರಗೆ ಹೋಗುವ ತನಕ, ಹವೆಗೆ ಕೆಟ್ಟುಹೋಗದಂತೆ ಇರಿಸಲು ಬೃಹದಾಕಾರದ 'ಸೈಲೋಜ್' (ದಾಸ್ತಾನಿನ ಉಗ್ರಾಣ)ಗಳು ಬೇಕು. ಈ ಕಾರ್ಖಾನೆಯನ್ನೆಲ್ಲ ನೋಡಿ ಮುಗಿಸಿದೆವು.

ಅನಂತರ ನಾವು ಹೋದದ್ದು ಇಲ್ಲಿನ ಕಾಗದದ ಕಾರ್ಖಾನೆಯನ್ನು ನೋಡಲು. ಇದು ಅರ್ವಾಚೀನಯುಗದಲ್ಲಿ ಜ್ಞಾನಪ್ರಸಾರಕ್ಕೆ ಅವಶ್ಯವಾದ ಒಂದು ಉದ್ಯೋಗ. ನಮ್ಮ ದೇಶದಲ್ಲಿ ತಲಾ ಒಂದರ ಒಂದೂವರೆ ರಾತಲು ಕಾಗದ ಬಳಸುತ್ತಿದ್ದರೆ ಸಂಯುಕ್ತ ಅಮೇರಿಕಾದಲ್ಲಿ ಸುಮಾರು ಎರಡೆರಡು ಮಣ ಕಾಗದ ಒಬ್ಬೊಬ್ಬನಿಗೆ ಬೇಕಾಗುತ್ತದೆ. ಇದರಲ್ಲಿ ಕಟ್ಟುವ ಕಾಗದವೂ ಸೇರಿತು; ಬರೆಯುವ ಕಾಗದವೂ ಸೇರಿತು; ಓದುವ ಕಾಗದವೂ ಸೇರಿತು. ಹೆಚ್ಚಿನ ಭಾಗ ಓದುವ ಕಾಗದದ ನಿರ್ಮಾಣಕ್ಕಾಗಿ ಬೇಕಾಗುತ್ತದೆ. ಒಂದು ದೇಶ ಬಳಸುವ ಕಾಗದದ ತೂಕದಿಂದ ಅಲ್ಲಿನ ಜನತೆಯಲ್ಲಿ ವಿದ್ಯಾಭ್ಯಾಸ ಎಷ್ಟು ಮುಂದುವರಿದಿದೆಯೆಂದು ಅಳೆಯಬಹುದು.

ಇಲ್ಲಿಯ ಕಾಗದದ ಕಾರ್ಖಾನೆಗೆ ಬಿಹಾರ್, ನೇಪಾಳದ ಟೆರಾಯಿಯ ಸಸ್ಯ ಉತ್ಪತ್ತಿಯಾದ ಬಿದಿರು ಒಂದು ಮುಖ್ಯ ವಸ್ತು; ಅದೇ ಮೂಲ ವಸ್ತು. ಸವರಿ ತಂದ ಬಿದಿರುಗಳನ್ನು ಕಟ್ಟುಕಟ್ಟುಗಳಾಗಿ ಮಾಡಿ ಯಂತ್ರಗಳಿಗೆ ಕೊಡುತ್ತಾರೆ. ಯಂತ್ರ ಅದನ್ನು ಎತ್ತಿ ಕೆಲವುವಿಧದ ಗಾಣಗಳಿಗೆ ಕೊಡುತ್ತದೆ. ಈ ಗಾಣಗಳಲ್ಲಿ ಬಿದಿರಿನ ಕಾಂಡ ಪುಡಿಪುಡಿಯಾಗಿ ಮುಂದುವರಿದು ಭಾರಿಯ ಕಡಾಯಿಗಳಿಗೆ ಹೋಗಿಬೀಳುತ್ತದೆ. ಅಲ್ಲಿ ಕಾಸ್ಟಿಕ್ ಸೋಡಾ ಜೊತೆ ಸೇರಿಸೊಡನೆ ಬೆಂದು, ಕಾಗದದ ಗೊಜ್ಜು (Pulp) ಉತ್ಪನ್ನವಾಗುತ್ತದೆ. ಅದನ್ನು ಕಡೆಯುವ ಏರ್ಪಾಟುಗಳು, ತೊಳೆಯುವ ಏರ್ಪಾಟು

ಗಳು ಯಂತ್ರದಿಂದಲೇ ಸಾಗುತ್ತವೆ. ನೀರಂತು ಪ್ರವಾಹರೂಪವಾಗಿ ಇಲ್ಲಿಗೆ ಬರಬೇಕು. ಇಂಥ ಕಾಗದದ ಗೊಜ್ಜು, ಗಿರಣಿಯ ಒಂದು ತುದಿ ಹೊಕ್ಕರೆ, ಇನ್ನೊಂದು ತುದಿಯಲ್ಲಿ ಕಾಗದವಾಗಿ ಇಳಿಯುತ್ತದೆ. ನಾವು ಇಲ್ಲಿ ಕಂಡ ಒಂದು ಯಂತ್ರವಂತು ದೆವ್ವನಷ್ಟು ಗಾತ್ರವಾಗಿತ್ತು. ಸುಮಾರು ಐವತ್ತು ಅಡಿ ಅಗಲ, ಮುನ್ನೂರು ಅಡಿ ಉದ್ದ; ಇಪ್ಪತ್ತು ಅಡಿ ಎತ್ತರದ ಒಂದು ಕೊಠಡಿಯಲ್ಲಿ ಒಂದೇ ಯಂತ್ರ ತುಂಬಿಕೊಂಡಿತ್ತು. ಕಾಗದದ ಗೊಜ್ಜು ಆ ಯಂತ್ರದ ಬುಡಕ್ಕೆ ಬಂದು felt, ಚಾಪೆಗಳ ಮೇಲೆ ಹರಡಿ, ಮುಂದು ವರಿದು, ತನ್ನ ನೀರಪಸೆಯನ್ನು ಕಳೆದುಕೊಂಡು, ಇನ್ನೂ ಮುಂದುವರಿದು ಮೆಲ್ಲಗೆ ತಿರುಗುವ ಉಕ್ಕಿನ ಹೊರಳುಗಳ(Rollers)ಎಡೆಯಲ್ಲಿ ನಯವಾಗಿ, ಒಣಗಿ ಹೊಳಪುಗೊಂಡೆ ಹೊರಗೆ ಬರುವ ನೋಟ ಅದ್ಭುತವಾಗಿ ಕಾಣಿಸು ತ್ತದೆ. ತುದಿಯಲ್ಲಿ ಕಾಗದ ಸುರುಳಿಯಾಗಿ ಸುತ್ತಿಕೊಂಡು, ಭಾರಿಯ ಹೊರಳುಗಳಂತೆ ಕಾಣಿಸುತ್ತದೆ. ಇಂಥ ಒಂದೊಂದು ಸುರುಳಿಯ ತೂಕ ಆರರಿಂದ ಹತ್ತು ಟನ್ನಿನ ತನಕ ಆಗಬಹುದು. ನಾವು ಕಂಡ ಆ ಯಂತ್ರ–ಒಂದು ದಿನಕ್ಕೆ ಐನೂರು ಟನ್ ಕಾಗದ ಕೊಡಬಲ್ಲುದಂತೆ. ಅಲ್ಲದೆ ಆ ಯಂತ್ರ ಒಂದೇ ಕಾಲದಲ್ಲಿ ಎರಡು ಭಿನ್ನಜಾತಿಯ ಕಾಗದಗಳನ್ನು ನಿರ್ಮಿಸಿ, ಅವುಗಳನ್ನು ಒಟ್ಟಿಗೆ ಜೋಡಿಸಿ, ತೆಳ್ಳಗಿನ ಬೋರ್ಡುಗಳಾಗಿ ಮಾಡುವ ಕೆಲಸವನ್ನೂ ಮಾಡುತ್ತದೆ. ಈ ಕಾರ್ಖಾನೆಯವರು ಈ ಜಾತಿಯ ಡೂಪ್ಲೆಕ್ಸ್ ಬೋರ್ಡುಗಳ ನಿರ್ಮಾಣದಲ್ಲೇ ಮಗ್ನರಾಗಿದ್ದಾರೆ. ನಮ್ಮ ದೇಶದ ಕಾಗ ದದ ಅವಶ್ಯಕತೆಯಲ್ಲಿ ಬಹುಭಾಗ ವಿದೇಶಗಳಿಂದಲೇ ಪೂರೈಕೆಯಾಗುತ್ತವೆ. ಈ ಉದ್ಯೋಗ ಇದಕ್ಕಿಂತ ನಾಲ್ಮಡಿ ವಿಸ್ತರಿಸಿದರೂ ಬೆಳವಣಿಗೆಗೆ ಅವಕಾಶ ವಿದೆ.

ಮೊದಲ ದಿನ ಈ ಯಂತ್ರ ಸಾಮಾಗ್ರಿಗಳನ್ನೆಲ್ಲ ಕಂಡ ಮೇಲೆ, ಇನ್ನೊಮ್ಮೆ ಅವೇ ಕಾರ್ಖಾನೆಗಳನ್ನು ಸಂದರ್ಶಿಸಿ ಅವುಗಳ ಫೋಟೋ ಸಂಗ್ರಹ ಮಾಡಿಕೊಂಡು ಬಂದೆವು. ಆ ರಾತ್ರಿ ನಮಗೆ ನಮ್ಮ ಮಿತ್ರರು, ತಾವು ಅಮೇರಿಕದಲ್ಲಿ ಸಂಗ್ರಹಿಸಿದ ನಾನಾ ಉದ್ಯೋಗ, ನಿಸರ್ಗ ಮೊದಲಾದ ಮಾಯಾ ಲಾಂದ್ರದ ಬಣ್ಣದ ಚಿತ್ರಗಳಿಂದ ಸಂತೋಷಗೊಳಿಸಿದರು. ಅವರು ತೋರಿಸಿದ ಚಿತ್ರಗಳಲ್ಲಿ 'ಎಲ್ಲೋಸ್ಟೋನ್ ಪಾರ್ಕ್' ಮತ್ತು 'ಗ್ರೇಂಡ್ ಕೆನಿಯನ್' ಚಿತ್ರಗಳಂತೂ ಮನಸ್ಸನ್ನು ಮರುಳು ಮಾಡುವಂತಿ

ದ್ದೆವು. ಮರುದಿನವೂ ನಾವು ಅಲ್ಲಿದ್ದು, ರಾತ್ರಿಯ ಗಾಡಿಗೆ ಕಲ್ಕತ್ತಾ ನಗರಕ್ಕೆ ಹೋಗಬೇಕೆಂದು ನಿಶ್ಚಯಿಸಿದೆವು. ನಮ್ಮ ದಿನ ಬರಿದೆ ಹಾಳಾಗಬಾರದಲ್ಲ. ಬರುವಾಗ 'ದೇರಿ' ಸ್ಟೇಶನಿಗೆ ತುಸು ಮೊದಲು 'ಸಾಸ್ರಮ್' ಎಂಬ ರೈಲ್ವೆ ನಿಲ್ದಾಣ ಹಾದು ಬಂದಿದ್ದೆವು. ಸಾಸ್ರಮಿನಲ್ಲಿ ಶೇರ್‌ಷಹನ ಹೆಸರಾದ ಒಂದು ಗೋರಿ ಇದೆ ಎಂದು ಕೇಳಿದ್ದೆವು. ಅದರ ಚಿತ್ರವನ್ನೂ ನೋಡಿದ್ದೆವು. ಹಾಗಾಗಿ ನಾನೂ ಶ್ರೀಪತಿಯೂ ಬೆಳಗ್ಗಿನ ಬಂಡಿಯನ್ನು ಏರಿ ಸಾಸ್ರಮಿಗೆ ಹೋದೆವು. ಈ ಗೋರಿಯು ನಿಲ್ದಾಣದಿಂದ ಒಂದು ಮೈಲೂ ದೂರವಿಲ್ಲ. ಸಾರ್ಸನಿಕ್ ಪದ್ಧತಿಯಲ್ಲಿ ರಚಿಸಿದ ಈ ಸಮಾಧಿ ತೀರ ಸರಳವಾಗಿ ಕಾಣಿಸಿದರೂ ಸಂಪೂರ್ಣವೂ ಅತಿಭವ್ಯವೂ ಆಗಿ ಕಾಣಿಸುವ ವಾಸ್ತುರಚನೆ.ಅದರ ನಾಲ್ಕು ಸುತ್ತಲೂ ಕೆರೆಯಿದೆ.ನಡುವೆ ಗೋರಿಯ ಪೀಠವಿದೆ. ಅದಕ್ಕೆ ಹೋಗುವ ದಾರಿಯಿದೆ. ನಾವು ಹೋದಾಗ ಕೆರೆಯ ನೀರು ಆರಿತ್ತು. ಗೋರಿಯ ನೆರಳನ್ನು ಬಿಂಬಿಸುವ ನೋಟ ಚಿತ್ರಗಳಲ್ಲಿ ಕಂಡ ನೆನಪಷ್ಟೇ ಆಯಿತು. ಗೋರಿಯನ್ನು ಗಾರೆ ಮತ್ತು ಕಲ್ಲುಗಳಿಂದ ರಚಿಸಿದ್ದಾರೆ. ಹಾಲುಗಲ್ಲೂ ಇಲ್ಲ; ಕೆಂಪುಶಿಲೆಯ ನಿರ್ಮಾಣವೂ ಅದಲ್ಲ. ನಿತ್ಯ ಬಳಸುವ ಕಲ್ಲುಗಾರೆಗಳಿಂದ ಅದನ್ನು ನಿರ್ಮಿಸಿದ್ದರೂ ಅದರ ವಾಸ್ತು ರಚನೆಯಲ್ಲಿ ಕಾಣುವ ವೈಖರಿ, ತೋಲ, ಇಕ್ಕಡೆಯ ಮೇಳಗಳು—ಬಲು ಚೆನ್ನಾಗಿವೆ. ವಿಶಾಲ ತಳದಿಂದೆದ್ದು, ಉನ್ನತವಾಗಿ, ಮೆಲ್ಲಮೆಲ್ಲಗೆ ಏರುತ್ತ ಕೊನೆಗೆ ಒಂದು ಬಲುದೊಡ್ಡ ಗುಂಬಜಿನಲ್ಲಿ ಈ ಮಂದಿರ ಕೊನೆಗೊಳ್ಳುತ್ತದೆ. ಕಟ್ಟಡದ ಲಂಬ ರೇಖೆಗಳಿಗೂ, ತಳ ರೇಖೆಗಳಿಗೂ ಅವುಗಳನ್ನು ಮೇಳಯಿಸಲು ಬಳಸಿದ ವಕ್ರರೇಖೆಗಳಿಗೂ ಅಷ್ಟೊಂದು ಸುಂದರವಾದ ಹೊಂದಿಕೆಯಿತ್ತು. ಮಂದಿರದಲ್ಲಿ ಕುಸುರು ಕೆಲಸವಿಲ್ಲ, ಒಣ ಅಹಂಕಾರವಿಲ್ಲ, ಬಾಹ್ಯ ಆಡಂಬರವಿಲ್ಲ. ಆದರೂ ಅದು ತನ್ನ ಸರಳತೆ ಭವ್ಯತೆಗಳಿಂದಲೇ ಮನಸ್ಸಿನ ಮೇಲೆ ತುಂಬ ಪರಿಣಾಮವನ್ನುಂಟುಮಾಡುತ್ತದೆ. ಈ ಸಮಾಧಿ ಶೇರ್‌ಷಹನ ಬಾಳನ್ನು ಅಜರಾಮರವಾಗಿ ಮಾಡಿದೆ. ಶೇರ್‌ಷಹ ಹುಲಿಯಂತೆ ಧೀರ; ನಿಷ್ಕಪಟಿ. ತನ್ನ ಪ್ರಜೆಗಳೊಬ್ಬೊಬ್ಬನಿಗೂ ಹೊರತಾದವನಲ್ಲ. ಮರಣದಂಡನೆಯ ಬೆದರಿಕೆಯಿಂದ ತನ್ನ ಸರಕಾರದಲ್ಲಿ ಲಂಚಗುಳಿತನದ ನಿರ್ಮೂಲನ ಮಾಡಿದ್ದ. ಅವನ ರಾಜ್ಯವಿವೇಕ ಹೆಸರುವಾಸಿಯಾಗಿತ್ತು. ನಮ್ಮ ಮಿತ್ರ ಸಂಜೀವರಾಯರೆನ್ನುವಂತೆ—'ಇಂದಿನ ಸರಕಾರಿ ನೌಕರರಲ್ಲಿ

ಲಂಚಗುಳಿತನ ಹೋಗಬೇಕಾದರೆ ಶೇರ್‌ಷಹನ ಶಾಸನ ಪದ್ಧತಿಯೇ ಬೇಕಾದೀತೆ'ಂಬುದನ್ನು ಯಾರೂ ಒಪ್ಪಬೇಕಾಗಿದೆ. ಹಾಗೆ ಮರಣದಂಡನೆ ವಿಧಿಸುವ ಧೈರ್ಯವಿಲ್ಲದೆ ಹೋದರೂ ಸಾರ್ವಜನಿಕರ ಮುಂದೆ ಕೊರಡೆ ಏಟಿನ ಮದ್ದರೆಯದೆ ಹೋದರೆ ಜನರಲ್ಲಿ ಪ್ರಾಮಾಣಿಕತೆ ಉಂಟಾಗುವುದು ಅನುಮಾನವೇ ಸರಿ. ಇದು ಪ್ರಜಾಸತ್ತೆಗೆ ವಿರುದ್ಧವಾದ ನಿರಂಕುಶ ಮಾರ್ಗವೇನೋ ನಿಜ. ಆದರೆ ಪ್ರಜೆಯ ಜಡತೆ, ವಂಚನೆ, ಅಪ್ರಾಮಾಣಿಕತೆಗಳಿಂದ ಅವನ ನ್ಯಾಯ ಪ್ರಾಮಾಣಿಕತೆಗಳು ಸತ್ತೇ ಹೋಗಿರುವಾಗ—ಬೇರೇನು ಮದ್ದು ಕೆಲಸ ಮಾಡೀತು?

ಸಾಸ್ರಮ್ ನೋಡಿಕೊಂಡು, ನಾವು ಮಧ್ಯಾಹ್ನ ಊಟಕ್ಕೆ ಸಮನಾಗಿ ಮನೆಗೆ ಬಂದೆವು. ಆ ದಿನದ ಹವೆ ಮನೆಯನ್ನು ಸಿಮೆಂಟಿನ ಕುಲುಮೆಯನ್ನಾಗಿಯೇ ಮಾಡಿತ್ತು. ಸಂಜೆಯ ರೈಲನ್ನೇರುವ ತನಕ ಮನೆಯಲ್ಲೇ ಕುಳಿತು ಬೆಂದು ಹೋಗಿದ್ದೆವು ನಾವು. ರೈಲುಬಂಡಿ ಬರುತ್ತಲೆ, ನಮಗೆ ಕಾದಿರಿಸಿದ ಕೊಠಡಿಯಲ್ಲಿ ಹೋಗಿ ಒರಗಿದೆವು; ಬಂಡಿ ಹೊರಟಿತು. ಇನ್ನೊಂದು ತಾಸಿಗೆ 'ಗಯಾ' ನಿಲ್ದಾಣ ಬಂತು. ಅಲ್ಲಿ ಉಪಹಾರವೆಸಗಿ ಮಲಗಿಕೊಂಡ ಭೂಪತಿಗಳಿಬ್ಬರಿಗೆ ಎಚ್ಚರವಾದದ್ದು ಚಂದ್ರನಾಗೂರಿನಲ್ಲಿ. ಅಲ್ಲಿಂದ ಮುಂದೆ ಕಲ್ಕತ್ತೆಗೆ ಒಂದು ತಾಸಿನ ಪಯಣ.

೯. ಕಲ್ಕತ್ತೆಯಲ್ಲಿ ನಾಲ್ಕು ದಿನ

ಬೆಳಗಾಗುವಾಗ ಹಚ್ಚ ಹೊಸ ತಂಗಾಳಿ ಬೀಸುತ್ತಿತ್ತು. ಹಿಂದಣ ರಾತ್ರಿಯ ಸೆಕೆಯೆಲ್ಲ ಮಾಯವಾಗಿ, ನೀರ ಪಸೆಯನ್ನು ಹೊತ್ತ ಗಾಳಿ ಬೀಸುತ್ತಲಿತ್ತು. ಬಂಡಿಯ ಕಿಟಕಿಯಿಂದ ಹೊರಗಿಣಿಕಿ ನೋಡಿದರೆ, ದಾರಿಯುದ್ದಕ್ಕೂ ಹಿಂದಣ ರಾತ್ರಿ ಚೆನ್ನಾಗಿ ಮಳೆ ಬಿದ್ದ ಕುರುಹು ಕಾಣಿಸಿತು. ಸೂರ್ಯ ಬಾನಲ್ಲಿ ತುಸು ಮೇಲಕ್ಕೇರಿದ್ದರೂ ಘಂಟೆ ಮಾತ್ರ ಆರಾಗಿತ್ತಷ್ಟೆ. ಅದೇನೆಂದು ನಾವೂ ಯೋಚಿಸಬೇಕಾಯಿತು. ಕಲ್ಕತ್ತೆಯ ಸ್ಥಳಿಕ ಘಂಟೆಗೂ, ನಮ್ಮ ಸ್ಟೇಂಡರ್ಡ್ ಘಂಟೆಗೂ ಹೆಚ್ಚುಕಡಿಮೆ ಒಂದು ತಾಸಿನ ವ್ಯತ್ಯಾಸವೇ ಅದಕ್ಕೆ ಕಾರಣವಂತೆ. ಇನ್ನೇನು? ಊರು ಬಂದಿತು—ಎಂದು ಮುಖ ತೊಳೆದು, ನಮ್ಮ ಹಾಸಿಗೆ ಸುರುಳಿಗಳನ್ನು ಕಟ್ಟಿದೆವು. ಕಲ್ಕತ್ತೆಯ ನಗರ ಬರಲು ಇನ್ನೂ ಮುಕ್ಕಾಲು ತಾಸು ಕಾಲಬೇಕು. ಹಾಗೆಂದು ಆಚೀಚಿನ ನೋಟ ನೋಡುತ್ತಾ ಕುಳಿತೆವು. ರೈಲು ಹಾದಿಯ ಇಕ್ಕಡೆಗಳಲ್ಲೂ ಅನೇಕ ಚಿಕ್ಕಪುಟ್ಟ ನಗರಗಳು ಕಾಣಿಸಿಕೊಂಡವು. ಆಚೀಚಿನ ನಿಸರ್ಗದ ದೃಶ್ಯ, ನಮ್ಮ ಪಶ್ಚಿಮ ಕರಾವಳಿಯ ಊರುಮನೆಗಳ ನೋಟವನ್ನು ನೆನಪಿಗೆ ತರುತ್ತಿತ್ತು. ಅದೇ ಬಗೆಯ ಹಿತ್ತಿಲು ಮನೆಗಳು, ಬಿದಿರು, ಬಾಳೆ, ಮಾವುಗಳು; ಕಿರಿಯ ಕೊಳಗಳು, ಸಮತಟ್ಟಾದ ಹೊಲಗದ್ದೆಗಳು. ಹೆಚ್ಚಿನ ಕೆರೆಗಳಲ್ಲಿ ಹಾವಸೆ, ಅಂತರಗಂಗೆ ಬೆಳೆದು ಹಸುರು ಹಾಸಿಗೆಯಾಗಿತ್ತು. ಆದರೆ ಊರುಕೇರಿಗಳಲ್ಲಿ ಓಡಾಡುತ್ತಿದ್ದ ಜನರ ಉಡುಗೆತೊಡಿಗೆ, ಆಕಾರಗಳು ಮಾತ್ರ ಬೇರೆ ಬಗೆಯವು. ಇದು ಬಂಗಾಳಿಗಳ ನಾಡು. ಅವರ ಮುಖ, ಮೈಕಟ್ಟುಗಳಿಗೂ, ನಮ್ಮ ಮುಖ ಮೈಕಟ್ಟುಗಳಿಗೂ, ತುಂಬ ಅಂತರವಿದೆ. ಅವರ ಉಡಿಗೆ ತೊಡಿಗೆಗಳಲ್ಲಿ ಹೆಚ್ಚಿನ ಸರಳತನ ಕಾಣಿಸುತ್ತದೆ. ಬಣ್ಣವೂ ಇಲ್ಲ, ಆಡಂಬರವೂ ಇಲ್ಲ.

ನಮ್ಮ ರೈಲುಬಂಡಿ ಹೌರಾ ನಿಲ್ದಾಣವನ್ನು ಹೊತ್ತಿಗೆ ಸಮನಾಗಿಯೇ ಸೇರಿತು. ನಾವು ಬಂಡಿಯಿಂದಿಳಿದು ನಿಂತ ಒಂದೆರಡು ಕ್ಷಣಗಳೊಳಗಾಗಿ ನಮ್ಮ ಗೆಳೆಯರಾದ ಕೇಶವನ್ ಕಾಣಿಸಿಕೊಂಡರು. ಎಂಥ ಜನಸಮುದಾಯದಲ್ಲೂ ಅವರು ಕಾಣಿಸಲೇಬೇಕು. ದೀರ್ಘವಾದ, ಗಟ್ಟಿಮುಟ್ಟಾದ ಶರೀರ; ಬೆಳ್ಳಗಿನ ಮೈ, ಎತ್ತಿದ ಕತ್ತು, ಹೊಳೆವ ಕಣ್ಣುಗಳು—ಅವರ ವ್ಯಕ್ತಿತ್ವ

ವನ್ನು ಎದ್ದು ತೋರಿಸುವಂಥವು. ಹತ್ತು ಗಜ ದೂರದಿಂದಲೇ ಜನಸಂದಣಿ ಯನ್ನು ದಾಟಿಕಾಣುವ ಅವರ ಮುಖದಿಂದ 'ನಮಸ್ತೆ!' ಸಂಭಾವನೆಯೂ ದೊರೆಯಿತು. ಬಂದೊಡನೆಯೇ ಕೈ ಕುಲುಕಿದ್ದಾಯಿತು. ನನ್ನ ಎರಡೂ ಕೈ ಅವರ ಒಂದು ಕೈಗೆ ತುತ್ತು. ಅವರು 'ನಿಮ್ಮ ಜತೆಯವರು?' ಎಂದು ಕೇಳಿ ದರು. ಆ ಪ್ರಶ್ನೆ ಕೇಳಿದಾಗ 'ನನ್ನ ಅರ್ಧಾಂಗಿ' ಎಂದು ಎಣಿಸಿದ್ದಂತೆ. ನಾನು 'ಶ್ರೀಪತಿ' ಎಂದೆಣಿಸಿದೆ. ಆತ ನನ್ನ ಅರ್ಧದ ಬದಲು ಇಮ್ಮಡಿ ಯಾಗಿದ್ದ. ಅವನನ್ನು ಪರಿಚಯಮಾಡುತ್ತ ಮೆಲ್ಲನೆ "ಈತ ನಿಮ್ಮ ಶಿಷ್ಯನಂತೆ" ಎಂದೆ. ಮೈಸೂರಿನ ಕಾಲೇಜಿನಲ್ಲಿ ಅವರ ಶಿಷ್ಯವೃತ್ತಿಮಾಡಿದ ಶ್ರೀಪತಿಯ ಗುರುತುಹತ್ತಿತು ಅವರಿಗೆ. ಅವನ ಕೈಯನ್ನು ಕುಲುಕಿದರು. ಕೈ ಕುಲುಕಿ ದರೆ ಅಂಥವನ ಕೈ ಕುಲುಕಬೇಕು. ಬರಿಯ ನನ್ನಂಥ ಬಡಪಾಯಿಗಳ ಕೈ ಕುಲುಕಿದರೆ ಏನು ಫಲ? ಅಷ್ಟರಲ್ಲಿ ನನ್ನ ಇನ್ನೊಬ್ಬ ಗೆಳೆಯ ಲಕ್ಷ್ಮೀ ನಾರಾಯಣನೆಂಬಾತ, ನಮ್ಮನ್ನು ಅರಸುತ್ತ ಅಲ್ಲಿಗೇನೆ ಬಂದ. ನಾವು ಕೇಶ ವನರೊಡನೆ ಇಳಿದುಕೊಳ್ಳುವುದಾಗಿ ಅವನಿಗೂ ತಿಳಿಸಿದ್ದೆವು. ಕೇಶವನ್‌ರ ಪರಿ ಚಯ ಅವರ ಆಕೃತಿಯಿಂದಲೇ ಆತ ತುಸುಮೊದಲು ಮಾಡಿಕೊಂಡಿದ್ದ. ನಾವೆಲ್ಲರೂ ಹೊರಕ್ಕೆ ಬಂದು, ಟೇಕ್ಸಿಯಲ್ಲಿ ಕುಳಿತು, ಕೇಶವನ್‌ರ ಮನೆಗೆ ಸಾಗಿದೆವು.

'ಬಿಲ್‌ವೇಡಿಯರ್' ಎಂಬುದು ಕೇಶವನ್‌ರ ಆರೋಗ್ಯಧಾಮವಿ ರುವ ಹಿತ್ತಿಲಿನ ಹೆಸರು. ಅಲ್ಲೇನೆ ಪ್ರಾಚೀನ ಕಾಲದ ಗವರ್ನರುಗಳ ನಿವಾ ಸದ ಮನೆಯಿದೆ. ಬಲು ದೊಡ್ಡ ಉದ್ಯಾನ, ನಡುವೆ ಅರಮನೆಯಂಥ ಕಟ್ಟಡ. ಅಲ್ಲಿ ನಮ್ಮ ರಾಷ್ಟ್ರೀಯ ಪುಸ್ತಕಾಲಯವನ್ನು ಇರಿಸಿದ್ದಾರೆ. ಕೇಶವನ್– ಅದರ ವ್ಯವಸ್ಥಾಪಕರು. ಆ ಹಿತ್ತಿಲಿನಲ್ಲೇ ಇನ್ನೊಂದು ಮನೆಯಲ್ಲಿ ಅವರ ನಿವಾಸ. ಬಿಲ್‌ವೇಡಿಯರ್‌ನಂಥ ಸ್ಥಳ ನಿವಾಸಕ್ಕೆ ದೊರೆತರೆ, ಕಲ್ಕತ್ತಾ ಬಿಟ್ಟು ಹೋಗುವ ಮನಸ್ಸು ಯಾರಿಗೂ ಬರಲಾರದು. ಚೆಲುವಿನಲ್ಲೂ, ವಸತಿಸೌಕರ್ಯದಲ್ಲೂ, ತುಂಬಾ ವಿಶಾಲವಾದ, ಅನುಕೂಲವಾದ ಸ್ಥಳ ವದು. ಅದರ ಉತ್ತರ ದಕ್ಷಿಣ ಭಾಗಗಳಲ್ಲಿ ಕಲ್ಕತ್ತಾ ನಗರ ಮೈಲು ಮೈಲು ಗಳ ದೂರಕ್ಕೆ ಹರಡಿದೆ. ಅಲ್ಲೆಲ್ಲ ಕಿಕ್ಕಿರಿದ ಜನಸಂದಣಿ. ಹಿಂದಣ ಕಾಲ ದಲ್ಲಿ, ಅಂದರೆ ಬರಿಯ ಇಪ್ಪತ್ತು ವರ್ಷಗಳ ಮೊದಲು, ಹದಿನೆರಡು ಲಕ್ಷ ಜನರಿದ್ದ ಈ ನಗರ ಇಂದು ೬೦ಲಕ್ಷ ಪರಿಮಿತಿಗೆ ಏರಿದೆ. ಆ ಜನವಸತಿ

ಯನ್ನು ಕಂಡರೆ, ಊರಲ್ಲಿ ನಿಲ್ಲಲು ಸಂಕೋಚ ಬರಬೇಕು. ಮನೆಗೆ ಕಾಲಿರಿಸುತ್ತಲೇ ಕೇಶವನರು—ತಮ್ಮ ತಾಯಿ, ತಮ್ಮಂದಿರು, ಗೆಳೆಯರು ಬಾಣಸಿಗ—ಎಲ್ಲರಿಗೂ ನಮ್ಮ ಪರಿಚಯಮಾಡಿಕೊಟ್ಟರು. ಅದು ಅವರ ಪದ್ಧತಿ. ಮನೆಗೆ ಬಂದ ಅತಿಥಿಗಳು ಯಾರೂ ಆಗಂತುಕರಾಗಿ ಉಳಿಯು ಬಾರದೆಂಬುದು ಅವರ ಧರ್ಮ. ಮಾತಿನಲ್ಲಿ ತುಂಬ ಲಘುತ್ವ, ಹಾಸ್ಯ ಪ್ರಿಯತೆಗಳು ಎದ್ದು ಕಾಣಿಸುವ ಸ್ವಭಾವ ಅವರದ್ದು. ಮಿತ್ರರೊಡನಾಗಲೀ, ಪರಿಚಾರಕರೊಡನಾಗಲೀ ಆಪ್ತ ನುಡಿಯಲ್ಲದೆ ನಿಷ್ಠುರದ ಮಾತನ್ನಾಡುವ ವರಲ್ಲ. ಹಾಗೆಂದು-ಮಿತ್ರವೃಂದವನ್ನು ಮಾತಿನಿಂದ ಕಾಡಿ ತಿಂದರೇನೆ ಅವರಿಗೆ ತೃಪ್ತಿ. ನಮ್ಮ ಶ್ರೀಪತಿ ತನ್ನ ಹಳೆಯ ಶಿಷ್ಯವೃತ್ತಿಯಿಂದಾಗಿ, ಅವರ ಪಾಲಿನ 'ಮಗು' ಎಂದೆನಿಸಿಕೊಂಡ. ಈ ಹೆಗ್ಗೂಸನ್ನು ಕುರಿತು ಹಾಸ್ಯ ಮಾಡಿದ್ದೇ ಮಾಡಿದ್ದು.

ಕೇಶವನ್‌ರ ಮನೆಯ ವಿಚಾರ ಹೇಳುವಾಗ ಅವರ ಅಡಿಗೆಯವನ ಹೆಸರು ಹೇಳದೆ ಸಾಧ್ಯವೇ ಇಲ್ಲ. ಬಡಕಲು ಅಡಿಗೆಯವನಿದ್ದರೆ ಬಂದವರಿಗೆ ಊಟ ಸಿಕ್ಕುತ್ತದೋ ಇಲ್ಲವೋ ಎಂಬ ಅನುಮಾನ ಬರುವುದು ಸ್ವಾಭಾವಿಕ. ಹಾಗೆಂದೊ ಏನೋ, ಕೇಶವನ್ ದಷ್ಟ ಪುಷ್ಟನಾದ 'ಸಂಪತ್ತ'ನ್ನು ಮನೆಯಲ್ಲಿ ಇರಿಸಿಕೊಂಡಿದ್ದಾರೆ. ಸಂಪತ್ತು—ಅವರ ಅಜ್ಜನಿಗೂ ಊಳಿಗದವನಾಗಿದ್ದನಂತೆ. ಅವನಿಗೆ ಒಂದು ರೀತಿಯ ಆತ್ಮೀಯತೆ ಕೇಶವನರ ಮೇಲೆ. ಆ ಪುಣ್ಯಫಲವೆಲ್ಲ ನಮಗೂ ಪ್ರಾಪ್ತಿಸಿತು. ಮಲಗಿದ ನಾವು ಎದ್ದು ಕಣ್ಣು ತೀಡುವ ಮುನ್ನವೇ ಆತ ಕಾಫಿ ತಂದಿರಿಸುತ್ತಿದ್ದ. ಬೆಳಿಗ್ಗಿನ ಎಂಟು ಘಂಟೆಗೆ, ಇಡ್ಲಿ,ದೋಸೆಗಳ ಸಮಾರಾಧನೆಯಾಗುತಿತ್ತು. ಮಧ್ಯಾಹ್ನ ರಾತ್ರಿಯ ಊಟಗಳು ಅಪೂರ್ವ ಔತಣಗಳಾಗುತಿದ್ದುವು. ನಾವಿರುವಾಗ, ಇದ್ದ ನಾಲ್ಕು ದಿನ, ಎಂಟು ಹಬ್ಬಗಳು ಅಲ್ಲೇ ಸಂಧಿಸಿದುವು. ಬಂಗಾಳಿ ಹೊಸ ವರ್ಷ, ತಂಗಾಳಿ ಹೊಸವರ್ಷ,ಹೀಗೆ ಏನೇನೋ ಕಲೆತು ಬಂದು, ಪಾಯಸದೂಟಗಳು ತಪ್ಪಲಿಲ್ಲ. ನನಗೇಕೋ ಅನ್ನಿಸಿತು—ಒಂದು ವರ್ಷ ಕಾಲ ಇಲ್ಲಿದ್ದರೆ—ಡಿಲ್ಲಿಯ ಮುರಾ ಕೋಣದಂತೆ ಮೈ ಬೆಳೆಯಿಸಿಕೊಂಡು, ಊರಿಗೆ ಮರಳುತಿದ್ದೆ. ಆದರೆ ಒಂದೇ ಕಾರಣದಿಂದ ಹೀಗೆ ಮಾಡಲಿಲ್ಲ. ಮನೆಯ ಒಡತಿ ಆಗ ಯಮನರೂಪ ತಾಳಿದರೇನು ಗತಿ?--ಎಂದು. ಕಲ್ಕತ್ತೆಯಲ್ಲಿದ್ದ ನಾಲ್ಕು ದಿನ ಅಲ್ಲಿನ ಗೆಳೆಯರನ್ನು, ಮನೆಯವರನ್ನು ಬಿಟ್ಟೇಳಲಾರದಷ್ಟು

ಸವಿ ನೆನಪು ಅಲ್ಲಿನದು. ಇದನ್ನೇ ಹೇಳುತ್ತಹೋದರೆ ನನ್ನ ಉಳಿದ ಹರಟೆ ಗಳಿಗೆ ಅವಕಾಶವೆಲ್ಲಿ?

ಬಿಲ್‌ವೆಡಿಯರಿಗೆ ತಾಗಿರುವ ವಿಶಾಲವಾದ ಉದ್ಯಾನ ಕಲ್ಕತ್ತೆಯ ಮೃಗಾಲಯದ್ದು. ಬೆಳಗಿನ ವೇಳೆ ಕಳೆಯುವುದಕ್ಕೆಂದು, ಬಂದ ದಿನವೇ ನಾನೂ ಕೇಶವನ್, ಅವರ ಪಟ್ಟ ಶಿಷ್ಯ ಶ್ರೀಪತಿ (ಈ ಪಟ್ಟ ಸಿದ್ರೆಯದು) ಯೂ ಸೇರಿ ಮೃಗಾಲಯ ನೋಡಲು ಹೊರಟೆವು. ಮೃಗಶಾಲೆಯ ಸುಪ ರಿಂಟೆಂಡೆಂಟ್ ಲಹಿರಿ ಎಂಬವರು ಕೇಶವನರ ಮಿತ್ರರು. ಆದರಿಂದ ನಮಗೂ ಅವರ ಪರಿಚಯವಾಯಿತು. ಹೀಗಾಗಿ ಲಹಿರಿಯವರು ನಮ್ಮ ಜತೆಯಲ್ಲೇ ಸಂಚಾರಕ್ಕೆ ಬಂದರು. ಲಹಿರಿ ಒಬ್ಬ ಬಂಗಾಲಿ ಯುವಕ. ಪ್ರಾಣಿ ಶಾಸ್ತ್ರ ತಜ್ಞ. ಪರೀಕ್ಷೆ ಪಾಸಾದುದಕ್ಕಿಂತ ಹೆಚ್ಚಾಗಿ ಪ್ರಾಣಿ ಶಾಸ್ತ್ರದಲ್ಲಿ ನೈಜ ಅಭಿ ರುಚಿಯುಳ್ಳವರು. ಅವರ ಜತೆಗೆ ಅಲ್ಲಿನ ಪಕ್ಷಿನಿವಾಸದ ಬಳಿ ತುಂಬ ಸಮ ಯವನ್ನು ಕಳೆದೆವು. ನನಗೆ ಎಂದಿನಿಂದಲೂ ಪಶು ಪಕ್ಷಿಗಳ ಮೇಲಿನ ಮೋಹ ಹೆಚ್ಚು. ಪ್ರಕೃತಿಯ ಇತಿಹಾಸ ತಿಳಿಯುವ ಲವಲವಿಕೆ ತುಂಬ. ಲಹಿರಿಯವರು ತಮ್ಮ ಪಕ್ಷಿಶಾಲೆಯ ಕೆಲವು ನವೀನ ಪಕ್ಷಿಜಾತಿಗಳನ್ನು ಕುರಿತು, ವಿವರವಾಗಿ ತಿಳಿಸುತಿದ್ದರು. ನಮ್ಮ ದೇಶದಲ್ಲಿ ವಾಸಿಸುವ, ಪ್ರವಾಸಿ ಗಳಾಗಿ ಬರುವ ಬಾತುಕೋಳಿಗಳ ಮತ್ತು ಇತರ ಜಲಪಕ್ಷಿಗಳ ವರ್ಗವನ್ನು ಕಂಡು ಯಾರಿಗೂ ವಿಸ್ಮಯವಾಗಬೇಕು. ಇಲ್ಲಿನ ಪಕ್ಷಿ ನಿವಾಸದ ಒಳಗೂ, ಅದಕ್ಕೆ ಸಮೀಪವಾಗಿರುವ ಸರೋವರದೊಳಗೂ ಸಾವಿರಗಟ್ಟಲೆಯಿಂದ ಜಲಚರಗಳನ್ನು ಕಾಣಬಹುದು. ಯಾವೆಲ್ಲ ಬಣ್ಣದ ಬಾತುಗಳು ಬೇಕೋ ಅವೆಲ್ಲ ಇವೆ. ಬರಿಯ ಬಾತುಗಳಲ್ಲೇ ಎಷ್ಟೋ ಭಿನ್ನವರ್ಗಗಳಿವೆ. ಅಲ್ಲಿನ ಬಾತುವಿನ ಮನೆಯಲ್ಲಿ ಸ್ಕಾರ್ಲೆಟ್ ಐಬಿಸ್ ಎಂಬ ಕೊಕ್ಕರೆ ಜಾತಿಯ ಒಂದು ಪಕ್ಷಿ ಕಾಣಿಸಿತು. ಅದರ ಮೈಬಣ್ಣ ರಾಜಹಂಸದಂತೆ ಗುಲಾಬಿ; ಆಕೃತಿ ಮಾತ್ರ ಕೊಕ್ಕರೆಯದು. ಅದರ ಫೊಟೋ ತೆಗೆಯುವ ಲವಲವಿಕೆ ನನಗೆ. ಮೊದಲ ದಿನ ನಾನು ಈ ಮೃಗಪಕ್ಷಿಗಳ ಪಂಜರಗಳ ಹೊರಗಡೆ ನಿಂತು, ಫೊಟೋ ತೆಗೆದೆನು. ಮರುದಿನ ಬಣ್ಣದ ಫಿಲ್ಮ್ ತರಿಸಿಕೊಂಡು ಲಹಿರಿಯವರ ಸಹಾಯದಿಂದ ಅನೇಕ ಪಕ್ಷಿಗಳ ಮನೆ ಹೊಕ್ಕು ಚಿತ್ರ ಸಂಗ್ರಹಿಸುವ ಅವಕಾಶ ಗಳಿಸಿದೆನು. ಆದರೂ ಕೆಲಸ ಕಷ್ಟವಾಗಿತ್ತು. ಹಕ್ಕಿ ಗಳು ಬೆದರುತ್ತವೆ; ನಿಂತಲ್ಲಿ ನಿಲ್ಲದೆ ಓಡುತ್ತವೆ—ಆದರಿಂದಾಗಿ ಬೆಳಕಿನ

ನಿರ್ಣಯ ಇನ್ನಷ್ಟು ಕಷ್ಟವಾಗುತ್ತದೆ.

ಪಕ್ಷಿ ಸೌಂದರ್ಯ ನೋಡಿ ನಮಗೆಷ್ಟು ಆನಂದವಾಗಬಹುದೋ ಅದೇ ರೀತಿ ನೈಸರ್ಗಿಕ ಸೌಂದರ್ಯವನ್ನು ನೋಡಿ, ಆನಂದವಾಗಬೇಕು. ಲಹಿರಿಯಂಥಾ ವ್ಯಕ್ತಿಗಳು ಬೆರಳಿನಿಂದೆಣಿಸುವಷ್ಟು ಇರುತ್ತಾರೆ. ಆದರೆ ಕಲ್ಕತ್ತಾದಂಥ ದೊಡ್ಡ ಊರಿನಲ್ಲಿ ಒಬ್ಬರಾದರೂ ಇದ್ದಾರಲ್ಲ. ಈ ಪ್ರಾಣಿ ಶಾಲೆಯ ಪಕ್ಷಿಸಮೂಹ ನಮ್ಮ ನಾಡಿಗೆ ಹೆಸರಾದದ್ದಂತೆ. ಅಲ್ಲಿನ ವೈಶಿಷ್ಟ್ಯ ಗಳಲ್ಲಿ 'ಪೆಸೆಂಟ್' ವರ್ಗದ ಹಕ್ಕಿಗಳು ಮುಖ್ಯವಾದುವು. ಹದಿನಾರು ವರ್ಷಗಳ ಹಿಂದೆ ಅಲ್ಲಿಗೆ ನಾನು ಬಂದಾಗ ಕಂಡ ಬೆಂಕಿ ಬಣ್ಣದ ಪೆಸೆಂಟ್ ಹಕ್ಕಿಯ ನೆನಪು ನನಗೆ ಇನ್ನೂ ಮರೆತುಹೋಗಿರಲಿಲ್ಲ. ಪೆಸೆಂಟ್ ಎಂಬುದು ಕೋಳಿಯ ಕುಲದ ಪಕ್ಷಿ. ನಮ್ಮೂರಿನ ಬಣ್ಣದ ನವಿಲು ಅದರ ಇನ್ನೊಂದು ಮಾದರಿ. ಕೋಳಿಗೂ ನವಿಲಿಗೂ ನಡುವೆ ಹಲವಾರು ಬಣ್ಣಗಳಿರುವಂತೆ, ಈ ಪಕ್ಷಿಗಳಲ್ಲಿ ಸುಮಾರು ಹದಿನಾರು ಹದಿನೆಂಟು ಜಾತಿಯ ಹಕ್ಕಿಗಳಿವೆ. ಉಕ್ಕಿನ ಕಡು ನೀಲದ ಪೆಸೆಂಟ್, ನಮ್ಮೂರಿನ ಕಾಡು ಕೋಳಿ, ಕಿತ್ತಳೆ ಕೆಂಪು ಬಣ್ಣಗಳನ್ನು ಮಿಂಚುವ ಕಾಡು ಕೋಳಿಯಾಕೃತಿಯ ಬರ್ಮಿಯ ಪೆಸೆಂಟ್, ನೀಲ ಮೈ ಬಣ್ಣಕ್ಕೆ ಶುದ್ಧ ಬಿಳಿಯ ಕತ್ತಿರುವ ಎಮರ್ಸ್ಟ್ ಪೆಸೆಂಟ್, ರೇಶ್ಮೆ ಬಣ್ಣದ ಪೆಸೆಂಟ್, ಆರ್ಗಸ್ ಪೆಸೆಂಟ್—ಹೀಗೆ ಎಷ್ಟು ಚೆಲುವಿನ ಪೆಸೆಂಟ್‌ಗಳಿವೆ ಅನ್ನುತ್ತೀರಾ? ಅವುಗಳ ಒನಪು, ಒಯ್ಯಾರ, ನಡಿಗೆ ತುಂಬಾ ಮನಮೋಹಕವಾದುವು. ಪೆಸೆಂಟುಗಳಲ್ಲಿ ಗಂಡಿಗೇನೆ ಬೆಡಗಿನ ಉಡುಗೆ. ಹೆಣ್ಣು ಸಾದಾ ತೆರನಾಗಿರುತ್ತದೆ.

ಇದೇ ಪಕ್ಷಿನಿಲಯದ ಇನ್ನೊಂದು ಕಡೆಯಲ್ಲಿ ಗಿಳಿ, ಪೆರಕೀಟ್ ಮೊದಲಾದುವುಗಳ ಮನೆಯಿದೆ. ನಮ್ಮೂರಿನ ಸೊಪ್ಪುಗಿಳಿಯಿಂದ ಹಿಡಿದು, ಬಣ್ಣ ಬಣ್ಣದ ಲವ್‌ಬರ್ಡ್‌ಗಳು, ನವಿಲಿನ ಬಣ್ಣವನ್ನು ಮೀರಿಸುವ ಆಕಾಶ ನೀಲಿ, ಕಡುನೀಲಿ, ಕೆಂಪು ಕಿತ್ತಳೆ ಮೊದಲಾದ ಬಣ್ಣಗಳ ಬೆಡಗನ್ನು ಬೀರುವ ಬ್ರೆಜಿಲಿನ ದೊಡ್ಡ ಜಾತಿಯ ಗಿಳಿಗಳೂ ಇವೆ. ಅವು ಎಮೆಜೊನ್ ಕಾಡುಗಳಿಂದ ಬಂದುವು. ಇಂಥ ಪಕ್ಷಿ ಸಂಕುಲವನ್ನು ಕಂಡು ಮಕ್ಕಳಿಗೆ ಎಷ್ಟು ಸಂತೋಷವಾಗಲಾರದು? ಜ್ಞಾನದ ಲಾಭವಾಗಲಾರದು? ನಮ್ಮ ದೇಶದ ಮೃಗಾಲಯಗಳಿಗೆ ಸಾವಿರಾರು ಜನ ನೋಡಲು ಬಂದು ಹೋಗು ತ್ತಾರೆ. ಮಕ್ಕಳುಮರಿಗಳು ಬಂದು ಹೋಗುತ್ತಾರೆ. ಇವರಿಂದ ಅವರಿಗೆ

ವಿನೋದವೇನೋ ದೊರೆಯುತ್ತದೆ. ಅಪೂರ್ವದ ಆಕೃತಿಯ ಜಿರಾಫೆ ಎಲ್ಲಿದೆ? ಜೆಬ್ರಾ ಎಲ್ಲಿದೆ? ಖಡ್ಗಮೃಗ ಎಲ್ಲಿದೆಯೆಂದು ಹುಡುಕಿ ನೋಡಿ, ಜನರು ಬೆರಗುಗೊಂಡು ಹೋಗುತ್ತಾರೆ. ಆದರೆ ಜನರಲ್ಲಿ ಮೃಗಪಕ್ಷಿಗಳ ವಿಚಾರ ದಲ್ಲಿ ಆಸಕ್ತಿ ಹುಟ್ಟಿಸುವ ಶಿಕ್ಷಣ ಮಾತ್ರ ಕಾಣಿಸುವುದಿಲ್ಲ. ಅದಿದ್ದರೆ ಜನ ತೆಯ ಸುಖಕ್ಕೆ ಒಂದು ಹೊಸ ದಾರಿಯನ್ನೇ ತೋರಿಸಬಹುದಾಗಿತ್ತು.

ಲಹಿರಿ ಮತ್ತು ಕೇಶವನರು ನಮ್ಮ ಜತೆಗೆ ಸ್ವಲ್ಪ ಹೊತ್ತು ಸುತ್ತಾಡಿ ತಮ್ಮ ಕಚೇರಿಗಳಿಗೆ ಹೊರಟುಹೋದ ಮೇಲೆ, ನಾನೂ ಶ್ರೀಪತಿಯೂ ಕೂಡಿ ಇನ್ನೂ ಎರಡು ತಾಸು, ಅಲ್ಲಿನ ಪ್ರಾಣಿಗಳನ್ನು ನೋಡುತ್ತ ಅಲೆದಾಡಿದೆವು. ಅಸ್ಸಾಮಿನ ಖಡ್ಗಮೃಗವೊಂದು ಅಲ್ಲಿನ ಸ್ಥಳೀಯ ವೈಶಿಷ್ಟ್ಯ. ಹಿಂದೆ ನಾನು ಬಂದಾಗ ಅಲ್ಲಿ ಮಲಯದ ಟಾಪೀರ್ ಸಹ ಇತ್ತು. ಟಾಪೀರ್, ಖಡ್ಗಮೃಗ ಆನೆ, ಹಿಪ್ಪೊ–ಇವೆಲ್ಲ ಬಂಧು ವರ್ಗ. ಇವುಗಳಲ್ಲಿ ಅತೀ ಅಸಹ್ಯದ ಮಾದರಿ ಯೆಂದರೆ ಹಿಪ್ಪೊ; ಅಸಹ್ಯವೂ ಕ್ರೂರವೂ ಆಗಿ ಕಾಣಿಸುವಂಥದು ಖಡ್ಗ ಮೃಗ. ಆದರೆ ಅದರ ಜೀವ ಹಿಪ್ಪೋಗಿಂತ ಗಾತ್ರದ್ದು. ಮೈಗೆಲ್ಲ ಕಂಚಿನ ಕವಚ ತೊಡಿಸಿದಂತೆ ಕಾಣುತ್ತದೆ. ಅದರ ಸ್ವಾಭಾವಿಕ ಆವರಣದಲ್ಲಿ— ಖಡ್ಗಮೃಗ ಎಷ್ಟು ವಿಚಿತ್ರವಾಗಿ ಕಾಣಬಹುದೆನ್ನುತ್ತೀರಾ?

ಹಿಂದೆ ಇಲ್ಲಿ ವಿಶೇಷವಾದೊಂದು ಹಾವಿನ ಮನೆಯಿತ್ತು. ಈಗ ಬರಿಯ ನಾಲ್ಕೆಂಟು ಜಾತಿಯ ಹಾವುಗಳಷ್ಟೆ ಉಳಿದಿವೆ. ಈ ಬಾರಿ ಕಂಡು ದರಲ್ಲಿ ನನಗೆ ವಿಶೇಷವಾಗಿ ಕಂಡ ಹಾವೆಂದರೆ, ಅಲ್ಲಿನ ಕಟ್ಟದ ಹಾವುಗಳು; ಕಡಂಬಳ. ಇದು ನಮ್ಮ ಊರಿನಲ್ಲಿಯೂ ಇರುವ ಹಾವೇ. ಆದರೆ ಇಲ್ಲಿ ಕಂಡ ಹಾವುಗಳು ನಾಲ್ಕು ಅಡಿಗಳಿಗಿಂತ ಹೆಚ್ಚು ಉದ್ದವಾಗಿದ್ದುವಲ್ಲದೆ ಮೈಮೇಲೆ ಒಂದೊಂದು ಇಂಚಿನ ಗಾತ್ರದ ಕಪ್ಪು, ಅರಸಿನ ಮೈ ಪಟ್ಟೆಗಳು ತುಂಬಾ ಹೊಳೆದು ಕಾಣಿಸುತ್ತಿದ್ದುವು. 'ಕ್ರೈಟ್' ಎಂಬುದು ಇದರ ಇಂಗ್ಲಿಷ್ ಹೆಸರು. ಇದು ತೀರ ವಿಷದ ಹಾವು. ಈ ಹಾವಿನ ಕತೆ ಹೇಳಿ ಮುಗಿಸುವ ಮೊದಲು, ಇನ್ನೊಂದು ಸಂಗತಿ ಹೇಳಬಹುದು. ನಮ್ಮಲ್ಲಿ ಪ್ರಾಣಿಸ್ವಭಾವದ ವಿಚಾರವಾಗಿ ಸಂಗ್ರಹಿಸಿರುವ ಜ್ಞಾನ ಕಡಿಮೆ. ನಮ್ಮ ದೇಶದ ಪ್ರಾಣಿಗಳನ್ನು ಕುರಿತು ಹೆಚ್ಚಿಗೆ ಬರೆದವರೆಲ್ಲರೂ ವಿದೇಶೀಯರು.

ನಾವು ಇಲ್ಲಿಂದ ಕೇಶವನ್ ಇರುವ ನೇಶನಲ್–ಲೈಬ್ರೆರಿ ಕಟ್ಟಡಕ್ಕೆ ಹೋದೆವು. ಈ ಲೈಬ್ರೆರಿ ಈಗ ತಾನೇ ವ್ಯವಸ್ಥೆಗೊಳ್ಳುತ್ತಿದೆ. ಅಲ್ಲಲ್ಲಿ ರಾಶಿ

ರಾಶಿಯಾಗಿ ಪುಸ್ತಕಗಳ ಹೊರೆಗಳು ಬಿದ್ದಿವೆ. ಬಂಗಾಳದಲ್ಲಿ ಅಖಂಡ ಕೀರ್ತಿ ಸಂಪಾದಿಸಿದ–ಅಶುತೋಷ ಮುಖರ್ಜಿಯವರ ಪುಸ್ತಕ ಸಂಗ್ರಹ ವನ್ನು ಇದಕ್ಕೆ ದಾನ ಮಾಡಿದ್ದಾರೆ. ಹತ್ತಿಪ್ಪತ್ತು ಸಾವಿರ ಅಪೂರ್ವಪುಸ್ತಕ ಗಳ ಸಂಗ್ರಹ ಅವರದ್ದು. ಕೇಶವನ್ ನನ್ನ ಹಾವಿನ ಮೇಲಿನ ಆಸಕ್ತಿಯನ್ನು ಕಂಡು, ನಾವು ಅಲ್ಲಿಂದ ಹೊರಡುವ ಮುಂಚಿನ ರಾತ್ರಿ, ಹಾವುಗಳ ಮೂರು ಗ್ರಂಥಗಳನ್ನು ತಂದು ತೋರಿಸಿದರು. ಬಂಗಾಳದಲ್ಲಿ ಎರಡು ಶತಮಾನಗಳ ಹಿಂದೆ ಇಬ್ಬರು ಪ್ರಾಣಿಶಾಸ್ತ್ರಜ್ಞರು ಮಾಡಿದ ಪ್ರಯತ್ನದ ಫಲವದು. ನಮ್ಮ ದೇಶದ ವಿಷದ ಹಾವುಗಳ ವಿಚಾರವಾಗಿ ದೊಡ್ಡಗ್ರಂಥಗಳನ್ನೇ ಬರೆದಿದ್ದಾರೆ. ಆ ಪುಸ್ತಕಗಳು ಅಚ್ಚಾದುದು ಒಂದು ಶತಮಾನದ ಹಿಂದೆ, ಅದರಲ್ಲಿ ಹಾವಿನ ದೇಹ, ಆಕೃತಿಗಳ ಚಿತ್ರಗಳು ಅವುಗಳ ವಿಷಯದಲ್ಲಿರುವ ನಂಬಿಕೆ, ಚಿಕಿತ್ಸೆ—ಇವುಗಳನ್ನು ಕುರಿತಾಗಿ ಬರೆದಿದ್ದಾರೆ. ಒಂದು ಗ್ರಂಥದಲ್ಲಂತು ಚಿತ್ರಸಿದ ಹಾವುಗಳ ಆಕೃತಿಗಳು ಅಷ್ಟೊಂದು ನೈಜವೂ ವರ್ಣಭರಿತವೂ ಆಗಿದ್ದು, ತುಸುವೇ ದೂರದಲ್ಲಿ ನಿಂತು ನೋಡಿದರೆ, ನಿಜಕ್ಕೂ ಪುಸ್ತಕ ವೊಂದರ ಮೇಲೆ ಹಾವೊಂದು ಹರಿಯುತ್ತಿದೆ—ಎಂಬ ಭ್ರಮೆ ಉಂಟಾಗ ಬೇಕು. ನಮ್ಮ ದೇಶದಲ್ಲಿ ವರ್ಷಕ್ಕೆ ಇಪ್ಪತ್ತು ಸಾವಿರದಷ್ಟು ಅಥವಾ ಅದಕ್ಕೂ ಹೆಚ್ಚಾಗಿ ಹಾವುಗಳ ಕಡಿತದಿಂದ ಜನ ಸಾಯುತ್ತಾರೆ. ಬಂಗಾಲ ದಲ್ಲಿ ಈ ಸಂಖ್ಯೆ ತುಂಬ ಹೆಚ್ಚು. ಆದರೆ ಹಾವುಗಳ ವಿಚಾರದಲ್ಲಿ ಅಭ್ಯಾಸ ಮಾಡಿದವರೆಷ್ಟು ಮಂದಿ ಇದ್ದಾರೆ? ನಮ್ಮ ದೇಶದ ಪ್ರಾಣಿಜ್ಞಾನವೂ ನಮಗೆ ಅನ್ಯರಿಂದ ಬರಬೇಕೇ? ಅಶುತೋಷ ಮುಖರ್ಜಿಯವರು ಸಂಗ್ರಹಿಸಿದ ಈ ಎಲ್ಲ ಪುಸ್ತಕಗಳನ್ನು ಕಾಣುವಾಗಲೇ ದಿಗಿಲುಹಾರುತ್ತದೆ. ಅವುಗಳಲ್ಲಿ ಅಗ್ಗದ ಪುಸ್ತಕಗಳಾವುವೂ ಇಲ್ಲ. ಎಲ್ಲ ಬೃಹದಾಕಾರದ ಪುಸ್ತಕಗಳೇ. ಐವತ್ತು ನೂರು ವರ್ಷಗಳ ಹಿಂದೆ ಅಚ್ಚಾದ ಅಪೂರ್ವ ಗ್ರಂಥಗಳು. ಅವು ಗಳಲ್ಲಿಲ್ಲದ ಜ್ಞಾನ ಭಂಡಾರವಿಲ್ಲವೆನ್ನಬೇಕು. ಅವರ ಮೇಧಾವಿತನವು ದೇಶಕ್ಕೆ ದೇಶವೇ ಕೊಂಡಾಡುವಂತಹದಿತ್ತೆನ್ನುತ್ತಾರೆ. ಕೇಶವನ್‌ರವರು ಲೈಬ್ರೆರಿಯ ಬಳಿ ತೂಗಿದ್ದ, ಒಂದು ಭಾವಚಿತ್ರವನ್ನು ತೋರಿಸಿ ಪುಟ್ಟೊಂದು ಕಥೆಯನ್ನು ಹೇಳಿದರು. ಲಾರ್ಡ್ ಕರ್ಜನ್ ಒಮ್ಮೆ ನಮ್ಮ ದೇಶದ ವಿಚಾರ ಮಾತನಾಡುತ್ತ ಇಲ್ಲಿರುವ ಮಹಾವ್ಯಕ್ತಿಗಳೆಂದರೆ 'ಎರಡೂವರೆ ಜನರುಮಾತ್ರ' ಎಂದರಂತೆ. ಯಾರೆಂದು ಕೇಳಿದುದಕ್ಕೆ, ಮೊದಲನೆಯವರು ಇವರು—;

ಎರಡನೆಯವರು ಅಶುತೋಷ ಮುಖರ್ಜಿ. ಮೂರನೆಯ ಅರ್ಧ ವ್ಯಕ್ತಿ ಸರ್ ಸುರೇಂದ್ರನಾಥ್ ಬೆನರ್ಜಿ—ಎಂದರಂತೆ. ಅಶುತೋಷರ ಪುಸ್ತಕ ಭಂಡಾರವನ್ನು ನೋಡುವಾಗ ಕರ್ಜನರಅಭಿಪ್ರಾಯ್ಕೆ ಏನೂ ತಪ್ಪಿಲ್ಲ ಎನಿಸುತ್ತದೆ.

ಈಗ ಈ ರಾಷ್ಟ್ರೀಯ ಪುಸ್ತಕಾಲಯದ ಯೋಜನೆ ಭರದಿಂದ ಸಾಗಿದೆ. ಮೊನ್ನೆ ಮೊನ್ನೆ ನೈಜಾಮರ ಅಪೂರ್ವ ಗ್ರಂಥ ಸಂಗ್ರಹವೊಂದು ಅದಕ್ಕೆ ದೊರಕಿದೆ. ಕೇಶವನ್ ದಿನ ರಾತ್ರಿ ಲೈಬ್ರೆರಿಯಲ್ಲೇ ಸುತ್ತಿ ಸುಳಿಯುತ್ತಾರೆ. ಅಲ್ಲಿನ ಸಾವಿರಾರು ಗ್ರಂಥಗಳನ್ನು ವ್ಯವಸ್ಥಿತವಾಗಿ ಇರಿಸಿ, ಪ್ರದರ್ಶಿಸುವುದೇ ಹೆಚ್ಚಿನ ಕೆಲಸವಾಗಿದೆ. ಒಮ್ಮೊಮ್ಮೆ ಮಧ್ಯ ರಾತ್ರಿಯೂ ಹೋಗಿ ಕಾವಲಿನವರನ್ನು ಮಾತನಾಡಿಸುತ್ತಾರೆ; ಪುಸ್ತಕಾಲಯದ ಪ್ರೇತದಂತೆ ಅಲೆದಾಡುವುದೂ ಉಂಟು. ಅವರಿಗೆ ಪ್ರಿಯವಾದ ಉದ್ಯೋಗ ದೊರಕಿದುದು ಆನಂದದ ಸಂಗತಿ. ಇಲ್ಲವಾದರೆ ಕೇಶವನ್ ಮೈಸೂರಿನ ಜಾತಿ ದ್ವೇಷದ ನಂಜನ್ನುಂಡು,ಅಲ್ಲೇ ಕೊಳೆಯಬೇಕಾಗಿತ್ತು. ನನಗೂ ಅವರಿಗೂ ಆದ ಪರಿಚಯ ಬಲು ಹಿಂದಿನದು. ಅವರು ಮೈಸೂರಿನ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದಾಗ ಉಂಟಾದ ಸ್ನೇಹ. ಆಗ ಅವರು ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಅವರು ಕೇಂಬ್ರಿಜ್‌ನಲ್ಲಿ ವ್ಯಾಸಂಗಮಾಡಿ ಮೈಸೂರಿಗೆ ಬಂದರು. ಅಲ್ಲಿ ಕೆಲವು ವರ್ಷಗಳ ತನಕ ಅಧ್ಯಾಪಕರಾಗಿ ದುಡಿಯುತ್ತಿದ್ದಾಗ, ದೇಹಲಿಯಿಂದ ಅವರಿಗೆ ಕರೆ ಬಂದಿತು. ಆಗ ನಾನು ಮೈಸೂರಿನಲ್ಲಿದ್ದೆ. 'ಬದುಕುವುದಕ್ಕೆ ಅವಕಾಶವಿದ್ದಲ್ಲಿಗೆ ಹೋಗಿ' ಅಂದೆ. ಮೈಸೂರನ್ನು ಬಿಟ್ಟ ಮೇಲೆ ವಿಶ್ವೇಶ್ವರಯ್ಯನವರ ಬೆಲೆ ಜನರಿಗೆ ತಿಳಿಯಿತು. ಮೈಸೂರನ್ನು ಬಿಟ್ಟ ಮೇಲೆ ಸರ್ ರಾಧಾಕೃಷ್ಣರವರ ಬೆಲೆ ಲೋಕಕ್ಕೇನೆ ತಿಳಿಯಿತು. ಕೇಶವನ್ ಅಂಥ ಮಹಾವ್ಯಕ್ತಿ ಎನ್ನುವ ಸಾಹಸ ನನಗೆ ಇಲ್ಲವಾದರೂ, ಅವರ ಯೋಗ್ಯತೆಗೆ ತಕ್ಕ ಮನ್ನಣೆ ದೊರಕಿದ್ದು ಮೈಸೂರನ್ನು ಬಿಟ್ಟಮೇಲೆಯೇ ಅನ್ನಬಹುದು. 'ತನ್ನೂರಿಗೆ ಮಂಗ. ಪರರ ಊರಿಗೆ ರಂಗ' ಎನ್ನುವ ಗಾದೆಯೊಂದಿದೆಯಲ್ಲ! ಮೈಸೂರಲ್ಲಿ ಮಂಗನಿಗೆ ದೊರಕುವ ಮನ್ನಣೆ ರಂಗನಿಗಿಲ್ಲ. ಜಾತಿಕುಲಗಳ ಮೇಲೆ ವ್ಯಕ್ತಿಯನ್ನು ಅಳೆಯುವ ಧೋರಣೆ ಮದ್ರಾಸು, ಮೈಸೂರುಗಳಲ್ಲಿ ಇನ್ನೂ ಅಳಿದಿಲ್ಲ. ಅಳಿಯುವ ಕಾಲ ಸಮೀಪವಾಗಿ ಕಾಣಿಸುತ್ತಲೂ ಇಲ್ಲ—ಎಂದು ವ್ಯಥೆಯಾಗುತ್ತದೆ.

ಕಲ್ಕತ್ತೆಯಲ್ಲಿ ಭೇಟಿಯಾದ ನಮ್ಮ ಇನ್ನೊಬ್ಬ ಮಿತ್ರ ಲಕ್ಷ್ಮೀನಾರಾ

ಯಣರಾಯರು ಪುತ್ತೂರಿನವರೇ. ನಮ್ಮ ಒಡನಾಟದಲ್ಲಿ ಬೆಳೆದವರು. ಈಗ ಅಲ್ಲಿನ ವ್ಯಾಪಾರಿ ಸಂಸ್ಥೆಯೊಂದರ ಪರವಾಗಿ ಕೆಲಸಮಾಡುತ್ತಿದ್ದಾರೆ. ಉಂಡಾಡಿಗಳಾಗಿ ಅಲೆಯಲು ಬಂದಿರುವ ನಮಗೆ, ವಿರಾಮವಾಗಿರುವ ಗೆಳೆಯರು ದೊರೆತರೆ ಎಷ್ಟೋ ಅನುಕೂಲ. ಲಕ್ಷ್ಮೀನಾರಾಯಣರಾಯರಿಗೆ ಆಗ ವಿರಾಮವಿದ್ದುದರಿಂದ ನಮ್ಮನ್ನು ಕೇಶವನರ ಮನೆಯಲ್ಲಿ ಬಿಟ್ಟುಹೋದವರು, ಮಧ್ಯಾಹ್ನ ಮೂರು ತಾಸಿಗೆ ಕರೆಯಲು ಬಂದರು. ಮಿತ್ರರೊಬ್ಬರ ಮೋಟರನ್ನು ಹಿಡಿದುಕೊಂಡೇ ಬಂದಿದ್ದರು. ಎರಡು ದಿನಗಳೂ ನಮಗೆ ಅವರು, ಸಂಚಾರದ ಗೆಳೆಯರಾದರು. ಅವನ ಜತೆಗೆ ಮೊದಲು ಹೋದದ್ದು ಕಲ್ಕತ್ತೆಯ ಹೆಸರುವಾಸಿಯಾದ ಸಸ್ಯೋದ್ಯಾನವನ್ನು ನೋಡಲು. ಅದು ವಿಸ್ತೃತಿಯಲ್ಲಿಯೂ,ಯೋಗ್ಯತೆಯಲ್ಲಿಯೂ ದೇಶಕ್ಕೇನೆ ಹಿರಿದಾದ ಉದ್ಯಾನ ಎಂದು ಕೇಳಿದ್ದೆವು. ಮುಂಬಯಿಯ ವಿಕ್ಟೋರಿಯಾ ಗಾರ್ಡನ್ಸ್, ಬೆಂಗಳೂರಿನ ಲಾಲಬಾಗ್, ಕೆಂಡೀ ನಗರದ ಪೆರ್ಡೇನಿಯಾ ಗಾರ್ಡನ್ಸ್—ಇವನ್ನೆಲ್ಲ ನಾನು ನೋಡಿದವನು. ಈ ಉದ್ಯಾನವನ್ನಷ್ಟೆ ನೋಡಿರಲಿಲ್ಲ. ಪರ್ಡೇನಿಯಾ ಸಿಂಹಳ ದ್ವೀಪದ ಮನಮೋಹಕವಾದ ಪ್ರದೇಶವೊಂದರಲ್ಲಿದೆ. ಅದರ ಮೂರು ಸುತ್ತಲೂ ನದಿ ಹರಿಯುತ್ತಿರುವುದರಿಂದ ಆ ಉದ್ಯಾನದ ಬೆಡಗು ಅಷ್ಟಿಷ್ಟಲ್ಲ. ಸಸ್ಯಗಳ ವರ್ಗೀಕರಣದ ವ್ಯವಸ್ಥೆಯೂ ಅಲ್ಲಿ ಚೆನ್ನಾಗಿದೆ. ಮುಂಬಯಿ ಬೆಂಗಳೂರುಗಳಲ್ಲೂ ನಟ್ಟಿರುವ ಗಿಡಮರಗಳ ನಾಮಾಂಕಿತ, ಅವವುಗಳ ಮೂಲಪ್ರದೇಶಗಳನ್ನೆಲ್ಲಾ — ತಿಳಿಸುವ ಏರ್ಪಾಟಿದೆ. ಕಲ್ಕತ್ತೆಯ ಉದ್ಯಾನ—ಗಾತ್ರದಲ್ಲಿ ದೊಡ್ಡದಾಗಿ ಕಂಡರೂ, ವ್ಯವಸ್ಥೆ ಮಾತ್ರ ಚೆನ್ನಾಗಿ ಇದ್ದಂತೆ ಅನಿಸಲಿಲ್ಲ. ಮೈಲುಮೈಲುಗಳ ದೂರಕ್ಕೆ ಹರಡಿದ್ದ ಆ ಕೃತಕೋದ್ಯಾನದಲ್ಲಿ ಅಸಂಖ್ಯಾತ ಗಿಡಮರಗಳು, ಕೊಳಗಳು ಇವೆಯಾದರೂ—ಒಂದು ಬಗೆಯ ಕಾನನ ಸೌಂದರ್ಯ ಅವುಗಳದ್ದು. ನಟ್ಟು ಬೆಳೆಸಿದಂತೆ ಕಾಣುವ ಬದಲು, ಅವ್ಯವಸ್ಥೆಯಿಂದ ಸಸ್ಯಗಳು ಬಿದ್ದು ಬೆಳೆದಂತೆ ಕಾಣುತ್ತವೆ. ಹೆಚ್ಚಿನ ಸಸ್ಯಜಾತಿಗಳಿಗೆ ನಾಮಕರಣದ ಬಿಲ್ಲೆಗಳೂ ಇದ್ದಿರಲಿಲ್ಲ. ಅದು ಕಲ್ಕತ್ತೆಯ ನಗರವಾಸಿಗಳಿಗೆ ರಜಾದಿನವನ್ನು ಕಳೆಯಲು ಅನುಕೂಲವಾಡಿಟ್ಟ ವಿಲಾಸ ಸ್ಥಳ ಎಂಬ ಭ್ರಮೆಯಾಗಬೇಕು. ಆದರೂ ಅಲ್ಲಿನ ಒಂದು ವೈಶಿಷ್ಟ್ಯವನ್ನು ಮರೆಯದೆ ಹೇಳಬೇಕಾಗುತ್ತದೆ. ಅಲ್ಲಿರುವ ಒಂದು ಆಲದ ಮರ ವಿಶೇಷ ಆದರಕ್ಕೆ ತಕ್ಕುದಾದುದು. ಅದು ಸುಮಾರು

ಆರೆಂಟು ಎಕ್ರೆ ವಿಸ್ತೀರ್ಣದಲ್ಲಿ, ತನ್ನ ನೂರಾರು ಕಾಂಡ ಬೀಳಲುಗಳನ್ನು ಬಿಟ್ಟುಕೊಂಡು, ಹಸುರಿನ ಹಿರಿಯ ಚಪ್ಪರವಾಗಿ ಕಾಣಿಸುತ್ತದೆ. ಅದರ ನಾಲ್ಕು ಸುತ್ತಲೂ ತುಸು ದೂರದ ತನಕ ಕಾಡನ್ನು ಸವರಿದಲ್ಲಿ, ಅದರ ಭವ್ಯತೆ ಇನ್ನಷ್ಟು ಚೆನ್ನಾಗಿ ಕಾಣಿಸಬಹುದು. ಈ ಮರ ಇಷ್ಟೊಂದು ವಿಶಾಲವಾಗಿ ಬೆಳೆಯಲು, ಇಷ್ಟೆಲ್ಲ ಬೀಳಲುಗಳನ್ನು ಊರಿ ಬೆಳೆಯಲು, ಸಾವಿರ ವರ್ಷಗಳ ಕಾಲವಾದರೂ ಸಂದಿರಬೇಕು.

ಈ ಉದ್ಯಾನದ ಒಂದು ಮಗ್ಗುಲಿಗೆ ಹೂಗ್ಲಿ ನದಿ ಹರಿಯುತ್ತದೆ. ನಾವು ಬರುವಾಗ ಅದರ ಮಗ್ಗುಲನ್ನು ಹಿಡಿದು ಬಂದಿದ್ದೆವು. ಅದರ ಇನ್ನೊಂದು ದಂಡೆಯಲ್ಲಿ, ಬಹುದೂರದ ತನಕ ನೌಕಾಶ್ರಯ, ಧಕ್ಕೆಗಳು ಕಾಣಿಸುತ್ತವೆ. ನದಿಯಲ್ಲಿ ಅಸಂಖ್ಯಾತ ಹಡಗುಗಳು ಓಡಾಡುತ್ತವೆ. ಕಲ್ಕತ್ತೆಯಿಂದ ಈ ಕಡೆಗೆ ಬರಲು ಹೌರಾ ನಿಲ್ದಾಣ ಸಿಗುತ್ತದೆ. ನಾವು ದಾಟಿದ ಹೌರಾ ಸೇತುವೆ ವಿಚಿತ್ರಾಕೃತಿಯದು. ನಾನು ಹಿಂದೆ ಹೋದಾಗ ಇದ್ದ ಸೇತುವೆ, ಈಗ ನಿರ್ಮೂಲವಾಗಿದೆ. ಯುದ್ಧಕಾಲದಲ್ಲಿ ಅದನ್ನು ಕಳಚಿ, ಬದಲು, ಇನ್ನಷ್ಟು ದೊಡ್ಡದಾದ ಸೇತುವೆಯನ್ನು ರಚಿಸಿದ್ದಾರೆ. ಕಾಂಟಿಲೀವರ್ ಪದ್ಧತಿಯಲ್ಲಿ ರಚಿಸಿದಂಥ ಈ ಸೇತು, ಹೂಗ್ಲಿನದಿಯನ್ನು ಒಂದೇ ಬಾಗಿಲಿನಲ್ಲಿ ದಾಟುತ್ತದೆ. ಅದರ ಕೆಳಗಡೆ ಹಡಗುಗಳು ಸಂಚರಿಸಬಹುದಾದಷ್ಟು ಅಂತರವಿದೆ. ಹಿಂದಣಕಾಲದಲ್ಲಿ ದೊಡ್ಡ ಹಡಗುಗಳು ಬಂದಾಗ, ಸೇತುವೆಯನ್ನೇ ಏರಿಸಿ, ಇಳಿಸುವ ವಾಡಿಕೆಯಿತ್ತು. ಈಗ ಹಾಗೆ ಮಾಡಬೇಕಾಗಿಲ್ಲ. ತುಂಬ ಅಗಲವೂ, ನೀಳವೂ ಆದ ಈ ಸೇತುವೆಯಲ್ಲಿ ವಾಹನ ಸಂಚಾರಕ್ಕೆ ನಾಲ್ಕು ಹಾದಿಗಳಿವೆ. ಎಲ್ಲ ವಾಹನ ವಿಶೇಷಗಳ ಭಾರವನ್ನು ಹೊತ್ತು ನಿಲ್ಲಬಲ್ಲ ಉಕ್ಕಿನ ರಚನೆ–ಅದರ ಕಮಾನಿನದು. ಇದೊಂದು ಎಂಜಿನಿಯರಿಂಗ್ ಸಾಹಸ ಎನ್ನಲು ಅಡ್ಡಿಯಿಲ್ಲ. ನಾವು ಉದ್ಯಾನದಿಂದ ಮರಳಿದವರು, ಈ ಸೇತುವೆಯನ್ನು ಹಾದು, ದಕ್ಷಿಣ ಕಲ್ಕತ್ತೆಯ ಕಾಳೀಘಾಟಿಗೆ ಬಂದೆವು. ಕಾಳೀ ಘಟ್ಟವೇ ಕ್ರಮೇಣ ಅಪಭ್ರಂಶವಾಗಿ ಕಾಳೀ ಕತಾ–'ಕಲ್ಕತ್ತಾ' ಆಯಿತು. ಕಾಳೀಘಾಟಿನ ಕಾಳಿಯ ಗುಡಿಯನ್ನು ಮಾತ್ರ ನಾವು ನೋಡಲು ಹೋಗಲಿಲ್ಲ. ಬದಲು ಗೆಳೆಯ ಲಕ್ಷ್ಮೀನಾರಾಯಣನ ನಿವಾಸದ ಹೊಟೇಲನ್ನು ಸಂದರ್ಶಿಸಿದೆವು. ನಮ್ಮ ಊರಿನವರೇ ನಡೆಸುತ್ತಿದ್ದ ಆ ಹೊಟೇಲಿನಲ್ಲಿ ಉಪಾಹಾರ ಮುಗಿಸಿಕೊಂಡು,

ಇನ್ನೊಮ್ಮೆ ಅಲೆದಾಟಕ್ಕೆ ಹೊರಟೆವು. ಕಾಳೀಘಾಟಿನಿಂದ ಮೂರುನಾಲ್ಕು ಮೈಲು ದೂರಕ್ಕೆ—ಒಂದು ಸುಂದರವಾದ ಸರೋವರವಿದೆ. ಅಲ್ಲಿಗೆ ಪ್ರತಿ ಸಂಜೆ ವಿಹಾರಕ್ಕೆ, ಸಾವಿರಾರು ಜನ ನಗರದ ನಿವಾಸಿಗಳು ಬರುತ್ತಾರೆ. ನಗರದ ದಟ್ಟಣೆಯಲ್ಲಿ ವಾಸಿಸುವ ಜನರಿಗೆ ತುಸುವಾದರೂ ಗಾಳಿ ಬೀಸಿ, ವಿಶ್ರಾಂತಿಕೊಡುವ ತಾಣ ಇದು. ಇಲ್ಲಿ ಸಂಜೆಯಲ್ಲಿ ಬಂದು ವಿಹರಿಸುವ ಆಬಾಲವೃದ್ಧರಲ್ಲಿಯೂ, ಒಂದು ವೈಶಿಷ್ಟ್ಯ ಕಾಣಿಸದೆಹೋಗದು. ಕಲ್ಕತ್ತೆಯೂ ಮುಂಬಯಿಯಂತೆ ದೊಡ್ಡದಾದ ಪಟ್ಟಣ. ಸಂಪತ್ತು ದಾರಿದ್ರ್ಯಗಳೆರಡರಿಂದಲೂ ತುಂಬಿ ತುಳುಕುವ ಬೀಡು. ನಾವು ಮುಂಬಯಿಯ ಮೆರಿನಾದಲ್ಲೋ, ಚೌಪಾಟಿಯಲ್ಲೋ ಹೋಗಿ ಕುಳಿತು ನೋಡಿದರೆ–ಅಲ್ಲಿ ಕಾಣುವ ಜನದಟ್ಟಣೆ ಇಲ್ಲಿ ಕಾಣಿಸದು; ಅಲ್ಲಿ ಕಾಣಿಸುವ ಅವಸರವೂ ಕಾಣಿಸುವುದಿಲ್ಲ. ವಿಹಾರಕ್ಕೆಂದು ಬಂದವರು ವಿರಾಮವಾಗಿಯೇ ಕುಳಿತುಕೊಳ್ಳುವುದು ಕಾಣುತ್ತದೆ. ಅಲ್ಲದೆ ಇಲ್ಲಿಯ ದೇಶಿಯ ಜನಗಳ, ಅಂದರೆ ಬಂಗಾಳಿಗಳ ಉಡುಗೆ, ನಮ್ಮ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡದೆ ಹೋಗುವುದಿಲ್ಲ. ಮುಂಬಯಿಯಲ್ಲಿ ಬಡವರೇ ಇರಲಿ, ಶ್ರೀಮಂತರಿರಲಿ,ಎಲ್ಲತೆರನ ಜನರೂ ಅರ್ಧ ಗಳಿಮೆಯನ್ನು ಉಡುಗೆಗಾಗಿಯೋ ಬಾಹ್ಯಾಡಂಬರಕ್ಕಾಗಿಯೋ ವ್ಯಯಿಸುತ್ತಿರುವಂತೆ ಕಾಣುತ್ತದೆ. ಇಲ್ಲಿ ಹಾಗಿಲ್ಲ. ಹೆಂಗುಸರಾಗಲಿ, ಮಕ್ಕಳಾಗಲಿ,ಮುದುಕರಾಗಲಿ,ಬಿಳಿಯ ಸೀರೆ,ಷರಾಯಿ, ಪಂಚೆಗಳನ್ನುಟ್ಟು ಅಲೆದಾಡುತ್ತಾರೆ. ಮುಂಬಯಿಯ ಸ್ತ್ರೀಯರಂತೆ ಇಲ್ಲಿಯ ನಾರಿಯರಲ್ಲಿ ಬಟ್ಟೆಯ ಆಡಂಬರವಿಲ್ಲ. ಬಣ್ಣ ಬೆಡಗುಗಳುಳ್ಳ ಯಾವ ಬಟ್ಟೆಯನ್ನೂ ಅವರು ತೊಡುವುದು ಕಾಣಿಸದು. ತರುಣಿಯರು ಸಹ ತೀರ ಸಾದಾ ಉಡಿಗೆಯಲ್ಲೇ ಅಲೆದಾಡುತ್ತಾರೆ. ಮುಂಬಯಿಯ ಮೆರಿನಾ ಬಣ್ಣಬಣ್ಣದ ರೇಶ್ಮೆ ಜರತಾರಿಗಳ ಪ್ರದರ್ಶನಾಲಯವಾಗಿ ಕಾಣಿಸುತ್ತದೆ. ಇಲ್ಲಿ ಅಂಥ ಒಂದೇ ಒಂದು ವಸ್ತ್ರವೂ ಕಾಣಸಿಗದು. ಎಲ್ಲರದೂ ಹೆಚ್ಚಾಗಿ ಬಿಳಿಯ ಉಡುಗೆ, ರಂಗುಡಿಂಗಿಲ್ಲದ ಉಡುಗೆ. ಬಣ್ಣದ ಉಡುಗೆ ತೊಡುವವರು ಸಹ, ಏನೊಂದು ಆಡಂಬರವಿಲ್ಲದ ಬಟ್ಟೆ ಉಡುತ್ತಾರೆ. ಇಂಥವರ ಎಡೆಯಲ್ಲಿ, ನಾವು ಕಂಡ ಒಂದೋ ಎರಡೋ ಬೆಡಗಿನ ಉಡುಗೆಗಳೆಂದರೆ, ನಾಡಿಗರಲ್ಲದ ಮಾರ್ವಾಡಿ ಮಹಿಳೆಯರದ್ದು.

ನಾನು ಕಂಡ ಬಂಗಾಳ ಅಸ್ಸಾಮುಗಳ ಜನಗಳ ಜೀವನದ ರೀತಿ

ಯಲ್ಲಿ ಈ ಒಂದು ಅಂಶವಂತು ತೀರ ಹೊಳೆದುಕಾಣುವ ಅಂಶ. ಬಂಗಾಲಿಗಳು ಭಾವನಾಶೀಲರೂ,ಆವೇಶಪೂರ್ಣರೂ—ಎಂಬ ಮಾತು ನಿಜ. ಅವರಿಗೆ ಪ್ರಾಚೀನ ಸಂಸ್ಕೃತಿ, ಸಂಪ್ರದಾಯಗಳ ಮೇಲೆ ಹೆಚ್ಚಿನ ಶ್ರದ್ಧೆ. ಅವರ ಮನಸ್ಸು ಉತ್ಸಾಹತಾಳುವುದೂ ಆವೇಶತಾಳುವುದೂ ಬೇಗ. ಸ್ವಾಭಾವಿಕವಾಗಿ ಇಂಥ ಮನಸ್ಸುಗಳಿಗೆ, ಬಣ್ಣ ಬೆಡಗುಗಳ ಹುಚ್ಚು ಹಿಡಿಯಬೇಕು. ಆದರೆ ಕಲ್ಕತ್ತೆಯಲ್ಲಿ ಮಾತ್ರ ಅದರ ವಿಪರ್ಯಾಸ ಕಾಣುತ್ತೇವೆ. ಅವರ ಬದುಕು ಸರಳವಾದದ್ದು. ಇಲ್ಲಿನ ಜನತೆಯ ಆಕೃತಿಯಾಗಲೀ ದೇಹ ದಾರ್ಢ್ಯವಾಗಲೀ ಬಡವಾದದ್ದೇ. ಅನ್ನ, ಮೀನು ಇವರ ಮುಖ್ಯವಾದ ಆಹಾರ. ಇದು ಬಡತನ ತುಂಬಿದ ದೇಶವಾದುದರಿಂದ—ನೆಲ ಫಲವತ್ತಾಗಿದ್ದರೂ, ಜನಸಂಖ್ಯೆ ಬಹಳವಾಗಿರುವುದರಿಂದ—ಬಡತನದ ಮುದ್ರೆ ಒಟ್ಟು ಜನಜೀವನದಲ್ಲಿಯೇ ಒತ್ತಿಕಾಣುತ್ತದೆ. ಆದರೆ ಬಡ ಜನರು, ಶ್ರೀಮಂತರ ಅನುಕರಣೆಮಾಡಿ ಡಾಂಭಿಕತನವನ್ನು ಬೆಳೆಸಿಕೊಂಡಿಲ್ಲ—ಎಂಬುದೊಂದು ಸಂತೋಷದ ವಿಚಾರ.

ನಾವು ನೋಡಲು ಬಂದ ಸರೋವರ, ಮಹಾ ಸರೋವರವೇನಲ್ಲ. ಅಗಲಕಿರಿದಾಗಿ, ಅಂಕುಡೊಂಕಾಗಿ ದೂರದ ತನಕ ವ್ಯಾಪಿಸಿದ ಕೆರೆಯೆನ್ನಬಹುದು. ಅದರ ಸುತ್ತು ಕುಳಿತಿರಲು ನಿಸರ್ಗ ಸಹಜ ಬಯಲಿವೆ. ಕೆಲವೇ ಆಸನಗಳಿವೆ. ಅಲೆದಾಡಲು ಕಾಲುಹಾದಿಗಳಿವೆ. ಇಲ್ಲಿ ಸುಂದರವಾದ ತರುಲತೆಗಳುಳ್ಳ ಉದ್ಯಾನಗಳನ್ನು ಅಪೇಕ್ಷಿಸಬೇಕಾಗಿಲ್ಲ. ಅದರಲ್ಲೂ ಬಡತನ ಕಾಣುತ್ತದೆ. ನಾವು ಸಂಜೆಯಾಗುವ ತನಕ ಇಲ್ಲಿ ಕುಳಿತಿದ್ದು, ಬಿಲ್ವೇಡಿಯರಿಗೆ ಮರಳಿದೆವು. ಕೇಶವನ್‌ರು ನಮಗಾಗಿ ಕಾದಿದ್ದರು. ನಾಲ್ಕಾರು ಮಂದಿ ಅವರ ಗೆಳೆಯರು ಅಲ್ಲಿ ಬಂದು ಕಲೆತಿದ್ದರು. ಗುಲ್ಲಿನ ಸಂಭಾಷಣೆ ಹೊರಡುತ್ತಲೇ ಇತ್ತು. ಇದು ಅವರ ಮನೆಯ ನಿತ್ಯ ಪದ್ಧತಿ. ನಗು, ಗದ್ದಲು ಉತ್ಸಾಹ ಕೇಶವನ್‌ರಿಗೆ ಸ್ವಾಭಾವಿಕವಾದದ್ದು. ದೈತ್ಯನ ಮೈಯಲ್ಲಿ ಮಗುವಿನ ಮನಸ್ಸು ತುಂಬಿಸಿರುವಂತೆ ಅವರು ವರ್ತಿಸುತ್ತಾರೆ. ಮನೆಗೆ ಎಳೆಯ ಮಕ್ಕಳು ಬಂದರೆಂದರೆ, ಮಗುವಿಗಿಂತ ಮಗುವಾಗಿ, ಅವರು ಕುಣಿಯುವ ಆಟ ಅಸೂಯೆ ಕೆರಳಿಸುವಂಥದು. ನಮ್ಮ ಮೈ ಬಲಿತರೂ ನಮ್ಮಲ್ಲಿನ ಶೈಶವ ಎಂದೂ ಅಳಿಯಬಾರದಷ್ಟೆ. ಅದು ಅಳಿದರೆ ನಮ್ಮ ಬಾಳು ಅಷ್ಟೇನೆ ದರಿದ್ರವಾಗುತ್ತದೆ. ಈ ಮಾತಿನ ಸತ್ಯವನ್ನು ನಾವು ಗೌಹತಿಗೆ ಹೋದಾಗ

ಇನ್ನೊಬ್ಬರಲ್ಲೂ ಕಂಡೆವು. ಆ ಘಟನೆಯನ್ನು ಮುಂದಕ್ಕೆ ಹೇಳುತ್ತೇನೆ.

ಕಲ್ಕತ್ತೆಯಲ್ಲಿ ದಿನದ ಹವೆ ಉಷ್ಣವಾಗಿಯೇ ಇರುತಿತ್ತು. ಉಷ್ಣಮಾನ 98°–100°ಗಳಿಗೆ ಮುಟ್ಟಿರಬಹುದು. ದಿನವೆಲ್ಲ ಬಾನಲ್ಲಿ ಬೆಳ್ಮುಗಿಲು ತುಂಬಿರುತಿತ್ತು. ರಾತ್ರಿ ಗುಡುಗು, ಗಾಳಿಗಳು ಮೇಳಯಿಸುತಿದ್ದುವು. ಒಂದೆರಡು ದಿನ ರಾತ್ರಿ ಮಳೆಯೂ ಬಡಿಯಿತು. ಇದರಿಂದ ಹವೆ ಶೀತಲಗೊಂಡು, ನಮ್ಮ ಭೋಜನಾನಂತರದ ನಿದ್ರೆ ತುಂಬ ಹಿತಕರವಾಯಿತು.

ಎರಡನೆಯ ದಿನ ಬೆಳಿಗ್ಗೆ ನಾವು ಸ್ನಾನ,ಉಪಾಹಾರಗಳನ್ನು ಮುಗಿಸಿ, ಇನ್ನೊಮ್ಮೆ ನಗರ ಪರಿಭ್ರಮಣೆಗೆ ಹೊರಟೆವು. ಮೊದಲಿನ ದಿನದಂತೆ ಲಕ್ಷ್ಮೀನಾರಾಯಣರಾಯರು ಕಾರನ್ನುತೆಗೆದುಕೊಂಡು ಮನೆಗೆ ಬಂದಿದ್ದರು. ಕಲ್ಕತ್ತೆಯು ಸಣ್ಣ ನಗರವೇನಲ್ಲ. ಅದರ ನಾಲ್ಕು ಮೂಲೆಗಳಿಗೆ ಹೋಗಿ ಬರುವುದು ಅಲ್ಪವೇಳೆಯಲ್ಲಿ ಸಾಧ್ಯವಾಗುವುದಕ್ಕೆ, ವಾಹನ ಸೌಕರ್ಯವಿದ್ದರೆ ತುಂಬಾ ಅನುಕೂಲ. ಅಲ್ಲದೆ ಬೇಸಿಗೆಯ ವೇಳೆ, ಹಗಲಲ್ಲಿ ನಡೆಯುವಾಗ ಗಳಿಗೆಗಳಿಗೆಗೂ ಬೆವರಿನ ಸ್ನಾನವಾಗುತ್ತದೆ.

ಮನೆಯಿಂದ ಹೊರಟ ನಾವು, ಮೊದಲು ದಕ್ಷಿಣೇಶ್ವರವನ್ನು ನೋಡ ಹೋದೆವು. ನಗರದಿಂದ ಆರೆಂಟು ಮೈಲು ದೂರವಾಗಿತ್ತು ಆ ಸ್ಥಳ. ದಕ್ಷಿಣೇಶ್ವರದ ಹೆಸರಿನೊಂದಿಗೆ ಬೆರೆತದ್ದು ಶ್ರೀ ರಾಮಕೃಷ್ಣ ಪರಮ ಹಂಸರ ನೆನಪುಗಳು. ರಾಸ್ಮನಿ ಎಂಬವಳು ಕಟ್ಟಿಸಿದ ಇಲ್ಲಿನ ದೇವಾಲಯದಲ್ಲೇ ಅರ್ಚಕರಾಗಿ, ಸಾಧಕರಾಗಿ ಶ್ರೀ ರಾಮಕೃಷ್ಣರು ಹೆಸರುಗೊಂಡದ್ದು. ಬಳಿಯಲ್ಲೇ ತುಂಬಿ ಹರಿಯುವ ಹೂಗ್ಲಿ ನದಿಯಿದೆ. ಇಲ್ಲಿನ ದೇವಾಲಯ ಬಂಗಾಲ ಪ್ರಾಂತಕ್ಕೆ ವಿಶಿಷ್ಟವಾಗಿ ಕಾಣಿಸುವ ವೇಸರ ಶೈಲಿಯ ವಾಸ್ತು ರಚನೆ. ನಮ್ಮ ಹಿಂದುಸ್ಥಾನದ ವಾಸ್ತು ಶಿಲ್ಪವನ್ನು ಬಲ್ಲವರು–ದ್ರಾವಿಡ, ನಾಗರ ಮತ್ತು ವೇಸರ ಎಂದು ಮೂರು ವರ್ಗಗಳಾಗಿ ವಿಂಗಡಿಸುತ್ತಾರೆ. ದ್ರಾವಿಡ ಶೈಲಿಯ ವ್ಯಾಪ್ತಿ ದಕ್ಷಿಣ ಹಿಂದುಸ್ಥಾನದಲ್ಲಿ; ನಾಗರ ಶೈಲಿಯು ಮಧ್ಯ ಮತ್ತು ಉತ್ತರ ಹಿಂದುಸ್ಥಾನದಲ್ಲಿ. ಆದರೆ ವೇಸರ ಶೈಲಿಯ ಪ್ರಸಾರ ಬಂಗಾಲದಲ್ಲಷ್ಟೇ ಆಗಿದೆ. ಇದು ದ್ರಾವಿಡ, ನಾಗರ ಶೈಲಿಗಳಿಗಿಂತ ಭವ್ಯವಾಗಿಲ್ಲವಾದರೂ ದೇಶಿಯ ಶೈಲಿಗಳಲ್ಲೊಂದಾಗಿದ್ದು, ತನ್ನದೇ ಆದ ಸೊಬಗುಳ್ಳದಾಗಿದೆ. ಇಂದಿಗೂ ಪ್ರಚಲಿತವಾಗಿರುವ ಬರ್ಮಾ ಬಂಗಾಲಗಳ ಮನೆಗಳ ಹುಲ್ಲು ಛಾವಣಿಯಂತೆ, ಈ ಶೈಲಿಯ ಗುಡಿಗೋಪುರಗಳು ಇವೆ. ನಾವು

ದಕ್ಷಿಣೇಶ್ವರವನ್ನು ಸೇರುವಾಗ, ಬೆಳಗಿನ ಹತ್ತು ಘಂಟೆಯಾಗಿರಬಹುದು. ದಕ್ಷಿಣೇಶ್ವರದ ಗುಡಿಯ ಮುಂಭಾಗದ ತೋಟ, ರಾಮಕೃಷ್ಣರ ತಪ್ಪೋ ಸಿದ್ಧಿಗೆ ರಂಗವಾಗಿದ್ದ ಪಂಚವಟಿಯನ್ನು ಕಂಡು, ಹಿಂದೆ ತೃಪ್ತನಾಗಿದ್ದೆ. ಆದರೆ ಈ ಬಾರಿ ಹಾಗಾಗಲಿಲ್ಲ. ಕಲ್ಕತ್ತಾ ನಗರ ಇಲ್ಲಿಯ ತನಕವೂ ಬೆಳೆದು ಬಂದಿದೆ. ಪಂಚವಟಿಯಲ್ಲಿ ಶಾಂತ ಆವರಣವನ್ನು ಕಾಣುವ ಬದಲು, ಜಾತ್ರೆಯ ಹಸರ ಕಂಡುಬರುತಿತ್ತು. ಅಂದು ಬಂಗಾಲಿಗಳ ಯುಗಾದಿಯಾಗಿದ್ದುದರಿಂದ, ಯಾತ್ರಿಕರ ಸಂಖ್ಯೆಯೂ, ಗದ್ದಲವೂ ತುಸು ಹೆಚ್ಚಾಗಿಯೇ ಇತ್ತು. ರಾಮಕೃಷ್ಣ ಮಿಶನ್ ಕೆಲಸಮಾಡುತ್ತಿರುವ ಈ ಊರಿನಲ್ಲಿಯೇ, ಇಂಥ ದೇವಾಲಯದ ವಠಾರವನ್ನು ಹೀಗೆ ಗೊಂದಲದ ಸಂತೆಮಾಡಿಯಾರು ಎಂದು ನಾನು ಎಣಿಸಿರಲಿಲ್ಲ. ಸುದೈವಕ್ಕೆ—ಗುಡಿಯ ಒಳಭಾಗವು ಇಂಥ ಗದ್ದಲಕ್ಕೆ ಗುರಿಯಾಗಿರಲಿಲ್ಲ. ಹಲವರು ಅಲ್ಲಿನ ಕಾಳಿಯ ದರ್ಶನಕ್ಕೆ ಬಂದಿದ್ದರು. ಹಲವು ಭಕ್ತರು ತಮ್ಮಿಷ್ಟಕ್ಕೆ ಭಜನೆಯ ಹಾಡುಗಳನ್ನು ಹಾಡುತ್ತ, ಗುಡಿಯಿಂದ ಗುಡಿಗೆ ಅಲೆದಾಡುತಿದ್ದರು. ಈಸ್ಥಳದಲ್ಲಿ ತುಸು ಹೊತ್ತನ್ನು ಕಳೆದಾದ ಮೇಲೆ ನಾವು, ನದಿಯ ಆಚೆಯ ದಂಡೆಯಲ್ಲಿರುವ ಬೇಲೂರಿಗೆ ಹೋದೆವು. ಬೇಲೂರು ರಾಮಕೃಷ್ಣ ಮಿಶನಿನ ಕೇಂದ್ರ ಸ್ಥಳವಾಗಿದೆ. ವಿಶಾಲವಾದ ಉದ್ಯಾನವೊಂದರಲ್ಲಿ ಅಲ್ಲಿನ ಮಠ ಮತ್ತು ದೇವಾಲಯಗಳಿವೆ. ಈ ಆವರಣದಲ್ಲಿ ಮಾತ್ರ ಸಂತೆಯ ಜನಕ್ಕೆ ಅವರು ಏನೂ ಅವಕಾಶ ಕೊಡುತ್ತಲಿಲ್ಲ. ಇಲ್ಲಿನ ದೇವಾಲಯದಲ್ಲಿ ಶ್ರೀ ರಾಮಕೃಷ್ಣರ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ಪ್ರತಿಮೆ ಆಧುನಿಕ ಶಿಲ್ಪ ಶೈಲಿಯದು. ಅದು ಚೆನ್ನಾಗಿದ್ದರೂ, ಗುಡಿಯೊಳಗಿನ ಪ್ರತಿಮೆಯಾಗುವಂಥ ರೇಖಾಭಂಗಿಗಳನ್ನು ಹೊಂದಿಲ್ಲ. ಗುಡಿಯ ಗರ್ಭಗೃಹ, ನವೀನ ಬಂಗಲೆಯೊಂದರ ಕೊಠಡಿಯಂತಿದೆ. ಆದರೆ ಒಟ್ಟು ದೇವಾಲಯದ ಆಕಾರ, ರಚನೆ, ಶೈಲಿಗಳು ದೇಶಿಯ ವಾಸ್ತು ಶೈಲಿಯನ್ನು ಬಳಸಿಕೊಂಡು ಮಾಡಿದ ಸುಂದರವಾದ ನಿರ್ಮಾಣವಾಗಿದೆ. ಎದುರಿನಿಂದಲೂ, ಎಡಬಲಗಳಿಂದಲೂ ಅದರ ಆಕೃತಿ ಚೆನ್ನಾಗಿ ಕಾಣಿಸುತ್ತದೆ. ದೇಹಲಿಯ ಬಿರ್ಲಾ ಮಂದಿರವಾಗಲೀ,ಗೋವಿಂದ ಮಾಲವೀಯವರು ಕಟ್ಟಲೆಳಸುತ್ತಿರುವ ಗುಡಿಯಾಗಲೀ ಈ ಮಂದಿರದ ಅರ್ಧ ಸೊಬಗುಳ್ಳದಾಗಿಲ್ಲ. ಈ ಗುಡಿ, ಕಟ್ಟಿಸಿದವರ ಮನದಲ್ಲಿ ನೈಜ ಭಕ್ತಿಯಿದ್ದುದರಿಂದಲೋ ಏನೋ, ಅವರಿಗೆ ದೇವಾಲಯಗಳ ವಿಚಾರ

ದಲ್ಲಿ ಹೆಚ್ಚಿನ ಗೌರವವಿದ್ದುದರಿಂದಲೋ ಏನೋ, ಬರಿಯ ಬಾಹ್ಯಾಡಂಬರದ ಕೃತಿಯಾಗಿ ಕಾಣಿಸುವುದಿಲ್ಲ. ನಾವು ಹೋದ ಗಳಿಗೆಯಲ್ಲಷ್ಟೆ ಗುಡಿಯ ಬಾಗಿಲು ತೆರೆದಿತ್ತು. ಒಳಗಿನ ಸಭಾಂಗಣ, ಗರ್ಭಗೃಹಗಳೆಲ್ಲ ನಮಗೆ ಕಾಣಲು ದೊರೆತುವು. ಕೆಲವು ನಿಮಿಷಗಳಲ್ಲೇ, ಹದಿನೆರಡು ಘಂಟೆಯಾದುದರಿಂದ, ಗುಡಿಯ ಬಾಗಿಲನ್ನು ಮುಚ್ಚಿದರು. ನಾವೂ ಅಲ್ಲಿಂದ ಹೊರಬಿದ್ದು ಮನೆಗೆ ಬಂದೆವು.

ಆ ಸಂಜೆ ತಿರುಗಿ ಚೌರಂಗಿ, ಧರ್ಮತಲ ಮೊದಲಾದ ಪಟ್ಟಣದ ಮುಖ್ಯ ಭಾಗಗಳನ್ನು ನೋಡಲು ಹೋದೆವು. ಸಿನೇಮಾ ಗೃಹವೊಂದರ ದರ್ಶನಮಾಡಿದೆವು. 'ಜೋನ್ ಒಫ್ ಆರ್ಕ್' ಬಣ್ಣದ ಚಿತ್ರ ನಡೆಯುತಿತ್ತು. ಚಿತ್ರ, ಆರಂಭದಲ್ಲಿ ಚೆನ್ನಾಗಿತ್ತು. ಮುಂದೆ ಅನುರಕ್ತಿ, ಅತಿ ನಾಟಕೀಯತೆಗಳಿಂದ ಅಂದಗೆಟ್ಟಿತು. 'ಸಾಂಗ್ ಓಫ್ ಬರ್ನಾಡೆಟ್'ದಲ್ಲಿ ಇಂಥದೇ ಒಂದು ವಿಷಯವನ್ನಾರಿಸಿಕೊಂಡಿದ್ದರು. ಅಲ್ಲಿ ಕಾಣಿಸುವ ಭಕ್ತಿಯಾಗಲೀ, ಚರ್ಚಿನಲ್ಲಿ ಕಾಣುವ ಆವರಣವಾಗಲೀ, ಇದಕ್ಕಿಂತ ಎಷ್ಟೋ ಸುಂದರವಾಗಿದೆ. ಈ ಚಿತ್ರದಲ್ಲಿ ಕಲಾ ಸೌಂದರ್ಯಕ್ಕಿಂತ ಬಾಹ್ಯಾಡಂಬರವೇ ಅಧಿಕವೆಂದು ಕಾಣಿಸುತಿತ್ತು.

ಮೂರನೆಯ ದಿವಸ, ನಾವು ಇಲ್ಲಿನ ನಿರಾಶ್ರಿತರ ವಸತಿಗಳನ್ನು ಕಾಣಬೇಕೆಂದು ಸಿಯಾಲ್ದಕ್ಕೆ ಹೊರಟೆವು. ಎರಡು ವರ್ಷಗಳ ಹಿಂದೆ ತೊಡಗಿದ ಹಿಂದೂ ಮುಸಲ್ಮಾನ ವೈಷಮ್ಯದ ಫಲವಾಗಿ, ಸಾವಿರಾರು ಜನ ಜೀವ ಕಳೆದುಕೊಂಡುದನ್ನು, ರಕ್ತದಿಂದ ಪಂಜಾಬ್, ದೇಹಲಿ, ಪೂರ್ವ ಬಂಗಾಳವನ್ನು ತೊಯ್ದುದನ್ನು ಕೇಳಿದ್ದೇವಷ್ಟೆ. ಆ ಉರಿಯ ನೆನಪು ಇನ್ನೂ ಮರೆತಿಲ್ಲ. ಅದರಿಂದಾಗಿ ತಳಗೆಟ್ಟ ಲಕ್ಷಾಂತರ ಜನಗಳು ಇನ್ನೂ ತಮ್ಮ ಹೊಸ ನೆಲೆಯಲ್ಲಿ ಸ್ಥಾಪಿತರಾಗಿಲ್ಲ. ಅಷ್ಟರೊಳಗೇನೆ ಪೂರ್ವ ಬಂಗಾಳದಲ್ಲಿ –ಇನ್ನೊಮ್ಮೆ ಕೋಲಾಹಲ ಪ್ರಾರಂಭಿಸಿತು. ದಿನವಹಿ ಹತ್ತು ಸಾವಿರಕ್ಕೆ ಮೀರಿದ ಜನಸಂಖ್ಯೆ, ಅಲ್ಲಿಂದ ಪಶ್ಚಿಮ ಬಂಗಾಳಕ್ಕೆ ಬರತೊಡಗಿತು. ಕಲ್ಕತ್ತೆಯು ನಿರಾಶ್ರಿತರು ಬಂದು ಕಲೆಯುವ ಒಂದು ನಿಲ್ದಾಣವಾಗಿತ್ತು. ಅವರ ಗೋಳನ್ನು ಕಾಣುವುದು ಕುತೂಹಲ ದೃಷ್ಟಿಯಿಂದ ಮಾತ್ರ ಸಾಧ್ಯವೇ ಹೊರತು ಬೇರೆಯಲ್ಲ. ನಾವು ಹೋದದ್ದು ರೈಲ್ವೆ ನಿಲ್ದಾಣಕ್ಕೆ. ಹಾಗೆ ಅವರ ವಸತಿಯನ್ನು ನೋಡುವುದಾದರೆ, ಇಲ್ಲಿಗೆ ನಾಲ್ವತ್ತು ಮೈಲು ದೂರದ

ರಾಣೀ ಘಾಟ್ ಎಂಬಲ್ಲಿಗೂ ಹೋಗಿ ಬರುವ ಅನುಕೂಲತೆ ಮಾಡಿಕೊಡುವ -ಎಂದು ಒಬ್ಬ ಗೆಳೆಯರು ನುಡಿದಿದ್ದರು. ನಾವು ಬರಿಗಣ್ಣಿನಿಂದ ನೋಡುವ ಮೂಕ ಪ್ರೇಕ್ಷಕರಾಗಿರುವಷ್ಟು ಕಾಲ, ನಮ್ಮ ಪಾಲಿಗೆ ಸೀಯಲ್ಡಾವೂ ಒಂದೇ, ದೂರದ ರಾಣೀಘಾಟೂ ಒಂದೇನೆ. ಬರಿಯ ಸಿಯಲ್ಡಾವನ್ನಷ್ಟೆ ನೋಡಿ ಮರಳಿದೆವು.

ಸೀಯಲ್ಡಾ ಹೌರಾದಂತೆ ಹಿರಿದಾದ ನಿಲ್ದಾಣ. ಅಲ್ಲಿಗೆ ಬಂದು ಹೋಗುವ ನಿತ್ಯ ಪ್ರವಾಸಿಗಳ ಸಂಖ್ಯೆಯೇ ಸಾವಿರಾರು. ಅವರೆಡೆಯಲ್ಲಿ ಗಳಿಗೆಗಳಿಗೆಗೂ ನಿರಾಶ್ರಿತರನ್ನು ತಂಡೋಪತಂಡವಾಗಿ ತಂದು ಸುರಿಯುತ್ತಿದ್ದ ರೈಲುಗಳು ಎಷ್ಟೋ ಇವೆ. ಬಂದವರಿಗೆ ಹತ್ತುವುದಕ್ಕೆ ಎಡೆಯಿಲ್ಲ; ಇಳಿಯುವುದಕ್ಕೆ ಎಡೆಯಿಲ್ಲ. ನಿಲ್ದಾಣದ ಪ್ಲೇಟ್ ಫೋರ್ಮಿನಲ್ಲೂ ಮತ್ತು ಸುತ್ತುಮುತ್ತಲಿನ ರಸ್ತೆಯ ಪಕ್ಕಗಳಲ್ಲೂ, ಕೆಲವು ದಿನಗಳಿಂದಲೇ ಬಂದು ಬಿಡಾರವೆಸಗಿದ ಬಂಗಾಲಿ ಹಿಂದೂ ನಿರಾಶ್ರಿತರುಗಳ ಸಂಖ್ಯೆ ಅಪರಿಮಿತವಾಗಿತ್ತು. ಹಿರಿಯರಾರ ಮುಖದಲ್ಲೂ ಕಳೆ ಇದ್ದಿರಲಿಲ್ಲ; ನಗುವಿದ್ದಿರಲಿಲ್ಲ. ಸ್ಥಂಭಿತ ದೃಷ್ಟಿಯೊಂದೇ ಕಾಣುತಿತ್ತು. ನಿನ್ನೆಯ ಬದುಕನ್ನು ಮರೆಯಲಾರದೆ, ನಾಳೆಯ ಇರವನ್ನು ಎಣಿಸಲಾರದೆ, ಇಂದಿನ ಗಳಿಗೆಯನ್ನು ದಿಙ್ಮೂಢರಾಗಿ ಕಾಣುತ್ತಿರುವ ಆ ಬಡಪಾಯಿಗಳ ನೋಟ ಹೇಳಿತೀರದು. ಹೊರಗಿನ ಬಿಸಿಲಿಗೆ ಕುಳಿತಿದ್ದು, ಕುಳಿತ ಚಾಪೆಯನ್ನೇ ತಲೆಗೆತ್ತಿ ಹಿಡಿಯುವವರು ಕೆಲವರು; ಒಳಗಿನ ಸೆಕೆಗೆ ಬಸವಳಿದು ತೂಕಡಿಸುವವರು ಹಲವರು. ಸೆಕೆಯನ್ನು ತಡೆಯಲಾರದೆ ಬತ್ತಲೆ ತಿರುಗುವ, ಕಿರುಚುವ ಎಳೆಗೂಸುಗಳೆಷ್ಟೊ! ಬದುಕಿನ ಮುನ್ನೆಲೆಯನ್ನರಿಯಲಾರದೆ ಕಣ್ಣರಳಿಸಿಯೂ, ಶೂನ್ಯ ದೃಷ್ಟಿಯಿಂದ ನೋಡುತ್ತಿದ್ದ ತಾಯಿಯೊಬ್ಬಳ ನೋಟ ಈಗಲೂ ನನಗಾಗುತ್ತದೆ. ಪುಟ್ಟ ಕೂಸೊಂದು ಆಕೆಯ ಬಡಸ್ತನಗಳನ್ನು ಜಗ್ಗಿ, ಇಲ್ಲದ ಹಾಲನ್ನು ಕುಡಿಯಲು ಹವಣಿಸುತಿತ್ತು. ಅವರಲ್ಲಿ ಕೆಲವರು, ಹಸುಗೆಯಾಗಿ ಪಡೆದ ಮಂಡಕ್ಕಿಯನ್ನು ನೀರಲ್ಲಿ ಕಲಸಿ, ತಮ್ಮ ಹಸಿವೆಯನ್ನು ಹಿಂಗಿಸಿಕೊಳ್ಳುತ್ತಲಿದ್ದರು. ಅದಕ್ಕಾಗಿ ಕೈ ನೀಡುತಿದ್ದ ಕೂಸೊಂದರ ಚಿತ್ರ ಇನ್ನೂ ನನ್ನ ಸ್ಮೃತಿ ಪಥದಲ್ಲಿ ಉಳಿದೆ.

ಹೆಚ್ಚುಕಡಿಮೆ ಅಲ್ಲಿ ಸೇರಿದ ಪ್ರತಿಯೊಂದು ಕುಟುಂಬವೂ ಇಂಥ ದುರ್ಗತಿಯಲ್ಲಿ ಮುಳುಗಿತ್ತು. ಹೀಗೆ ಒಬ್ಬರಲ್ಲ; ಇಬ್ಬರಲ್ಲ; ಮಾನವನ

ದ್ವೇಷದ ಪರಿಣಾಮವಾಗಿ, ಒಂದೂವರೆ ಮಿಲಿಯ ಜನಸಂಖ್ಯೆ ಇಂಥ ಹತ ಭಾಗ್ಯ ಸ್ಥಿತಿಗೆ ಒಳಗಾಗಿತ್ತು. ಇದ್ದ ತುಣುಕು ನೆಲವನ್ನು, ಮುರುಕು ಮನೆಯನ್ನು, ಸುತ್ತುವರಿದ ಬಂಧು ಬಳಗವನ್ನು ಕಳೆದುಕೊಂಡು, ಮರೆತು, ಬಿಟ್ಟೋಡಿ ಬಂದ ಈ ನಿರಾಶ್ರಿತರು ನಾಳೆ ಎಲ್ಲಿ ದಿನವನ್ನು ಕಳೆಯಬೇಕು? ಯಾವ ಸರಕಾರವೇ ಆಗಲಿ, ಅವರಿಗೆ ಎಷ್ಟು ನೆರವಾದೀತು? ಈ ಪ್ರಶ್ನೆಯನ್ನು ದೇಶದ ಜನ ಎಷ್ಟು ಮರುಕದಿಂದ ನೋಡಬಲ್ಲರು?

ನಾವು ಕಲ್ಕತ್ತೆಯಲ್ಲಿದ್ದ ವೇಳೆಯಲ್ಲೆಲ್ಲ ಅಲ್ಲಿನ ಪತ್ರಿಕೆಗಳಲ್ಲಿನ ಅಗ್ರ ಲೇಖನಗಳನ್ನು ಓದದೆ ಇರಲಿಲ್ಲ. ಆ ಬರಹಗಳಲ್ಲಿ ಅನ್ಯಾಯಕ್ಕೊಳಗಾದ ಬಡವರಿಗಾಗಿ ಮರುಕ ಕಾಣುತಿತ್ತು. ಆದರೆ ದೇಶವನ್ನು ಹಿಂದೂ ರಾಷ್ಟ್ರವನ್ನಾಗಿಮಾಡುವ ಆವೇಶಾಂಧ ಭಕ್ತಿ, ಸೇಡಿನ ಹಂಬಲ, ಯುದ್ಧದ ಮಾತುಗಳು—ಅವುಗಳಲ್ಲಿ ತುಂಬಿಕೊಂಡಿದ್ದುವು. ಯುದ್ಧ ಮಾಡುವವರಾರು? ಮಾಡಬೇಕಾದವರಾರು? ಅದರಿಂದ ದೊರೆಯಬಹುದಾದ ತೀರ್ಮಾನವೇನು—ಎಂದು ಊಹಿಸುವವರು ಇದ್ದಿಲ್ಲ. ಪರಿಣಾಮದಲ್ಲಿ—ಒಂದೂವರೆ ಮಿಲಿಯ ನಿರಾಶ್ರಿತರ ಬದಲು, ಹತ್ತು ಮಿಲಿಯ ಜನಗಳ ಹೆಣ, ಅದರ ಮುಮ್ಮಡಿಯಷ್ಟು ಜನಗಳ ಮೂಲೋಚ್ಚಾಟಣೆಯಾದೀತಲ್ಲವೇ? ಕೆಸರಿನಿಂದ ಕೆಸರನ್ನು ತೊಳೆಯಲು ಹೋದರೆ ಮೈ ಎಲ್ಲಾ ರಾಡಿಯಾದೀತು—ಎಂಬ ದೂರದ ದೃಷ್ಟಿ ಎಷ್ಟು ಜನರಿಗೆ ಇದ್ದೀತು. ಕೆರಳಿಸುವಷ್ಟು, ತಣಿಸುವುದು ಸುಲಭದ ಕೆಲಸವಲ್ಲ.

ನಾವು ದೇಹಲಿಯಲ್ಲಿದ್ದಾಗಲೇ 'ಲಿಯಾಖತ್ ಆಲಿ', ಅಲ್ಲಿಗೆ ಸಂಧಾನಕ್ಕೆ ಬಂದಿದ್ದರು. ನೆಹರು—ಲಿಯಾಖತರ ಸಂಧಾನದ ತೀರ್ಮಾನ ಕಲ್ಕತ್ತೆಯಲ್ಲಿದ್ದಾಗಲೇ ಕೇಳಲು ದೊರೆಯಿತು. ಬಂಗಾಲದ ಕೇಂದ್ರ ಮಂತ್ರಿಗಳಾದ ನಿಯೋಗಿ ಮತ್ತು ಮುಖರ್ಜಿಯವರು, ಸಂಧಾನದ ಮೇಲಿನ ಅವಿಶ್ವಾಸ ಸೂಚನೆಯಿಂದ, ಆಗ ತಾನೆ ಮಂತ್ರಿಮಂಡಲದಿಂದ ಹೊರಕ್ಕೆ ಬಂದಿದ್ದರು. ನಿಜ, ಇದು ಹಿಂದುಗಳ ಆತ್ಮಾಭಿಮಾನವನ್ನು ಹೆಚ್ಚಿಸುವ ಕೃತಿಯಾಗಿ ಕಾಣಿಸಬಹುದು. ಮನೆಯನ್ನು ಕಳೆದುಕೊಂಡವರ ಬಗ್ಗೆ, ಜೀವ ಕಳೆದುಕೊಂಡವರ ಬಗ್ಗೆ, ಅನುತಾಪ ತೋರಿಸುವ ಬಗೆಯೂ ಅಹುದು. ಆದರೆ ನಿರಾಶ್ರಿತರ ಭಯವನ್ನು ಕಳೆದು, ಅವರಿಗೊಂದು ನೆಲೆಯನ್ನು ಒದಗಿಸಿ, ಅಂಥವರ ಪಂಗಡ ಇನ್ನಿನ್ನು ಬೆಳೆಯದಂತೆ ಮಾಡುವ ಕೃತಿ ಮಾತ್ರ ಅದ

ರಿಂದ ಸಾಧ್ಯವಾದೀತೇ? ದೇಶವೆಲ್ಲ ಉದ್ರೇಕಗೊಂಡುದರಿಂದ ಈ ಸಮಸ್ಯೆ ಪರಿಹಾರವಾದೀತೇ?

'ಸಿಯಾಲ್ಡಾ'ದ ಕಿರುನೋಟ, ಪೂರ್ವಪಶ್ಚಿಮ ಬಂಗಾಳದ ಹಿರಿಯ ಸಮಸ್ಯೆಯ ಒಂದು ಅಗಳು ಮಾತ್ರ. ಸಿಯಾಲ್ಡಾದಲ್ಲಿ ಇದ್ದವರು ಹತ್ತಿಪ್ಪತ್ತು ಸಾವಿರ ಜನ ಇರಬಹುದು. ಹಾಗೆಯೇ ದಿನಕ್ಕೆ ಅಷ್ಟಷ್ಟು ಮಂದಿ ಬರುತ್ತಲೇ ಇದ್ದಾರೆ. ಅವರಿಗಾಗಿ ಉದ್ರೇಕಗೊಳ್ಳುವ ನಾವು, ಕಾರ್ಯರೂಪದಲ್ಲಿ, ಈ ಬಡಪಾಯಿಗಳ ಸಲುವಾಗಿ ಏನು ಸಹಾನುಭೂತಿ ತೋರುತ್ತಿದ್ದೇವೆ? ಸಹಾಯ ನೀಡುತ್ತಿದ್ದೇವೆ? ಹಾಗಿರಲು ನಾವು ಉರಿವ ಬೆಂಕಿಗೆ ತುಪ್ಪ ಸುರಿಯುವ ಬದಲು, ತಣ್ಣಗಾದರೂ ಕುಳಿತಿರಬಾರದೇ?

ತತ್ಕಾಲಕ್ಕೇನೋ ನೆಹರು–ಲಿಯಾಖತ್ ಸಂಧಾನವು ಪರಿಣಾಮಕಾರಿಯಾಗುವ ಆಸೆ ಉಂಟಾಗಿದೆ. ಹಾಗಾಗುವಂತೆ ಆವರಣವನ್ನು ಕಲ್ಪಿಸುವುದು ನಮ್ಮೆಲ್ಲರ ಕರ್ತವ್ಯ. ಉರಿಯುವ ಬೆಂಕಿಗೆ ಗಾಳಿ ಬೀಸುವ ಕೆಲಸ ಪರಾಕ್ರಮದ್ದೆಂದು ನನಗನಿಸುವುದಿಲ್ಲ.

'ಸಿಯಾಲ್ಡಾ'ದಲ್ಲಿ ಕಂಡ ನೋಟ, ನಾನು ತೆಗೆದಿರುವ ಅನೇಕ ಚಿತ್ರಗಳು, ಜನಜೀವನದ ನರಕಯಾತನೆಯನ್ನು ಮನದಲ್ಲಿ ಚಿರಕಾಲ ಉಳಿಸುವಂಥವು. ಆದರೂ, ಈ ಬಗ್ಗೆ ನಾನೇನು ಮಾಡಿದ್ದೇನೆ–ಎಂಬ ಪ್ರಶ್ನೆಯನ್ನು ಅವು ಕೇಳುತ್ತಲಿವೆ.

ಕಲ್ಕತ್ತೆಯಲ್ಲಿ ನಾವಿದ್ದ ಮೂರನೆಯ ದಿವಸ ಇದು. ಸಂಜೆ ಶ್ರೀಪತಿ ಲಕ್ಷ್ಮೀನಾರಾಯಣರು ನನ್ನನ್ನು ನನ್ನಪಾಡಿಗೆ ಬಿಟ್ಟು, ಬಂಗಾಲಿ ಚಲಚ್ಚಿತ್ರವೊಂದನ್ನು ನೋಡಹೋದರು. ನಾನೊಂದು ಉಪನ್ಯಾಸಕ್ಕೆ ಬಲಿಯಾದೆ. ಮೈಸೂರಿನ ಕೃಷ್ಣಮೂರ್ತಿ ಎಂಬ ಒಬ್ಬ ಉಪಾಧ್ಯಾಯರು, ನನ್ನನ್ನು ಅರಸಿಕೊಂಡು ಬಂದು, ಅಲ್ಲಿನ ವಂಗೀಯ ಹಿಂದೀ ಸಾಹಿತ್ಯಪರಿಷತ್ತಿನಲ್ಲಿ ಭಾಷಣ ಮಾಡಬೇಕಾಗಿ ಕೇಳಿದರು. ಹೊಸ ಜನರ ಪರಿಚಯವಾಗುತ್ತದೆ–ಎಂಬ ಆಸೆಯಿಂದ, ನಾನು ಒಪ್ಪಿಕೊಂಡು ಅವರ ಜತೆಗೆ ಹೋದೆ. ಉಪನ್ಯಾಸವೆಂದೊಡನೆಯೇ ಯಾರೊಬ್ಬರೂ ಗಾಬರಿಯಾಗಬೇಕಾಗಿಲ್ಲ. ಸಾವಿರಾರು ಜನರು ಕಿಕ್ಕಿರಿಯುವ ಮಹಾಸಭೆಯೆಂದು ಬೆದರುವ ಕಾರಣ ಇಲ್ಲವೇ ಇಲ್ಲ. ಅಲ್ಲದೆ ವಂಗ, ಹಿಂದೀ ಸಾಹಿತ್ಯಗಳು ನಮಗೆಷ್ಟು ಗೊತ್ತೋ, ನಮ್ಮ ಸಾಹಿತ್ಯ ಅಂದರೆ ಕನ್ನಡ ಸಾಹಿತ್ಯ ಅಲ್ಲಿನವರಿಗೆ ಅಷ್ಟೇ ಗೊತ್ತು. ಆದುದ

ರಿಂದ, ನನ್ನ ಉಪನ್ಯಾಸಕ್ಕೆ ಬಹಳ ಮಂದಿ ಬಂದಾರೆಂಬ ಅಂಜಿಕೆ ನನಗಂತು ಇದ್ದೇ ಇರಲಿಲ್ಲ. ನಾನು, ನನ್ನನ್ನು ಕರೆದೊಯ್ಯಲು ಬಂದಿರುವ ಕೃಷ್ಣ ಮೂರ್ತಿಯವರು, ನಮ್ಮ ಮಿತ್ರರೊಬ್ಬರು—ಮೂವರೂ ಸೇರಿ, ಅಲ್ಲಿಗೆ ಹೋಗುವಾಗ, ಅಲ್ಲಿದ್ದ ಜನಸಂಖ್ಯೆಯು ನಮ್ಮಷ್ಟೇ ಇತ್ತು. ಆರುಮಂದಿಗೆ ಸಮನಾಗಿ ಕಾಫಿ ಬಂದಿತು. ಅದನ್ನು ಕುಡಿದೆವು. ತಾಂಬೂಲ ಚರ್ವಣ ಮಾಡಿದೆವು. 'ನೀವೆಲ್ಲ ಎಂಥ ಕೆಲಸ ಮಾಡುತ್ತಿದ್ದೀರಿ?' ಎಂದು ಕೇಳಿದೆವು. ಅಲ್ಲಿಯ ಆ ಸಂಸ್ಥೆಯ ಸಂಚಾಲಕರಾದ ಶುಕ್ಲಾ ಎಂಬವರನ್ನು ಅಧ್ಯಕ್ಷರನ್ನಾಗಿರಿಸಿಕೊಂಡು, ಸಭೆಯನ್ನು ತೊಡಗಿಯೇ ಬಿಟ್ಟೆವು. ಯಾರಿಗೆ ಕೇಳಿಸದಿದ್ದರೂ ನಮ್ಮ ಸ್ವರ ನಮಗೆ ಕೇಳಿಸದಿರುತ್ತದೆಯೇ? ಅಧ್ಯಕ್ಷರು ನನಗೆ ಸ್ವಾಗತವನ್ನು ಬಯಸಿದರು. ಕೃಷ್ಣಮೂರ್ತಿರವರು ನನ್ನ ಪರಿಚಯ ಮಾಡಿಕೊಟ್ಟರು. ನಾನು ಉಪನ್ಯಾಸ ಮಾಡಿದೆ. ನನಗೆ ಬಂದಿದ್ದ ಹಿಂದೀ ಭಾಷೆ ಎಷ್ಟೋ ಹಿಂದೆ ಮರವೆಯಾಗಿತ್ತು. ಹಾಗಾಗಿ ಉಪನ್ಯಾಸಕ್ಕೆ ನನಗೆ ದೊರಕಿದ ಸಾಧನವು ಇಂಗ್ಲಿಷ್ ಭಾಷೆ. ಅದರಲ್ಲೇ ಏನೇನೋ ಹರಟ ತೊಡಗಿದೆ. ಆ ವೇಳೆಯಲ್ಲಿ ಇನ್ನೂ ಮೂರು ಮಂದಿ ಹಿಂದೀ ಪ್ರೇಮಿಗಳು ಬಂದು ಸೇರಿದರು. ಒಂದು ಒಂದೂವರೆ ತಾಸಿನಲ್ಲಿ ನಮ್ಮ ಕೆಲಸ ಕೊನೆಗೊಂಡಿತು. ಕಲ್ಕತ್ತೆಯಂಥ ನಗರದಲ್ಲಿ—ಹೆಚ್ಚುಕಡಿಮೆ, ಹಿಂದಿಯೂ ಹೊಸತೇ. ಕನ್ನಡವೂ ತೀರ ಹೊಸತು. ಆದರೆ ಅಲ್ಲಿ ಕೂಡಿದ ಹಿಂದೀ ಪ್ರೇಮಿಗಳ ಮನಸ್ಸಿನಲ್ಲಿ—ಎಲ್ಲ ಸಾಹಿತಿಗಳೂ ಹಿಂದಿಯನ್ನು ಅಭ್ಯಾಸಮಾಡಿ, ಅದರಲ್ಲೇ ಬರೆಯಬೇಕು—ಎಂಬ ಆಸೆಯಿದ್ದಂತೆ ಕಾಣುತ್ತದೆ. ನಾನಿನ್ನೂ ಅಷ್ಟು ಆಶಾವಾದಿಯಾಗಿಲ್ಲ. ಅವನವನ ಮಾತಿನಲ್ಲಿ ಸಾಹಿತಿಗೆ ಹೇಳಬರುವ ಸೌಲಭ್ಯ, ಉಕ್ಕು, ಉತ್ಸಾಹ, ಇನ್ನೊಂದು ಭಾಷೆಯಲ್ಲಿ ಬರಲಾರದು—ಎಂಬ ನಂಬಿಕೆಯಿಂದಲೇ ಆ ದಿನ ಮನೆಗೆ ಮರಳಿದೆ.

ಮನೆಯಲ್ಲಿ ನಿತ್ಯದಂತೆ ಗೆಳೆಯರ ಸಂದರ್ಶನ, ಸರಸ ಸಲ್ಲಾಪಗಳು ತಾಸು ಎರಡು ತಾಸುಗಳ ತನಕ ನಡೆದುವು. ಮರುದಿನ ನಾನೂ ಶ್ರೀಪತಿಯೂ ಅಸ್ಸಾಮು ಯಾತ್ರೆ ಕೈಕೊಂಡೆವು. ಅದನ್ನು ಯಾತ್ರೆ ಅನ್ನುವುದಕ್ಕಿಂತ ವಿಹಾರ ಅನ್ನಬಹುದು. ಏಕೆಂದರೆ ಅಲ್ಲಿ ನಾವು ಕಳೆದುದು ನಾಲ್ಕು ದಿನ ಮಾತ್ರ. ನಾಲ್ಕನೆಯ ದಿನದ ಸಂಜೆಗೇನೆ ಕಲ್ಕತ್ತಾನಗರಕ್ಕೆ ಮರಳಿದೆವು. ಐದನೆಯ ದಿನ ಹಗಲನ್ನು ಕಳೆದದ್ದು ಕಲ್ಕತ್ತೆಯಲ್ಲಿ. ಆ ದಿನದ

ಕಥೆ ಹೆಚ್ಚಿಗೆ ಹೇಳುವಂಥದೇನೂ ಇರಲಿಲ್ಲ. ಬೆಳಿಗ್ಗೆ ಇನ್ನೊಮ್ಮೆ ನಗರ ಸಂಚಾರ. ಊರಿನ ಕೆಲವೊಂದು ದೊಡ್ಡ ವಸ್ತ್ರಾಲಯಗಳನ್ನೋ, ವ್ಯಾಪಾರಿ ಸಂಸ್ಥೆಗಳನ್ನೋ ನೋಡುತ್ತ ತಿರುಗಾಡಿದೆವು. ದಿನದ ಬಿಸಿಲು ಕ್ರೂರವಾಗಿತ್ತು. ತಿರುಗಾಟ ಅಷ್ಟೊಂದು ಸುಖಕರವಾಗಿರಲಿಲ್ಲ. ಆದರೆ ಶ್ರೀಪತಿಗೆ ಎಂಥ ಬಿಸಿಲೇ ಇರಲಿ, ಸೆಕೆಯೇ ಇರಲಿ—ಕಲ್ಕತ್ತೆಯಲ್ಲಿ ಸುಮ್ಮನೆ ಕುಳಿತಿರುವುದಕ್ಕೆ ಇಷ್ಟವಾಗುತ್ತಿರಲಿಲ್ಲ. ತಿರುಗಾಡುವ ಆಸೆ ಬಹಳ. ಅವನಂತು ನನಗಿಂತ ಹೆಚ್ಚಾಗಿ ಹಿಂದಣ ದಿನ, ಗೆಳೆಯರನ್ನು ಕೂಡಿಕೊಂಡು ನಗರದ ಬೀದಿಗಳನ್ನೆಲ್ಲ ಅಲೆದುಬಂದಿದ್ದ. ನನ್ನ ಇಂಥ ಹುಚ್ಚುತನ ಎಂದೋ ಮಾಯವಾಗಿತ್ತು. ಜನಸಮೂಹ ಕಂಡರೆ, ಗದ್ದಲ ಕಂಡರೆ, ನನ್ನ ಮನಸ್ಸು ಹಿಂಜರಿಯುತ್ತದೆ. ಅದನ್ನು ಕಂಡಾಗಲೆಲ್ಲ 'ಎಂದು ತಿರುಗಿ ನನ್ನ ಹಳ್ಳಿಯ ಮೂಲೆಯನ್ನು ಸೇರುತ್ತೇನೆ' ಎಂಬ ಆಸೆಯಾಗುತ್ತದೆ. ಪೇಟೆಯ ಅಂಜಿಕೆಯೋ, ಶಾಂತಿಯ ಬಯಕೆಯೋ—ಯಾವುದೋ ಅದಕ್ಕೆ ಕಾರಣವಾಗಿರಬೇಕು. ವಸ್ತುಸ್ಥಿತಿ ಹಾಗೆ. ಆದುದರಿಂದಲೇ, ಆ ದಿನ ಮಧ್ಯಾಹ್ನ ನಾನು ಎಲ್ಲಿಗೂ ಹೊರಡಲಿಲ್ಲ. ಬಿಸಿಲು ಇಳಿದ ಮೇಲೆ, ಕೇಶವನರ ಜತೆಗೆ ಅವರ ಉದ್ಯಾನದಲ್ಲೇ ಅಲೆದಾಡಿದೆ. ವಾಚನಾಲಯದ ಬೋಳು ಮಹಡಿಯನ್ನೇರಿ ಹವಾ ಸೇವನೆ ಮಾಡಿದೆವು. ಅವರು ತೆಗೆದಿರಿಸಿದ ಕೆಲವೊಂದು ಗ್ರಂಥಗಳ ಪುಟಗಳ ಮೇಲೆ ಕಣ್ಣು ಹಾಯಿಸಿದೆವು. ಆ ಗ್ರಂಥಗಳ ವಿಚಾರದಲ್ಲಿ ಮೊದಲೊಮ್ಮೆ ಹೇಳಿದ್ದೆನಷ್ಟೆ. ಇನ್ನುಳಿದ ಮಾತೆಂದರೆ—ಅಶುತೋಷ ಮುಖರ್ಜಿಯವರ ಬಳುವಳಿಯಲ್ಲಿ ಸೇರಿಕೊಂಡ ಬೇರೆ ಎರಡು ಹೊತ್ತಗೆಗಳ ವಿಚಾರ. ಇವೆರಡೂ, ಶತಮಾನದ ಹಿಂದೆ ಬಂಗಾಳ ಮತ್ತು ಕಲ್ಕತ್ತಾ ನಗರ ಹೇಗಿತ್ತೆಂದು ನೆನಸಿಗೆ ತಂದುಕೊಳ್ಳುವ ಸುಂದರ ಚಿತ್ರಗಳ ಸಂಪುಟಗಳು. ಕಲ್ಕತ್ತೆಯ ಈಗಿನ ಮುಖ್ಯ ಪ್ರದೇಶಗಳ ಹೆಸರೆಲ್ಲವೂ ಅಲ್ಲಿದೆ. ಆದರೆ ಸಂಬಂಧಪಟ್ಟ ಜಲವರ್ಣಚಿತ್ರಗಳನ್ನು ನೋಡುವಾಗ ಆಗಿನ ಕಲ್ಕತ್ತೆಯೆಲ್ಲೋ ಈಗಿನದೆಲ್ಲೋ—ಎನಿಸುತ್ತದೆ. ಇನ್ನೊಂದು ಗ್ರಂಥದಲ್ಲಿ ಮುರ್ಷಿದಾಬಾದ್, ಫತ್ತೆಪುರ ಸಿಕ್ರಿ, ಪ್ರಯಾಗ, ಹಲವು ಬಂಗಾಲ ಪ್ರಾಂತದ ಹೆಸರಾದ ಸ್ಥಳಗಳ—ಚಿತ್ರಗಳಿವೆ. ದೊಡ್ಡ ಆಕೃತಿಯಲ್ಲಿ ಬರೆದ ಈ ವರ್ಣಚಿತ್ರಗಳು, ಕೆಮರಾದ ಸೌಕರ್ಯವನ್ನು ಬಳಸುವ ಮುದ್ರಣ ಸಾಧನವು ಬರುವಮೊದಲೇ ಅಚ್ಚುಮಾಡಿದುವು. ಆದರೆ ಮೂಲಚಿತ್ರಗಳ ವರ್ಣಛಾಯೆ

ಗಳು ಇಂದಿಗೂ ಮಾಸದೆ ಉಳಿದಿವೆ. ಹಿಂದೆ ಬಣ್ಣದ ಚಿತ್ರಗಳನ್ನು ಭಿನ್ನ ಭಿನ್ನ ವರ್ಣದ ಅಚ್ಚುಗಳಾಗಿ ವಿಂಗಡಿಸುವ ಕೆಲಸ, ಕೇವಲ ಕೈಯಿಂದಲೇ ಆಗುತ್ತಿತ್ತು. ಕೈ ಕೆಲಸವಾದರೂ, ಚಿತ್ರಕಲೆ ಬಲ್ಲ, ಬಣ್ಣದ ಗ್ರಹಿಕೆಯುಳ್ಳ ಜನಗಳಿಂದಲೇ ಆಗುತ್ತಿದ್ದುದರಿಂದ, ಯಂತ್ರಮಾಡುವ ಕೆಲಸಕ್ಕಿಂತ ಅವರ ಕೆಲಸ ಕಡಿಮೆಯದಲ್ಲ ಎಂದು ಅನಿಸುತ್ತದೆ. ಅಂತು ಅಲ್ಲಿನ ಗ್ರಂಥಗಳನ್ನು ಕಂಡು, ಯಾವುದಾದರೂ ಒಂದು ಅಜ್ಞಾತವಾಸದ ನೆಪಹೂಡಿಕೊಂಡು, ಕಲ್ಕತ್ತೆಯ ಈ ಪುಸ್ತಕಾಲಯಕ್ಕೆ ಕೆಲವು ದಿನ ಬಂದು ವ್ಯಾಸಂಗ ಮಾಡ ಬಾರದೇ—ಎಂಬ ಆಸೆ ಉಂಟಾಗದೆ ಹೋಗಲಿಲ್ಲ.

೧೦. ಬರಾಮುಕ್ಕೆ

ನಮ್ಮ ಪ್ರವಾಸ ಕೈಕೊಳ್ಳುವಾಗಲೇ ಅದರ ಕೊನೆಯ ಅಂಶವನ್ನು ವಿಮಾನಗಾಮಿಗಳಾಗಿ ಮುಗಿಸಬೇಕೆಂದು ನಮ್ಮ ಆಸೆಯಿತ್ತು. ಬಾನನ್ನೇರುವ ಆಸೆಯೋ, ಸಮಯ ಉಳಿಸುವ ಆಸೆಯೋ, ಶ್ರಮ ತಪ್ಪಿಸುವ ಉಪಾಯವೋ ಅಥವಾ ಎಲ್ಲವೂ ಸೇರಿಯೋ ಈ ನಿರ್ಧಾರಕ್ಕೆ ಕಾರಣವಾಗಿತ್ತು. ಆದುದರಿಂದ ನಾವು ಕಲ್ಕತ್ತೆಗೆ ಬಂದ ದಿನವೇ ಗೌಹತಿಗೆ ಹೋಗುವುದಕ್ಕೂ, ಅಲ್ಲಿಂದ ಮರಳುವುದಕ್ಕೂ, ಮುಂದೆ ಕಲ್ಕತ್ತೆಯಿಂದ ಬೆಂಗಳೂರಿಗೂ ಟಿಕೇಟಿನ ಏರ್ಪಾಟು ಮಾಡಿದ್ದೆವು.

ನಮ್ಮ ಅಸ್ಸಾಮಿನ ಪ್ರವಾಸವೆಂದರೆ—ಅಸ್ಸಾಮ್ ದೇಶವನ್ನೆಲ್ಲ ನೋಡ ಹೋದುದಲ್ಲ. ಅಲ್ಲಿನ ರಾಜಧಾನಿಯಾದ ಗೌಹತಿ ನಗರಕ್ಕೆ ಅರುವತ್ತು ಮೈಲು ದೂರದಲ್ಲಿ ನನ್ನ ಬಂಧುಗಳೊಬ್ಬರು ವಾಸಿಸುತ್ತಿದ್ದಾರೆ. ಅಲ್ಲಿ ಅವರನ್ನು ಭೇಟಿಯಾಗಬೇಕೆಂಬ ಹಳೆಯ ಆಸೆಗೆ, ಇಂದು ಅವಕಾಶವಾಯಿತು. ನಿಜಕ್ಕೂ ನಮ್ಮ ಯಾವತ್ತು ಪ್ರವಾಸಕ್ಕೆ ನೆಪವಾದುದೇ ಈ ಸಂದರ್ಶನೆ. ಉಳಿದುವೆಲ್ಲ ಅದಕ್ಕೆ ಉಪೋದ್ಘಾತ. ಬಂಧುಗಳಾದ ಶ್ರೀ ಭಂಡಾರಿಯವರು 'ಬರಾಮಾ' ಎಂಬಲ್ಲಿ ಹತ್ತು ಹದಿನೆರಡು ವರ್ಷಗಳಿಂದ ವಾಸವಾಗಿದ್ದಾರೆ. ಅವರು ಮಂಗಳೂರಿನವರು. ಮಂಗಳೂರು ರಾಜಕೀಯ ರಂಗದಲ್ಲಿ ಕೆಲಸ ಮಾಡಿದವರು. ಅದರ ವಾಸನೆ ಮೈಗೆ ಹಿಡಿಸದ್ದರಿಂದಲೋ ಏನೋ, ಶ್ರೀ ಥಕ್ಕರ್ ಬಾಪಾರವರ ಹರಿಜನ ಸೇವಕ ಸಂಘವನ್ನು ಸೇರಿ, ಅಸ್ಸಾಮಿಗೆ ಹೋದರು. ಅಲ್ಲಿಯೇ ಅವರ ಲಗ್ನವೂ ಆಯಿತು. ನನ್ನ ಹೆಂಡತಿಯ ಅಕ್ಕನನ್ನು ಅವರಿಗೆ ಕೊಟ್ಟು ಲಗ್ನವಾಯಿತು. ಆ ದಂಪತಿಗಳು ಮೂವರು ಮಕ್ಕಳೊಡನೆ ಈಗ ಅಲ್ಲಿ ವಾಸವಾಗಿದ್ದಾರೆ. ಅವರು ಒಮ್ಮೆ ಸಕುಟುಂಬಿಗಳಾಗಿ ನಮ್ಮ ಮನೆಗೂ ಬಂದಿದ್ದರು. ಆದರೆ ನಾವು ಮಾತ್ರ ಅಲ್ಲಿಗೆ ಈ ತನಕ ಹೋಗಿರಲಿಲ್ಲ. ಕುಟುಂಬರಹಿತನಾಗಿಯಾದರೂ ಹೋಗುವ ಹವಣಿಕೆ ಮಾಡಿದ್ದೆ ನಾನು. ಆದರೆ ವೇಳೆ ಎಂಥದು? ಪೂರ್ವಪಾಕಿಸ್ತಾನದ ಮಧ್ಯದಿಂದ ರೈಲು ಸಂಚಾರ ಅಸಾಧ್ಯವಾಗಿತ್ತು. ಕಲ್ಕತ್ತೆಯಿಂದ ಹೊಸತಾಗಿ ನಿರ್ಮಾಣವಾದ ಅಸ್ಸಾಮ್ ಲಿಂಕ್ ಎಕ್ಸ್‌ಪ್ರೆಸ್ ಬಂಡಿಯ ಮೂಲಕ ಹೋದರೆ, ಕಲ್ಕತ್ತೆಯಿಂದ ಎರಡು ದಿನಗಳ ಪ್ರವಾಸ ಗೌಹತಿಗೆ. ಅಲ್ಲಿಂದ

ಬ್ರಹ್ಮಪುತ್ರಾನದಿಯನ್ನು ದಾಟಿದ ಬಳಿಕ, ಅರುವತ್ತು ಮೈಲಿನ ಮೋಟರು ಹಾದಿಯಿದೆ. ಆ ಪ್ರಾಂತ್ಯಕ್ಕೆ ನಾವಿಬ್ಬರೂ ಹೊಸಬರು. ಗೌಹತಿಗೆ ಹೋದ ಮೇಲೆಯೂ ಇವರಿರುವ 'ಬರಾಮಾ' ಎಂಬ ಹಳ್ಳಿಯನ್ನು ಎಂದು ಸೇರುತ್ತೇವೆ ಎಂಬುದನ್ನು ಊಹಿಸುವುದು ಅಸಾಧ್ಯವಾಗಿತ್ತು. ಅಂತು ಪಯಣ ಹೊರಟೆವು. ಬರಿಯ ಕೈಚೀಲ, ಕೆಮೆರಾಗಳನ್ನು ಮಾತ್ರ ಹಿಡಿದುಕೊಂಡು, ನಾನೂ ಶ್ರೀಪತಿಯೂ ಹೊರಟೆವು. 'Airways India'ರವರ ನಗರದ ಆಫೀಸಿನ ತನಕ ನಮ್ಮನ್ನು ಕಳುಹಿಸಲು ಲಕ್ಷ್ಮೀನಾರಾಯಣರಾಯರು ಬಂದಿದ್ದರು. ಕಲ್ಕತ್ತೆಯಿಂದ ಗೌಹತಿಗೆ, ದಿನಕ್ಕೆ ಆರೆಂಟು ವಿಮಾನಗಳು ಹೋಗಿ ಬರುತ್ತವೆ. ಹೋಗಿ ಬರುವ ಪ್ರಯಾಣಿಕರ ಸಂಖ್ಯೆ ತುಂಬ ಹೆಚ್ಚು. ನಾವು ತಂದ ಸಾಮಾನುಗಳನ್ನು ನಮ್ಮ ಜತೆಯ ಪ್ರವಾಸಿಗಳು ತಂದ ಸಾಮಾನುಗಳೊಡನೆ ಹೋಲಿಸಿದರೆ ಆಶ್ಚರ್ಯವಾಗಬೇಕು. ಎಷ್ಟೋ ಜನ ಸಂಸಾರಕ್ಕೆ ಬೇಕಾಗುವ ಯಾವತ್ತು ಸಾಮಾನುಗಳನ್ನು ತೆಗೆದುಕೊಂಡು ಹೊರಟಿದ್ದರು. ಜನರನ್ನೂ, ಅವರ ಸಾಮಾನುಗಳನ್ನೂ ತೂಗಿಯಾಗಲು, ನಮ್ಮನ್ನೆಲ್ಲ ಬಸ್ಸಿನಲ್ಲಿ ಕುಳ್ಳಿರಿಸಿಕೊಂಡು 'ಡಂಡಂ' ವಿಮಾನ ನಿಲ್ದಾಣಕ್ಕೆ ಕರೆದೊಯ್ದರು. 'ಡಂ ಡಂ' ಕೇಳುವುದಕ್ಕೆ ವಿಚಿತ್ರವಾದ ಹೆಸರು. ಯುದ್ಧದಲ್ಲಿ ಉಪಯೋಗಿಸುವ ಒಂದು ಜಾತಿಯ ಬುಲೆಟುಗಳಿಗೆ 'ಡಂ ಡಂ ಬುಲೆಟ್' ಎನ್ನುತ್ತಾರೆ. ಪ್ರಾಯಶಃ ಈ ಊರಿನ ಹೆಸರು ಅದರಿಂದ ಬಂದಿರಬೇಕು.

ಇಲ್ಲಿನ ವಿಮಾನ ಬಂದರು ನಮ್ಮದೇಶಕ್ಕೇನೆ ದೊಡ್ಡದಾದುದು. ಅಲ್ಲಿನ ಪ್ರವಾಸಿಗಳ ಮನೆಯಂತೂ ತೀರ ದೊಡ್ಡದು. ನೂರಾರು ಜನರು ಪ್ರತಿ ತಾಸಿಗೂ ಬಂದಿಳಿಯುವ ಸ್ಥಳ. ಹಿಂದುಸ್ತಾನದ ವೈಮಾನಿಕ ಕಂಪೆನಿಗಳಲ್ಲದೆ, ಇಂಗ್ಲೆಂಡ್, ಅಮೇರಿಕ, ಹೊಲೆಂಡ್, ಫ್ರಾನ್ಸ್ ದೇಶಗಳ ಅಂತಃರಾಷ್ಟ್ರೀಯ ವಿಮಾನಗಳು ಕಲ್ಕತ್ತೆಯ ಮೂಲಕ ಹಾದುಹೋಗುತ್ತವೆ. ಆದುದರಿಂದ ಇಲ್ಲಿ ಒಂದು ತಾಸು ಕಾಲ ಕುಳಿತರೆ, ಹಲವು ದೇಶದ ಜನಗಳ ಮುಖಗಳ ಪರಿಚಯ ಮಾಡಿಕೊಳ್ಳಬಹುದು.

ಎಂಟೂವರೆ ಘಂಟೆಗೆ ಸರಿಯಾಗಿ ನಾವು 'ಡಕೋಟಾ' ಒಂದನ್ನು ಏರಿದೆವು. ಇಪ್ಪತ್ತೊಂದು ಮಂದಿ ಪ್ರವಾಸಿಗಳ ವಿಮಾನವಿದು. ನಾವು ಕುಳಿತ ಹತ್ತು ನಿಮಿಷಗಳಲ್ಲಿಯೇ, ಅದು ಚಲಿಸತೊಡಗಿ ನೆಲವನ್ನು ಬಿಟ್ಟೂ ಆಯಿತು. ಇನ್ನು ಕೆಲವು ನಿಮಿಷಗಳೊಳಗಾಗಿ ಕಲ್ಕತ್ತೆಯ ಭೂಭಾಗವು

ವಿಮಾನದ ಕಿಟಿಕಿಗಳಿಂದ ನಮಗೆ ಗೋಚರವಾಗತೊಡಗಿತು. ಸುಮಾರು ಅರ್ಧತಾಸಿನತನಕ,ಹಸುರು ಕೊಳ, ತೋಟಗಳಿಂದ ರಂಜಿತವಾದ ಬಯಲು ಭೂಮಿಯ ಮೇಲೆ, ನಾವು ಹಾರುತ್ತಹೋದೆವು. ಪ್ರತಿಯೊಂದು ಮನೆಗೂ ಒಂದೊಂದು ಕೊಳವಿದ್ದಂತೆ ತೋರುತಿತ್ತು. ಬಂಗಾಲಿಗಳ ಪಾಲಿಗೆ ಅವರ ಕೊಳಗಳು ಅವರ ಹೊಲಗಳಷ್ಟೇ ಮುಖ್ಯವಾದ ಸಂಪತ್ತುಗಳೆನ್ನುತ್ತಾರೆ. ಅಲ್ಲಿ ಮೀನನ್ನು ಬೆಳೆಸುತ್ತಾರೆ. ಅದರಿಂದ ಅವರಿಗೆ ಆಹಾರವೂ ಬರುತ್ತದೆ. ಹೆಚ್ಚಿನ ವರಮಾನವೂ ಬರುತ್ತದಂತೆ.

ಮುಂದೆ ಹೋಗುತ್ತ, ಕೆಳಗಿನ ಬಯಲು ಭೂಮಿಯಲ್ಲಿ ಹೊಲ, ಮನೆಗಳು ದೂರದೂರವಾಗಿ ಕಾಣಿಸತೊಡಗಿದುವು. ಅವುಗಳ ಮೇಲೆ ತುಂಡು, ತುಣುಕು ಮೋಡಗಳು ತೇಲುತ್ತಲಿದ್ದುವು. ಕ್ರಮೇಣ ನಮ್ಮ ವಿಮಾನ, ಬೆಳ್ಮುಗಿಲುಗಳ ಸಮುದಾಯವನ್ನು ಸೀಳಿಕೊಂಡು,ಮುಂದುವರಿಯ ಬೇಕಾಯಿತು. ಬಿಸಿಲ ಜಳವು, ಮುಗಿಲನ್ನು ಹಾಯುವ ವಿಮಾನದ ರೆಕ್ಕೆಗಳನ್ನು ಬೆಳ್ಳಿಯಂತೆ ಬೆಳಗುವ ನೋಟ ಚೆಲುವಾಗಿಯೇ ಕಾಣುತಿತ್ತು. ಇದಿರಾದ ಮುಗಿಲುಗಳನ್ನು ದಾಟುವುದರ ಜತೆಗೆ, ವಿಮಾನವು ಮೇಲಕ್ಕೇರಿ ಸಾಗುತ್ತಲೂ ಇತ್ತು. ಗಾಳಿಯ ಸಂಸ್ತರದಲ್ಲಿ ವ್ಯತ್ಯಾಸವುಂಟಾಗಿ, ಎದುರಿಂದ ಅಪ್ಪಳಿಸುವ ಅಲೆಗೆ ಎದೆಯೊಡ್ಡುವ ದೋಣಿಯಂತೆ, ಅಲ್ಲಲ್ಲಿ ನೆಗೆತವನ್ನೂ ಕೊಡುತಿತ್ತು. ಒಂದು ಗಳಿಗೆಯಲ್ಲಿ ನಾವು ಉನ್ನತವಾದ ರಾಶಿಮೋಡಗಳ (Cumulus clouds) ಸಮುದಾಯವನ್ನು ಕಳೆದು, ಅವುಗಳ ಮೇಲಿಂದ ಹಾರತೊಡಗಿದೆವು. ಕೆಳಗಿನ ಪ್ರದೇಶ ಮೊಸರಿನ ಸಮುದ್ರದಂತೆ ಬೆಳ್ಮುಗಿಲುಗಳಿಂದ ಸಂಪೂರ್ಣ ತುಂಬಿಕೊಂಡಿತ್ತು. ಒಂದು ತಾಸೇ ಹೀಗೆ ಸಾಗಿರಬೇಕು. ಮುಂದೆ ಸ್ವಲ್ಪ ಹೊತ್ತಿನ ಬಳಿಕ, ಕೆಳಗಡೆ ಹಸುರು ನೆಲ ಕಾಣಿಸತೊಡಗಿತು. ಅದು ಬಯಲು ಭೂಮಿಯಾಗಿರಲಿಲ್ಲ. ಗುಡ್ಡಗಾಡಿನ ಪ್ರದೇಶ. ಕಣ್ಣು ಚಾಚುವಷ್ಟು ದೂರಕ್ಕೂ ಬೆಟ್ಟಗಳೇ. ನಮ್ಮ ವಿಮಾನ ಆಗ 'ಗರೋ' ಮತ್ತು 'ಕಾಶಿ' ಪರ್ವತ ಪ್ರದೇಶಗಳ ಮೇಲೆ ಹಾರಾಡತೊಡಗಿತ್ತು. ಎಲ್ಲೆಲ್ಲಿಯೂ,ಅಸ್ತವ್ಯಸ್ತವಾಗಿ ಹಾಸಿದ ಹಸುರು ಕಂಬಳಿಯೊಂದರ ಮಡಿಕೆಗಳಂತೆ, ನೆಲ ಏರುತಗ್ಗಾಗಿ ಕಾಣುತಿತ್ತು. ಬೆಟ್ಟಗಳನ್ನೆಲ್ಲ ಸಂಪೂರ್ಣವಾಗಿ ಆವರಿಸಿರುವ ಒಂದು ಜಾತಿಯ ಬಿದಿರ ಮೆಳೆಗಳು, ಸಾಂದ್ರವಾಗಿ ನಟ್ಟ ಹಸುರು ಚವರಿಗಳಂತೆ ಕಾಣಿಸುತಿದ್ದುವು. ಅಲ್ಲಲ್ಲಿ ಈ ಬಿದಿರ ಸಮುದಾಯಗಳನ್ನು

ಸುಟ್ಟಂತಹ ಸ್ಥಳಗಳಲ್ಲಿ, ಬೆಟ್ಟದ ಮಗ್ಗುಲುಗಳು ಬೋಳಾಗಿ ಕಾಣಿಸುತ್ತಿದ್ದುವು. ಅಂಥ ಸ್ಥಳಗಳಲ್ಲಿ ಜನವಸತಿಗಳು, ಚಿಕ್ಕಪುಟ್ಟ ಹೊಲಗದ್ದೆಗಳು, ಮಕ್ಕಳಾಟದ ಹೊಲ ಮನೆಗಳಂತೆ ಕಾಣಿಸುತ್ತಿದ್ದುವು. ಸುಮಾರು ಒಂದು ತಾಸಿನ ತನಕ ನಾವು ಈ ಪರ್ವತ ಪ್ರದೇಶವನ್ನು ಹಾಯ್ದು ಹೋದೆವು. ಎಷ್ಟೋ ಕಡೆಗಳಲ್ಲಿ, ಬೆಟ್ಟದ ಮೈಗಳಿಗೆ ತೀರ ಸಮೀಪವಾಗಿ ವಿಮಾನವು ಹಾದು ಹೋಗುವಾಗ, ಬರಿಯ ನೂರಿನ್ನೂರು ಅಡಿ ಕೆಳಗಡೆ ಇರುವ ಗಿಡಮರಗಳು, ಎಲೆಕೊಂಬೆಗಳನ್ನೆಣಿಸುವಷ್ಟು ಸಮೀಪಕ್ಕೆ ಕಾಣಿಸುತ್ತಿದ್ದುವು.

ಮುಂದೆ ಕಾಣಿಸಿದ ಭೂಪ್ರದೇಶವೆಂದರೆ ವಿಶಾಲವಾಗಿ ಪರವಿಕೊಂಡಿರುವ ಬಯಲು ಭೂಮಿ. ನಮ್ಮ ಎಡಕ್ಕೆ ಅಂಕುಡೊಂಕಾಗಿ, ಬಲು ಅಗಲವಾಗಿ ಹರಿಯುತ್ತಿದ್ದ ಬ್ರಹ್ಮಪುತ್ರಾನದಿಯು ಕಾಣಿಸುತ್ತಲಿತ್ತು. ಆ ನದಿಯ ಶಾಖೋಪಶಾಖೆಗಳು, ಬಯಲು ಭೂಮಿಯ ಯಾವಡೆಗೂ ಚಾಚಿಕೊಂಡಿದ್ದಂತೆ ಕಾಣುತ್ತಿದ್ದುವು. ಮಳೆಗಾಲದಲ್ಲಿ ಈ ಪ್ರಾಂತವೆಲ್ಲವು ಪ್ರಳಯರೂಪ ತಾಳುತ್ತದಂತೆ. ಆಗ ಇಲ್ಲಿನ ಮನೆಮಠಗಳು ದ್ವೀಪಗಳಂತೆ ಆಗುತ್ತವೆ. ಹೊಲಗಳೆಲ್ಲ ನೆರೆಯ ನೀರಿನಿಂದ ಮುಳುಗುತ್ತವೆ.

ಹತ್ತೂವರೆ ಘಂಟೆಗೆ ಸಮನಾಗಿ, ಗೌಹತಿ ನಿಲ್ದಾಣದಲ್ಲಿ ಇಳಿಯಬೇಕಾಗಿದ್ದ ನಾವು, ಇನ್ನೂ ಅರ್ಧಘಂಟೆ ತಡವಾಗಿ ಇಳಿದೆವು. ದಾರಿಯಲ್ಲಿ ನಮ್ಮ ವಿಮಾನಕ್ಕೆ ಬಿರುಗಾಳಿ ಸಂಘಿಸಿದುದರಿಂದ, ವೈಮಾನಿಕನು ನಿತ್ಯದ ಹಾದಿ ತಪ್ಪಿಸಿ, ನೂರನಾಲ್ವತ್ತು ಮೈಲು ಬಳಸುದಾರಿಯಲ್ಲಿ ಕೊಂಡು ಬಂದಿದ್ದನಂತೆ. ಒಳಗೆ ನೆಮ್ಮದಿಯಾಗಿ ಕುಳಿತು, ಚಾಕ್ಲೇಟು ತಿನ್ನುತ್ತಲೋ, ಕಾಫಿ ಕುಡಿಯುತ್ತಲೋ, ತೂಕಡಿಸುತ್ತಲೋ ಇರುವ ಪ್ರವಾಸಿಗೆ—ಅದೆಲ್ಲ ಏನು ತಿಳಿಯುತ್ತದೆ? ತಿಳಿದರೆ ತಳಮಳವಾಗಲೂ ಬಹುದು.

ನಾವು ವಿಮಾನದಿಂದ ಇಳಿದು ನೆಲಕ್ಕೆ ಕಾಲಿರಿಸುವಾಗಲೇ ಹತ್ತು ಗಜ ದೂರದಲ್ಲಿ, ಗೆಳೆಯ ಭಂಡಾರಿಗಳ ಮುಖ ಕಾಣಿಸಿತು. ಅಲ್ಲಿಗೆ ಅವರು ಬಂದಾರೆಂದು ನಾವು ಎಣಿಸಿರಲಿಲ್ಲ. ದಾರಿಯುದ್ದಕ್ಕೂ—ಮುಂದಿನ ಪಯಣದ ವಿಚಾರವೇ ನಮ್ಮನ್ನು ಕೊರೆಯುತ್ತಿತ್ತು. ಗೌಹತಿಗೆ ಹೋಗುವುದೇ, ಅದಕ್ಕಿಂತ ಮೊದಲು ಸಿಗುವ ಪಾಂಡು ರೈಲ್ವೆ ನಿಲ್ದಾಣಕ್ಕೆ ಹೋಗುವುದೇ ಎಂಬ ವಿಚಾರದಲ್ಲಿದ್ದೆ ನಾನು. ಈಗ ಮುಂದಿನ ಪಯಣದ ಹೊರೆ ಅವರ ತಲೆಯ ಮೇಲೆ ಎಂಬುದು ಖಂಡಿತವಾಯಿತಲ್ಲ. ಅವರು ಬರದೆ ಬರಲೂ

ಇಲ್ಲ. ತಮ್ಮ ಜೀಪ್ ತೆಗೆದುಕೊಂಡು ಬಂದಿದ್ದರು. ಶ್ರೀಪತಿಯಂಥ ಇನ್ನೂರು ಪೌಂಡಿನ ಮನುಷ್ಯ ಬರುತ್ತಾನೆಂದು ಅವರಿಗೆ ಹೇಗೆ ಸ್ವಪ್ನ ಬಿತ್ತೋ! ಅವನ ತೂಕ ಎಳೆಯುವುದಕ್ಕೆ ಜೀಪೇ ತಕ್ಕ ಸಾಧನ. ಜೀಪಿನಲ್ಲಿ ಕುಳಿತು ಹತ್ತು ಮೈಲುದೂರದ ಗೌಹತಿ ನಗರಕ್ಕೆ ಪ್ರಯಾಣ ಬೆಳೆಸಿದೆವು. ಗೌಹತಿ—ಅಸ್ಸಾಮಿನ ಭಾವೀ ರಾಜಧಾನಿ. ತತ್ಕಾಲಕ್ಕೆ ರಾಜಧಾನಿಯನ್ನು ಶಿಲಾಂಗಿನಲ್ಲೇ ಇರಿಸಿದ್ದಾರೆ. ನಾಳೆ ಅದು ಈ ನಗರಕ್ಕೆ ಬರುವಂಥದು. ಬ್ರಹ್ಮಪುತ್ರಾ ನದಿ ದಂಡೆಯ ಮೇಲಿನದು ಈ ನಗರ, ಗುಡ್ಡ ಬೆಟ್ಟಗಳು ತುಂಬಿದ ಊರು. ಹಸುರು ಹಚ್ಚೆಗಳಿಂದ ಚೆಲುವಾಗಿ ಕಾಣಿಸುವ ಸಣ್ಣ ಪಟ್ಟಣ. ಪ್ರಾಂತದ ರಾಜಧಾನಿಯಾದರೂ,ಅರ್ಧಲಕ್ಷಕ್ಕೂ ಕಡಿಮೆಯಾದ ಜನಸಂಖ್ಯೆಯುಳ್ಳ ಊರು.

ಮಿತ್ರ ಭಂಡಾರಿಗಳು, ನಮ್ಮನ್ನು ತಮ್ಮ ಮಿತ್ರರಾದ ಡಾ। ದಾಸ್ ಎಂಬವರಲ್ಲಿಗೆ ಕರೆದುಕೊಂಡು ಹೋದರು. ದಾಸರವರು ನಿವೃತ್ತ ವೈದ್ಯರು; ತುಂಬ ಶ್ರೀಮಂತರು. ಬಹು ವರ್ಷಗಳಿಂದ ಅಸ್ಸಾಮಿನಲ್ಲಿ ಸಾರ್ವಜನಿಕ ಸೇವೆಯಲ್ಲಿ ದುಡಿದವರು. ಅವರಿಗೆ ಸುಮಾರು ಎಪ್ಪತ್ತು ವಯಸ್ಸಾಗ ಬಹುದು. ನಾವು ಹೋದಾಗ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಅವರ ಮನೆ ಸಾಮಾನ್ಯ ಮಧ್ಯಮ ತರಗತಿಯ ಜನಗಳ ಮನೆಯಂತಿತ್ತು. ಆಗರ್ಭ ಶ್ರೀಮಂತರಂತೆ ಅವರು. ಅವರ ಮಗಳು-ಅಳಿಯಂದಿರು,ಇಬ್ಬರೂ ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕೆ ತೆರಳಿದ್ದರು. ಉಳಿದೊಬ್ಬಳು ಮಗಳು, ಆಕೆ M. Sc. ತಂದೆಯ ಉಪಚಾರದಲ್ಲಿ ಮಗ್ನಳಾಗಿದ್ದಳು. ಕೆಮ್ಮಲು ಜ್ವರಗಳಿಂದ ಅವರು ಮಲಗಿ ಹತ್ತೆಂಟು ದಿನಗಳಾಗಿತ್ತು. ಆದರೂ ಹೊಸಬರಾಗಿ ಬಂದ ನಮ್ಮನ್ನು ಕಾಣಲು ಇಷ್ಟಪಟ್ಟರು. ಅವರ ಮನೆಗೆ ಹೊಗುವಾಗಲೇ ನಾಲ್ಕಾರು ವರ್ಷ, ಎರಡು ವರ್ಷಗಳ ಕಿರುಗೂಸುಗಳನ್ನು ಕಂಡೆವು. ಡಾಕ್ಟರರವರಿಗೆ ಇಬ್ಬರು ಹೆಣ್ಣುಮಕ್ಕಳಲ್ಲದೆ ಬೇರೆ ಸಂತಾನವಿಲ್ಲವೆಂದು ಕೇಳಿದ್ದೆವು. ಈ ಮಕ್ಕಳಿಲ್ಲ ಯಾರು-ಎಂಬ ವಿಚಾರ ನನ್ನ ಮನದಲ್ಲಿ ಮೂಡಿತು.

ಅವರೆದುರಿಗೆ ಕುಳಿತು ನಾಲ್ಕಾರು ಮಾತುಗಳನ್ನಾಡುತ್ತಿದ್ದಾಗಲೇ ಚಿಕ್ಕದೊಂದು ಕೂಸು ಅತ್ತ ಧ್ವನಿ ಕೇಳಿಸಿತು. ಅವರ ಆಜ್ಞೆಯಂತೆ ಉಪಚಾರಕ್ಕೆ ನಿಂತ ಒಬ್ಬಳು ಹುಡುಗಿ, ಆ ಮಗುವನ್ನು ತಂದುಕೊಟ್ಟಳು. ಮುದ್ದಾದ ಆ ಕೂಸು ಅವರ ಕೈಗೆ ಬರುತ್ತಲೇ ಅಳುವುದನ್ನು ನಿಲ್ಲಿಸಿ,

ಅವರ ಗಲ್ಲಕ್ಕೆ ಗಲ್ಲಕೊಟ್ಟು ವಿರಮಿಸಿತು. ಅದನ್ನು ತುಂಬ ಮಾತನಾಡಿಸಿದರು. ತಾನು ಬೇನೆಯಿಂದಲೂ, ಅಶಕ್ತಿಯಿಂದಲೂ ದಣಿದಿದ್ದರೂ ಆ ಮಗುವನ್ನು ಮುದ್ದಾಡಿಸಿದರು. ಅವರ ಸ್ವಭಾವವೇ ಅಂಥದು. ಆ ಮಕ್ಕಳು ಅವರ ಸ್ವಂತ ಕೂಸುಗಳೇನಲ್ಲ. ಅವರ ಮನೆಯಲ್ಲೇ ಸಾಕಿ ಬೆಳೆಯಿಸಿದ ಅನಾಥ ಶಿಶುಗಳು. ಡಾಕ್ಟರರು ಈ ರೀತಿಯಲ್ಲಿ ಅನಾಥರ ಸೇವೆಯನ್ನು ಹಲವು ವರ್ಷಗಳಿಂದ ಮಾಡುತ್ತ ಬಂದಿದ್ದಾರಂತೆ. ತಮ್ಮ ಸಾಕುಮಕ್ಕಳು ದೊಡ್ಡವರಾಗಿ ಒಂದೊಂದು ಸ್ಥಳಸೇರುವ ತನಕ, ಅವರ ಸೇವೆಯ ಕರ್ತವ್ಯ ಮುಗಿಯುತ್ತಿರಲಿಲ್ಲ. ಅಷ್ಟರೊಳಗೆ ಬೇರೆ ಕೂಸುಗಳು ಬಂದು ಅವರ ಮನೆಯನ್ನು ಸೇರುತ್ತವೆ. ಶ್ರೀಮಂತಿಕೆ ಇದ್ದರೂ ಎಷ್ಟು ಜನಕ್ಕೆ ಈ ತೆರನಾದ ಉದಾರ ಬುದ್ಧಿ ಪ್ರಾಪ್ತವಾದೀತು?

ನಾವು ಡಾಕ್ಟರವರಲ್ಲಿ ಊಟ ಮುಗಿಸಿಕೊಂಡು, ಮುಂದಿನ ಪ್ರಯಾಣ ಬೆಳೆಸಿದೆವು. ಮಧ್ಯಾಹ್ನ ಒಂದು ಘಂಟೆಗೆ ಬಹ್ಮಪುತ್ರೆಯ ತಡಿಗೆ ಹೋದೆವು. ಅಲ್ಲಿ ಸಾರಿಗೆಯ ಉಗಿ ಹಡಗು ನದಿ ದಂಡೆಗೆ ತಾಗಿ ನಿಂತಿತ್ತು. ನಮ್ಮಜೀಪ್ ಅದನ್ನೇರಿತು. ಆ ಬಳಿಕ ನಾವೂ ಆ ಹಡಗನ್ನೇರಿ ಮೇಲಿನ ಅಂತಸ್ತಿನಲ್ಲಿ ಕುಳಿತೆವು. ಎರಡು ತಾಸುಗಳಿಗೊಮ್ಮೆ ಈ ಕಡವಿನ ಹಡಗು ನದಿಯ ಆಚೀಚೆಗೆ ಹೋಗಿ ಬರುತ್ತದಂತೆ. ಜನರೆಲ್ಲರು ಅದನ್ನೇ ಕಾದಿರಬೇಕಾಗುತ್ತದೆ. ಈ ಪ್ರದೇಶದಲ್ಲಿ ಬ್ರಹ್ಮಪುತ್ರಾ ನದಿಯ ಇಕ್ಕಡೆಗಳಲ್ಲೂ ಉನ್ನತವಾದ ಬೆಟ್ಟಗಳು ಕಾಣಿಸುತ್ತವೆ. ಈ ನದಿಯ ಭರ, ಆಳ ಮತ್ತು ಅಗಲಗಳು ಹೆಚ್ಚು ಎಂಬುದರಿಂದಲೋ ಏನೋ, ಇನ್ನೂ ಅದಕ್ಕೆ ಸೇತುವೆಹಾಕಿಲ್ಲ. ಅದರಿಂದಾಗಿ ನದಿಯ ಉತ್ತರ ದಕ್ಷಿಣಗಳಲ್ಲಿರುವ ರೈಲ್ವೆನಿಲ್ದಾಣಗಳಿಗೆ ಸಂಬಂಧವಿಲ್ಲ. ನಾವು ಅರ್ಧ ತಾಸಿನಲ್ಲಿ ನದಿಯನ್ನು ದಾಟಿ, ಈಚೆ ದಂಡೆಗೆ ಬಂದು, ಉತ್ತರ ಗೌಹತಿಯ ದರ್ಶನಪಡೆದೆವು. ಅಲ್ಲಿಂದ ಮೋಟರನ್ನೇರಿ ಮುಂದಕ್ಕೆ ಹೊರಟೆವು. ಮುಂದೆ ಆರೆಂಟು ಮೈಲುಗಳ ದೂರದ ತನಕ ಕಾಡುಗುಡ್ಡಗಳು ಕಾಣಿಸುತ್ತವೆ. ಎಡೆಎಡೆಯಲ್ಲಿ ಮಾತ್ರ ಬಯಲು ಭೂಮಿ. ಅದನ್ನುದಾಟಿದೆವೆಂದರೆ, ಒಂದಿಷ್ಟೂ ಏರುತಗ್ಗಿಲ್ಲದೆ ಕಾಣಿಸುವ ಬಯಲು ಭೂಮಿ ಬರುತ್ತದೆ. ಎಲ್ಲೆಲ್ಲೂ ಉಸುಕು, ಮಣ್ಣುಗಳಿಂದ ತುಂಬಿದ ಹೊಲಗದ್ದೆಗಳು. ಅಲ್ಲಲ್ಲಿ ಜನರ ಊರುಕೇರಿಗಳು. ಕೇರಿಗಳ ಸುತ್ತಲು ಬಾಳೆಬಿದಿರುಗಳ ಬೇಲಿ ಕಾಣಬಹುದು. ನಾವು ಹೋದಾಗ ಎಪ್ರಿಲ್ ತಿಂಗಳು. ಆಗಲೂ ಹೊಲದ

ಅಂಚುಗಳು ಹಸುರಾಗಿ ಕಾಣಿಸುತ್ತಿದ್ದುವು. ಮಳೆ ಸಾಮಾನ್ಯ ಇಲ್ಲಿ ಎಲ್ಲ ಕಾಲದಲ್ಲೂ ಬರುತ್ತದೆ. ಆದುದರಿಂದಾಗಿ ಈ ಹಸುರು. ನಮ್ಮ ಹಾದಿ ತೀರ ಕಚ್ಚಾ ರಸ್ತೆಯಂತಿತ್ತು. ಅದರ ಆರೈಕೆ ನೋಡಿದವರೂ ಇದ್ದಿರಲಾರರು. ದುರಸ್ತಿಮಾಡಲು ಬೇಕಾದ ಕಲ್ಲು ಸಹ ಬಹುದೂರದಿಂದ ಬರಬೇಕು. ದಾರಿಯ ಮೂವತ್ತು ಮೈಲಿನ ಉದ್ದಕ್ಕೂ, ಅನಂತರವೂ ಒಂದೇ ಒಂದು ತುಂಡು ಕಲ್ಲು ಕಾಣಿಸುವುದಿಲ್ಲ. ಎಲ್ಲವೂ ಮಿದು ಮಣ್ಣಿನಿಂದ ತುಂಬಿದ ನೆಲ. ನಾವು ಕುಳಿತ ಜೀಪನ್ನು ಭಂಡಾರಿಗಳೇ ನಡೆಸುತ್ತಿದ್ದರು. ನಮಗೋ–ಇದ್ದ ಬೆನ್ನೆಲುಬುಗಳ ಗತಿ ಏನು?–ಎಂಬ ಯೋಚನೆಯಾಗಿತು. ಸುಮಾರು ಐವತ್ತು ಮೈಲು ದೂರ ಹೀಗೆ ಸಾಗಿ ನಲ್ಬಾರಿ ಎಂಬ ಊರಿಗೆ ಬಂದೆವು. ನಮ್ಮ ಮೋಟರು ಹಾದಿಯ ತುಸು ಸಮೀಪದಲ್ಲಿಯೇ, ಉತ್ತರ ಅಸ್ಸಾಮು ರೈಲು ಹಾದಿಯು ಸಾಗುತ್ತದೆ. ಕಲ್ಕತ್ತೆಗೆ ಹೋಗುವ ಈ ದಾರಿ ಕೂಚ್ ಬಿಹಾರದ ತನಕ ಉತ್ತರ ಪಶ್ಚಿಮಾಭಿಮುಖವಾಗಿ ಸರಿದು, ಅನಂತರ ಅದು ನೇರಾಗಿ ದಕ್ಷಿಣಾಭಿಮುಖವಾಗಿ ಹೋಗುತ್ತದೆ.

ನಲ್ಬಾರಿಯಲ್ಲಿ ಭಂಡಾರಿಗಳ ಮಿತ್ರರಿಬ್ಬರ ಮನೆಗೆ ಹೋದೆವು. ಡಾ। ಚೌಧುರಿ ಎಂಬವರೊಬ್ಬರು; ಶ್ರೀಮಾನ್ ಗೋಸ್ವಾಮಿ ಎಂಬವರೊಬ್ಬರು. ಎರಡು ಕಡೆಗಳಲ್ಲೂ ನಮಗೆ ಅತಿಥಿ ಸತ್ಕಾರವಾಯಿತು. ಚೌಧುರಿಗಳು ನಲ್ಬಾರಿಯಲ್ಲಿ ವೈದ್ಯರಾಗಿ ನೆಲೆಸಿದ್ದಾರೆ. ಈಗಾಗಲೇ ಆ ಊರನ್ನು ಬಿಟ್ಟು ಗೌಹತಿಯ ಮೆಡಿಕಲ್ ಕಾಲೇಜಿಗೆ ಉಪನ್ಯಾಸಕರಾಗಿ ಹೋಗುವ ಕರೆಯೂ ಬಂದಿದೆ. ಬರಾಮಕ್ಕೆ ಆಗಾಗ ಬಂದು ಹೋಗುವ ಮಿತ್ರರವರು. ಭಂಡಾರಿಯವರ ಇನ್ನೊಬ್ಬ ಮಿತ್ರರು–ಶ್ರೀಮಾನ್ ಗೋಸ್ವಾಮಿಯವರು. ಶ್ರೀಮಾನ್ ಎಂಬುದು ಬಿರುದಲ್ಲ. ಅವರ ಹೆಸರೇನೆ ಶ್ರೀಮಾನ್. ಹೀಗಾಗಿ ಅವರನ್ನು ಕರೆಯಬೇಕಾದರೆ ಶ್ರೀಮಾನ್ ಶ್ರೀಮಾನ್ ಅನ್ನಬೇಕಾಗುತ್ತದೆ. ಶ್ರೀಮಾನರಿಗೆ ನಾಲ್ಕಾರು ಮಂದಿ ತಮ್ಮಂದಿರಿದ್ದಾರೆ. ಎಲ್ಲರೂ ಉಚ್ಚ ಶಿಕ್ಷಣ ಪಡೆದವರು. ಬಿ. ಎ; ಎಮ್. ಎ. ಆದವರು. ಶ್ರೀಮಾನರು ಓದು ಮುಗಿಸಿ ತಂದೆತಾಯರ ಜತೆಯಲ್ಲಿ ಊರಲ್ಲಿ ವಾಸವಾಗಿದ್ದಾರೆ. ಉಳಿದವರು ಬೇರೆ ಬೇರೆ ಊರುಗಳಲ್ಲಿ ಉದ್ಯೋಗದಲ್ಲಿದ್ದಾರೆ. ಅವರು ಅಲ್ಲಿನ ಗೌರವಸ್ಥ ಬ್ರಾಹ್ಮಣ ಮನೆತನದವರು. ಆದರೂ ನಮ್ಮನ್ನು ಉಪಾಹಾರಕ್ಕೆ ಕರೆಯುವ ಮೊದಲು "Vegitarian or nonvegitarian" ಎಂದು ಕೇಳಿದರು. ಈ

ಪ್ರಶ್ನೆ ಮುಂದೆ ನಾವು ಹೋದಲ್ಲೆಲ್ಲ ಬಂದಿತು. ಕಾರಣ ಬಂಗಾಳ,ಅಸ್ಸಾಮು ಗಳ ಜನರು ಮೀನನ್ನು ತರಕಾರಿಯೆಂದೇ ಉಪಯೋಗಿಸುತ್ತಾರೆ. ಶ್ರೀಮಾನ ರಲ್ಲಿ ನಾವು ಉಪಾಹಾರ ಮುಗಿಸಿ, ಅವರನ್ನೂ ನಮ್ಮ ಜೀಪಿನಲ್ಲಿ ಕುಳ್ಳಿರಿಸಿ ಕೊಂಡು,ಎಂಟು ಮೈಲು ದೂರದ ಬರಾಮಕ್ಕೆ ಬಂದೆವು. ಬರುವಾಗ ದಿನ ಸರಿದು, ಊರಲ್ಲಿ ಕತ್ತಲು ತುಂಬಿತ್ತು. ಮನೆಯಲ್ಲಿಯೂ ಹೆಚ್ಚು ಕಡಿಮೆ ಹಾಗೆಯೇ. ಮಿಣುಕು ಬೆಳಕಿನಿಂದ ಉರಿಯುವ ದೀಪದಿಂದ ಮನೆ ಬೆಳಗ ಬೇಕಿತ್ತು. ಭಂಡಾರಿಗಳ ಹೆಂಡತಿಯ ಹೆಸರು ಸಾವಿತ್ರಿ ಎಂದು. ಅಸ್ಸಾಮಿಗೆ ಹೋದಮೇಲೆ ಅವಳು ಅಲ್ಲಿನ ಭಾಷೆಯಲ್ಲಿ 'ಶೋಬಿತ್ರಿ'ಆಗಿದ್ದಾಳೆ.ಅಸ್ಸಾಮಿ ಗಳ ಕೈಗೆ ಸಿಕ್ಕಿ ಸಂಸ್ಕೃತ ಏನೆಲ್ಲ ಪಾಡುಪಟ್ಟಿತೋ! ಅದೊಂದು ಆಶ್ಚರ್ಯ ವಲ್ಲ. ಬರಾಮಾ ಇರುವುದು ಕಾಮರೂಪ ಜಿಲ್ಲೆಯಲ್ಲಿ. ಕಾಮರೂಪ ವೆಂಬುದು ಹಿಂದಣ ಕಾಲದಲ್ಲಿ ನರಕಾಸುರನ ರಾಜ್ಯವಂತೆ. ನರಕಾಸುರ ಸಂಸ್ಕೃತವನ್ನು ಹೇಗೆ ಬದುಕಗೊಟ್ಟಾನು?

ಭಂಡಾರಿಗಳ ಮನೆಯಲ್ಲಿ ಅವರು, ಸಾವಿತ್ರಿ, ಅವರ ಮಕ್ಕಳು ಶುದ್ಧ ಅಸ್ಸಾಮಿಗಳಾಗಿಯೇ ಬಿಟ್ಟಿದ್ದಾರೆ. ಮನೆಯ ಮಾತಾದ 'ತುಳು' 'ಕನ್ನಡ' ಎರಡಕ್ಕೂ ಬಳಕೆ ಇಲ್ಲ. ಅವರ ಮಕ್ಕಳಿಗಂತೂ ಅದು ಬರುತ್ತಲೇ ಇಲ್ಲ. ದೊಡ್ಡವರು ಮಾತನಾಡಿದರೆ ಒಂದು ಕನ್ನಡಕ್ಕೆ ಪ್ರತಿಯಾಗಿ ಎರಡು ತುಳು, ಹನ್ನೆರಡು ಅಸ್ಸಾಮೀ ಶಬ್ದಗಳು ಬರುತಿದ್ದುವು. ಆ ಕನ್ನಡ–ಅಸ್ಸಾಮಿ ಭಾಷೆ ಕರ್ಣವಿನೋದವಾಗಿತ್ತು.

ಆದರೆ ಅಸ್ಸಾಮಿ ಕಲಿಯುವುದು ಸುಲಭ. ಉಚ್ಚರಿಸುವುದು ಇನ್ನಷ್ಟು ಸುಲಭ—ಎಂದು ನನಗೆ ಅನಿಸಿತು. 'ಅ' ಕಾರಗಳನ್ನೆಲ್ಲ ಕಿತ್ತು 'ಒ' ಕಾರ ವಾಗಿ ಮಾಡಿದರಾಯಿತು.ಭಾಷೆಯ ಮುಖ್ಯ ಸ್ವರಗಳೆಲ್ಲ 'ಒ'ಕಾರವಾದುವು. ಇನ್ನು ವ್ಯಂಜನಗಳಲ್ಲಿ 'ಕ'ವು 'ಗ'ವಾಗಬೇಕು. 'ವ'ವು 'ಬ'ವಾಗಬೇಕು. 'ಯ'ವು 'ಜ'ವಾಗಬೇಕು. 'ಸ, ಶ, ಷ' ಮೂರನ್ನೂ 'ಹ'ವಾಗಿಯೇ ಉಚ್ಚ ರಿಸಿದರಾಯಿತು. ಇದು ಶಬ್ದಗಳ ಉಚ್ಚಾರದ ವಿಚಾರ. ಅಲ್ಲಿನ ಶಬ್ದಗಳಂತೂ ನನ್ನಪಾಲಿಗೆ ಹೊಸತೆನಿಸಲಿಲ್ಲ.ನಮ್ಮನೆರೆ ಭಾಷೆಯಾದ ಕೊಂಕಣಿಯ ಅನೇಕ ನಾಮಪದ, ಕ್ರಿಯಾಪದಗಳನ್ನು ಅಸ್ಸಾಮಿ ಭಾಷೆಯಲ್ಲಿ ಕಾಣುತ್ತೇವೆ. ಈ ಅಲ್ಪ ಅನುಭವದಿಂದ ಹೇಳುವುದಾದರೆ, ಕೊಂಕಣಿ ಮಾತನಾಡುವ ಸಾರ ಸ್ವತ, ಗೌಡ ಸಾರಸ್ವತ ಜನರು ಕಾಶ್ಮೀರದಿಂದ ಬಂದವರೇ ಅಲ್ಲ; ಅವರಲ್ಲಿ

ಕೆಲವರು ಮೀನು ತಿನ್ನುವುದಾದರೆ ಅದು ಕಾಶ್ಮೀರದಲ್ಲಿ ಕಲಿತ ವಿದ್ಯೆಯೂ ಅಲ್ಲ. ಇವರೆಲ್ಲ ಒಂದು ಕಾಲದಲ್ಲಿ 'ತಾಜಾ ಆಸಾಮಿ'ಗಳಾಗಿದ್ದಿರಬೇಕು. ಈಗ ಅಸ್ಸಾಮಿನಲ್ಲಿನೆಲೆಸಿರುವ ಅಸ್ಸಾಮಿಗಳ ಮುಖ ಛಾಯೆ ನೋಡುವಾಗ, ಚೀನಿ ಮಂಗೋಲರ ವರ್ಚಸ್ಸು ಹೆಚ್ಚಾಗಿ ಕಾಣುತ್ತದಾದುದರಿಂದ, ಆ ಜನ ಬಂದ ಮೇಲೆ ಈ ಜನ ಊರು ಬಿಟ್ಟು ಅಲ್ಲಿಂದ ಓಡಿಹೋಗಿರಬೇಕು. ನನ್ನ ಜತೆಯಲ್ಲಿ ನಮ್ಮ ಮಿತ್ರರಾದ ಶ್ರೀಮಾನ್ ಗೋವಿಂದ ಪೈಗಳಂಥವರು ಹಾರಿ ಬರುವ ಭರವಸೆ ಕೊಟ್ಟಲ್ಲಿ, ಅವರಂಥ ಸಂಶೋಧಕರಿಗೂ, ನನ್ನ ನವೀನ ಸಂಶೋಧನೆಯನ್ನು ಖಚಿತಗೊಳಿಸ ಬಲ್ಲೆ!

ರಾತ್ರಿ ಕಳೆದು ಬೆಳಗಾಗುವಾಗ, ಬರಾಮುದ ಹವೆ ಅತಿ ಶೀತವಾಗಿತ್ತು. ರಾತ್ರಿ ಮಳೆಬಿದ್ದುದರ ಫಲವದು. ಬಾನಲ್ಲಿ ಮುಗಿಲುಗಳು ಕವಿದು, ತುಂತುರು ಹನಿಗಳು ಉದುರುತ್ತಲೇ ಇದ್ದುವು. ಇಂತಹ ಹವೆಯಿಂದ ನಮ್ಮ ಸಂಚಾರಕ್ಕೆ, ಅದರಲ್ಲೂ ನನ್ನ ಫೊಟೋ ತೆಗೆಯುವ ಕೆಲಸಕ್ಕೆ, ತುಂಬ ವಿಘ್ನವೆನಿಸಿತು. ನಾವು ಅಲ್ಲಿ ಕಳೆಯಲಿರುವ ಎರಡು ದಿನಗಳಲ್ಲೂ ಬರಾಮುದ ಸುತ್ತು ಮುತ್ತಲಿನ ಹಳ್ಳಿಯ ಜೀವನವನ್ನು ನಿರೀಕ್ಷಿಸಬೇಕೆಂದು ಆಸೆಮಾಡಿದ್ದೆವು. ಬೆಳಗಿನ ಕಾಫಿ ಮುಗಿಸಿಕೊಂಡು, ಆ ಕೆಲಸಕ್ಕಾಗಿಯೇ ಹೊರಟೆವು. ಬರಾಮುವೆಲ್ಲ ಬಯಲು ಭೂಮಿ. ಬ್ರಹ್ಮಪುತ್ರೆಯ ಆಚೀಚೆ ಐವತ್ತು ಐವತ್ತು ಮೈಲು ಅಗಲವೆಲ್ಲವೂ ಒಂದೇ ಮಟ್ಟವಾದ ಪ್ರದೇಶವಂತೆ. ಗೌಹತಿಗೆ ನೂರೈವತ್ತು ಮೈಲು ಆಗ್ನೇಯಕ್ಕಿರುವ ದಿಬ್ರೂಗರ್ ತನಕ—ಒಂದೇ ಮಟ್ಟದಲ್ಲಿ ಈ ಬಯಲು ಭೂಮಿ ವ್ಯಾಪಿಸಿಕೊಂಡಿದೆ. ಈ ಬಯಲುಭೂಮಿಯ ಜೀವನವೆಲ್ಲ ಒಂದೇ ಕ್ರಮದ್ದು ಎನ್ನಬಹುದು. ಧಾರಾಳವಾಗಿ, ಅಂದರೆ ವರ್ಷಕ್ಕೆ ನೂರು ನೂರೈವತ್ತು ಇಂಚಿನ ತನಕ, ಮಳೆ ಬೀಳುತ್ತದೆ. ಮಳೆ ಬೀಳದ ಕಾಲವೇ ಸ್ವಲ್ಪ. ಇಲ್ಲಿನ ಮುಖ್ಯ ಬೆಳೆ ಬತ್ತ. ಬೇಸಾಯ ನಮ್ಮ ಊರಿನಂತೆಯೇ ಇದೆ. ಹೊಲಗದ್ದೆಗಳನ್ನೇನೋ ಉತ್ತುಬಿತ್ತುತ್ತಾರೆ; ಹೊಲಕ್ಕೆ ಗೊಬ್ಬರ ಕಾಣಿಸುವುದು ಕಡಿಮೆ. ಇಲ್ಲಿ ಬತ್ತವೇನೋ ಹುಲುಸಾಗಿ ಬೆಳೆಯುತ್ತದೆ. ಹತ್ತೆಂಟು ಜಾತಿಯ ಬತ್ತಗಳನ್ನು ಇಲ್ಲಿ ಬೆಳೆಯಿಸುತ್ತಾರೆ. ವಿಶಾಲವಾದ ಬಯಲುಗಳ ನಡುನಡುವೆ ಊರುಕೇರಿಗಳಿರುತ್ತವೆ. ಅವುಗಳ ನಡುವೆ ಕಂಗಿನ ತೋಟ. ಕನ್ನಡ ಜಿಲ್ಲೆಯವರಂತೆ ಕಷ್ಟಪಟ್ಟು, ನೀರೆರೆದು, ಗೊಬ್ಬರ ಹಾಕಿ ಬೆಳೆಸುವ ಕಂಗಿನಬೆಳೆ ಇಲ್ಲಿನದಲ್ಲ. ತನ್ನಂತೆಯೇ ಬೆಳೆಕೊಡುವ ಮರಗಳವು.

ಇಲ್ಲಿನ ಮನೆಗಳೆಲ್ಲ ಹುಲ್ಲು ಚಾವಣಿಯವು. ಶ್ರೀಮಂತರ, ಬಡವರ ಮನೆಗಳೆಲ್ಲವೂ ಒಂದೇ ತೆರನಾಗಿ ಕಾಣಿಸುತ್ತವೆ. ನೆಲದ ಮಟ್ಟಕ್ಕಿಂತ ಒಂದಡಿ ಎತ್ತರವಾದ ಮಣ್ಣಿನ ಅಸ್ತಿವಾರ. ಅದರ ಮೇಲೆ ಕಂಬಗಳನ್ನು ನಟ್ಟು, ಒಡೆದ ಬಿದಿರಿನ ತಟ್ಟಿಗಳನ್ನು ಅಡ್ಡವಾಗಿರಿಸಿ, ಅವಕ್ಕೆ ಮಣ್ಣು ಮೆತ್ತಿ ಗೋಡೆಮಾಡುತ್ತಾರೆ. ಮಾಡೆಲ್ಲವೂ ಬಿದಿರಿನದು. ಅದರ ಮೇಲಿನ ಚಾವಣಿ ಒಂದು ಜಾತಿಯ ಕಾಡು ಹುಲ್ಲಿನಿಂದ ಹೊದೆಯಿಸಿದ್ದು. ಎಂಟು ಹತ್ತು ವರ್ಷಕಾಲ, ಕೊಳೆಯದೆ ಉಳಿಯುವ ಹುಲ್ಲಿನ ಜಾತಿಯಿದು. ಬಲು ಅಪೂರ್ವಕ್ಕೆ ಒಂದೊಂದು ಮನೆಗೆ, ಹುಲ್ಲು ಹೊದೆಯಿಸುವುದರ ಬದಲು, ಕೊರುಗೇಟೆಡ್ ಕಬ್ಬಿಣದ ಹಾಳೆಗಳನ್ನು ಹೊದೆಸಿರುವುದನ್ನು ಕಾಣಬಹುದು. ಓಡಾಡುವ ನೆಲವನ್ನು ಮಣ್ಣಿಂದಮಾಡುವ ಬದಲು, ಮೂರು ನಾಲ್ಕು ಅಡಿ ಎತ್ತರದ ಗೂಟಗಳನ್ನು ನಟ್ಟು, ಮೇಲೆ ಮರ ಹಾಸುತ್ತಾರೆ. ಮಳೆಗಾಲದಲ್ಲಿ ನೆಲದಲ್ಲಿ ತೇವ ಬಲು ಏರುವುದರಿಂದ, ಮನೆಯ ಜನರು ಸಾಮಾನ್ಯವಾಗಿ ಮಂಚಗಳಲ್ಲೇ ಮಲಗುತ್ತಾರೆ. ಈ ಮಂಚವೂ ಬಿದಿರಿನದು. ಬಿದಿರಿಗಿಂತ ಹೆಚ್ಚಿನ ಮರ ಇಲ್ಲಿಲ್ಲವೋ ಏನೋ. ಇಲ್ಲಿರುವ ಇತರ ಮರಗಳು ಕಟ್ಟಡದ ಉಪಯೋಗಕ್ಕೆ ಬಾರದವು.ಕಂಭ ಮೊದಲಾದುವನ್ನು ಮಾಡಲು, ಅವರು ಬಲು ದೂರದ ಕಾಡುಗಳಿಂದ ಮರ ತರಬೇಕಾಗುತ್ತದೆ. ತಂದರೂ ಅಂಕುಡೊಂಕಿನವು. ಇಲ್ಲಿ ಬಿದಿರನ್ನು ಪ್ರತಿಯೊಬ್ಬರೂ ಬೆಳೆಸುತ್ತಾರಾದರೂ, ಎಲ್ಲದಕ್ಕೂ ಅದನ್ನೇ ಬಳಸುವುದರಿಂದ, ಒಂದೊಂದು ಬಿದಿರಿಗೆ ಒಂದೊಂದು ರೂಪಾಯಿ ಬೆಲೆಬೀಳುತ್ತದೆ.

ನಾವು ಮೊದಲ ದಿನ ನೋಡಹೋದದ್ದು ಇಲ್ಲಿನ ನಿವಾಸಿಗಳಾದ 'ಕಾಚಾರಿ'ಗಳ ಮನೆಮಠಗಳನ್ನು. ಕಾಚಾರಿಗಳು ಆದಿವಾಸಿಗಳ ಒಂದು ಬಳಗ. ಅಸ್ಸಾಮಿನಲ್ಲೆಲ್ಲ ಆದಿವಾಸಿಗಳೇ ಹೆಚ್ಚು. ಇವರನ್ನು ಗುಡ್ಡಗಾಡಿನ ಜನರೆನ್ನುತ್ತಾರೆ. ಆದರೆ ಬರಾಮುದಲ್ಲಿ ಗುಡ್ಡಗಾಡು ಎಲ್ಲಿಂದ ಬರಬೇಕು? ಈ ಜನ ಕುಳ್ಳಗಿನ ಆಳುಗಳು, ಕಂದು ಮೈದೊಗಲು, ಸಪುರವಾದ ಮಾಲುಗಣ್ಣುಗಳು. ಮಂಗೋಲರ ಮುಖ ವರ್ಚಸ್ಸು. ಅಸ್ಸಾಮಿನ ಪೂರ್ವಪ್ರದೇಶವೆಲ್ಲ ಗುಡ್ಡಗಾಡಿನಿಂದಲೇ ತುಂಬಿದ್ದು. ಅಲ್ಲಿನ ಜನರೂ ಹೀಗೆಯೇ ಇರುತ್ತಾರೆ. ಅವರಲ್ಲಿಯೂ ಆದಿವಾಸಿಗಳ ಸಂಖ್ಯೆ ಹೆಚ್ಚು. ಈ ಜನರಲ್ಲಿನ ಸಾಂಪ್ರದಾಯಗಳು ವಿಚಿತ್ರವಾಗಿವೆ. ನಾವು ನೋಡಿದ ಹಳ್ಳಿಯಲ್ಲಿ, ಹಾದಿಯ

ಎಡಕ್ಕೊಂದು ಕೇರಿ ಇತ್ತು; ಬಲಕ್ಕೆ ಇನ್ನೊಂದು ಕೇರಿ ಇತ್ತು. ಎಡದ ಕೇರಿ ಕಾಚಾರಿ ಮೂಲನಿವಾಸಿಗಳ ಕೇರಿ. ಬಲದ್ದು, ಅವರಲ್ಲೇನೆ ಸುಧಾರಿಸಿದ ಇನ್ನೊಂದು ಬಳಗವೆನಿಸುವ 'ಶರಣ್ಯ'ರದ್ದು. ಶರಣ್ಯರು ಕೋಳಿ, ಹಂದಿ ಗಳನ್ನು ಸಾಕುವುದಿಲ್ಲ; ತಿನ್ನುವುದೂ ಇಲ್ಲ. ಕೋಳಿ ತಿನ್ನುವುದು ತಮ್ಮ ಅಂತಸ್ತಿಗೆ ಕಡಿಮೆಯೆಂದು ತಿಳಿಯುತ್ತಾರೆ. ಆದರೆ ಬಾತುಕೋಳಿಗಳನ್ನು ಪ್ರತಿ ಮನೆಯಲ್ಲೂ ಸಾಕುತ್ತಾರೆ. ಅದರ ಮೊಟ್ಟೆ, ಮಾಂಸಗಳನ್ನು ಪ್ರತಿ ಮನೆ ಯವರೂ ತಿನ್ನುತ್ತಾರೆ. ಆದರೆ ಕಾಚಾರಿಗಳು–ಕೋಳಿ ತಿನ್ನುತ್ತಾರೆ; ಮದ್ಯ ಪಾನವನ್ನೂ ಮಾಡುತ್ತಾರೆ. ಮೀನು ಮಾತ್ರ ಇಲ್ಲಿನ ಎಲ್ಲ ಬಳಗದವರಿಗೂ ಬೇಕಾದದ್ದು. ನಾವು ಹೋದ ವೇಳೆಯಲ್ಲಿ-ಅಲ್ಲಲ್ಲಿ ಬತ್ತಿದ ಕೆರೆ, ತೋಡುಗಳಲ್ಲಿ ಹೆಂಗಸರು, ಗಂಡಸರು ಕೆಸರಲ್ಲಿ ನಿಂತು, ಮೀನನ್ನು ಕೈಗಳಿಂದಲೂ ಬುಟ್ಟಿ ಯಲ್ಲೂ ಹಿಡಿಯುತಿದ್ದರು.

ಅವರ ನಿತ್ಯ ಜೀವನದಲ್ಲಿ ಅಸಾಮಿಗಳಲ್ಲಿ, ಯಾವ ಬಣ್ಣ ಬೆಡಗೂ ಕಾಣಿಸುವುದಿಲ್ಲ. ಸಾದಾ ಬಿಳಿಯ ಉಡುಗೆಯನ್ನು ಗಂಡಸರು, ಹೆಂಗಸರು ಬಳಸುತ್ತಾರೆ. ಮೈಮೇಲೆ ಆಭರಣ ವಿಶೇಷಗಳೂ ಇಲ್ಲ. ಈ ಜನರಲ್ಲಿ ಎಲ್ಲಾ ಅಂತಸ್ತಿನ ಹೆಂಗಸರೂ ಬಟ್ಟೆಯ ನೆಯ್ಗೆ ಮಾಡುತ್ತಾರೆ. ನೇಯಲು ಬಾರದ ಹೆಂಗಸು ಗೃಹಿಣಿಯಾಗಲು ತಕ್ಕವಳಲ್ಲ—ಎಂಬುದು ಅವರ ತಿಳು ವಳಿಕೆ. ಬಟ್ಟೆಯ ಕೆಲಸದಂತೆ, ರೇಶ್ಮೆಯ ವ್ಯವಸಾಯ ಇಲ್ಲಿನ ಉಪವೃತ್ತಿ ಗಳಲ್ಲೊಂದು. ಹರಳುಗಿಡ ನಟ್ಟು, ಅದರ ಎಲೆಗಳಿಂದ ಒಂದು ಜಾತಿಯ 'ಎಂಡಿ ರೇಶ್ಮೆ'ಎಂಬ ರೇಶ್ಮೆಯನ್ನು ತಯಾರಿಸುತ್ತಾರೆ. ಅದರ ನೂಲನ್ನವರು ಕೈಯಿಂದಲೇ ಎಳೆಯುತ್ತಾರೆ. ಎಂಡಿ ರೇಶ್ಮೆ ದಪ್ಪನಾದದ್ದು. ಆದರೂ ಅದು ಮಿದುವಾದ ನೆಲ್ಲು ಬಣ್ಣದ ರೇಶ್ಮೆ. ಇದರಂತಿರುವ ಇನ್ನೊಂದು ಜಾತಿಯ ದೇಶೀಯ ರೇಶ್ಮೆ 'ಮೋಗಾ' ರೇಶ್ಮೆ ಎಂಬುದು. ಅದು ಹಳದಿ ಬಣ್ಣದ್ದು. ಈ ರೇಶ್ಮೆ ಬಟ್ಟೆಯನ್ನು 'ಪಟ್ಟೆ' ಎನ್ನುತ್ತಾರೆ. ಹಿಂದೆ ನಮ್ಮ ಊರುಗಳಿಗೆ ಇಂಥ ಪಟ್ಟೆಮಡಿಗಳು ಧಾರಾಳವಾಗಿ ಬರುತ್ತಿದ್ದುವು.

ಈ ಜನಗಳ ಮನೆಗಳನ್ನು ಹೊಕ್ಕರೆ, ಒಳಗೆ ಹೆಚ್ಚಿನ ಸರಂಜಾಮು ಗಳನ್ನು ಕಾಣಲಾರೆವು. ಪಾತ್ರೆ, ಪರಡಿಗಳ ಸಂಖ್ಯೆ ಕಡಿಮೆ. ಕೆಲವೇ ಕಂಚಿನ ಬಟ್ಟಲುಗಳು; ಒಂದೆರಡು ಕಬ್ಬಿಣದ ಪಾತ್ರೆಗಳು, ತಪ್ಪಿದರೆ ಎಲ್ಯೂಮಿನಿ ಯಮ್ ಪಾತ್ರೆಗಳನ್ನು ಕಾಣಬಹುದು. ಹೊರತು–ತಾಮ್ರ, ಹಿತ್ತಾಳಿ ಪಾತ್ರೆ

ಗಳು ಕಾಣಸಿಗುವುದಿಲ್ಲ. ಪಾತ್ರೆಗಳಿಗೆ ಕಲಾಯಿಹಾಕುವ ಪದ್ಧತಿಯೂ ಇಲ್ಲಿಲ್ಲ. ತೀರ ಸರಳ ಜೀವನ, ಸರಳ ಭೋಜನ ಅವರದ್ದು.

ಬೇಸಾಯಕ್ಕಾಗಿ ದನಕರುಗಳನ್ನು ಸಾಕುತ್ತಾರೆ. ಬರಾಮದ ಸುತ್ತು ಮುತ್ತ ನೂರಾರು ದನಕರುಗಳಿದ್ದರೂ, ಎಮ್ಮೆ ಕೋಣಗಳ ಸಂಖ್ಯೆ ಮಾತ್ರ ಒಂದೋ ಎರಡೋ. ನಮ್ಮ ಸೀಮೆನಾಡಿಗೆ ವಿರುದ್ಧವಾದ ನೋಟವಿದು. ಬಿಜಾಪುರದಲ್ಲಿ ನೂರು ಎಮ್ಮೆಗಳಿಗೆ ಒಂದು ದನವಂತೆಯೂ ಕಾಣಸಿಗುವುದಿಲ್ಲ. ಇಲ್ಲಿ ನೂರು ದನಗಳಿಗೆ ಒಂದು ಎಮ್ಮೆಯೂ ಕಾಣಸಿಗುವುದಿಲ್ಲ. ಹೆಚ್ಚಾಗಿ ದನಕರುಗಳ ಬಣ್ಣವೆಲ್ಲ—ಕಂದು, ಕಪಿಲೆ, ಬಿಳಿ. ಅವನ್ನು ಕಟ್ಟುವ ಕೊಟ್ಟಿಗೆಗಳು—ನೆಲವನ್ನು ಬಿಟ್ಟಿದ್ದ ಅಟ್ಟಗಳಂತಿರುತ್ತವೆ. ಬಿದಿರ ಚಾಪೆ ಹಾಸಿದ ಎತ್ತರದ ಅಟ್ಟಗಳಲ್ಲೇ ಅವುಗಳ ವಾಸ. ಅಟ್ಟದಿಂದ ಕೆಳಕ್ಕಿಳಿಯಲು ಇಳಿಜಾರಾದ ಬಿದಿರಿನ ದಾರಿ ಮಾಡಿಕೊಡುತ್ತಾರೆ. ನಮ್ಮೂರಿನಂತೆ ಇಲ್ಲಿಯೂ ಹಾಲು ಮೊಸರುಗಳನ್ನು ಬಳಸುವ ರೂಢಿಯುಂಟು. ಆದರೆ ಆ ಮೊಸರನ್ನು ತಯಾರಿಸುವ ವಿಧಾನ ಮಾತ್ರ ಬೇರೆ. ಹಾಲನ್ನು ಕಾಯಿಸದೆ, ಹಾಗೆಯೇ ಒಂದೆರಡು ದಿನ ಹುಳಿಯಗೊಟ್ಟರೆ, ಅದೇ ಮೊಸರಾಗುತ್ತದೆ. ಹಾಲಿಗೆ ಹೆಪ್ಪು ಹಾಕುವ ರೂಢಿ ಇಲ್ಲಿಲ್ಲ. ಆದರೆ ನನ್ನಂತೆ ಉದ್ದಮೂಗಿರುವ ಜನಕ್ಕೆ, ಅಂಥ ಮೊಸರಿನ ವಾಸನೆ ಸಹಿಸಲು ಕಷ್ಟವಾದೀತು.

ನಾವು ಅಸ್ಸಾಮಿಗೆ ಹೋದ ವೇಳೆ, ವಿಷು ಸಂಕ್ರಾಂತಿ ಕಳೆದ ದಿನಗಳು. 'ವಿಷು' ಅವರಲ್ಲಿ 'ಬೇಹು' ಎಂದಾಗಿದೆ. 'ಬೇಹು' ಹಬ್ಬವು ಕಾಚಾರಿಗಳ ಪಾಲಿಗೆ ತುಂಬ ಉತ್ಸಾಹದ ದಿನಗಳು. ಆಗ ಹಾಡು ಕುಣಿತಗಳ ಸಂಭ್ರಮವೇ ಸಂಭ್ರಮ. ನಮಗೆ ಬೇಕಾಗಿದ್ದುದೂ ಅದೇನೆ. ನಾವು ಕಾಚಾರಿಗಳ ಹಳ್ಳಿಯ ಸಮೀಪಕ್ಕೆ ಹೋದಾಗ, ದೋಲಿನ ಬಡಿತ ಕೇಳಿಸುತ್ತಿತ್ತು. ನಮಗೆ ಕೇರಿಯ ಒಳಗೆ ನುಗ್ಗುವ ಆಸೆಯಾಯಿತು. ಹಾಗೆ ಮಾಡುವುದು ವಿವೇಕವಲ್ಲವೆಂದು ಎಣಿಸಿ, ಭಂಡಾರಿಗಳನ್ನು ದೂತರಾಗಿ ಕಳುಹಿಸಿದೆವು. ಭಂಡಾರಿಗಳು ಅಲ್ಲಿದ್ದವರು; ಅನೇಕಾನೇಕ ಕಾಚಾರಿ ಹಳ್ಳಿಗಳ ಒಳಿತಿಗಾಗಿ ಕೆಲಸ ಮಾಡಿದವರು. ಆ ಜನರ ಸಲುವಾಗಿ ಕೆಲವು ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು, ಶಾಲೆಗಳನ್ನು ಕಟ್ಟಿಸಿ, ಅವರಿಗಾಗಿ ದುಡಿಯುತ್ತಿರುವವರು. ಹೀಗಾಗಿ ಅವರ ದೂತತ್ವ ಸಫಲವಾಗುವುದರಲ್ಲಿ ಆಶ್ಚರ್ಯವಿಲ್ಲ. ನಮಗೂ ಹಳ್ಳಿಗರಿಂದ ಕರೆ ಬಂದಿತು. ಆ ಬಳಿಕ ಕೇರಿಯ ಒಳಕ್ಕೆ ಹೋದೆವು. ಮನೆಯ

ಅಂಗಣವೊಂದರಲ್ಲಿ ಒಂದು ಕಡೆ ಒಂದು ಬಾಣಲೆಯಲ್ಲಿ ಬತ್ತದ ಸಾರಾಯಿ ಕುದಿಯುತಿತ್ತು. ಅದು ಹೊಟ್ಟೆಗೆ ಬಿದ್ದಷ್ಟು ಕುಣಿತದ ಉತ್ಸಾಹ ಹೆಚ್ಚು. ಬಳಿಯಲ್ಲೇ ಇಬ್ಬರು ಯುವಕರು, ಉದ್ದವಾದ ಮದ್ದಲೆ ಹಿಡಿದುಕೊಂಡು ಕುಣಿಯುತ್ತಾ ಮದ್ದಲೆ ಬಡಿಯುತಿದ್ದರು. ಅವರ ಜತೆಗೆ ಇನ್ನೊಬ್ಬಿಬ್ಬರು ಸೀಳು ಬಿದಿರಿನ ತಾಳಗಳನ್ನು ಹಿಡಿದು ಬಾರಿಸುತಿದ್ದರು. ವಾದ್ಯ ಪ್ರಾರಂಭಿಸಲು ಒಬ್ಬಿಬ್ಬರು ಹುಡುಗರು ಕುಣಿಯತೊಡಗಿದರು. ನಮ್ಮ ಪ್ರೋತ್ಸಾಹ ಧಿಂದ,ಕೇರಿಯ ಜನ ಅಂದರೆ ಗಂಡಸರು ಮಾತ್ರ, ಮೊದಲಿಗೆ ಬಂದು ಕಲೆತರು. ಮೆಲ್ಲಗೆ ಕುಣಿತದ ಆವೇಶ ಹೆಚ್ಚಿತು. ಹಲವು ಬಗೆಗಳಲ್ಲಿ ಕುಣಿದಾಡಿದರು. ಒಂದು ಕುಣಿತ ಮೊಸಳೆಯ ಕುಣಿತವಂತೆ! ನೆಲದ ಮೇಲೆ ಕೈ ಕಾಲೂರಿ, ಮೈ ನಿಡಿದುಕೊಂಡು, ಹೆಗ್ಗಾಳಿಯಂತೆ ಒಬ್ಬ ಕತ್ತನ್ನು ಆಚೀಚೆ ಮಾಡುತ್ತ ಕುಣಿದ. ಒಂದು ತಾಸು ಕಾಲ ಅವರ ಕುಣಿತ ನೋಡಿದೆವು. ನಮ್ಮ ಸುತ್ತು, ಎದೆತನಕ ಮಲೆಕುಡಿಯರಂತೆ ಬಟ್ಟೆ ಬಿಗಿದ ಹೆಂಗಸರು, ಗುಂಪು ಗುಂಪಾಗಿ ಸೇರಿದರು. ಒಂದು ಕಡೆ ಎಳೆಯ ಹುಡುಗಿಯರು, ಬರ್ಮೀಯರಂತೆ ತಮ್ಮ ಬೆನ್ನಿಗೆ ಕಿರಿಯ ತಮ್ಮ ತಂಗಿಯರನ್ನು ಕಟ್ಟಿಕೊಂಡು, ಬಂದು ನಿಂತಿದ್ದರು. ಆದರೆ ದೊಡ್ಡವರ ಕುಣಿತದಲ್ಲಿ ಅವರಾರೂ ಭಾಗಿಗಳಾಗಲಿಲ್ಲ.

ಆ ದಿನ ಮತ್ತು ಮರುದಿನ ಈ ಬಗೆಯ ಕುಣಿತದ ಹಲವು ನೋಟಗಳು ನಮಗೆ ಕಾಣಲು ದೊರೆತುವು. ನಾವಿದ್ದ ಮನೆಗೇನೇ ಮರುದಿನ ಹುಡುಗಿಯರ ಗುಂಪೊಂದು ಬಂದಿತು. ಹುಡುಗರ ಗುಂಪೊಂದು ಬೇರೆಯಾಗಿ ಬಂದಿತು. ಹಿರಿಯರ ಗುಂಪು ಬೇರೆ. ಆ ಮೂರು ಗುಂಪಿನವರಲ್ಲಿ ಹೇಳಬಹುದಾದ ಕುಣಿತ ಹುಡುಗಿಯರದ್ದಾಗಿತ್ತು. ಆರೆಂಟು ಮಂದಿ ಹದಿನಾಲ್ಕು ಹದಿನೈದು ವರ್ಷದ ಬಾಲಿಕೆಯರು ಗುಂಪು ಸೇರಿ ಬಂದಿದ್ದರು. ಅವರಲ್ಲಿ ಇಬ್ಬರು ಮಾತ್ರ ಕುಣಿಯುತ್ತಿದ್ದರು; ಉಳಿದವರು ಹಾಡುತ್ತ ತಾಳಹಾಕುತ್ತಿದ್ದರು. ಗೀತ ಮಧುರವಾಗಿ, ತರಂಗಮಯವಾಗಿ ಹರಿಯುತ್ತಲೇ ಇತ್ತು. ಎದೆಯ ತನಕ ಬಿಳಿ ಬಟ್ಟೆಯುಟ್ಟಿದ್ದ ಕಿರಿ ಹುಡುಗಿಯರಿಬ್ಬರು, ಬೆನ್ನ ಮೇಲೆ ಇನ್ನೊಂದು ಬಟ್ಟೆ ಹಾಕಿಕೊಂಡು, ಅದರ ಸೆರಗುಗಳನ್ನು ಎರಡು ಕೈಗಳಲ್ಲಿ ಹಿಡಿದುಕೊಂಡು, ಬಾಲೀ ನೃತ್ಯ ಭಂಗಿಯಲ್ಲಿ ಅರ್ಧ ತಾಸು ಕುಣಿದರು. ಅವರ ಅರ್ಧ ಮುಚ್ಚಿದ ಕಣ್ಣುಗಳು ಅವರ ಭಾವತಲ್ಲೀನತೆಯನ್ನು ಸೂಚಿಸುತ್ತಿದ್ದುವು.

ಉಳಿದ ಗುಂಪುಗಳ ಕುಣಿತದ ಮಾದರಿ, ಹೆಚ್ಚು ಕಡಿಮೆ ಇದೇ ತೆರನಾಗಿದ್ದರೂ, ಇವರಲ್ಲಿದ್ದ ಲಾಲಿತ್ಯ ಅವರಲ್ಲಿರಲಿಲ್ಲ. ಹಾಡಿನ ಇಂಪೂ ಉಳಿದವರ ಕಂಠಗಳಲ್ಲಿ ಕಾಣಿಸಲಿಲ್ಲ.

ಮೊದಲ ದಿನ ಮಧ್ಯಾಹ್ನ ನಾವು, ಜೀಪಿನಲ್ಲಿ ಕುಳಿತು ಒಳನಾಡನ್ನು ಕಾಣಲು ಹೋದೆವು. ಹಿಮಾಲಯದ ಬುಡದ ಬೆಟ್ಟಗಳಿಗೆ (Foot-hills) ಬರಾಮುದಿಂದ ಬರಿಯ ಇಪತ್ತು ಮೈಲು ದೂರವಿದೆ. ಅಲ್ಲಿ ಚಾ ತೋಟಗಳಿವೆಯೆಂದು ಗೆಳೆಯರಿಂದ ಕೇಳಿ,ಹೊರಟೆವು. ನೇರ ಉತ್ತರಕ್ಕೆ ಹೋಗುವಂಥ ದಾರಿಯಿದು. ಆ ಇಪ್ಪತ್ತು ಮೈಲು ದೂರವೂ, ಅಂದರೆ ಭೂತಾನ ಪ್ರಾಂತದ ಅಂಚಿನ ತನಕವೂ ಒಂದೇ ಒಂದು ಗುಡ್ಡವಿರಲಿಲ್ಲ. ತೀರ ಸಮತಟ್ಟಾದ ನೆಲ. ಬರಾಮುದ ಸುತ್ತುಮುತ್ತಲಿರುವಂತೆಯೇ ಹೊಲಗದ್ದೆಗಳು. ಹಿಂದಣ ದಿನ ಮಳೆ ಬಂದಿದ್ದುದರಿಂದ ರಸ್ತೆಯಲ್ಲಿ ಕೆಸರಿನ ಕುಣಿಗಳುಂಟಾಗಿದ್ದುವು. ಜೀಪಿಗೂ ಆ ಹೊಂಡಗಳನ್ನು ದಾಟುವುದು ಸಾಹಸದ ಮಾತಾಗಿತ್ತು. ಚಾ ತೋಟಗಳ ಲಾರಿಗಳು ಹೋಗಿ, ಹಾದಿಯು ತುಂಬ ಕೆಟ್ಟಿತ್ತು. ನಾವು ಹಾದಿಯಲ್ಲಿ ಹೋಗುತಿದ್ದಾಗ ಅಲ್ಲಲ್ಲಿ 'ಬೇಹು'ಕುಣಿತಗಾರರ ಗುಂಪು ಕಾಣಿಸುತಿತ್ತು. ಇಲ್ಲಿನ ಹೊಲಗಳಲ್ಲಿ ಕಾಣಿಸುವ-ಅಪೂರ್ವ ಪಕ್ಷಿಗಳಲ್ಲಿ ಬಕ ಒಂದು. ಸುಮಾರು ಮೂರು ಅಡಿ ಎತ್ತರದ ಕಪ್ಪು ರೆಕ್ಕೆಯ ಬಕಗಳಿವೆ. ಅವಕ್ಕೆ ಗಾತ್ರವಾದ ಕೊಕ್ಕುಗಳು; ರೋಮವಿಲ್ಲದ ಬೋಳು ತಲೆ; ನೀಳ ಕಾಲುಗಳು. ನಮಗೆ ಕಾಣಸಿಕ್ಕಿದ ಒಂದು ಬಕ ಮಾತ್ರ-ಸುಮಾರು ನಾಲ್ಕು ಅಡಿಯಷ್ಟು ಎತ್ತರವಾಗಿತ್ತು. ಬೂದು ಬಣ್ಣದ ರೆಕ್ಕೆ ಅದಕ್ಕೆ, ಬಿಳುಪಾದ ಕಾಲುಗಳು. ಅದು ಹೊಲದಲ್ಲಿ ದೂರ ದೂರಕ್ಕೆ ಹೆಜ್ಜೆಯಿಕ್ಕಿ ನಡೆಯುವ ನೋಟ, ಮುದುಕನೊಬ್ಬನು ಬೆನ್ನು ಬಗ್ಗಿಸಿ, ವಿಹಾರಕ್ಕೆ ಹೊರಟಂತೆ ಕಾಣಿಸುತಿತ್ತು.

ನಮ್ಮ ಪ್ರವಾಸದ ಕೊನೆಗೆ ಕಾಣಸಿಕ್ಕಿದ್ದೇ—ಚಾ ತೋಟಗಳು. ಚಾ ಗಿಡಗಳನ್ನು ಗುಡ್ಡಗಳಲ್ಲಿ ಮಾತ್ರ ಬೆಳೆಯಿಸುತ್ತಾರೆ ಎಂಬ ತಿಳಿವು ನಮ್ಮದಿತ್ತು. ಇಲ್ಲಿನ ತೋಟಗಳು ಮಾತ್ರ ತಟ್ಟಾದ ಬಯಲಿನಲ್ಲೇ ಮಾಡಿದುವು. ಈ ತೋಟಗಳು ನಮ್ಮೂರ ಮಲ್ಲಿಗೆಯ ತೋಟಗಳಂತೆ, ದಟ್ಟವಾಗಿ ಬೆಳೆದ ಗಿಡಗಳಿಂದ ಕೂಡಿದ್ದು, ಬಹು ದೂರದ ತನಕ ವ್ಯಾಪಿಸಿದ್ದವು. ಆದರೆ ಇಷ್ಟೇ ವ್ಯತ್ಯಾಸ-ಚಾ ಗಿಡಗಳ ಕುಡಿಗಳನ್ನು ಮಟ್ಟವಾಗಿ ಸವರಿದ್ದರು. ತುಸು

ದೂರದ ಇನ್ನೊಂದು ತೋಟದಲ್ಲಿ, ಇಂಥ ಚಾ ಗಿಡಗಳ ನಡು ನಡುವೆ, ಎಲೆ ಕಳಚಿಕೊಂಡಂಥ ಎತ್ತರವಾದ ನೂರಾರು ಮರಗಳಿದ್ದುವು. ಈ ತೋಟಕ್ಕೆ ಸಮೀಪವಾಗಿ ಬಲು ದೊಡ್ಡ ಚಾ ಹದಗೊಳಿಸುವ ಕಾರ್ಖಾನೆಯೂ ಒಂದಿತ್ತು. ಮಳೆ ಬಿದ್ದು, ಚಾ ಗಿಡಗಳು ಚಿಗುರಿದ ಮೇಲೆ ಅಲ್ಲಿನ ಕೆಲಸ ತೊಡಗುತ್ತದೆ. ನಾವು ಕಾರ್ಖಾನೆಗೆ ಹೋದಾಗ ಅಲ್ಲಿ ಕೆಲಸ ನಡೆಯುತ್ತಿರಲಿಲ್ಲ. ಕಾರ್ಖಾನೆಯಲ್ಲಿ ಚಾ ಎಲೆಗಳನ್ನು ಒಣಗಿಸುವ ದೊಡ್ಡ ಅಟ್ಟಗಳನ್ನೂ, ಗೆಲರಿಗಳನ್ನೂ ನೋಡಿಕೊಂಡು ಬಂದೆವು. ಚಾ ತೋಟ ನೋಡಿ ನಮಗನಿಸಿತು—ಇಲ್ಲಿ ಬಂದಾಗ ನಮ್ಮನ್ನು ಕರೆದು ಒಂದು ಕಪ್ ಚಾ ಕೊಳ್ಳಿರಿ—ಎನ್ನುವವರಿಲ್ಲದೆ ಹೋಯಿತಲ್ಲ—ಎಂದು.

ನಮ್ಮ ಜೀಪಿನಲ್ಲಿ, ಜತೆಗಾರರಾಗಿ ಶ್ರೀಮಾನ್ ಗೋಸ್ವಾಮಿಯವರು ಬಂದಿದ್ದರು. ಶ್ರೀಮಾನ್‌ರ ತಮ್ಮ ಪ್ರಮೋದ ಗೋಸ್ವಾಮಿ ಎಂಬವರು ಹಿಂದಣ ರಾತ್ರಿಯೇ ಆ ಪ್ರಾಂತಕ್ಕೆ ಎಸಿಸ್ಟಾಂಟ್ ಕನ್ಸರ್ವೇಟರಾ ಆಗಿ ಬಂದಿದ್ದರು. ಅವರು ಅಮೇರಿಕವಲ್ಲಿ ಅರಣ್ಯ ಶಿಕ್ಷಣ ಪಡೆದಿದ್ದರು. ೧೯೪೭ರ ಚಳವಳಿಯಲ್ಲಿ ಇಲ್ಲಿನ ಅರಣ್ಯ ಇಲಾಖೆಯ ಕಚೇರಿಗಳನ್ನೆಲ್ಲ ಸುಟ್ಟು ಹಾಕಿದ್ದರಿಂದ, ಚಾ ತೋಟಗಳಿಂದ, ಒಂದು ಮೈಲು ದೂರದಲ್ಲಿರುವ ಒಂದು ಪುಟ್ಟ ಗುಡಿಸಲಿನಲ್ಲಿ ಅವರು ವಾಸವಾಗಿದ್ದರು. ಅಲ್ಲಿಂದ ಒಂದು ಮೈಲಿಗೆ —ಭೂತಾನದ ಹಿರಿಯ ಬೆಟ್ಟಗಳು ಕಾಣಿಸುತ್ತವೆ. ಈ ಬೆಟ್ಟಗಳ ಸಾಲುಗಳು ಕಳೆಯುತ್ತಲೇ, ಬರುವ ಪ್ರದೇಶವೆಲ್ಲ ಹಿಮಾಲಯ. ಅಲ್ಲಿಗೆ ಬಂದ ನಮಗೆ ಹಿಂದುಸ್ಥಾನದ ಅತ್ಯುತ್ತರ ಸೆರಗನ್ನು ಕಂಡೆವೆಂಬ ಹಿಗ್ಗು ಉಂಟಾಯಿತು. ನಾವು ಪ್ರಮೋದ ಗೋಸ್ವಾಮಿಗಳ ಮನೆಗೆ ಕಾಲಿರಿಸುವಾಗ, ಅವರು ಮಲಗಿಕೊಂಡೇ ಇದ್ದರು. ನಾವು ಬರುತ್ತಲೇ, ಎದ್ದು ಉಪಾಹಾರಕ್ಕೆ ಅಣಿಮಾಡಿದರು. ನಮ್ಮನ್ನು ಕಂಡವರೇ ತಿರುಗಿ 'Vegitarian or?' ಎಂಬ ಪ್ರಶ್ನೆ ಕೇಳಬೇಕಾಯಿತು. 'ಶಾಖಾಹಾರಿಗಳು ನಾವು' ಎಂದು ತಿಳಿಸಿದೆವು. ನಾವಂತು ನಿಸ್ಸೀಮರು. "ಚಹಾ" ಎಂದು ಅವರು ಹೇಳುವ ಮೊದಲೇ ಶ್ರೀಪತಿಯ ಕಣ್ಣು ಮಗ್ಗುಲಲ್ಲಿದ್ದ 'ನೆಸ್‌ಕಫೆ' ಡಬ್ಬಿಯ ಮೇಲೆ ಬಿದ್ದಿತ್ತು. 'ಕಾಫಿ' ಎಂದ ಆತ. ಅದರ ಸಿದ್ಧತೆಯಾಗುವ ಮೊದಲೇ ಪ್ರಮೋದರು ತಮ್ಮ ಅಜ್ಞಾತವಾಸಕ್ಕಾಗಿ ತಂದಿರಿಸಿದ ಬಿಸ್ಕಿಟ್ ಡಬ್ಬಿಗಳನ್ನು ಒಡೆದು, ಸಂಹಾರವೆಸಗಿದೆವು. ಅಷ್ಟರಲ್ಲಿ ನಲ್ಬಾರಿಯ ಡಾ।ಚೌಧುರಿಯವರು ನಮ್ಮನ್ನು

ಹಿಂಬಾಲಿಸಿಕೊಂಡು ಬಂದರು. ಬರಾಮುದಲ್ಲಿ ನಮ್ಮನ್ನು ಕಾಣವೆ, ಅಲ್ಲಿಗೂ ಬಂದ್ದಿದರು. ನಮ್ಮ ಸಭೆ ಹರಟೆಗಳಾಗುವಾಗ ಕತ್ತಲಾಯಿತು. ಇನ್ನು ಆ ರಾಡಿ ತುಂಬಿದ ದಾರಿಯಿಂದಲೇ ನಾವು ಮರಳಬೇಕಿತ್ತು. ಹಿಂದಿರುಗುವಾಗ ನಾನು ಚೌಧುರಿಯವರ ಕಾರನ್ನು ಸೇರಿಕೊಂಡೆ. ಶ್ರೀಪತಿಗೆ ಜೀಪಲ್ಲದೆ ಬೇರೆ ಇಲ್ಲ. ನಾವು ಆ ರಾತ್ರೆ ಬರಾಮಾ ಸೇರುವಾಗ, ಒಂಬತ್ತು ಘಂಟೆಯಾಗಿತ್ತು. ದಾರಿಯುದ್ದಕ್ಕೂ ತೀರಕತ್ತಲು ಕವಿದಿತ್ತು; ಮಳೆ ಹನಿಯುತಿತ್ತು. ಮಿಣುಕು ಹುಳಗಳು ತಂಡೋಪತಂಡವಾಗಿ ಹಾರಾಡುತ್ತಿದ್ದುವು.


ಮರುದಿನ ನಾವು ಬರಾಮುದಲ್ಲೇ ಇನ್ನೊಮ್ಮೆ ಸುತ್ತಾಡಿದೆವು. ಊರ ಸಂತೆಯ ದಿನವದು. ಹಾಗೆಂದು ಸಂತೆ ನೋಡಲು ಹೋದೆವು. ನಾವು ಹೋಗುವಾಗ ಸಂತೆ ಮುಗಿಯುವುದರಲ್ಲಿತ್ತು. ಜನರು ಮೀನು, ತರಕಾರಿ, ಪಾರಿವಾಳ, ಬಾತುಕೋಳಿ ಇವನ್ನೆಲ್ಲ ಕೊಂಡು ತಮ್ಮ ತಮ್ಮ ಹಳ್ಳಿಗಳಿಗೆ ತೆರಳುತ್ತಿದ್ದರು. ಸಂತೆಯ ದಿನವೇ ಊರಿನ ಗಂಡು ಸಂತಾನಕ್ಕೆಲ್ಲ ಕ್ಷೌರವಾಗಬೇಕು. ಒಂದು ಸಂತೆಯಿಂದ ಇನ್ನೊಂದು ಸಂತೆಗೆ ಅಲ್ಲಿನ ನಾಪಿತ ವರ್ಗದಂಡ ಯಾತ್ರೆ ಬೆಳೆಸುತ್ತದೆ. ಆ ಊರ ಸಂತೆ ತೀರ ಬಡ ಸಂತೆ; ಅಲ್ಲಿಟ್ಟಿದ್ದ ಧಾನ್ಯಗಳಾಗಲೀ, ತರಕಾರಿಗಳಾಗಲೀ, ಬೆಲ್ಲ, ಮತ್ತೊಂದಾಗಲೀ ತೀರ ಸಾಮಾನ್ಯವಾದವು. ಬೆಲ್ಲದವನ ಅಂಗಡಿಯಲ್ಲಿ ಮಕ್ಕಳ ಬಾಲಶಿಕ್ಷೆಯ ಪುಸ್ತಕವೂ ವಿಕ್ರಯಕ್ಕಿತ್ತು. ಸಂತೆಗೆ ಬಂದುದಕ್ಕೆ ನಾವು ಊದುಬತ್ತಿಯ ಖರೀದಿ ಮಾಡಿದೆವು. ಒಂದಾಣೆ ಕೊಟ್ಟು ಎಂಟು ದಪ್ಪನಾದ ಊದುಬತ್ತಿಗಳನ್ನು ಕೊಂಡು, ಮನೆಗೆ ಹೋದೆವು; ಅದಕ್ಕೆ ಕಡ್ಡಿ ಗೀರಿದ್ದೇ ಗೀರಿದ್ದು! ಉರಿಯಬೇಕೇ ಅದು? ಶಪಥ ಅದರದ್ದು! ಒಲೆಗೆ ಹಾಕಿದರೆ ಮಾತ್ರ ಉರಿಯುವಂಥ ಊದುಬತ್ತಿಯದು. ಅದರ ವಾಸನೆಯೋ! ನಮ್ಮಿಂದ ಅದಕ್ಕೆ ವಾಸನೆ ಬರಬೇಕೇ ವಿನಾ ಅದರಿಂದ ನಮಗೆ ಬರುವಂತಿರಲಿಲ್ಲ. ಆದರೂ ಬರಾಮಾ ಅನಾಗರಿಕವೆಂದು ತಿಳಿಯಬೇಡಿ. ನಲ್ಬಾರಿ ಬರಾಮಾಗಳಲ್ಲಿ ವಿದ್ಯಾವಂತರ ಸಂಖ್ಯೆಯೂ ಸಾಕಷ್ಟಿದೆ. ಆದುದರಿಂದಲೇ ನಮಗೆ ಬೇಕಾದ 'ಕೆಪ್ಸ್ಟನ್' ಸಿಗರೇಟಿಗೆ ಏನೂ ಕೊರತೆ ಬರಲಿಲ್ಲ. ಬೇರೆ ಊರಲ್ಲಿ ಎಂಟಾಣೆಗೆ ದೊರೆಯುವ ಆ ಸಿಗರೇಟಿಗೆ, ಅಲ್ಲಿ ಬರಿಯ ಹತ್ತಾಣೆ ಬೆಲೆಯಷ್ಟೆ.

ಅಸ್ಸಾಮು,ಕಸಿಪ್ಪ ಒಂದು ತಿಂಗಳ ಕಾಲ ಸಂಚರಿಸಿ ನೋಡಬಹುದಾದ ಊರು. ತ್ರಿಪುರ, ಮಣಿಪುರ, ದಿಬ್ರೂಗರ್, ಕಾಶೀ, ಗರೋ ಪರ್ವತ

ಪ್ರದೇಶಗಳನ್ನೆಲ್ಲ ಸಂದರ್ಶಿಸಬಹುದು. ಈಗಲೇ ಸಂದರ್ಶಿಸಿ ಮುಗಿಸಿದರೆ, ಇನ್ನೊಮ್ಮೆ ಹೋಗಿ ನೋಡುವ ಅವಕಾಶ ಇಲ್ಲದಾಗುತ್ತದೆಂದು, ಎರಡು ದಿನಗಳ ವಾಸದಲ್ಲೇ ನಮ್ಮ ಪ್ರವಾಸವನ್ನು ಮುಗಿಸಿದೆವು. ಅಸ್ಸಾಮು ದೇಶದ ವಿವಿಧ ಮೂಲನಿವಾಸಿಗಳ, ಗುಡ್ಡಗಾಡಿನ ಜನಗಳ ಜೀವನ ಕ್ರಮ ನೋಡಬೇಕಾದದ್ದು. ಅಂತೆಯೇ ನೋಡುವ ಅಪೇಕ್ಷೆಯನ್ನು ಇರಿಸಿಕೊಂಡೇ ಬಂದಿದ್ದೇನೆ. ಕಲ್ಕತ್ತೆಯಿಂದ ನಾವು ಹೊರಟ ನಾಲ್ಕನೆಯ ದಿನ ಬೆಳಗ್ಗೆ, ನಾಲ್ಕು ಘಂಟೆಗೆ ಎದ್ದೆವು. ಏಳುವಾಗಲೇ ಸುತ್ತಲೆಲ್ಲ ಬೆಳ್ಳಗೆ ಬೆಳಕಾಗಿತ್ತು. ನಮ್ಮ ಗಡಿಯಾರಕ್ಕೂ ಸ್ಥಳಿಕ ವೇಳೆಗೂ ತಾಸಿಗೂ ಮಿಕ್ಕಿದ ಅಂತರವಿದ್ದುದರ ಪರಿಣಾಮವದು. ಬೆಳಗಿನ ಜಾವದ ಐದು ಘಂಟೆಗೆ ಸಮನಾಗಿ ನಮ್ಮ ಉಪಾಹಾರ ಮುಗಿಸಿ, ಜೀಪಿನಲ್ಲಿ ಕುಳಿತು ಹೊರಟುಬಿಟ್ಟೆವು. ನಲ್ಬಾರಿಗೆ ಬಂದು ಡಾ। ಚೌಧುರಿಯವರಲ್ಲಿ ಇನ್ನೊಮ್ಮೆ ಚಾ ಸೇವನೆ ಮಾಡಿ, ನಮ್ಮ ಜೀಪನ್ನು ಅಲ್ಲಿ ಬಿಟ್ಟು, ಅವರ ಕಾರನ್ನು ತೆಗೆದುಕೊಂಡು ಉತ್ತರ ಗೌಹತಿಗೆ ಎಂಟೂವರೆ ಘಂಟೆಯೊಳಗಾಗಿ ಸೇರಿದೆವು. ಕಡವಿನ ಹಡಗು ಬರುವುದು ಒಂಬತ್ತು ಘಂಟೆಗಂತೆ. ಅದಕ್ಕಾಗಿ ಕಾಯಲು ಇಚ್ಛೆಯಿಲ್ಲದೆ, ಪುಟ್ಟ ದೋಣಿಯೊಂದರಲ್ಲಿ ಕುಳಿತು, ಬ್ರಹ್ಮಪುತ್ರೆಯನ್ನು ದಾಟಿದೆವು. ಸಾಮಾನ್ಯವಾಗಿ ದೋಣಿಯಲ್ಲಿ ಹಾಗೆ ದಾಟುವವರು ಕಡಿಮೆ. ಮಧ್ಯಾಹ್ನದ ವೇಳೆ ಗಾಳಿ ಹೆಚ್ಚಿರುವಾಗ ಯಾರೂ ದೋಣಿ ಬಿಡುವುದಿಲ್ಲ. ಮಳೆಗಾಲದಲ್ಲಂತೂ ಚಿಕ್ಕಪುಟ್ಟ ದೋಣಿಗಳು ಆ ನದಿಯ ಪ್ರವಾಹಕ್ಕೆ ತಡೆಯುವಂತೆಯೂ ಇಲ್ಲ. ದೋಣಿಯಲ್ಲಿ ಕುಳಿತು ಒಂಬತ್ತು ಘಂಟೆಗೆ ನಾವು ಈಚೆ ತಡಿಯನ್ನು ಸೇರಿಯೂ ಆಯಿತು. ಮೊದಲು Airways India ಕಚೇರಿಯನ್ನು ಹೊಕ್ಕು, ಟಿಕೇಟುಗಳನ್ನು ತೋರಿಸಿ, ಅನಂತರ ಡಾ। ದಾಸರವರ ಮನೆಗೆ ಹೋದೆವು. ದಾಸರವರಿಗೆ ಎಷ್ಟೋ ಗುಣಮುಖವಾಗಿತ್ತು. ಅದರಿಂದ ಗೆಳೆಯ ಭಂಡಾರಿಗಳ ಆತುರ ತುಂಬಾ ಕಡಿಮೆಯಾಯಿತು. ಅವರ ಮನೆಯನ್ನು ಬಿಟ್ಟು, ನಗರವನ್ನೆಲ್ಲ ಸಂಚರಿಸಿ, ಶ್ರೀಮಾನ್ ಗೋಸ್ವಾಮಿಯರ ಒಬ್ಬರು ತಮ್ಮಂದಿರಿರುವ ಮನೆಗೆ ಹೋದೆವು. ಅವರು ಅಲ್ಲಿನ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರ ಮನೆಯಲ್ಲಿ ಉಂಡು, ಎರಡು ಎರಡು ತಾಸು ವಿಶ್ರಾಂತಿ ಪಡೆದು, ನದಿದಂಡೆಯ ಬಳಿಯಿಂದಲೇ ನಡೆದು ಹೋಗಿ, ವೈಮಾನಿಕ ಕಚೇರಿಯನ್ನು ಸೇರಿದೆವು. ವಿಮಾನ ಕಂಪೆನಿಯ ಬಸ್ಸನ್ನೇರಿ ಭಂಡಾರಿಗಳ ಅಪ್ಪಣೆಪಡೆದೆವು. ವಿಮಾನ

ನಿಲ್ದಾಣವನ್ನೂ ಬಿಟ್ಟಿತು. ಆ ದಿನ ಹಿಂದಿನ ದಿನದಷ್ಟು ಮುಗಿಲನ್ನು ದಾಟ ಬೇಕಾಗಿರಲಿಲ್ಲ. ಸ್ವಲ್ಪದೂರ ಮಾತ್ರ ಬೆಟ್ಟಗಳ ಮೇಲೆ ಹಾರುವಾಗ ಬೆಳ್ಮುಗಿಲುಗಳು ಒಮ್ಮೊಮ್ಮೆ ಇದಿರಾಗುತಿದ್ದುವು. ಇನ್ನೊಂದು ಡಕೋಟಾ ನಮ್ಮ ಬಲಗಡೆಯಲ್ಲಿ ಜತೆಯಲ್ಲೇ ಹಾರುತ್ತಲಿತ್ತು. ಈ ಮರು ಪ್ರವಾಸದಲ್ಲಿ ಬಹ್ಮಪುತ್ರಾನದಿಯ ಸೆರಗನ್ನು ಹಿಡಿದುಕೊಂಡೇ ವಿಮಾನವು ಕಲ್ಕತ್ತೆಯ ತನಕ ಸಾಗಿ ಬಂದಿತು. ಈ ನದಿಯ ಶಾಖೋಪಶಾಖೆಗಳು ದೇಶದಲ್ಲೆಲ್ಲ ಹಬ್ಬಿದಂತೆ ಕಾಣುತಿತ್ತು. ಎರಡೂವರೆ ತಾಸಿನ ಪಯಣದಲ್ಲಿ ಡಂ ಡಂ— ನಿಲ್ದಾಣದಲ್ಲಿ ನಾವು ಬಂದು ಇಳಿದದ್ದೂ ಆಯಿತು.

ಮರುದಿನ ರಾತ್ರೆ ನಾವು ತಿರುಗಿ ಈ ನಿಲ್ದಾಣಕ್ಕೇನೇ ಬಂದೆವು. ಈ ಬಾರಿ ರಾತ್ರಿಯ ಪಯಣ ನಮ್ಮದು. ರಾತ್ರಿ ಹನ್ನೊಂದು ಘಂಟೆಗೆ ಹೊರಟ ನಮ್ಮ ವಿಮಾನ ಸಹ ಉಳಿದವುಗಳಂತೆ, ಪ್ರಯಾಣಿಕರಿಂದ ತುಂಬಿತ್ತು. ಕುಳಿತಲ್ಲಿಯೇ ಕಾಲುಚಾಚಿ ನಿದ್ರೆಮಾಡುವ ಅವಕಾಶ ಅದರಲ್ಲಿತ್ತು. ಹಾಗೆ ಪ್ರವಾಸಮಾಡಿ ಎರಡೂಮುಕ್ಕಾಲು ಘಂಟೆ ರಾತ್ರೆಗೆ ನಾಗಪುರಕ್ಕೆ ಬಂದೆವು. ವಿಮಾನ ನಿಂತಾಗಲೇ ನಮಗೆ ಎಚ್ಚರ! ತಿರುಗಿ ಪ್ರಯಾಣಿಕರನ್ನು ಅದಲು ಬದಲುಮಾಡಿಕೊಂಡು, ಅಲ್ಲಿ ಬಂದಿದ್ದ ನಾಲ್ಕು ವಿಮಾನಗಳು ಮುಂಬಯಿ, ಡಿಲ್ಲಿ, ಮದ್ರಾಸು, ಕಲ್ಕತ್ತಾ ನಗರಗಳಿಗೆ ಹೊರಟುವು. ನಾವು ಮದ್ರಾಸಿಗೆ ಹೋಗುವ ವಿಮಾನದಲ್ಲಿ ಕುಳಿತೆವು. ಹೀಗೆ ಮದ್ರಾಸನ್ನು ಸೇರುವಾಗ ಬೆಳಗ್ಗಿನ ಏಳು ಘಂಟೆಯಾಗಿತ್ತು. ಇನ್ನು ಬರಿಯ ಐದು ನಿಮಿಷಗಳಲ್ಲಿ ಬೆಂಗಳೂರಿಗೆ ಹೊರಡಬೇಕು. ಅಷ್ಟರಲ್ಲೇ ಶ್ರೀಪತಿಯ ಗೆಳೆಯರೊಬ್ಬರು ಬಂದು, ಅವನನ್ನು ಅಪಹರಿಸಿಕೊಂಡು ಹೋದುದರಿಂದ, ಏಕಾಕಿಯಾದ ನಾನು ಒಬ್ಬನೇ ಹೊರಟೆ. ಒಂಬತ್ತು ಘಂಟೆಗೆ ಬೆಂಗಳೂರನ್ನು ಸೇರಿದೆ. ಅಲ್ಲಿಂದ ರಾತ್ರಿಯ ಗಾಡಿಗೆ ಮೈಸೂರು. ಮೈಸೂರಿಂದ ಬೆಳಗ್ಗೆ ಹೊರಟು ಆ ಸಂಜೆಯೇ ಪುತ್ತೂರು. ಬರಿಯ ನಾಲ್ವತ್ತೆರಡು ತಾಸುಗಳಲ್ಲಿ ಕಲ್ಕತ್ತೆಯನ್ನು ಬಿಟ್ಟ ನಾನು, ನನ್ನ ಮನೆಯನ್ನು ಸೇರಿದೆ. ಅಷ್ಟರಲ್ಲಿ ೨೦೦೦ ಮೈಲುಗಳ ಪ್ರವಾಸಮಾಡಿದೆ ಎಂಬುದನ್ನು ಎಣಿಸಿಕೊಂಡರೆ ಕನಸಿನಂತೆ ಕಾಣುತ್ತದೆ. ಇದೂ ಒಂದು ಅರೇಬಿಯನ್‌ನೈಟ್ಸ್ ಕತೆಯೋ ಎಂಬ ಭ್ರಮೆಯಾಗುತ್ತದೆ.




೨. ಅಜ್ಮೀರದ ದರ್ಗದ ಮಹಾದ್ವಾರ. K. S. Karant



೩. ಆಬು ದೇವಾಲಯದ ನವರಂಗ. K. S. Karanth.



೪. ಜಯಪುರದ ಜಂತ್ರ ಮಂತ್ರ. K. S. Karanth.



೫. ದೇಹಲಿಯ ಪಾರ್ಲಿಮೆಂಟ್ ಮಂದಿರದ ಒಂದು ಭಾಗ. K. S. Karanth.



೬. ನಿಸರ್ಗ ಸುಂದರ ಸಿಮ್ಲಾ. K. S. Karanth.




೭. ಫತ್ತೇಪುರ ಸಿಕ್ರಿಯಲ್ಲಿನ ಪಂಚಮಹಲು. K. S. Karanth.



೮. ಕಾಶಿಯ ಹನುಮಾನ್ ಘಾಟ್. K. S. Karanth



೯. ಶೇರ್‌ಷಹನ ಗೋರಿ, ಸಾಸ್ರಮ್. K. S. Karanth.



೧೦. ಜೈನ ದೇವಾಲಯ, ಕಲ್ಕತ್ತ. K. S. Karanth.

AKSHARA GRANTHALAYA
ACC.NO. S021927

೧೯೫೦ನೇ ವರ್ಷದ ಕಾಣಿಕೆ.

ಹರ್ಷ ಮುದ್ರಣ, ಪ್ರಕಟಣಾಲಯವು ಈ ಕೆಳಗಿನ ಗ್ರಂಥಗಳನ್ನು ಕನ್ನಡಿಗರಿಗೆ ನಿವೇದಿಸಲು ಸಂತೋಷಗೊಳ್ಳುತ್ತದೆ.

ಶಿವರಾಮ ಕಾರಂತರ ಬರಹಗಳು.

ಕಲೆಯ ದರ್ಶನ

ಕಲಾವಿದನ ಕನಸು ರೂಪುಗೊಳ್ಳುವ ಬಗೆ, ಅದಕ್ಕೆ ಬೇಕಾಗುವ ನೈಜ ಪ್ರೇರಣೆ, ಅದು ಪ್ರಕಟಗೊಳ್ಳುವ ವಿವಿಧ ಮಾರ್ಗಗಳು, ಅವುಗಳಿಂದುಂಟಾಗುವ ಪರಿಣಾಮ, ವ್ಯಕ್ತಿಯಲ್ಲಿನ ವಿವಿಧ ನೋಟಗಳ ರೀತಿ, ವಿಮರ್ಶಕನ ಹೊಣೆ-ಇಂಥ ಪ್ರಶ್ನೆಗಳನ್ನು ಚರ್ಚಿಸುವ ಸೌಂದರ್ಯ ದರ್ಶನ ಗ್ರಂಥ. ಸಚಿತ್ರವಾದುದು. **ಪುಟ—೧೨೫.** **ಬೆಲೆ:- ರೂ. ೧-೮-೦.**

ಚಿಗುರಿದ ಕನಸು

ನಾಗರಿಕ ವಿದ್ಯಾರ್ಥಿಯೊಬ್ಬನ ಮನದಲ್ಲಿ, ತನ್ನ ಕುಲದ ಅರಿವು ಬಂದು, ನೆಲದ ಮೋಹ ಹುಟ್ಟಿ, ಅರಣ್ಯವನ್ನು ನಂದನವನವಾಗಿ ಮಾಡುವ ಹೆಬ್ಬಯಕೆ ಮೂಡಿ—ತನ್ನ, ತನ್ನವರ ಬಾಳಿಗೆ ಆದರ್ಶನಾದ ಕಥೆ.

(ದಶಂಬರ ತಿಂಗಳಿಗೆ) ಸುಮಾರು 300 ಪುಟಗಳು.

ಕುಡಿಯರ ಕೂಸು

ಪಶ್ಚಿಮ ಘಟ್ಟದ ಅಜ್ಞಾತ ರಾಜ್ಯದಲ್ಲಿ, ಆದಿವಾಸಿಗಳ ಜನ ವರ್ಗವೊಂದರಲ್ಲಿ ಬೆಳೆದ ಕೂಸೊಂದರ ಕಥೆ. ಕುಡಿಯ ಜೀವನ ಸಮಸ್ಯೆಗಳು ಕಾನನ ಸೌಂದರ್ಯದೊಡನೆ ಹಾಸು ಹೊಕ್ಕಾಗಿ ಬೆರೆತ, ಹಚ್ಚಹಸುರಾದ ಈ ಕಾದಂಬರಿ–ಕಾವ್ಯವೂ ಅಹುದು, ಕಾದಂಬರಿಯೂ ಅಹುದು, ಸಾಹಸ ಪೂರ್ಣ ಕಥೆಯೂ ಅಹುದು.

[ಉಷಾ ಸಾಹಿತ್ಯಮಾಲೆಯಲ್ಲಿ ಪ್ರಕಟವಾಗಲಿರುವ ನವೀನ ಕಾದಂಬರಿ.]

ಹರ್ಷ ಮುದ್ರಣ ಪ್ರಕಟಣಾಲಯ, ಪುತ್ತೂರು. ದ. ಕ.
